prajavani.net prajavani | ಶನಿವಾರ, ಜೂನ್ 20, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 170 | ಪುಟ 20 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 76,802 | ನಿಫ್ಟಿ 24,013 | $/₹ 94.33 | ಚಿನ್ನ (Std. 10g) ₹1,50,200 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,43,600 (ಬೆಂಗಳೂರು)

ಇರಾನ್–ಅಮೆರಿಕ ಮಾತುಕತೆ ವಿಳಂಬ

ಜ್ಯೂರಿಚ್ (ಎಪಿ): ಅಮೆರಿಕದ ಉಪಾಧ್ಯಕ್ಷ ಜೆ.ಡಿ ವ್ಯಾನ್ಸ್ ಅವರ ಸ್ವಿಟ್ಜರ್ಲೆಂಡ್ ಭೇಟಿಯನ್ನು ಮುಂದೂಡಲಾಗಿದ್ದು, ನಿಗದಿಯಂತೆ ಶುಕ್ರವಾರ ಆರಂಭವಾಗಬೇಕಿದ್ದ ಅಮೆರಿಕ- ಇರಾನ್ ನಡುವಿನ ಮಾತುಕತೆ ಅನಿಶ್ಚಿತತೆಯಲ್ಲಿದೆ.

ವಿವರ 8

ಕಾಸರವಳ್ಳಿಗೆ ‘ಜೀವಮಾನ ಸಾಧನೆ’ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ನಾಲ್ಕನೇ ಆವೃತ್ತಿಯ ಕಾರ್ಯಕ್ರಮದಲ್ಲಿ ಜೀವಮಾನದ ಸಾಧನೆ ಪ್ರಶಸ್ತಿಯನ್ನು ಚಿತ್ರ ನಿರ್ದೇಶಕ ಗಿರೀಶ ಕಾಸರವಳ್ಳಿ ಅವರಿಗೆ ನೀಡಿ ಗೌರವಿಸಲಾಯಿತು.

ಶುಕ್ರವಾರ ಇಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ತಿಲಕ್ ಕುಮಾರ್ ಹಾಗೂ ನಿರ್ದೇಶಕ ಕೆ.ಎನ್.ಶಾಂತಕುಮಾರ್ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಬೆಂಗಳೂರು ಅರಮನೆ ಮೈದಾನದಲ್ಲಿ ನಿರ್ಮಿಸಲಾಗಿದ್ದ ವಿಶೇಷ ವೇದಿಕೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕನ್ನಡ ಚಿತ್ರರಂಗದ ನೂರಾರು ಕಲಾವಿದರು, ನಾಯಕ–ನಾಯಕಿಯರು, ಗಾಯಕ–ಗಾಯಕಿಯರು, ನಿರ್ದೇಶಕರು, ನಿರ್ಮಾಪಕರು, ತಂತ್ರಜ್ಞರು ನೆರೆದಿದ್ದರು. ಚಿತ್ರ ನಿರ್ಮಾಣದ ಹಲವು ವಿಭಾಗಗಳಲ್ಲಿ ತಮ್ಮ ನೈಪುಣ್ಯ ಮೆರೆದವರನ್ನು ಗುರುತಿಸಿ, 28 ವಿಭಾಗಗಳಲ್ಲಿ ಪ್ರಶಸ್ತಿ ನೀಡಲಾಯಿತು.

ಚಿತ್ರ ನಿರ್ದೇಶಕ ಗಿರೀಶ ಕಾಸರವಳ್ಳಿ ಅವರಿಗೆ ಜೀವಮಾನದ ಪ್ರಶಸ್ತಿಯನ್ನು ಘೋಷಿಸಿದಾಗ, ಅಭಿಮಾನಿಗಳು ಮತ್ತು ಚಿತ್ರರಂಗದ ತಾರೆಯರು ಎದ್ದುನಿಂತು ಗೌರವ ತೋರಿದರು.

ಗಿರೀಶ ಕಾಸರವಳ್ಳಿ ಮಾತನಾಡಿ, ‘ನಾನು

ಚಿತ್ರರಂಗಕ್ಕೆ ಬಂದದ್ದು ಆಕಸ್ಮಿಕವಾಗಿ. ಫಾರ್ಮಾ ಕೋರ್ಸ್‌ನ ಸಂದರ್ಶನಕ್ಕೆ ಹೋಗಬೇಕಿದ್ದವನು, ನಟನಾ ತರಬೇತಿ ಕೋರ್ಸ್‌ನ ಜಾಹೀರಾತನ್ನು ಪತ್ರಿಕೆಯಲ್ಲಿ ನೋಡಿ ಅರ್ಜಿ ಹಾಕಿದೆ. ನಾನು ಚಿತ್ರರಂಗಕ್ಕೆ ಬಂದಿದ್ದು ಹೀಗೆ’ ಎಂದರು.

‘ಕನ್ನಡ ಸಾಹಿತ್ಯದಲ್ಲಿ ಸಾವಿರಾರು ಅತ್ಯುತ್ತಮ ಕತೆಗಳಿವೆ. ಕತೆ–ಕಾದಂಬರಿಗಳ ಓದಿನ ಕಾರಣಕ್ಕೆ ಅಂತಹ ಹಲವು ಕತೆಗಳ ಪರಿಚಯ ನನಗಾಗಿತ್ತು. ಅಂತಹ ಕತೆಗಳನ್ನು ಸಿನಿಮಾಗೆ ತರಬೇಕು ಎಂಬ ಉದ್ದೇಶದಿಂದಲೇ ಕಾದಂಬರಿ ಆಧಾರಿತ ಸಿನಿಮಾಗಳನ್ನೇ ಮಾಡಿದೆ. ನನ್ನ ಚಿತ್ರಪಯಣದ ಯಶಸ್ಸಿನಲ್ಲಿ ನನ್ನ ಪತ್ನಿ ವೈಶಾಲಿಯ ಪಾತ್ರ ದೊಡ್ಡದಿದೆ. ನನ್ನ ಸಿನಿಮಾಗಳ ಚಿತ್ರಕತೆಯ ಮೊದಲ ಓದುಗಳು ವೈಶಾಲಿ. ಆಕೆ ನೀಡಿದ ಭಾವನಾತ್ಮಕ ಬೆಂಬಲವು ಮಹತ್ವದ್ದು’ ಎಂದರು.

ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕರಾದ ಚೈತನ್ಯ ನೆಟ್ಟಕಲ್ಲಪ್ಪ ಮತ್ತು ಕೆ.ಟಿ.ಸೌಭಾಗ್ಯಲಕ್ಷ್ಮಿ ಉಪಸ್ಥಿತರಿದ್ದರು.



ಬೆಂಗಳೂರಿನಲ್ಲಿ ಶುಕ್ರವಾರ ನಡೆದ ‘ಪ್ರಜಾವಾಣಿ ಸಿನಿ ಸಮ್ಮಾನ’ ಕಾರ್ಯಕ್ರಮದಲ್ಲಿ ನಿರ್ದೇಶಕ ಗಿರೀಶ ಕಾಸರವಳ್ಳಿ ಅವರಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮತ್ತು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಿದರು ಚಿತ್ರ: ಕೃಷ್ಣಕುಮಾರ್ ಪಿ.ಎಸ್.

ಅಡ್ಡಮತದಾನ: ತನಿಖೆಗೆ ಸಮಿತಿ ರಚನೆ 6

ಚಿನಕುರುಳಿ ಪ್ರಕಾಶ್ ಶೆಟ್ಟಿ

ಪಾದಚಾರಿಗಳಿಗೆ ‘ಸುಪ್ರೀಂ’ ರಕ್ಷೆ

‘ಸುರಕ್ಷಿತ ಪಾದಚಾರಿ ಮಾರ್ಗ ನಾಗರಿಕರ ಮೂಲಭೂತ ಹಕ್ಕು’

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ‘ನಿಗದಿತ ಪಾದಚಾರಿ ಮಾರ್ಗಗಳಲ್ಲಿ (ಫುಟ್‌ಪಾತ್) ನಡೆದಾಡುವುದು ಸಂವಿಧಾನದ ಅಡಿಯಲ್ಲಿ ಮೂಲಭೂತ ಹಕ್ಕು’ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.

ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಎ.ಎಸ್. ಚಂದೂರ್ಕರ್ ಅವರ ಪೀಠವು, ‘ಪಾದಚಾರಿಗಳು ಪ್ರತ್ಯೇಕವಾಗಿ ನಿಗದಿ ಪಡಿಸಿರುವ ಪಾದಚಾರಿ ಮಾರ್ಗಗಳಲ್ಲಿ ನಡೆಯುವ ಹಕ್ಕು ಅತ್ಯಂತ ಮಹತ್ವದ್ದಾಗಿದೆ. ರಸ್ತೆಗಳಲ್ಲಿ ಮೋಟಾರು ವಾಹನಗಳ ಸಂಚಾರಕ್ಕಿಂತಲೂ ಈ ಹಕ್ಕಿಗೆ ಆದ್ಯತೆ ನೀಡಬೇಕು’ ಎಂದು ಅಭಿಪ್ರಾಯಪಟ್ಟಿದೆ.

‘ನಡೆಯುವ ಹಕ್ಕು ಸಂವಿಧಾನದ ಅಡಿಯಲ್ಲಿ ಮೂಲಭೂತ ಹಕ್ಕಾಗಿದೆ. ಇದು ಸಂವಿಧಾನದ 19(1)(ಎ), 19(1)(ಬಿ), 19(1)(ಸಿ) ಮತ್ತು 21ನೇ ವಿಧಿಯ ಅಡಿಯಲ್ಲಿ ಖಾತರಿ ಪಡಿಸಲಾದ ಮುಕ್ತವಾಗಿ ಸಂಚರಿಸುವ ಹಕ್ಕಿನ ಭಾಗವಾಗಿದೆ’ ಎಂದು ತೀರ್ಪಿನಲ್ಲಿ ತಿಳಿಸಿದೆ.

ಪೀಠ ಹೇಳಿದ್ದು...

- 1988ರ ಮೋಟಾರು ವಾಹನ ಕಾಯ್ದೆಯು ಮೋಟಾರು ಸಾರಿಗೆಗೆ ಆದ್ಯತೆ ನೀಡುವ ಮೂಲಕ ಅನೇಕ ವಿಧಗಳಲ್ಲಿ ಪಾದಚಾರಿಗಳ ಹಕ್ಕುಗಳನ್ನು ದುರ್ಬಲಗೊಳಿಸಿದೆ
- ನಡಿಗೆ ಎಂಬುದು ಭಾರತೀಯ ಸಂಸ್ಕೃತಿ, ಸ್ವಾತಂತ್ರ್ಯ ಹೋರಾಟ ಮತ್ತು ದೈನಂದಿನ ಜೀವನದಲ್ಲಿ ಹಾಸುಹೊಕ್ಕಾಗಿರುವ ‘ಮಾನವನ ಸರಳ ಚಟುವಟಿಕೆ’ಗಳಲ್ಲಿ ಒಂದಾಗಿದೆ

‘ರಸ್ತೆಯು ಅಸ್ತಿತ್ವದಲ್ಲಿದ್ದರೆ ಅದರ ಎರಡೂ ಬದಿಗಳಲ್ಲಿ ಸ್ಥಳ ನಿಗದಿಪಡಿಸಿ ಪಾದಚಾರಿ ಮಾರ್ಗ ನಿರ್ಮಿಸುವುದು ಮತ್ತು ನಿರ್ವಹಿಸುವುದು ಸಂಬಂಧಪಟ್ಟ ನಗರಾಭಿವೃದ್ಧಿ ಅಧಿಕಾರಿಗಳು, ಪಾಲಿಕೆಗಳು, ಪುರಸಭೆಗಳು ಹಾಗೂ ಪಂಚಾಯತ್‌ಗಳ ಕರ್ತವ್ಯವಾಗಿದೆ’ ಎಂದು ನ್ಯಾಯಾಲಯ ಒತ್ತಿಹೇಳಿತು.

ಈ ಹಕ್ಕಿನ ಉಲ್ಲಂಘನೆಯಾದರೆ ನಾಗರಿಕರು ಸಾಂವಿಧಾನಿಕ ಮತ್ತು ಕಾನೂನಾತ್ಮಕ ಪರಿಹಾರಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ಈ ಪರಿಹಾರವು 1988ರ ಮೋಟಾರು ವಾಹನ ಕಾಯ್ದೆಯಡಿ ಲಭ್ಯವಿರುವ ಪರಿಹಾರಗಳಿಂದ ಹೊರತಾಗಿರಲಿದೆ ಎಂದು ಹೇಳಿತು.

8

Pigeon®

EX ಅನ್ನು ಮಾಡಿ
EXCHANGE!

UP TO 50% OFF*

ನಿಮ್ಮ ಹಳೆಯ ಕಿಚನ್ ಅಪ್ಲಯನ್ಸ್ ಅಥವಾ ಕುಕ್‌ವೇರ್ ತಂದು,
ಹೊಸದಾದ ಉತ್ಪನ್ನವನ್ನು ಮನೆಗೆ ತೆಗೆದುಕೊಂಡು ಹೋಗಿ.
ನಿಮ್ಮ ಕಿಚನ್ ಎಕ್ಸ್ ಅನ್ನು ಇಂದೇ ಎಕ್ಸ್‌ಚೇಂಜ್ ಮಾಡಿಕೊಳ್ಳಿ

ಪಿಜನ್ ಕುಕ್‌ವೇರ್ ಮತ್ತು ಕಿಚನ್ ಉಪಕರಣಗಳ ವಿಶಾಲ ಶ್ರೇಣಿಯಿಂದ ಆಯ್ಕೆಮಾಡಿ

ಪ್ರೆಶರ್ ಕುಕ್ಕರ್‌ಗಳು | ಕುಕ್‌ಟಾಪ್‌ಗಳು | ಏರ್ ಫ್ರೈಯರ್‌ಗಳು | ಮಿಕ್ಸರ್ ಗ್ರೈಂಡರ್‌ಗಳು | ಜ್ಯೂಸರ್‌ಗಳು | ಒಟಿಜಿಗಳು | ಕುಕ್‌ವೇರ್ | ಕಿಚನ್ ಯುಟಿಲಿಟೀಸ್ | ಕೆಟಲ್‌ಗಳು
ಎಲೆಕ್ಟ್ರಿಕ್ ರೈಸ್ ಕುಕ್ಕರ್‌ಗಳು | ಇಂಡಕ್ಷನ್/ಇನ್ಫ್ರಾರೆಡ್ ಕುಕ್‌ಟಾಪ್‌ಗಳು | ಎಲೆಕ್ಟ್ರಿಕ್ ಪ್ರೆಶರ್ ಕುಕ್ಕರ್‌ಗಳು | ಬಾಟಲಿಗಳು | ಚಿಮ್ನಿಗಳು | ಹಾಬ್‌ಗಳು | ಇಸ್ತ್ರಿಗಳು

ತರಲಾಗುವ ಹಳೆಯ ಉತ್ಪನ್ನವು ಯಾವುದೇ ಬ್ರ್ಯಾಂಡ್ / ಯಾವುದೇ ಸ್ಥಿತಿ / ಯಾವುದೇ ಅಪ್ಲಯನ್ಸ್ ಆಗಿರಬಹುದು.

STOVEKRAFT®

*For T&C, refer to stovekraft.com/exkokaroexchange

Follow us on:

Bangalore: Madhukar Domestic Appliances Pvt. Ltd.: 9844763986, 9591481866, 9035081280, 9035081281, 9035081282, 9035081283, 9035081284, 9035081285, 9945110994
Sushan Marketing: 9538349353, 6363458344 Upcountry: Tej Marketing: 9880466627, 9448246982 For Corporate and Bulk Enquiries: 9945002973, 9880280171

Pigeon Exclusive Stores: Bangalore: Frazer Town 080 43779137 Rammurthy Nagar: 08049566539 Mathikere: 9880716920 Rajaji Nagar: 080 31623108 Uttrahalli: 9535154377 Sri Nivas Nagar: 080 49729369 Malleshwaram: 080 35507820 Kasturi Nagar: 9538663296 RT Nagar: 080 40157865 Chanasandra: 080 35665045 Vidyaranyapura: 080 49752346 Vajrahalli: 077 60961690 RR Nagar: 080 41531911 JP Nagar 8Th Phase: 080 35711422 Jaya Nagar 4Th Blk: 080 41600779 BTM 2Nd Bangalore 080 31648532 Basaveshwar Nagar: 080 49709474 Hesarghatta Main Road: 080 35223220 Ananth Nagar: 080 43705652 Hoskote Bangalore: 080 23900438 Horamavu: 7829301990 Vijay Nagar: 080 47566259 Jigani: 080 22440170 Hegganahalli Peenya 2Nd Stage Bangalore: 080 31212223 Sarjapur Rd: 080 68785663 Banashankari 3Rd: 080 48665527 Andrahallli: 8660074851 Vignana Nagar: 080 49708551 JP Nagar 24Th Main: 9902607041 Chunchaghatta: 080 35511267 Bagalur Main Road: 080 41136844 Harohalli: 09740034281 Yelahanka NT: 080 40942163 Sunkadakatte: 080 25998167 Byadarahalli Magdi Rd: 733 8141336 Devasandra Main Road: 8748822410 Yelachenahalli: 9513287456 Nagarabhavi Circle: 080 22220032 Kaggadasapura: 080 41505349 Dinnur Main Road: 8042134626 Sultan Palya: 8041675326 ITI Layout Bangalore: 8022200332 Kammanahalli: Peace Layout: 8031212318 9Th Block Jayanagar: 080 35970710 Bommanahalli Main Rd: 8035992343 Kudlu Main Road: 9380484500 Nelamangala Main Road: 9535508139 Sarjapura Vinayakanagar: 6361 646601 Sanjay Nagar: 6360 102526 RK Hegde Nagar: 080 69956098 TC Palya Main Road: 080 45461923 Malur: 08151450448 Kodihalli Gate (Sahakar Nagar): 8049721126 Kaggalipura: 9886707968 Anekal Main Road: 9742983668 Chandapura: 7337778486 Open your own exclusive store & for Corporate and Bulk Enquiries: 9620350367

Locate your nearest Pigeon Exclusive Store

For any service related queries, please contact: | 6364914202

ಪ್ರಶಸ್ತಿಯೊಂದಿಗೆ ತನಿಷ್ಕಾ ಕಾಲಭೈರವ ಹಾಗೂ ಕೆ.ಜೆ. ಆಕಾಶ್ –ಪ್ರಜಾವಾಣಿ ಚಿತ್ರ

ಟಿ.ಟಿ: ತನಿಷ್ಕಾ, ಆಕಾಶ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮೈಸೂರು: ಬೆಳಗಾವಿಯ ಉದಯೋನ್ಮುಖ ಆಟಗಾರ್ತಿ ತನಿಷ್ಕಾ ಕಪಿಲ್ ಕಾಲಭೈರವ ಅವರು ಮೈಸೂರು ವಿ.ವಿ. ಜಿಮ್ನಾಷಿಯಂ ಸಭಾಂಗಣದಲ್ಲಿ ನಡೆಯುತ್ತಿರುವ ಎಲ್‌ಐಸಿ ಕಪ್ ಕರ್ನಾಟಕ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಅಮೋಘ ಪ್ರದರ್ಶನ ಮುಂದುವರಿಸಿದ್ದು ಶುಕ್ರವಾರ ಮೂರನೇ ಪ್ರಶಸ್ತಿ ಗೆದ್ದರು. ಪುರುಷರ ಸಿಂಗಲ್ಸ್‌ನಲ್ಲಿ ಆಕಾಶ್ ಚಾಂಪಿಯನ್ ಆದರು.

ಟೂರ್ನಿಯ 17 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ವಿಭಾಗದ ಫೈನಲ್ ನಲ್ಲಿ ತನಿಷ್ಕಾ 11-8, 11-9, 11-7 ರಲ್ಲಿ ನೇರ ಸೆಟ್‌ಗಳಿಂದ ಹಿಯಾ ಸಿಂಗ್ ವಿರುದ್ಧ ಭರ್ಜರಿ ಜಯ ಸಾಧಿಸಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ತನಿಷ್ಕಾ 11–8, 11–8, 11–8ರಿಂದ ರಾಶಿ ವಿ. ರಾವ್ ವಿರುದ್ಧ ಹಾಗೂ ಹಿಯಾ ಸಿಂಗ್ 5–11, 11–5, 11–8, 11–7ರಿಂದ ಕೃಷ್ಣಾ ಪಿ. ಕರ್ಕೇರಾ ವಿರುದ್ಧ ಗೆದ್ದರು.

ಆಕಾಶ್‌ಗೆ ಪ್ರಶಸ್ತಿ: ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಕೆ.ಜೆ. ಆಕಾಶ್ 11-5, 13-11, 11-7, 11-5 ಸೆಟ್‌ಗಳಿಂದ ಅಭಿನವ್ ಕೆ. ಮೂರ್ತಿ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದರು.

ಸೆಮಿಫೈನಲ್ ಪಂದ್ಯಗಳಲ್ಲಿ ಅಭಿನವ್ ಕೆ. ಮೂರ್ತಿ 11–8, 8–11, 9–11, 13–11, 12–10, 6–11, 12–10 ರಿಂದ ಬಿ.ಆರ್.ಗೌರವ್ ವಿರುದ್ಧ ಪ್ರಯಾಸದ ಗೆಲುವು ಸಾಧಿಸಿದ್ದರು. ಆಕಾಶ್ 11–7, 11–5, 11–3, 11–8 ರಲ್ಲಿ ರಾಜಾ ಕುಂದು ಅವರಿಗೆ ಸೋಲುಣಿಸಿದ್ದರು.

AMITY UNIVERSITY BENGALURU

B.TECH

Powering Progress

Placements That Power Your Future
- Top recruiters include TCS, Cognizant, Infosys, Tata Technologies, Capgemini, JTP, L&T Technology Services, DCB Bank, Hexaware, Euromonitor, Jio BP, DeltaX, Hiveminds, ICICI Lombard, Sheenlac Paints…
- Amity Innovation Incubator on campus to encourage entrepreneurial outlook

Where Industry Meets Education
- Live industry projects and workshops with global tech leaders from EMC², IBM, Oracle, Sun Microsystems & CA Technologies
- Numerous student-led innovations that solve real-world challenges with tangible impact

Cutting Edge Research & Discovery
- Several Govt funded research projects in collaboration with CSIR, DST, BRNS…
- Student special clubs like GitHub, Google Developer, Environmental Awakening…
- 35+ Hi-tech labs with state-of-the-art equipment

Experts Leading Your Learning Journey
- Ranked #1 All India (Emerging Pvt Univ) - TIMES Engineering '26
- 235+ Distinguished faculty, scientists & staff shaping the learning experience
- Faculty credited with many patents, books & chapters and 49 Scopus indexed publications

ENGINEERING
- **B.TECH**
  - CSE (AI & ML)
  - CSE
  - CSE-Cloud Comp/Robotics/Data Analytics/Full Stack Dev
  - CSE-IoT
  - CSE-DevOps
  - ECE
  - EEE-EVT
  - Embedded System & VLSI
- **M.TECH**
  - CSE
  - Project Mgmt

OTHER PROGRAMMES OFFERED UNDER SCIENCE (MATHS) STREAM

COMPUTER SCIENCE / IT
- B.Sc-AI & ML
- BCA
- M.Sc (Cyber Security/Data Sc)
- MCA-AI & ML
- MCA

APPLIED SCIENCES
- B.Sc (Computer Sc, Maths & Stats)
- B.Sc (Phy, Maths & Computer Sc)
- B.Sc (Phy, Maths & Chem)
- B.Sc (Eco, Maths & Stats)
- M Sc (Physics/Chemistry/Stats)

Scholarships*	100%	50%	25%
UG Programmes			
12th (agg.)	95%	90%	85%
PG Programmes (Non-MBA)			
12th (agg.)	95%	90%	-
Graduation (agg.)	80%	75%	-
MBA			
CAT/MAT (%ile)	90	85	80
GMAT/GRE (Score)	650/161	600/157	500/152

*Offered in 50+ progs across various disciplines

To apply visit:
amity.edu/bengaluru
by: 24th June 2026

7303-399-000

NH 648, Devanahalli–Doddaballapur Road, Bengaluru | E: admissions.blr@amity.edu

ಆನೇಕಲ್ ನ್ಯಾಯಾಲಯದಲ್ಲಿ 28 ಕಡತ ಕಾಣೆ

ಪ್ರಜಾವಾಣಿ ವಾರ್ತೆ

ಆನೇಕಲ್: ಪಟ್ಟಣದ ನ್ಯಾಯಾಲಯದಲ್ಲಿ 28 ಪ್ರಕರಣದ ಕಡತಗಳು ನಾಪತ್ತೆಯಾಗಿವೆ ಎಂದು ನ್ಯಾಯಾಲಯದ ಸಿಬ್ಬಂದಿ ಆನೇಕಲ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ನಾಪತ್ತೆಯಾಗಿರುವ ಬಹುತೇಕ ಕಡತಗಳು ಅಪರಾಧ, ಖಾಸಗಿ ದೂರು ಮತ್ತು ಸಿವಿಲ್ ಪ್ರಕರಣಗಳಿಗೆ ಸಂಬಂಧಿಸಿದ್ದಾಗಿವೆ.

ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ 11, ಮೂರನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿಯ ಐದು ಮತ್ತು ನಾಲ್ಕನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿಯ 12 ಕಡತಗಳು ಕಾಣೆಯಾಗಿವೆ. ಹಲವು ದಿನಗಳಿಂದ ಹುಡುಕಿದರೂ ಸಿಗುತ್ತಿಲ್ಲ ಎಂದು ನ್ಯಾಯಾಲಯದ ಮುಖ್ಯ ಲಿಪಿಕಾಧಿಕಾರಿ ಮುರುಸ್ವಾಮಿ ದೂರಿನಲ್ಲಿ ನಮೂದಿಸಿದ್ದಾರೆ.

ಘಟನೆ ಬಳಿಕ ದಾಖಲೆ ಮತ್ತು ಕಡತಗಳ ಕೊಠಡಿಯಲ್ಲಿ ಬಿಗಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ನ್ಯಾಯಾಲಯ ಸಿಬ್ಬಂದಿ, ಪೊಲೀಸ್ ಸಿಬ್ಬಂದಿ ಮತ್ತು ವಕೀಲರಿಗೆ ಮಾತ್ರ ದಾಖಲೆ ಕೊಠಡಿಗೆ ಪ್ರವೇಶ ನೀಡಲಾಗುತ್ತಿದೆ.

ಬಾಲಕಿ ಮೇಲೆ ದೌರ್ಜನ್ಯ: 5 ವರ್ಷ ಕಠಿಣ ಶಿಕ್ಷೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿ ಗರ್ಭಿಣಿಯಾಗಲು ಕಾರಣನಾಗಿದ್ದ ಯುವಕನಿಗೆ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ಪೋಕ್ಸೊ ವಿಶೇಷ ನ್ಯಾಯಾಲಯ 5 ವರ್ಷ ಕಠಿಣ ಶಿಕ್ಷೆ ಮತ್ತು ₹25 ಸಾವಿರ ದಂಡ ವಿಧಿಸಿದೆ.

ಕೊಪ್ಪ ತಾಲ್ಲೂಕಿನ ಸಂತೋಷ್ ಶಿಕ್ಷೆಗೆ ಒಳಗಾಗಿರುವ ಅರೋಪಿ.

ಹಿಂದುಳಿದ ವರ್ಗಗಳ ನಾಯಕ
ಹಾಗೂ
ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ
ನೂತನ ಅಧ್ಯಕ್ಷರಾಗಿ
ಪದಗ್ರಹಣ ಮಾಡುತ್ತಿರುವ
ಶ್ರೀ ಬಿ.ಕೆ. ಹರಿಪ್ರಸಾದ್
ಅವರಿಗೆ
ಅಭಿನಂದನೆಗಳು
ಶುಭ ಕೋರುವವರು:
ಡಿ.ಕೆ. ಮೋಹನ್‌ರವರು
ಪ್ರಧಾನ ಕಾರ್ಯದರ್ಶಿ, ಕೆಪಿಸಿಸಿ
ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರ
ಡಿ.ಕೆ. ರಮೇಶ್‌ರವರು
ರಾಯಲ್ ಗೋಕುಲ ಕನ್ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್
ಕಾಂಗ್ರೆಸ್ ಮುಖಂಡರು ಕೆ.ಆರ್.ಪುರ ವಿಧಾನಸಭಾ ಕ್ಷೇತ್ರ
ದಿನಾಂಕ: 21 ಜೂನ್, 2026, ಭಾನುವಾರ, ಬೆಳಿಗ್ಗೆ 10.30
ಸ್ಥಳ: ಅರಮನೆ ಮೈದಾನ, ಕೃಷ್ಣ ವಿಹಾರ ಗೇಟ್ ನಂ. 1, ಬೆಂಗಳೂರು

ಈ ಬಾರಿಯ ಮಾನ್ಸೂನ್ ಆಗಲಿದೆ
ಇನ್ನಷ್ಟು ಮ್ಯಾಜಿಕಲ್
HARSHA
Happiness. Redefined.
HARSHA MONSOON MAGIC
19th JUNE - 27th JULY, 2026
Magic Cash
ಸ್ಕ್ರಾಚ್ ಮಾಡಿ & ಪಡೆಯಿರಿ ಮ್ಯಾಜಿಕ್ ಕ್ಯಾಶ್ ₹10,000/-*ದ ವರೆಗೆ
Exciting Exchange Offers*
Combo Deals*
Assured Gifts*
Instant Discounts* upto Rs. 9,990/-
Easy EMI* Options
Shop & Secure your appliances with
XTRA CARE By HARSHA
UP TO ₹15,000 INSTANT DISCOUNT* SBI card
#Min. Trxn.: ₹20,000; Max. Discount: ₹15,000 per card; Valid only on EMI Trxns; Validity: 12 Jun - 05 Jul 2026. T&C Apply.
ಮರಳಿ ಬಂದಿದೆ 'ಹರ್ಷ ಮಾನ್ಸೂನ್ ಮ್ಯಾಜಿಕ್', ವಿಶಾಲ ಶ್ರೇಣಿಯ ವಸ್ತು-ವೈವಿಧ್ಯಗಳಲ್ಲಿ ನಿಮಗಿಷ್ಟವಾದುದನ್ನೇ ಆಯ್ಕೆ ಮಾಡಿ ಖರೀದಿಸಿ, ಸ್ಕ್ರಾಚ್ ಕಾರ್ಡ್ ಮುಖೇನ 10,000*ದ ವರೆಗೆ ಇನ್‌ಸ್ಟಂಟ್ ಕ್ಯಾಶ್‌ಬ್ಯಾಕ್ ಪಡೆಯಿರಿ. ಇದರೊಂದಿಗೆ ವಿಶೇಷ ವಿನಿಮಯ ಕೊಡುಗೆ, ಆಕರ್ಷಕ ಕಾಂಬಿ ಕೊಡುಗೆ, ಖಚಿತ ಉಡುಗೊರೆ, ಇಎಮ್ಐ ಸಹಿತ ಹತ್ತು ಹಲವು ಕೊಡುಗೆಗಳು ನಿಮ್ಮ ಖರೀದಿಯ ಸಡಗರವನ್ನು ಇನ್ನಷ್ಟು ಹೆಚ್ಚಿಸಲಿದೆ, ಇನ್ನೇಕೆ ತಡ – ಇಂದೇ ಸಮೀಪದ 'ಹರ್ಷ' ಮಳಿಗೆಗೆ ಭೇಟಿ ನೀಡಿ, ಮಾನ್ಸೂನ್‌ನ ಮ್ಯಾಜಿಕಲ್ ಅನುಭವ ಪಡೆಯಿರಿ.
Conditions apply. Offers applicable on select models and brands. Models shown are indicative. Offer valid till stocks last. Finance at the sole discretion of the financier. Finance available only within city limits.
BLUE STAR BOSCH Electrolux Godrej Haier Hisense IFB LG LIEBHERR LLOYD MITSUBISHI ELECTRIC Panasonic SAMSUNG SONY TCL VOLTAS Whirlpool
ಉಳ್ಳಾಲ್ ಮುಖ್ಯ ರಸ್ತೆ, ಜ್ಞಾನ ಗಂಗಾ ನಗರ, ಬೆಂಗಳೂರು - 56. | ಫೀಲ್ಡ್ ಮಾರ್ಷಲ್ ಜನರಲ್ ಕಾರ್ಯಪ್ಪ ಪಾರ್ಕ್ ಸಮೀಪ, ರಾಜರಾಜೇಶ್ವರಿ ನಗರ, ಬೆಂಗಳೂರು - 98.
eHarsha.India digital_harsha www.harshaindia.com

ಹೊಸ ಜವಾಬ್ದಾರಿಯೆಂದರೆ ಕೇವಲ ಅಧಿಕಾರವಲ್ಲ. ಪಕ್ಷದ ನಂಬಿಕೆಗೆ ವಿಶ್ವಾಸದ ಪ್ರತೀಕ. ನಿಮ್ಮ ಅಚಲ ಸೈದ್ಧಾಂತಿಕಾ ಬದ್ಧತೆ ಹಾಗೂ ದೂರದೃಷ್ಟಿಯ ನಾಯಕತ್ವ ಸಂವಿಧಾನದ ಆಶಯಗಳ ಸಾಕಾರಕ್ಕೆ ದಾರಿ ದೀಪವಾಗಲಿ . ತಮ್ಮ ಸಮರ್ಥ ನಾಯಕತ್ವದಲ್ಲಿ 2028ಕ್ಕೆ ನಮ್ಮ ಪಕ್ಷವೇ ಬಹುಮತದೊಂದಿಗೆ ಆಡಳಿತಕ್ಕೆ ಬರುವಂತಾಗಲಿ. ಕೋಮುವಾದ ಪ್ರೇರಿತ ರಾಜಕಾರಣದ ಬದಲು ಸಂವಿಧಾನ ಬದ್ದ ರಾಜಕಾರಣಕ್ಕೆ ಮುನ್ನುಡಿಯಾಗಲಿ.
ಹೊಸ ಜವಾಬ್ದಾರಿ ಹೊಸ ಸಂಕಲ್ಪ
ಸಂಕಲ್ಪ ಸಮಾವೇಶ
ಸಿದ್ಧಾಂತ • ಸಂಘಟನೆ • ಸಮರ್ಪಣೆ
ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ
ನೂತನ ಅಧ್ಯಕ್ಷರಾದ
ಶ್ರೀ ಬಿ.ಕೆ. ಹರಿಪ್ರಸಾದ್ ರವರಿಗೆ
ಹೃತ್ಪೂರ್ವಕ ಶುಭಾಶಯಗಳು
ಕೆ.ಪಿ.ಸಿ.ಸಿ
ನೂತನ ಅಧ್ಯಕ್ಷರಾಗಿ
ಪದಗ್ರಹಣ
ಸಮಾರಂಭ
21ನೇ ಜೂನ್ 2026
ಭಾನುವಾರ
ಹೊಸ ರಾಜಕೀಯ ಜವಾಬ್ದಾರಿಯನ್ನು ಅಲಂಕರಿಸಿರುವ
ನಿಮ್ಮ ನಾಯಕತ್ವವು ಯಶಸ್ವಿಯಾಗಲಿ...
ಶ್ರೀ ಎ.ಸಿ. ಶ್ರೀನಿವಾಸ್‌ರವರು
ಶಾಸಕರು
ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರ
ಶುಭ ಕೋರುವವರು
ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ಜನತೆ ಹಾಗೂ
ಎ.ಸಿ. ಶ್ರೀನಿವಾಸ್ ಅಭಿಮಾನಿಗಳ ಬಳಗ

ಹವಾಮಾನ ಮುನ್ಸೂಚನೆ: ನಗರದಲ್ಲಿ ಗುಡುಗು ಸಹಿತ ತುಂತುರು ಮಳೆಯಾಗಲಿದೆ.

‘ಕನ್ನಡಕ್ಕೆ ಮೊದಲ ಆದ್ಯತೆ ನೀಡಿ’

ಟಾಟಾ ಪವರ್ ಸಂಸ್ಥೆ ವಿರುದ್ಧ ಕ್ರಮ ಕೈಗೊಳ್ಳಲು ಆಗ್ರಹ

ಪ್ರಜಾವಾಣಿ ವಾರ್ತೆ

ಪುರುಷೋತ್ತಮ ಬಿಳಿಮಲೆ

ಬೆಂಗಳೂರು: ‘ರಾಜ್ಯದಲ್ಲಿ ವಿದ್ಯುತ್ ವಿತರಣಾ ಪರವಾನಗಿ ಪಡೆಯಲು ಟಾಟಾ ಪವರ್ ಸಂಸ್ಥೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಸಲ್ಲಿಸಿರುವ ಅರ್ಜಿ ನಮೂನೆಗಳು, ಅನುಬಂಧಗಳು ಹಾಗೂ ಸಂಬಂಧಿತ ಎಲ್ಲ ದಾಖಲೆಗಳು ಇಂಗ್ಲಿಷ್‌ನಲ್ಲಿವೆ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಅವರು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಅಧ್ಯಕ್ಷರಿಗೆ ಪತ್ರ ಬರೆದು, ‘ಅಸಂಖ್ಯ ಕನ್ನಡಿಗರ ಭಾಷಾ ಹಿತಾಸಕ್ತಿಗೆ ಸಂಬಂಧಿಸಿದ ಮಹತ್ವದ ದಾಖಲೆಗಳು ಕನ್ನಡದಲ್ಲಿ ಲಭ್ಯವಾಗುವಂತೆ ಮಾಡಲು ಆಯೋಗ ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದು ವಿಷಾದ ವ್ಯಕ್ತಪಡಿಸಿದ್ದಾರೆ.

‘ಕರ್ನಾಟಕದಲ್ಲಿ ಕಾರ್ಯನಿರ್ವಹಿಸಲು ಮುಂದಾಗುವ ಯಾವುದೇ ಸಂಸ್ಥೆ ಈ ನೆಲದ ಭಾಷೆ, ಸಂಸ್ಕೃತಿ ಮತ್ತು ಭಾಷಾ ಹಕ್ಕುಗಳಿಗೆ ಗೌರವ ನೀಡುವುದು ಅದರ ಸಾಮಾಜಿಕ ಹೊಣೆಗಾರಿಕೆಯಾಗಿರಬೇಕು. ಆದರೆ ಟಾಟಾ ಪವರ್ ಸಂಸ್ಥೆ ಈ ನಿಟ್ಟಿನಲ್ಲಿ ನಿರ್ಲಕ್ಷ್ಯ ವಹಿಸಿರುವುದು ಕನ್ನಡಿಗರ ಭಾಷಾ ಹಕ್ಕುಗಳಿಗೆ ಧಕ್ಕೆ ಉಂಟು ಮಾಡುವುದಾಗಿದೆ’ ಎಂದಿದ್ದಾರೆ.

‘ಸಂಸ್ಥೆಯ ಪ್ರತಿನಿಧಿಗಳು ಈಗಾಗಲೇ ಮನೆ ಮನೆಗೆ ಭೇಟಿ ನೀಡಿ, ವಿದ್ಯುತ್ ಪೂರೈಕೆ ಕುರಿತಂತೆ ನಾಗರಿಕರಿಂದ ಮಾಹಿತಿ ಸಂಗ್ರಹಿಸುವ ಕಾರ್ಯವನ್ನು ಆರಂಭಿಸಿದ್ದಾರೆ. ಈ ವೇಳೆ ಬಳಸಲಾಗುತ್ತಿರುವ ಮಾಹಿತಿ ಸಂಗ್ರಹಣಾ ನಮೂನೆಗಳು ಸಹ ಆಂಗ್ಲ ಭಾಷೆಯಲ್ಲಿರುವುದು ತೀವ್ರ ಆಕ್ಷೇಪಣೀಯ. ಇದರಿಂದ ಸಾಮಾನ್ಯ ಕನ್ನಡಿಗರು ಈ ದಾಖಲೆಗಳ ಅಂಶಗಳು, ಉದ್ದೇಶ ಹಾಗೂ ಅದರ ಪರಿಣಾಮಗಳನ್ನು ಅರ್ಥೈಸಿಕೊಳ್ಳಲಾಗದ ಅಸಹಾಯಕ ಪರಿಸ್ಥಿತಿ ಉದ್ಭವವಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

‘ಸಂಸ್ಥೆಯ ಪ್ರತಿನಿಧಿಗಳು ಮನೆ ಮನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ನಾಗರಿಕರಿಗೆ ಸಂಬಂಧಿಸಿದ ಯಾವುದೇ ಮಾಹಿತಿ, ಅರ್ಜಿ ಅಥವಾ ದಾಖಲೆಗಳು ಆಂಗ್ಲ ಭಾಷೆಯಲ್ಲಿ ಇರುವುದನ್ನು ನೋಡಿದಾಗ, ಕನ್ನಡದಲ್ಲಿಯೇ ಒದಗಿಸಲು ನಾಗರಿಕರು ಆಗ್ರಹಿಸಬೇಕು. ಸಾರ್ವಜನಿಕ ಸೇವೆಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಕನ್ನಡದಲ್ಲಿಯೂ ಪಡೆಯುವುದು ಎಲ್ಲ ಕನ್ನಡಿಗರ ಹಕ್ಕು. ವಿದ್ಯುತ್ ಬಿಲ್ಲುಗಳು ಮಹತ್ವದ ದಾಖಲೆಗಳಾಗಿರುವುದರಿಂದ ಈ ವಿಷಯದಲ್ಲಿ ಬಳಕೆದಾರರು ಬಹಳ ಜಾಗೃತರಾಗಿರಬೇಕು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು’ ಎಂದು ಹೇಳಿದ್ದಾರೆ.

‘ಈ ಬಗ್ಗೆ ವಿದ್ಯುತ್ ನಿಯಂತ್ರಣ ಆಯೋಗವು ಕೂಡಲೇ ಕ್ರಮವಹಿಸಬೇಕು. ಸಾರ್ವಜನಿಕ ದಾಖಲೆಗಳನ್ನು ಕನ್ನಡದಲ್ಲಿಯೂ ಪ್ರಕಟಿಸಲು ಮುಂದಾಗಬೇಕು’ ಎಂದು ತಿಳಿಸಿದ್ದಾರೆ.

ಮುಖ್ಯಾಂಶಗಳು

- ಸಾರ್ವಜನಿಕ ಸೇವೆಗಳನ್ನು ಕನ್ನಡದಲ್ಲಿ ಪಡೆಯುವುದು ಹಕ್ಕು
- ಬಳಕೆದಾರರಲ್ಲಿ ಇರಲಿ ಎಚ್ಚರ

ಎಸ್‌ಐಆರ್: ಫೋನ್‌ಇನ್ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಪಟ್ಟಿ ಸಮಗ್ರ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಕುರಿತು ನಾಗರಿಕರ ಗೊಂದಲಗಳ ಪರಿಹಾರಕ್ಕಾಗಿ ಬೆಂಗಳೂರು ದಕ್ಷಿಣ ನಗರ ಪಾಲಿಕೆ ವತಿಯಿಂದ ಜೂನ್ 20ರ ಶನಿವಾರದಂದು ಫೋನ್–ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ.

ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಯೂ ಆದ ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಆಯುಕ್ತ ಕೆ.ಎನ್. ರಮೇಶ್ ಅವರು ಎಸ್‌ಐಆರ್ ಕುರಿತು ನಾಗರಿಕರ ಕುಂದುಕೊರತೆಗಳನ್ನು ನೇರವಾಗಿ ಆಲಿಸಿ ಪರಿಹರಿಸಲಿದ್ದಾರೆ.

ಶನಿವಾರದಂದು ಸಂಜೆ 4ರಿಂದ 5ರವರೆಗೆ ಫೋನ್–ಇನ್ ನಡೆಯಲಿದೆ. ಬಿಟಿಎಂ ಲೇಔಟ್, ಬೊಮ್ಮನಹಳ್ಳಿ, ಜಯನಗರ, ಪದ್ಮನಾಭನಗರ, ಗೋವಿಂದರಾಜನಗರ, ವಿಜಯನಗರ ಹಾಗೂ ಹಾಗೂ ಬಸವನಗುಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನಾಗರಿಕರು ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಸಂಬಂಧ ತಮ್ಮ ಗೊಂದಲಗಳ ಬಗೆಹರಿಸಿಕೊಳ್ಳಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕ 94806 85704.

ಇಬ್ಬರ ಸಾವು: ತನಿಖೆಗೆ ಸಮಿತಿ ರಚನೆ

ಮೂವರು ಎಂಜಿನಿಯರ್‌ಗಳ ನೇತೃತ್ವದಲ್ಲಿ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವರದಿ ಸಲ್ಲಿಸಲು ಸಮಿತಿಗೆ ಸೂಚನೆ
- ಶೋಧ ಕಾರ್ಯಕ್ಕೆ ಅಡ್ಡಿ
- ಒಬ್ಬ ಕಾರ್ಮಿಕನ ರಕ್ಷಣೆ

ಬೆಂಗಳೂರು: ಜಲಮಂಡಳಿಯ ವರ್ತೂರು ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಗುರುವಾರ ರಾತ್ರಿ ಆಯತಪ್ಪಿ ಬಿದ್ದು, ಇಬ್ಬರು ಮೃತಪಟ್ಟ ಘಟನೆಯ ಸಮಗ್ರ ತನಿಖೆಗೆ ಮೂವರು ಎಂಜಿನಿಯರ್‌ಗಳನ್ನು ಒಳಗೊಂಡ ಸಮಿತಿಯನ್ನು ಜಲಮಂಡಳಿ ರಚಿಸಿದೆ.

ಮುಖ್ಯ ಎಂಜಿನಿಯರ್ ಕೆ.ಎನ್. ರಾಜೀವ್, ಹೆಚ್ಚುವರಿ ಮುಖ್ಯ ಎಂಜಿನಿಯರ್ ಕೆ.ಎಸ್.ರೇಣುಕುಮಾರ್ ಹಾಗೂ ಎಂಜಿನಿಯರ್ ಡಿ.ಎಸ್. ವಿನುತಾ ಸಮಿತಿಯಲ್ಲಿದ್ದಾರೆ.

ಜೂನ್ 20ರಂದು ವರದಿ ಸಲ್ಲಿಸಬೇಕೆಂದು ಜಲಮಂಡಳಿ ಅಧ್ಯಕ್ಷೆ ಡಾ.ಎನ್.ಮಂಜುಳಾ ಅವರು ಸೂಚನೆ ನೀಡಿದ್ದಾರೆ.

ಘಟನೆಯ ಸಮಗ್ರ ತನಿಖೆ ನಡೆಸಲಾಗುವುದು. ನಿರ್ಲಕ್ಷ್ಯ ತೋರಿದ್ದವರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಮಂಜುಳಾ ಎಚ್ಚರಿಸಿದ್ದಾರೆ. ಘಟನೆಯಲ್ಲಿ ಬಿಹಾರದ ಬ್ರಿಜೇಶ್ ಮತ್ತು ತಮಿಳುನಾಡಿನ ಅಖಿಲೇಶ್ ಮೃತಪಟ್ಟಿದ್ದಾರೆ.

ಅಖಿಲೇಶ್ ಎಂಜಿಯರ್ ಆಗಿದ್ದರೆ, ಬ್ರಿಜೇಶ್ ಟೆಕ್ನಿಶಿಯನ್ ಆಗಿ ಕೆಲಸ ಮಾಡುತ್ತಿದ್ದರು. ಗುರುವಾರ ಸಂಜೆ 6 ಗಂಟೆ ಸುಮಾರಿಗೆ ವರ್ತೂರಿನ ಬೆಳಗೆರೆಯ ಜಲಮಂಡಳಿಯ 40 ಅಡಿ ಆಳದ ತ್ಯಾಜ್ಯ ನೀರು ಸಂಸ್ಕರಣಾ (ಎಸ್‌ಟಿಪಿ) ಟ್ಯಾಂಕ್ ಬಳಿ ಗುತ್ತಿಗೆ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಆ ವೇಳೆ ಬ್ರಿಜೇಶ್ ಮತ್ತು ಅಖಿಲೇಶ್ ಅವರು ಆಯತಪ್ಪಿ ಎಸ್‌ಟಿಪಿ ಒಳಗೆ ಬಿದ್ದಿದ್ದರು. ಮತ್ತೊಬ್ಬ ಕಾರ್ಮಿಕನನ್ನು ಅಲ್ಲೇ ಕೆಲಸ ಮಾಡುತ್ತಿದ್ದವರು ರಕ್ಷಿಸಿ, ಆಸ್ಪತ್ರೆಗೆ ದಾಖಲಿಸಿದ್ದರು.

ಮೃತದೇಹಕ್ಕೆ ಶೋಧ: ಗುರುವಾರ ರಾತ್ರಿ ಹಾಗೂ ಶುಕ್ರವಾರ ದಿನವಿಡೀ ಶೋಧ ನಡೆಸಿದ್ದರೂ ಮೃತದೇಹಗಳು ಇನ್ನೂ ಪತ್ತೆಯಾಗಿಲ್ಲ. ಘಟನಾ ಸ್ಥಳಕ್ಕೆ ಬೆಂಗಳೂರು ಜಲಮಂಡಳಿ ಅಧ್ಯಕ್ಷೆ ಮಂಜುಳಾ ಅವರು ಭೇಟಿ ನೀಡಿ ಶೋಧ ಕಾರ್ಯ ಪರಿಶೀಲಿಸಿದರು. ಕಾರ್ಯಾಚರಣೆ ಚುರುಕುಗೊಳಿಸಲು ಸೂಚಿಸಿದರು.

ತ್ಯಾಜ್ಯ ನೀರು ಸಂಸ್ಕರಣಾ ಘಟಕದಲ್ಲಿ ವಿಷಾನಿಲ ತುಂಬಿರುವುದು ಹಾಗೂ ನೀರಿನ ರಭಸ ಹೆಚ್ಚಾಗಿರುವ ಕಾರಣಕ್ಕೆ ಶೋಧ ಕಾರ್ಯಕ್ಕೆ ಅಡ್ಡಿ ಆಗಿದೆ. ಸ್ಥಳದಲ್ಲಿ ಎನ್‌ಡಿಆರ್‌ಎಫ್, ಅಗ್ನಿಶಾಮಕ ಮತ್ತು ತುರ್ತು ಸೇವಾ ದಳದ ಸಿಬ್ಬಂದಿ, ವರ್ತೂರು ಠಾಣೆಯ ಪೊಲೀಸರು ಹಾಗೂ ಜಲಮಂಡಳಿಯ ಸಿಬ್ಬಂದಿ ಬೀಡು ಬಿಟ್ಟಿದ್ದಾರೆ.

ಜಲಮಂಡಳಿಯ ವರ್ತೂರು ತ್ಯಾಜ್ಯ ನೀರು ಸಂಸ್ಕರಣಾ ಘಟಕದಲ್ಲಿ ಶೋಧ ಕಾರ್ಯ ನಡೆಸಲಾಯಿತು

ಎರಡನೇ ಕ್ಯಾಥ್‌ಲ್ಯಾಬ್‌ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೃದಯದ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಪ್ರತಿ ನಿಮಿಷವೂ ಮುಖ್ಯ. ಒಂದು ವೇಳೆ ಚಿಕಿತ್ಸೆ ನೀಡುವುದು ತಡವಾದರೆ ಫಲಿತಾಂಶದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ’ ಎಂದು ಖ್ಯಾತ ಹೃದ್ರೋಗ ತಜ್ಞ ಹಾಗೂ ಸಂಸದ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

ಶೇಷಾದ್ರಿಪುರದ ಅಪೋಲೊ ಆಸ್ಪತ್ರೆಯಲ್ಲಿ ಎರಡನೇ ಕ್ಯಾಥ್‌ಲ್ಯಾಬ್ ಉದ್ಘಾಟಿಸಿ ಮಾತನಾಡಿದ ಅವರು, ಈ ಆಸ್ಪತ್ರೆಯಲ್ಲಿ ಎರಡನೇ ಕ್ಯಾಥ್‌ಲ್ಯಾಬ್ ಆರಂಭಿಸಿರುವುದರಿಂದ ಹೃದ್ರೋಗ ಸಮಸ್ಯೆ ಇರುವ ಇನ್ನಷ್ಟು ಮಂದಿಗೆ ಚಿಕಿತ್ಸೆ ನೀಡಲು ಅನುಕೂಲವಾಗಲಿದೆ ಎಂದರು.

ಶೇಷಾದ್ರಿಪುರದ ಅಪೋಲೊ ಆಸ್ಪತ್ರೆಯು ಈಗ ವಾರ್ಷಿಕ 4,000ಕ್ಕೂ ಹೆಚ್ಚು ಹೃದ್ರೋಗಿಗಳಿಗೆ ಚಿಕಿತ್ಸೆ ನೀಡುವ ಸಾಮರ್ಥ್ಯವನ್ನು ಹೊಂದಿದೆ. 2015ರಲ್ಲಿ ಆಸ್ಪತ್ರೆಯ ಮೊದಲ ಕ್ಯಾಥ್‌ಲ್ಯಾಬ್ ಶುರುವಾಗಿತ್ತು. ಈಗ ಎರಡನೇ ಕ್ಯಾಥ್‌ಲಾಬ್ ಆರಂಭಿಸಿರುವುದರಿಂದ ಬೆಂಗಳೂರು ನಗರ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳಿಂದ ಬರುವ ರೋಗಿಗಳಿಗೆ ಚಿಕಿತ್ಸೆ ನೀಡಲು ಅನುಕೂಲವಾಗಲಿದೆ.

ಎರಡನೇ ಕ್ಯಾಥ್‌ಲ್ಯಾಬ್ ಆರಂಭದಿಂದಾಗಿ ಪ್ರತಿ ತಿಂಗಳು ಸುಮಾರು 200 ಹೆಚ್ಚುವರಿ ಚಿಕಿತ್ಸೆಗಳನ್ನು ನಿರ್ವಹಿಸಲು ಸಾಧ್ಯವಾಗಲಿದೆ. ಅಲ್ಲದೆ ಪ್ರತಿ ವರ್ಷ ಇನ್ನೂ ಮೂರು ಸಾವಿರ ರೋಗಿಗಳಿಗೆ ಚಿಕಿತ್ಸೆ ಕಲ್ಪಿಸಬಹುದಾಗಿದೆ. ಅಲ್ಲದೆ 200 ಹಾಸಿಗೆಗಳ ಸಾಮರ್ಥ್ಯವನ್ನು 350 ಹಾಸಿಗೆಗಳಿಗೆ ವಿಸ್ತರಿಸಲಾಗುತ್ತಿದೆ ಎಂದು ಆಸ್ಪತ್ರೆಯ ಉಪಾಧ್ಯಕ್ಷ ಉದಯ್ ದಾವ್ದಾ ತಿಳಿಸಿದರು. ಅಪೋಲೊ ಹಾಸ್ಪಿಟಲ್ಸ್‌ನ ಸಿಇಒ ಅಕ್ಷಯ್ ಓಲೇಟಿ ಸೇರಿದಂತೆ ತಜ್ಞ ವೈದ್ಯರು ಉಪಸ್ಥಿತರಿದ್ದರು.

ಕ್ಯಾಥ್‌ಲ್ಯಾಬ್ ಉದ್ಘಾಟನಾ ಸಮಾರಂಭದಲ್ಲಿ ಸಂಸದ ಡಾ.ಸಿ.ಎನ್.ಮಂಜುನಾಥ, ಅಪೋಲೊ ಹಾಸ್ಪಿಟಲ್ಸ್‌ನ ಸಿಇಒ ಅಕ್ಷಯ್ ಓಲೇಟಿ, ಉಪಾಧ್ಯಕ್ಷ ಉದಯ್ ದಾವ್ದಾ, ವೈದ್ಯರು ಭಾಗವಹಿಸಿದ್ದರು.

27ಕ್ಕೆ ಕೆಂಪೇಗೌಡ ಥೀಮ್ ಪಾರ್ಕ್ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿರುವ 108 ಅಡಿ ಎತ್ತರದ ಕೆಂಪೇಗೌಡ ಕಂಚಿನ ಪ್ರತಿಮೆ ಸಮೀಪ ಸುಮಾರು ₹20 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ‘ಕೆಂಪೇಗೌಡ ಥೀಮ್ ಪಾರ್ಕ್’ ಉದ್ಘಾಟನೆಗೆ ಸಜ್ಜಾಗಿದೆ.

ಜೂನ್ 27ರಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಘಾಟಿಸಲಿದ್ದಾರೆ ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ರಾಜ್ಯಮಟ್ಟದ ಕೆಂಪೇಗೌಡ ಜಯಂತಿಯನ್ನು ಬೆಂಗಳೂರಿನ ಕೆಂಗೇರಿ ಸಮೀಪದ ಕೆಂಪೇಗೌಡ ಬಡಾವಣೆಯಲ್ಲಿ ಆಚರಿಸಲು ತೀರ್ಮಾನಿಸಲಾಗಿದೆ. ದೇವನಹಳ್ಳಿ ತಾಲ್ಲೂಕಿನ ಆವತಿ ಗ್ರಾಮದಿಂದ ಪ್ರತಿ ವರ್ಷದಂತೆ ಈ ಬಾರಿಯೂ ಜ್ಯೋತಿ ಹೊರಡಲಿದೆ ಎಂದು ಹೇಳಿದರು.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

GOVERNMENT OF INDIA
Ministry of Micro, Small and Medium Enterprises
INSTITUTE FOR DESIGN OF ELECTRICAL MEASURING INSTRUMENTS, MUMBAI
वैद्युतिक मापन उपयंत्र अभिकल्प संस्थान, मुंबई

Government Certificate Course On HOSPITAL MANAGEMENT

Course Time-10.30AM to 5 PM Course Date-27,28 June 2026
Venue- IDEMI EXTENSION CENTER Bangaluru
c/o MSME DEVELOPMENT INSTITUTE ,WEST OF CHORD RD,INDUSTRIAL ESTATE, RAJAJINAGAR,BENGALURU,KARNATAKA 560010
Email: training@idemi.org Website: www.idemi.org

Contents: Total Quality Management & WHO Standards, Staff Patient Relationship & Communication in Hospitals, 7p's of Hospital Services, NABH Accreditations, Consent in Patient care and its Medico-Legal implications, Medico Legal issues, Various Liability in Healthcare, Laws in Healthcare - snapshot, Safety Management in Hospitals

Fees-3500+18 % GST (include lunch & tea) | Technical Detail No.8142416666
For Doctors, Hospital Staff, Management sector and other interested candidates
After completion Government certificate will be issued.
QR Code for Registration and Payment:-
Contact: 9019870803,9403566219,9481236511,9869087617

ನೈಋತ್ಯ ರೈಲ್ವೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕಾಮಗಾರಿಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಪ್ರಕಟಣೆ ಸಂ. ಹೆಚ್‌ಇ–ಟಿಆರ್‌ಡಿ–2025–26–ಓಟಿ–31–2 ದಿನಾಂಕ : 13–06–2026

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗದಲ್ಲಿ ಲೋಡಿಂಗ್ / ಅನ್‌ಲೋಡಿಂಗ್ ಪಾಯಿಂಟ್‌ಗಳಿಗಾಗಿ ಸೀಕ್ವೆನ್ಷಿಯಲ್ ಇಂಟರ್‌ಲಾಕಿಂಗ್‌ನೊಂದಿಗೆ ಡಬಲ್ ಎಂಡ್ ಅರ್ಥ್ ಹೀಲ್ ಐಸೊಲೇಟರ್‌ಗಳನ್ನು ಒದಗಿಸುವುದು.	ರೂ. 61,91,786.56

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 06–07–2026 ರಂದು 1100 ಗಂಟೆಯವರೆಗೆ

ಇ–ಟೆಂಡರ್ ಪ್ರಕಟಣೆ ಸಂ. ಹೆಚ್‌ಇ–ಟಿಆರ್‌ಡಿ–2025–26–ಓಟಿ–32–2 ದಿನಾಂಕ : 13–06–2026

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ನಿಲ್ದಾಣಗಳು, ಪ್ಲಾಟ್‌ಫಾರಂಗಳು, ಪಾದಚಾರಿ ಮೇಲ್ಸೇತುವೆಗಳು, ರಸ್ತೆ ಮೇಲ್ಸೇತುವೆಗಳು ಮತ್ತು ಎಲ್‌ಸಿ ಗೇಟ್‌ಗಳಲ್ಲಿ ಟ್ರಾಕ್ಷನ್ ಡಿಸ್ಟ್ರಿಬ್ಯೂಷನ್ ಸ್ವತ್ತುಗಳ ಸುರಕ್ಷತೆಗಾಗಿ ಸುರಕ್ಷತೆ ಮತ್ತು ವಿಶ್ವಾಸಾರ್ಹ ಕಾರ್ಯ ಯೋಜನೆಯ ಅಳವಡಿಕೆ.	ರೂ. 1,29,48,655/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 06–07–2026 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಮುಕ್ತಾಯದ ದಿನಾಂಕದವರೆಗೆ ಯಾವುದೇ ತಿದ್ದುಪಡಿಗಾಗಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ.

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ ಟ್ರ್ಯಾಕ್ಷನ್ ಡಿಸ್ಟ್ರಿಬ್ಯೂಷನ್ / ಹುಬ್ಬಳ್ಳಿ
ಪಿಯುಬಿ/224/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2026–27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway-SWR SWRRLY @SWRAILWAYHQ @sw_railways

ಭಾರತ್ ಎಲೆಕ್ಟ್ರಾನಿಕ್ಸ್ BHARAT ELECTRONICS
QUALITY, TECHNOLOGY, INNOVATION
ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
(ರಕ್ಷಣಾ ಸಚಿವಾಲಯದಡಿಯ ಭಾರತ ಸರ್ಕಾರದ ಒಂದು ಉದ್ಯಮ)
(CIN: L32309KA1954GOI000787)
ನೋಂದಾಯಿತ ಮತ್ತು ಪ್ರಧಾನ ಕಛೇರಿ: ಹೊರವರ್ತುಲ ರಸ್ತೆ, ನಾಗವಾರ, ಬೆಂಗಳೂರು – 560 045.
ಇ–ಮೇಲ್: secretary@bel.co.in ವೆಬ್‌ಸೈಟ್: www.bel-india.in ಫೋನ್: 080-25039300

ಸೂಚನೆ
ಕಂಪನಿಯ ಈಕ್ವಿಟಿ ಷೇರುಗಳನ್ನು ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿ (ಐಇಪಿಎಫ್) ಗೆ ವರ್ಗಾಯಿಸುವುದು

ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿ ಪ್ರಾಧಿಕಾರ (ಲೆಕ್ಕಪತ್ರ ನಿರ್ವಹಣೆ, ಲೆಕ್ಕಪರಿಶೋಧನೆ, ವರ್ಗಾವಣೆ ಮತ್ತು ಮರುಪಾವತಿ) ನಿಯಮಗಳು, 2016 (“ನಿಯಮಗಳು”) ಮತ್ತು ಕಂಪನಿಗಳ ಕಾಯ್ದೆ 2013 ರ ಸೆಕ್ಷನ್ 124(6) ರ ನಿಬಂಧನೆಗಳಿಗೆ ಅನುಸಾರವಾಗಿ, ಸತತ ಏಳು ವರ್ಷಗಳು ಅಥವಾ ಅದಕ್ಕಿಂತ ಹೆಚ್ಚು ಕಾಲ ಲಾಭಾಂಶವನ್ನು ಪಾವತಿಸದ ಅಥವಾ ಕ್ಲೈಮ್ ಮಾಡದ ಎಲ್ಲಾ ಷೇರುಗಳನ್ನು ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿಗೆ (ಐಇಪಿಎಫ್) ಕಂಪನಿಯಿಂದ ಕಡ್ಡಾಯವಾಗಿ ವರ್ಗಾಯಿಸಲಾಗುವುದು ಎಂದು ಇಲ್ಲಿ ಸೂಚನೆ ನೀಡಲಾಗಿದೆ.

ನಿಯಮ ನಿಬಂಧನೆಗಳಿಗೆ ಅನುಸಾರವಾಗಿ, ಕಂಪನಿ/ನೋಂದಣಿದಾರ ಮತ್ತು ಷೇರು ವರ್ಗಾವಣೆ (ಆರ್‌ಟಿಎ) ದಾಖಲೆಗಳೊಂದಿಗೆ ಲಭ್ಯವಿರುವ ಇತ್ತೀಚಿನ ವಿಳಾಸಕ್ಕೆ ಆಯಾ ಷೇರುದಾರರಿಗೆ ವೈಯಕ್ತಿಕ ಸೂಚನೆಯನ್ನು ಕಳುಹಿಸಲಾಗಿದೆ, ಇತರ ವಿಷಯಗಳ ನಡುವೆ ಐಇಪಿಎಫ್‌ಗೆ ವರ್ಗಾಯಿಸಲಾಗುತ್ತಿರುವ ಷೇರುಗಳ ವಿವರಗಳನ್ನು ಒದಗಿಸುತ್ತದೆ ಮತ್ತು ಅಂತಹ ಷೇರುದಾರರ ಪಟ್ಟಿಯನ್ನು ಕಂಪನಿಯ ವೆಬ್‌ಸೈಟ್‌ನಲ್ಲಿ http://www.bel-india.in/investors/# dividend ನಲ್ಲಿ ಪ್ರದರ್ಶಿಸಲಾಗುತ್ತದೆ.

ಈ ಸಂಬಂಧದಲ್ಲಿ ಸಂಬಂಧಪಟ್ಟ ಷೇರುದಾರರು **ಸೆಪ್ಟೆಂಬರ್ 10, 2026** ರಂದು ಅಥವಾ ಅದಕ್ಕೂ ಮೊದಲು, 2018–19ರ ಅಂತಿಮ ಲಾಭಾಂಶದ ಪ್ರಕಾರ ಮತ್ತು ನಂತರ ಪಾವತಿಸದ/ಕ್ಲೇಮ್ ಮಾಡದ ಲಾಭಾಂಶದ ಮೊತ್ತ(ಗಳನ್ನು) ಕ್ಲೇಮ್ ಮಾಡಲು ವಿನಂತಿಸಲಾಗಿದೆ. ಇಲ್ಲದಿದ್ದರೆ ಅಂತಹ ಷೇರುಗಳನ್ನು ಐಇಪಿಎಫ್ ಗೆ ವರ್ಗಾಯಿಸಲಾಗುತ್ತದೆ. ಅಂತಹ ವರ್ಗಾವಣೆಯ ನಂತರ, ಕ್ಲೈಮ್ ಮಾಡದ ಲಾಭಾಂಶ ಮತ್ತು ಐಇಪಿಎಫ್‌ಗೆ ವರ್ಗಾಯಿಸಲಾದ ಷೇರುಗಳನ್ನು, ಅಂತಹ ಷೇರುಗಳ ಮೇಲೆ ಬರುವ ಎಲ್ಲಾ ಪ್ರಯೋಜನಗಳನ್ನು ಒಳಗೊಂಡಂತೆ, ಯಾವುದಾದರೂ ಇದ್ದರೆ, ಆ ಷೇರುದಾರರು ಐಇಪಿಎಫ್ ಪ್ರಾಧಿಕಾರದಿಂದ ಮರಳಿ ಪಡೆಯಬಹುದು ಎಂಬುದನ್ನು ಷೇರುದಾರರು ಗಮನಿಸಬಹುದಾಗಿದೆ.

ಮೇಲಿನ ವಿಷಯದ ಕುರಿತು ಯಾವುದೇ ಪ್ರಶ್ನೆಗಳಿದ್ದಲ್ಲಿ, ಷೇರುದಾರರು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್, ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, ಸಂಖ್ಯೆ 30, ರಮಣ ರೆಸಿಡೆನ್ಸಿ, 4ನೇ ಅಡ್ಡರಸ್ತೆ, ಸಂಪಿಗೆ ರೋಡ್, ಮಲ್ಲೇಶ್ವರಂ, ಬೆಂಗಳೂರು–560 003 ಅವರನ್ನು ಸಂಪರ್ಕಿಸಲು ವಿನಂತಿಸಲಾಗಿದೆ. ದೂರವಾಣಿ: 080–23460815/16/17/18. ಫ್ಯಾಕ್ಸ್: 080–23460819. ಇ–ಮೇಲ್: irg@integratedindia.in

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ನ ಪರವಾಗಿ
ಸಹಿ/–
ಎಸ್. ಶ್ರೀನಿವಾಸ್
ಕಂಪನಿ ಕಾರ್ಯದರ್ಶಿ

ಬೆಂಗಳೂರು
19ನೇ ಜೂನ್ 2026

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೇಂದ್ರ ಕಛೇರಿ (ಕೆಐಎಡಿಬಿ), ನಂ.14/3, ಸಿ.ಎಫ್.ಸಿ. ಕಟ್ಟಡ, ಮಹರ್ಷಿ ಅರವಿಂದ ಭವನ, 1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು–560001.
ಸಂಖ್ಯೆ: ಕೆಐಎಡಿಬಿ/ಎಲ್‌ಎಕ್ಯೂ/1017/2026–27 ದಿನಾಂಕ: 11.06.2026

ಸಾರ್ವಜನಿಕ ನೋಟೀಸ್

ಈ ಮೂಲಕ ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟ ಜಮೀನಿನ ಖಾತೆದಾರರು/ಅನುಭವದಾರರು/ಹಿತಾಸಕ್ತದಾರರಿಗೆ ತಿಳಿಸುವುದೇನೆಂದರೆ, ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು, ನರಸಾಪುರ ಹೋಬಳಿ, ಬೆಳ್ಳೂರು ಗ್ರಾಮದ ಒಟ್ಟು ವಿಸ್ತೀರ್ಣ 1–38 ಎ/ಗು ಜಮೀನನ್ನು ಕೆಳಕಂಡ ಸರ್ವೆ ನಂಬರ್‌ಗಳ ಜಮೀನಿಗೆ ಮೆ॥ ಟಾಟಾ ಎಲೆಕ್ಟ್ರಾನಿಕ್ಸ್ ಸಿಸ್ಟಮ್ ಸಲ್ಯೂಷನ್ ಪ್ರೈವೇಟ್ ಲಿಮಿಟೆಡ್ ರಸ್ತೆ ನಿರ್ಮಾಣದ ಯೋಜನೆಗಾಗಿ ಪ್ರಾಥಮಿಕ ಅಧಿಸೂಚನೆ ಸಂಖ್ಯೆ: ಸಿಐ 100 ಎಸ್‌ಪಿಕ್ಯೂ 2022 ದಿನಾಂಕ: 18.04.2026 ರಂತೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಚುರ ಪಡಿಸಿರುತ್ತದೆ. ಮುಂದುವರೆದು, ನೋಟೀಸ್ ತಲುಪಿದ 30 ದಿನಗಳ ಒಳಗಾಗಿ ಈ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ **ವಿಶೇಷ ಭೂಸ್ವಾಧೀನಾಧಿಕಾರಿಗಳ ಕೇಂದ್ರ ಕಛೇರಿ (ಕೆಐಎಡಿಬಿ) ನಂ.14/3, ಸಿ.ಎಫ್.ಸಿ. ಕಟ್ಟಡ, ಮಹರ್ಷಿ ಅರವಿಂದ ಭವನ, 1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು–560001** ಇವರ ಕಛೇರಿಗೆ ಆಕ್ಷೇಪಣೆಯನ್ನು ಲಿಖಿತ ಮೂಲಕ ಖುದ್ದು ಅಥವಾ ಅಧಿಕಾರ ಪಡೆದವರ ಮುಖೇನ ಸಲ್ಲಿಸಬಹುದಾಗಿರುತ್ತದೆ ಎಂದು ಈ ಮೂಲಕ ಖಾತೆದಾರರಿಗೆ ತಿಳಿಸಲಾಗಿರುತ್ತದೆ. ಭೂಸ್ವಾಧೀನಕ್ಕೆ ಒಳಪಟ್ಟ ಜಮೀನುಗಳ ಪೈಕಿ ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ಖಾತೆದಾರರು/ಅನುಭವದಾರರ ಹೆಸರು	ಸರ್ವೆ ನಂ.	ಭೂಸ್ವಾಧೀನಕ್ಕೊಳಪಟ್ಟ ವಿಸ್ತೀರ್ಣ ಜಿರಾಯ್ತು (ಎ/ಗು)	ಖರಾಬು (ಎ/ಗು)	ಬಾಕಿ (ಎ/ಗು)
1	2	3	4	5	6
ಗ್ರಾಮ: ಬೆಳ್ಳೂರು ಹೋಬಳಿ: ನರಸಾಪುರ ತಾಲ್ಲೂಕು: ಕೋಲಾರ ಜಿಲ್ಲೆ: ಕೋಲಾರ ಜಿಲ್ಲೆ					
1	ಎಂ.ವಿ. ವಿನಯನಾಥ್ ಬಿನ್ ಎಂ.ವೆಂಕಟರಾಮ್–ಭೂ.ಪ, ಎಂ.ವಿ. ವಿನಯ್‌ನಾಗ್ ಬಿನ್ ಎಂ. ವೆಂಕಟರಾಮ್–ಭೂ.ಪ, ಎಂ.ವಿ. ವಿನಯ್‌ನಾಗ್ ಬಿನ್ ಎಂ ವೆಂಕಟರಾಮ	267/1	1-05	-	1-05
2	ವಿಜಯ ಎಂ.ವಿ. ರಾಮ್ ಕೋಂ ಎಂ. ವೆಂಕಟರಾಮ್–ಭೂ.ಪ., ಬಿ.ಜಿ. ರಾಮಕೃಷ್ಣಪ್ಪ ಬಿನ್ ಗಂಗಪ್ಪ – ಭೂ.ಪ.	268	0-33	-	0-33
	ಒಟ್ಟು		1-38	-	1-38

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿ, ಕೆಐಎಡಿಬಿ (ಕೇಂದ್ರ ಕಛೇರಿ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಅಇಂ(ವಿ)/ಪ್ರ(ಯೋ)/ಗ್ರಾವೃತ್ತ/ಕಾಇಂ/ಸಕಾಇಂ(ವಿ)-2/26-27/514-15 ದಿನಾಂಕ: 19.06.2026

ಸಾರ್ವಜನಿಕ ಪ್ರಕಟಣೆ

ಕವಿಪ್ರನಿನಿಯು, ಸಾರ್ವಜನಿಕ ತಿಳುವಳಿಕೆಗೆ, ಈ ಮೂಲಕ ಪ್ರಕಟಿಸುವುದೇನೆಂದರೆ, ಸಾರ್ವಜನಿಕ ವಿದ್ಯುತ್ ಬಳಕೆದಾರರ, ವಿಶೇಷವಾಗಿ ರೈತರ ಹಿತದೃಷ್ಟಿಯಿಂದ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನಲ್ಲಿ ನೂತನ 66/11ಕೆವಿ ವಿದ್ಯುತ್ ಉಪ-ಕೇಂದ್ರವನ್ನು ಸ್ಥಾಪಿಸಲು ಉದೇಶಿಸಿದ್ದು, ಈಗಾಗಲೇ ಮಾಲೂರು ತಾಲ್ಲೂಕಿನ ವಿದ್ಯುತ್ ಬೇಡಿಕೆ ಹೆಚ್ಚಾಗಿದ್ದು, ಎಲ್ಲಾ ಹೆಚ್ಚುವರಿ ವಿದ್ಯುತ್ ಹೊರೆಯನ್ನು ಹಾಲಿ ಇರುವ ವಿದ್ಯುತ್ ಉಪ-ಕೇಂದ್ರಗಳು ಪೂರೈಸಲು ಹಾಗೂ ಸಮರ್ಪಕವಾದ ರೀತಿಯಲ್ಲಿ ವಿದ್ಯುತ್ ವಿತರಣೆ ಮಾಡಲು ಕಷ್ಟಕರವಾಗುತ್ತಿರುತ್ತದೆ. ಆದ್ದುದರಿಂದ ಗೃಹಬಳಕೆದಾರರಿಗೆ ಹಾಗೂ ರೈತರಿಗೆ ನಿರಂತರವಾಗಿ ಉತ್ತಮ ಗುಣಮಟ್ಟದ ವಿದ್ಯುತ್ತನ್ನು ನೀಡಲು ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಉನ್ನತೀಕರಿಸಲು 66/11ಕೆವಿ ವಿದ್ಯುತ್ ಉಪ-ಕೇಂದ್ರದ ಸ್ಥಾಪನೆಯು ಅತ್ಯವಶ್ಯಕವಾಗಿರುತ್ತದೆ.

ಈ ಹಿನ್ನಲೆಯಲ್ಲಿ, ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನಲ್ಲಿ, ರಾಂಪುರ ಗ್ರಾಮದಲ್ಲಿ ವಿದ್ಯುತ್ ಉಪ-ಕೇಂದ್ರ ಸ್ಥಾಪಿಸಲು ಕವಿಪ್ರನಿನಿಯು ಯೋಜನೆ ಹಮ್ಮಿಕೊಂಡಿದೆ. ಸದರಿ ಯೋಜನೆಗಾಗಿ ಬೇಕಾಗುವ ಖಾಸಗಿ ಜಮೀನಿನ ವಿವರ ಈ ಕೆಳಕಂಡಂತೆ ಗುರುತಿಸಲಾಗಿದೆ.

ಭೂಮಾಲೀಕರ ಹೆಸರು ಮತ್ತು ವಿಳಾಸ: ಮೆ॥ ಎನ್‌ಷೂರ್ ಪವರ್ ಸಲೂಷನ್ಸ್ ಪ್ರೈವೇಟ್ ಲಿಮಿಟೆಡ್.

ಗ್ರಾಮ	ಜಮೀನಿನ ಸರ್ವೆ ನಂ.	ಕವಿಪ್ರನಿನಿ ಉಪಕೇಂದ್ರ ನಿರ್ಮಾಣ ಸಲುವಾಗಿ ಬೇಕಾಗಿರುವ ಜಮೀನಿನ ವಿಸ್ತೀರ್ಣ (ಎ-ಗು)
ರಾಂಪುರ	137/4	1-0
	176/4	0-11
	147/2	0-5
		ಒಟ್ಟು 1-16

ಸದರಿ ಜಮೀನನ್ನು ನೇರ ಒಪ್ಪಂದದ ಮೂಲಕ ಭೂ ಮಾಲೀಕರಿಂದ ಸರ್ಕಾರಿ ಮಾರುಕಟ್ಟೆ ಬೆಲೆಗೆ ಕವಿಪ್ರನಿನಿಯ ಯೋಜನೆಗಾಗಿ ಖರೀದಿ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ.

ಈ ಪ್ರಕಟಣೆ ಮೂಲಕ ಸಾರ್ವಜನಿಕರ ಗಮನಕ್ಕೆ ತರಬಯಸುವುದೇನೆಂದರೆ ಕವಿಪ್ರನಿನಿಯು ಖರೀದಿಸಲು ಉದ್ದೇಶಿಸಿರುವ ಮೇಲಿನ ಸರ್ವೆ ಸಂಖ್ಯೆ 137/4, 176/4, 147/2 ಜಮೀನುಗಳ ಮೇಲೆ ಯಾರದಾದರೂ ತಂಟೆ, ತಕರಾರು ಅಥವಾ ಆಕ್ಷೇಪಣೆ ಏನಾದರೂ ಇದ್ದರೆ ಪ್ರಕಟಣೆಯ ದಿನಾಂಕದಿಂದ 15 ದಿನಗೊಳಗಾಗಿ ಈ ಕೆಳಗೆ ತಿಳಿಸಿರುವ ಅಧಿಕಾರಿಗಳ ಗಮನಕ್ಕೆ ತರಬೇಕಾಗಿ ಈ ಮೂಲಕ ತಿಳಿಸಲಾಗಿದೆ.

1. ಶ್ರೀ.ಕೆ.ಆರ್.ಸತೀಶ್, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಯೋಜನೆ ವಿಭಾಗ, ಕೋಲಾರ- 94483 65254.
2. ಶ್ರೀ.ಚಂದ್ರಮೋಹನ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ಕಾ), ಯೋಜನೆ ವಿಭಾಗ, ಕೋಲಾರ-94483 65229.
3. ಶ್ರೀಮತಿ. ಲತಾ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಯೋಜನೆ ವಿಭಾಗ, ಕೋಲಾರ- 94483 65228.

ಸಹಿ/– ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ(ಯೋಜನೆ), ಗ್ರಾಮೀಣ ವೃತ್ತ, ಕವಿಪ್ರನಿನಿ, ಪಂತರಪಾಳ್ಯ, ಮೈಸೂರು ರಸ್ತೆ, ಬೆಂಗಳೂರು.

ಸೆಂಟರ್ ಫಾರ್ ಏರ್ ಬೋರ್ನ್ ಸಿಸ್ಟಮ್ಸ್ (ಸಿಎಬಿಎಸ್)
ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ)
ಭಾರತ ಸರ್ಕಾರ, ರಕ್ಷಣಾ ಸಚಿವಾಲಯ,
ಬೇಲೂರ್, ಯಮಲೂರ್ ಅಂಚೆ, ಬೆಂಗಳೂರು – 560 037

ಸಿವಿಲಿಯನ್ ಮೆಡಿಕಲ್ ಆಫೀಸರ್ ಹುದ್ದೆಗಾಗಿ ಗುತ್ತಿಗೆ ಆಧಾರದಲ್ಲಿ ಅರ್ಹ ವೈದ್ಯರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ

1. ಹುದ್ದೆಯ ಹೆಸರು : ಸಿವಿಲಿಯನ್ ಮೆಡಿಕಲ್ ಆಫೀಸರ್ (ಗುತ್ತಿಗೆ ಆಧಾರದ ಮೇರೆಗೆ)
2. ಹುದ್ದೆಗಳ ಸಂಖ್ಯೆ : ಒಂದು
3. ವೇತನ : ಮಾಸಿಕ ರೂ. 60,000/– (ಫಿಕ್ಸೆಡ್)
4. ಪ್ರಾಯ : 65 ವರ್ಷಕ್ಕಿಂತ ಕಡಿಮೆ
5. ಅಗತ್ಯ ವಿದ್ಯಾರ್ಹತೆ : ಎಂಬಿಬಿಎಸ್, ಕೆಎಂಸಿ/ಐಎಂಸಿ ನೋಂದಾಯಿತ ಏವಿಯೇಶನ್ ಮೆಡಿಸಿನ್‌ನಲ್ಲಿ ಪಿಜಿ ಡಿಪ್ಲೋಮ/ಪದವಿ ಅಪೇಕ್ಷಣೀಯ
6. ಕಾರ್ಯಾನುಭವ : ಎ) ಒಂದು ಕ್ಲಿನಿಕ್ ಅಥವಾ ಹಾಸ್ಪಿಟಲ್‌ನಲ್ಲಿ ಸ್ವತಂತ್ರ ಕ್ಷಮತೆಯ ಮೇರೆಗೆ ಆರ್‌ಎಂಪಿ ಹುದ್ದೆಯಲ್ಲಿ ಕನಿಷ್ಠ 5 ವರ್ಷ ಕೆಲಸ ಮಾಡಿದ ಅನುಭವ
ಬಿ) ಬೆಂಗಳೂರಿನ ಅಭ್ಯರ್ಥಿಗಳಿಗೆ ಆದ್ಯತೆ ಸ್ಥಳೀಯ ಕನ್ನಡ ಭಾಷೆಯನ್ನು ಚೆನ್ನಾಗಿ ತಿಳಿದಿರಬೇಕು.

ಸೇವಾ ಷರತ್ತು ಮತ್ತು ನಿಬಂಧನೆಗಳು

ಎ) ಸದರಿ ಹುದ್ದೆಯು ಸಂಪೂರ್ಣ ಗುತ್ತಿಗೆ ಆಧಾರದಲ್ಲಿರುತ್ತದೆ.
ಬಿ) ಎನ್‌ಪಿಎ ಮತ್ತು ಇನ್ನಿತರ ಭತ್ಯೆಗಳು ಲಭ್ಯವಿರುವುದಿಲ್ಲ.
ಸಿ) ನೇಮಕಾತಿಯ ಅವಧಿಯು, ಕರ್ತವ್ಯಕ್ಕೆ ಹಾಜರಾದಾಗಿಂದ ಒಂದು ವರ್ಷ ಅಥವಾ ಸಿಎಬಿಎಸ್‌ನಲ್ಲಿ ನಿಯಮಿತ ಅಭ್ಯರ್ಥಿ ನೇಮಕಗೊಳ್ಳುವವರೆಗೆ, ಇವುಗಳಲ್ಲಿ ಯಾವುದು ಮೊದಲೊ ಆ ಅವಧಿಯದ್ದಾಗಿರುತ್ತದೆ.
ಡಿ) ಸದರಿ ಹುದ್ದೆಗೆ ಆಯ್ಕೆಗೊಳ್ಳುವ ಅಧಿಕಾರಿಯು, ನಂತರದ ದಿನಗಳಲ್ಲಿ ಒಂದು ವೇಳೆ ನಿಯಮಿತ ಸರ್ಕಾರಿ ಸೇವೆಗೆ ಆಯ್ಕೆಗೊಂಡಲ್ಲಿ, ಪ್ರಸಕ್ತ ಸೇವಾವಧಿಯು ಯಾವುದೇ ಸೇವಾ ಹಿರಿತನ ಅಥವಾ ಇನ್ಯಾವುದೇ ಸೌಕರ್ಯಕ್ಕೆ ಅರ್ಹವಾಗುವುದಿಲ್ಲ.
ಇ) ಸದರಿ ನೇಮಕಾತಿಯು ಡಿಆರ್‌ಡಿಒ ಪ್ರಧಾನ ಕಚೇರಿ, ದೆಹಲಿ ಇವರ ನಿಬಂಧನೆಗೆ ಒಳಪಟ್ಟಿರುತ್ತದೆ.
ಎಫ್) ಕೆಲಸದ ಸಮಯ (ರಜಾದಿನಗಳನ್ನು ಹೊರತುಪಡಿಸಿ) – ಸೋಮವಾರ ದಿಂದ ಶುಕ್ರವಾರ – 0830 ರಿಂದ 1700 ಗಂಟೆ ಶನಿವಾರ / ಭಾನುವಾರ (ತುರ್ತು ಅಥವಾ ಕರೆ ಇದ್ದಲ್ಲಿ ಮಾತ್ರ)

ಅರ್ಹ ಅಭ್ಯರ್ಥಿಗಳು ಕಡ್ಡಾಯವಾಗಿ, ಒಂದು ಬಿಳಿ ಕಾಗದದ ಮೇಲೆ ತಮ್ಮ ಹೆಸರು, ತಂದೆ/ಗಂಡನ ಹೆಸರು, ಜನ್ಮದಿನಾಂಕ, ಪತ್ರ ವ್ಯವಹಾರದ ವಿಳಾಸ, ಶೈಕ್ಷಣಿಕ ವಿದ್ಯಾರ್ಹತೆ, ಅನುಭವದ ವಿವರ, ಕೆಎಂಸಿ/ಐಎಂಸಿ ನೋಂದಣಿ ಸಂಖ್ಯೆ, ದೂರವಾಣಿ ಸಂಖ್ಯೆ, ಇಮೇಲ್ ವಿಳಾಸ ಇತ್ಯಾದಿ ವಿವರಗಳನ್ನು ಸ್ಪಷ್ಟವಾಗಿ ಟೈಪ್ ಮಾಡಿ ಅರ್ಜಿಗಳನ್ನು, ಸ್ವಯಂ ದೃಢೀಕೃತ ಪೂರಕ ದಾಖಲಾತಿಗಳು / ಪ್ರಮಾಣಪತ್ರಗಳನ್ನು ಲಗತ್ತಿಸಿ, ಸದರಿ ಜಾಹೀರಾತು ದಿನಾಂಕದಿಂದ 30 ದಿನಗಳೊಳಗೆ ಸಿಎಬಿಎಸ್ ನಿರ್ದೇಶಕರು, ವಿಂಡ್ ಟನಲ್ ರಸ್ತೆ, ಬೇಲೂರ್, ಯಮಲೂರ್ ಅಂಚೆ, ಬೆಂಗಳೂರು – 569937 ವಿಳಾಸಕ್ಕೆ ರವಾನಿಸುವುದು. ಅರ್ಜಿ ಲಕೋಟೆಯ ಮೇಲೆ “ಸಿವಿಲಿಯನ್ ಮೆಡಿಕಲ್ ಆಫೀಸರ್ ಹುದ್ದೆಗಾಗಿ ಅರ್ಜಿ – ಗುತ್ತಿಗೆ” ಎಂದು ದಪ್ಪ ಅಕ್ಷರಗಳಲ್ಲಿ ನಮೂದಿಸತಕ್ಕದ್ದು.

CBC 10301/11/0048/2627 ಸಿಎಬಿಎಸ್ ನಿರ್ದೇಶಕರ ಪರವಾಗಿ

ವಿದ್ಯುತ್ ಚಿತಾಗಾರ: ಜಾಲತಾಣ ಬಳಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿರುವ ವಿದ್ಯುತ್ ಚಿತಾಗಾರಗಳಲ್ಲಿ ಶವಸಂಸ್ಕಾರಕ್ಕೆ ಜಾಲತಾಣಗಳಲ್ಲೇ ನೋಂದಣಿ ಮಾಡಿಸಿಕೊಳ್ಳಲು ಮನವಿ ಮಾಡಿಕೊಳ್ಳಲಾಗಿದೆ.

ವಿದ್ಯುತ್ ಚಿತಾಗಾರಗಳಲ್ಲಿ ಶವ ಸಂಸ್ಕಾರಕ್ಕಾಗಿ ಸ್ಲಾಟ್‌ಗಳನ್ನು ಕಾಯ್ದಿರಿಸುವ ಸಂದರ್ಭದಲ್ಲಿ ಗೂಗಲ್‌ನಲ್ಲಿ ತೋರಿಸಲ್ಪಡುವ ನಕಲಿ ಜಾಲತಾಣಗಳು ಅಥವಾ ಅನಧಿಕೃತ ಲಿಂಕ್‌ಗಳನ್ನು ಸಂಪರ್ಕಿಸದೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರದಿಂದ ನಿರ್ವಹಿಸಲ್ಪಡುವ ಅಧಿಕೃತ ಜಾಲತಾಣದಲ್ಲೇ ಕಾಯ್ದಿರಿಸುವಂತೆ ಕೋರಲಾಗಿದೆ.

ನಕಲಿ ಜಾಲತಾಣಗಳ ಮೂಲಕ ಸಾರ್ವಜನಿಕರಿಗೆ ವಂಚನೆ ಆಗದಂತೆ ತಡೆಯುವ ಉದ್ದೇಶದಿಂದ ಈ ಕುರಿತು ಸೈಬರ್ ಕ್ರೈಂ ಪೊಲೀಸ್ ವಿಭಾಗದಲ್ಲಿ ಈಗಾಗಲೇ ದೂರು ದಾಖಲಿಸಲಾಗಿದ್ದು, ಸಾರ್ವಜನಿಕರು ಎಚ್ಚರಿಕೆಯಿಂದ ಅಧಿಕೃತ ಜಾಲತಾಣಗಳನ್ನೇ ಬಳಸುವಂತೆ ಉತ್ತರ ಹಾಗೂ ಪಶ್ಚಿಮ ನಗರ ಪಾಲಿಕೆಗಳು ಮನವಿ ಮಾಡಿದೆ.

ಪ್ರತಿ ಶವಸಂಸ್ಕಾರಕ್ಕೆ ₹250 ಶುಲ್ಕ ನಿಗದಿಪಡಿಸಲಾಗಿದ್ದು, ಶುಲ್ಕ ಪಾವತಿಸಿ ರಸೀದಿ ಪಡೆಯಬೇಕು. ಚಟ್ಟ, ಮಡಿಕೆ, ಪೂಜಾ ಸಾಮಗ್ರಿ ವ್ಯವಸ್ಥೆಯನ್ನು ಸ್ವಯಂ ಮಾಡಿಕೊಳ್ಳಬೇಕಾಗಿರುತ್ತದೆ. ಪಾಲಿಕೆಯಿಂದ ಇವುಗಳನ್ನು ಒದಗಿಸುವುದಿಲ್ಲ. ಶವಸಂಸ್ಕಾರಕ್ಕೆ ಬರುವ ಸಂದರ್ಭದಲ್ಲಿ ಮನವಿ ಪತ್ರ, ಮರಣದ ವರದಿ ನಮೂನೆ-02, ವೈದ್ಯರ ದೃಢೀಕರಣ ಪತ್ರ ನಮೂನೆ-4A, ಶವಸಂಸ್ಕಾರ ದೃಢೀಕರಣ ಪತ್ರ/ ಮೃತರ ಪಡಿತರ ಚೀಟಿ/ ಮೃತರ ಆಧಾರ್ ಗುರುತಿನ ಚೀಟಿ/ ಮೃತರ ಚುನಾವಣಾ ಗುರುತಿನ ಚೀಟಿ/ ಟಿ.ಸಿ./ ಪಾನ್ ಕಾರ್ಡ್ ನೀಡಬೇಕು ಎಂದು ತಿಳಿಸಲಾಗಿದೆ.

- https://apps.bbmpgov.in/crematorium/forms/onlinebookingfrm.aspx
- https://site.bbmp.gov.in/onlinecrematoriumprocessflow.html

ನಿಯಮ ಮೀರಿ ಹುದ್ದೆ ಹೋರಾಟದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ (ಜಿಬಿಎ) ವೃಂದ ಮತ್ತು ನೇಮಕಾತಿ ನಿಯಯಗಳನ್ನು ಉಲ್ಲಂಘಿಸಿ, ಜಿ. ಚಿದಾನಂದ ಮೂರ್ತಿ ಅವರನ್ನು ವ್ಯವಸ್ಥಾಪಕ ಹುದ್ದೆಗೆ ಎರವಲು ಸೇವೆಯಲ್ಲಿ ನಿಯೋಜಿಸಲಾಗಿದೆ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರ–ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ದೂರಿದೆ.

‘ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಅಧೀಕ್ಷಕರಾಗಿರುವ ಚಿದಾನಂದಮೂರ್ತಿ, ಎರವಲು ಸೇವೆಯ ಮೇಲೆ ಜಿಬಿಎಗೆ ಬಂದಿದ್ದಾರೆ. ಅವರನ್ನು ಬೆಂಗಳೂರು ಪಶ್ಚಿಮ ನಗರ ಪಾಲಿಕೆಯಲ್ಲಿ ಖಾಲಿ ಇರುವ ವ್ಯವಸ್ಥಾಪಕರ ಹುದ್ದೆಗೆ ನಿಯೋಜಿಸಿರುವುದು ನಿಯಮಗಳ ಉಲ್ಲಂಘನೆಯಾಗಿದೆ. ಇದನ್ನು ವಾಪಸ್ ಪಡೆಯದಿದ್ದರೆ ಹೋರಾಟ ನಡೆಸಲಾಗುವುದು’ ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಹೇಳಿದ್ದಾರೆ.

ಜಿಬಿಎ ಮುಖ್ಯ ಆಯುಕ್ತರಿಗೆ ಪತ್ರ ಬರೆದಿರುವ ಅವರು, ‘ಜಿಬಿಎ ಪಾಲಿಕೆಗಳಲ್ಲಿ ಕಾರ್ಯನಿರ್ವಹಿಸುವ ಪ್ರಥಮ ದರ್ಜೆ ಗುಮಾಸ್ತರಿಗೆ ವ್ಯವಸ್ಥಾಪಕರ ಹುದ್ದೆಗೆ ಮುಂಬಡ್ತಿ ಹೊಂದಲು ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಅವಕಾಶವಿದೆ. ಆದರೆ, ಎರವಲು ಸೇವೆಯಲ್ಲಿ ಬಂದಿರುವ ಚಿದಾನಂದ ಅವರಿಗೆ ಈ ಹುದ್ದೆ ನೀಡಿರುವುದು ಕಾನೂನುಬಾಹಿರ. ಈ ಆದೇಶವನ್ನು ಕೂಡಲೇ ವಾಪಸ್ ಪಡೆಯಬೇಕು’ ಎಂದು ಅವರು ಒತ್ತಾಯಿಸಿದ್ದಾರೆ.

‘ವಿಧಾನ ಪರಿಷತ್ ಚುನಾವಣೆ ಆಮಿಷ ಒಡ್ಡಿ ಗೆದ್ದಿಲ್ಲ’

ಪ್ರಜಾವಾಣಿ ವಾರ್ತೆ

ಹಾಸನ: ‘ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಆತ್ಮಸಾಕ್ಷಿಗೆ ಅನುಗುಣವಾಗಿ ಮತ ಚಲಾಯಿಸಲು ಹೇಳಿದ್ದರು. ಅದರಂತೆ ಶಾಸಕರು ಮತ ಹಾಕಿದ್ದು, ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಯಾರಿಗೂ ಯಾವುದೇ ಅಮಿಷ ಒಡ್ಡಿ ಗೆದ್ದಿಲ್ಲ’ ಎಂದು ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಐದೂ ಅಭ್ಯರ್ಥಿಗಳ ಗೆಲುವು ಸರ್ಕಾರದ ಕಾರ್ಯಕ್ಷಮತೆಗೆ ದೊರೆತ ಮನ್ನಣೆ. ಸರ್ಕಾರ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂಬುದಕ್ಕೆ ಸಾಕ್ಷಿ’ ಎಂದರು.

ಡಿ.ಎಸ್. ಮ್ಯಾಕ್ಸ್ 20ನೇ ವಾರ್ಷಿಕೋತ್ಸವ ಸಮಾರಂಭ

2030ರ ವೇಳೆಗೆ ಲಕ್ಷ ಮನೆ ನಿರ್ಮಾಣದ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಮುಖ ರಿಯಲ್ ಎಸ್ಟೇಟ್ ಸಂಸ್ಥೆ ‘ಡಿ.ಎಸ್ ಮ್ಯಾಕ್ಸ್ ಪ್ರಾಪರ್ಟೀಸ್’ ತನ್ನ ಸಾಧನೆಯ 20ನೇ ವರ್ಷದ ವಾರ್ಷಿಕೋತ್ಸವವನ್ನು ನಗರದ ಅರಮನೆ ಮೈದಾನದಲ್ಲಿ ಶುಕ್ರವಾರ ಅದ್ದೂರಿಯಾಗಿ ಆಚರಿಸಿತು.

ಇದೇ ವೇಳೆ ಆಯೋಜಿಸಲಾಗಿದ್ದ ವಿಶೇಷ ‘ಫ್ಲ್ಯಾಟ್ ಜೊತೆ ಭಾಗ್ಯ’ (ಲಕ್ಕಿ ಡ್ರಾ) ಯೋಜನೆಯಡಿ ವಿಜೇತ ಗ್ರಾಹಕರಿಗೆ ಉಚಿತವಾಗಿ 2 ಬಿ.ಎಚ್.ಕೆ ಮನೆ, ಕಾರು, 20 ದ್ವಿಚಕ್ರ ವಾಹನಗಳು, 30 ಗೃಹೋಪಯೋಗಿ ವಸ್ತುಗಳು ಸೇರಿದಂತೆ ಹಲವು ಆಕರ್ಷಕ ಬಹುಮಾನಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಎಸ್.ಪಿ. ದಯಾನಂದ್, ‘ನಮ್ಮ ಸಂಸ್ಥೆ ಸ್ಥಾಪನೆಯಾದ ಎರಡು ದಶಕಗಳಲ್ಲಿ 50,000ಕ್ಕೂ ಹೆಚ್ಚು ಮನೆಗಳನ್ನು ನಿರ್ಮಿಸಿ ಗ್ರಾಹಕರಿಗೆ ಹಸ್ತಾಂತರಿಸಿದ್ದೇವೆ. ಪ್ರಸ್ತುತ ಬೆಂಗಳೂರಿನ ನಾಲ್ಕೂ ದಿಕ್ಕುಗಳಲ್ಲಿ ಇನ್ನೂ 25,000 ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. 2030ರ ವೇಳೆಗೆ ಒಟ್ಟು 1 ಲಕ್ಷ ಮನೆಗಳನ್ನು ನಿರ್ಮಿಸಲಾಗುವುದು’ ಎಂದರು.

20ನೇ ವರ್ಷದ ಸಂಭ್ರಮದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ವಿಶೇಷ ಲಕ್ಕಿ ಡ್ರಾ ಸ್ಪರ್ಧೆಯನ್ನು ಎಲ್ಲರ ಸಮ್ಮುಖದಲ್ಲೇ ನಡೆಸಲಾಯಿತು. ಸಂಸ್ಥೆಯ ‘ಸ್ಕೈ ಸಿಸಿರಾ’ ಯೋಜನೆಯಲ್ಲಿ ಮನೆ ಬುಕ್ ಮಾಡಿದ್ದ ಸಾಯಿ ಕೃಷ್ಣ ಅವರಿಗೆ ಲಕ್ಕಿ ಡ್ರಾದಲ್ಲಿ ಮತ್ತೊಂದು 2 ಬಿಎಚ್‌ಕೆ ಮನೆ ಉಚಿತವಾಗಿ ಸಿಕ್ಕಿತು.

‘ಪ್ರತಿಯೊಬ್ಬರಿಗೂ ಸ್ವಂತ ಮನೆ ಹೊಂದುವ ದೊಡ್ಡ ಕನಸಿರುತ್ತದೆ. ಸಾಮಾನ್ಯ ಜನರ ಈ ಸ್ವಂತ ಸೂರಿನ ಕನಸನ್ನು ಡಿ.ಎಸ್. ಮ್ಯಾಕ್ಸ್ ಸಂಸ್ಥೆ ನನಸು ಮಾಡುತ್ತಿದೆ. ಇತ್ತೀಚೆಗೆ ನಾನು ಕೂಡ ನನ್ನ ಸ್ವಂತ ಮನೆಗೆ ಪ್ರವೇಶಿಸಿದಾಗ ಆದ ಸಂತೋಷ ಅಪಾರವಾಗಿತ್ತು’ ಎಂದು ನಟಿ ಕಾಜಲ್ ಅಗರ್ವಾಲ್ ಹೇಳಿದರು.

ಕೇದಾರನಾಥದ ಭೀಮಾಶಂಕರ ಲಿಂಗ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸಮಾರಂಭದಲ್ಲಿ ಡಿ.ಎಸ್. ಮ್ಯಾಕ್ಸ್ ಸಮೂಹ ಸಂಸ್ಥೆಯ ಸಂಸ್ಥಾಪಕ ಹಾಗೂ ಮುಖ್ಯಸ್ಥರಾದ ಡಾ. ಕೆ.ವಿ. ಸತೀಶ್ ಸೇರಿದಂತೆ ರಿಯಲ್ ಎಸ್ಟೇಟ್ ಕ್ಷೇತ್ರದ ಪ್ರಮುಖರು, ಗಣ್ಯರು ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ಲಕ್ಕಿ ಡ್ರಾದಲ್ಲಿ 2 ಬಿಎಚ್‌ಕೆ ಮನೆ, ಕಾರು 20 ದ್ವಿಚಕ್ರ ವಾಹನಗಳ ವಿತರಣೆ
- ಕಾರ್ಯಕ್ರಮದಲ್ಲಿ ನಟಿ ಕಾಜಲ್ ಅಗರ್ವಾಲ್ ಭಾಗಿ

ಕೃಷಿ ಭೂಮಿ ಸ್ವಾಧೀನ ಕೈಬಿಡಲು ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೌನ್‌ಶಿಪ್ ನೆಪದಲ್ಲಿ ಬಿಡದಿ ಮತ್ತು ಹಾರೋಹಳ್ಳಿ ಹೋಬಳಿಯ ಕೃಷಿ ಭೂಮಿ ವಶಪಡಿಸಿಕೊಳ್ಳುವುದನ್ನು ಕೈಬಿಡಬೇಕು ಎಂದು ಒತ್ತಾಯಿಸಿ ಜೆಡಿಎಸ್ ಪಕ್ಷವು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಮನವಿ ಸಲ್ಲಿಸಿತು.

ಪಕ್ಷದ ಗ್ರೇಟರ್ ಬೆಂಗಳೂರು ಅಧ್ಯಕ್ಷ ಎಚ್.ಎಂ. ರಮೇಶ್ ಗೌಡ ನೇತೃತ್ವದಲ್ಲಿ ಮುಖ್ಯ ಕಾರ್ಯದರ್ಶಿ ಅವರನ್ನು ಭೇಟಿಯಾದ ನಿಯೋಗವು, ಬಿಡದಿ ಭಾಗದಲ್ಲಿ ನೀರಾವರಿ ಮತ್ತು ಕೃಷಿಯೋಗ್ಯ ಫಲವತ್ತಾದ ಭೂಮಿ ಇದ್ದು, ಅದನ್ನು ರಿಯಲ್ ಎಸ್ಟೇಟ್ ಉದ್ದೇಶದ ಟೌನ್‌ಶಿಪ್ ಯೋಜನೆಗೆ ಕಸಿದುಕೊಳ್ಳುವುದು ಸರಿಯಲ್ಲ ಎಂದು ದೂರು ನೀಡಿದೆ.

ಮೊದಲ ಹಂತದ ಭೂಸ್ವಾಧೀನದ ನೋಟಿಫಿಕೇಶನ್ ಹೊರಡಿಸಿರುವ ಸರ್ಕಾರ, ಸಂಪೂರ್ಣವಾಗಿ ರೈತ ವಿರೋಧಿ ನಿಲುವು ತಳೆದಿದೆ. ಮೊದಲ ಹಂತದಲ್ಲಿ ಸುಮಾರು 498 ಎಕರೆಗೂ ಹೆಚ್ಚು ಫಲವತ್ತಾದ ಭೂಮಿ ಸ್ವಾಧೀನ ಪಡಿಸಿಕೊಳ್ಳುತ್ತಿದೆ. ಇದರಿಂದ ಸುಮಾರು 750 ಕುಟುಂಬಗಳು ಬೀದಿಪಾಲಾಗುತ್ತಿವೆ. ಈ ಪೈಕಿ 614 ಅಂದರೆ ಶೇಕಡ 81 ರೈತರು ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರು ಆಗಿದ್ದಾರೆ. ಅರ್ಧ ಎಕರೆ, ಕಾಲು ಎಕರೆ ಭೂಮಿ ಹೊಂದಿರುವ ರೈತರನ್ನು ಒಕ್ಕಲೆಬ್ಬಿಸುವುದು ಅಮಾನವೀಯ ಎಂದು ರಮೇಶಗೌಡ ತಿಳಿಸಿದರು.

ಮುಂದಿನ ತಿಂಗಳು 7,481ರಿಂದ 9,600 ಎಕರೆ ಭೂಮಿ ಸ್ವಾಧೀನಕ್ಕೆ ನಿರ್ಧರಿಸಲಾಗಿದೆ. ರೈತರು ಭೂಮಿ ಕೊಡಲು ಇಷ್ಟಪಡುತ್ತಿಲ್ಲ. ಸರ್ಕಾರವೇ ನ್ಯಾಯಾಲಯದಲ್ಲಿ ಪರಿಹಾರ ಹಣ ಜಮೆ ಮಾಡಿ ಭೂಮಿ ಕಸಿದುಕೊಳ್ಳಲು ಹುನ್ನಾರ ನಡೆಸಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಭೂಮಿ ಕಸಿದುಕೊಳ್ಳುತ್ತಿರುವ ಭಾಗವು ಹೈನುಗಾರಿಕೆಯ ಸಮೃದ್ಧ

ಟೌನ್‌ಶಿಪ್ ನೆಪದಲ್ಲಿ ಬಿಡದಿ ಮತ್ತು ಹಾರೋಹಳ್ಳಿ ಹೋಬಳಿಯ ಕೃಷಿ ಭೂಮಿ ವಶಪಡಿಸಿಕೊಳ್ಳುವುದನ್ನು ಕೈ ಬಿಡಬೇಕು ಎಂದು ಒತ್ತಾಯಿಸಿ ಜೆಡಿಎಸ್ ಪಕ್ಷವು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಮನವಿ ಸಲ್ಲಿಸಿತು

ಜಾಗವಾಗಿದ್ದು, ಮಾಸಿಕ ಸುಮಾರು ₹6 ಲಕ್ಷಕ್ಕೂ ಹೆಚ್ಚು ಲೀಟರ್ ಹಾಲನ್ನು ಬೆಂಗಳೂರು ಡೇರಿಗೆ ಪೂರೈಕೆ ಮಾಡಲಾಗುತ್ತಿದೆ ಎಂದರು.

ನಿಯೋಗದಲ್ಲಿ ಪಕ್ಷದ ಬೆಂಗಳೂರು ಪಶ್ಚಿಮ ಜಿಲ್ಲಾಧ್ಯಕ್ಷ ಟಿ.ತಿಮ್ಮೇಗೌಡ, ಬೆಂಗಳೂರು ದಕ್ಷಿಣ ಜಿಲ್ಲಾಧ್ಯಕ್ಷ ಎಚ್.ಸಿ.ಕೃಷ್ಣ, ಬೆಂಗಳೂರು ಪೂರ್ವ ಜಿಲ್ಲಾಧ್ಯಕ್ಷ ನಟರಾಜ್ ಗಂಗಾಧರ್ ಹಾಗೂ ಗ್ರೇಟರ್ ಬೆಂಗಳೂರು ಮಹಾಪ್ರಧಾನ ಕಾರ್ಯದರ್ಶಿ ಎಸ್.ರಮೇಶ ಇದ್ದರು.

DH DECCAN HERALD

JOB OPPORTUNITY

We are a leading newspaper and magazine publishing group in Karnataka. We invite applications for the following position in our organisation.

COPY EDITOR / SENIOR COPY EDITOR

Department	:	Deccan Herald - Editorial
Experience	:	3 - 6 years
Job Location	:	Bengaluru (M.G. Road)
Salary	:	Attractive package commensurate with experience & qualifications
Role	:	Handle editing and page-making responsibilities

Requisites:

- Excellent editing and rewriting skills with strong news judgement.
- Ability to translate news copies from Kannada to English.
- Strong understanding of Karnataka and Bengaluru.
- Should be willing to work from office in Bengaluru.

Please send your application with a recent photograph to

THE PRINTERS (MYSORE) PRIVATE LIMITED
75, Mahatma Gandhi Road, Bengaluru – 560 001.
E-mail: neesha.srinivas@printersmysore.co.in
Website : www.printersmysore.com

ಕೆಪಿಸಿಸಿ ಅಧ್ಯಕ್ಷರ ಪದಗ್ರಹಣ ಸಮಾರಂಭ: ಸಂಚಾರ ಮಾರ್ಗ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ಜೂನ್ 21ರಂದು ಕೆಪಿಸಿಸಿ ನೂತನ ಅಧ್ಯಕ್ಷರ ಪದಗ್ರಹಣ ಸಮಾರಂಭ ಆಯೋಜಿಸಲಾಗಿದ್ದು, ಅರಮನೆ ಮೈದಾನದ ಸುತ್ತಮುತ್ತ ಸಂಚಾರ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಲಾಗಿದೆ. ಮುಖ್ಯಮಂತ್ರಿ, ಸಚಿವರು, ಶಾಸಕರು, ಗಣ್ಯರು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಅಲ್ಲದೇ ಪಕ್ಷದ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸಮಾರಂಭಕ್ಕೆ ಬರುವ ನಿರೀಕ್ಷೆಯಿದ್ದು, ಮೈದಾನದ ಸುತ್ತಮುತ್ತ ವಾಹನ ದಟ್ಟಣೆ ಉಂಟಾಗುವ ಸಾಧ್ಯತೆ ಇದೆ. ಸುಗಮ ಸಂಚಾರದ ದೃಷ್ಟಿಯಿಂದ ಭಾನುವಾರ ಬೆಳಿಗ್ಗೆ 7ರಿಂದ ಸಂಜೆ 4ರ ವರೆಗೆ ತ್ರಿಪುರವಾಸಿನಿ ಗೇಟ್, ಬಳ್ಳಾರಿ ರಸ್ತೆ, ಸಿ.ವಿ.ರಾಮನ್ ರಸ್ತೆ, ಜಯಮಹಲ್ ರಸ್ತೆಯ ಸಂಚಾರ ವ್ಯವಸ್ಥೆಯಲ್ಲಿ ಮಾರ್ಪಾಡು ಮಾಡಲಾಗಿದೆ.

- ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಡೆಗೆ ಸಂಚರಿಸುವ ವಾಹನಗಳು ಹಳೆ ಹೈಗ್ರೌಂಡ್ಸ್ ಜಂಕ್ಷನ್, ಕಲ್ಪನಾ ಜಂಕ್ಷನ್, ಹಳೆ ಉದಯ ಟಿ.ವಿ ಜಂಕ್ಷನ್, ಕಂಟೋನ್ಮೆಂಟ್ ರೈಲು ನಿಲ್ದಾಣ, ಟ್ಯಾನರಿ ರಸ್ತೆ, ನಾಗವಾರ ಮೂಲಕ ತೆರಳಬಹುದು.
- ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಡೆಯಿಂದ ನಗರದ ಕೇಂದ್ರ ಭಾಗದ ಕಡೆಗೆ ಬರುವ ವಾಹನಗಳು ಹೆಬ್ಬಾಳದಲ್ಲಿ ಎಡಕ್ಕೆ ತಿರುವು ಪಡೆದು ನಾಗವಾರ ಜಂಕ್ಷನ್‌ನಲ್ಲಿ ಬಲಕ್ಕೆ ತಿರುವು ಪಡೆದು ಬಂಬೂ ಬಜಾರ್, ಕ್ವೀನ್ಸ್ ರಸ್ತೆ ಮೂಲಕ ಸಂಚರಿಸಬೇಕು. ಹೆಬ್ಬಾಳ ವರ್ತುಲ ರಸ್ತೆ, ಕುವೆಂಪು ಸರ್ಕಲ್ ಮಾರ್ಗವಾಗಿ ಬಂದು ಗೊರಗುಂಟೆಪಾಳ್ಯ ಜಂಕ್ಷನ್‌ನಲ್ಲಿ ಎಡಕ್ಕೆ ತಿರುವು ಪಡೆದು ಡಾ.ರಾಜ್‌ಕುಮಾರ್ ರಸ್ತೆ ಮೂಲಕ ಸಂಚರಿಸಬಹುದು.
- ಯಶವಂತಪುರ ಕಡೆಯಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಡೆಗೆ ಸಾಗುವ ವಾಹನಗಳು ಮತ್ತಿಕೆರೆ ರಸ್ತೆಯಲ್ಲಿ ಸಾಗಿ, ನ್ಯೂ ಬಿಇಎಲ್ ವೃತ್ತದಲ್ಲಿ ಬಲಕ್ಕೆ ತಿರುಗಿ ವರ್ತುಲ ರಸ್ತೆ ಮೂಲಕ ಸಂಚರಿಸಬಹುದು. ಯಶವಂತಪುರ ಕಡೆಯಿಂದ ನಗರದ ಕಡೆಗೆ ಸಂಚರಿಸುವ ವಾಹನಗಳು ಡಾ.ರಾಜ್‌ಕುಮಾರ್ ರಸ್ತೆ ಮೂಲಕ ತೆರಳಬಹುದು.
- ಹಲಸೂರು ಮತ್ತು ಹಳೆ ಏರ್‌ಪೋರ್ಟ್ ಕಡೆಯಿಂದ ಹೆಬ್ಬಾಳದ ಕಡೆಗೆ ಸಂಚರಿಸುವ ವಾಹನಗಳು ಹಲಸೂರು ಕೆರೆ ಮೂಲಕ ಟಿನ್ ಫ್ಯಾಕ್ಟರಿ ಜಂಕ್ಷನ್‌ಗೆ ಹೋಗಿ ವರ್ತುಲ ರಸ್ತೆ ಮೂಲಕ ಸಂಚರಿಸಬಹುದು.

ಭಾರಿ ವಾಹನಗಳಿಗೆ ನಿರ್ಬಂಧ

- ಹೆಬ್ಬಾಳ ಕಡೆಯಿಂದ ಬಳ್ಳಾರಿ ರಸ್ತೆ ಕಡೆಗೆ ಹೋಗುವ ಭಾರಿ ವಾಹನಗಳ ಸಂಚಾರವನ್ನು ಹೆಬ್ಬಾಳ ಜಂಕ್ಷನ್‌ನಲ್ಲಿ ನಿರ್ಬಂಧಿಸಲಾಗಿದೆ. ಹೊರ ವರ್ತುಲ ರಸ್ತೆ ಮೂಲಕ ಸಂಚರಿಸಲು ಅವಕಾಶ ಕಲ್ಪಿಸಲಾಗಿದೆ.
- ಹೈಗ್ರೌಂಡ್ಸ್ ಕಡೆಯಿಂದ ಬರುವ ಭಾರಿ ವಾಹನಗಳು ಕಲ್ಪನಾ ಜಂಕ್ಷನ್, ಹಳೆ ಉದಯ ಟಿ.ವಿ ಜಂಕ್ಷನ್, ಕಂಟೋನ್ಮೆಂಟ್ ರೈಲು ನಿಲ್ದಾಣ, ಟ್ಯಾನರಿ ರಸ್ತೆ, ನಾಗವಾರ ಮಾರ್ಗವಾಗಿ ಸಂಚರಿಸಬೇಕು.
- ಯಶವಂತಪುರ ಕಡೆಯಿಂದ ಸಿ.ವಿ.ರಾಮನ್ ರಸ್ತೆ ಕಡೆಗೆ ಭಾರಿ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ವಾಹನ ನಿಲುಗಡೆ ನಿರ್ಬಂಧಿತ ರಸ್ತೆಗಳು

• ಅರಮನೆ ರಸ್ತೆ • ಬಳ್ಳಾರಿ ರಸ್ತೆ • ಜಯಮಹಲ್ ರಸ್ತೆ ನಂದಿದುರ್ಗ ರಸ್ತೆ • ಸಿ.ವಿ.ರಾಮನ್ ರಸ್ತೆ • ಗುಟ್ಟಹಳ್ಳಿ ರಸ್ತೆ

ಸಿ.ಎಂ ವಿರುದ್ಧದ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಕ್ಷೇಪಾರ್ಹ ಹೇಳಿಕೆಗಳನ್ನು ಒಳಗೊಂಡ ಬಿಜೆಪಿ ನಾಯಕರ ಚಿತ್ರಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ಆರೋಪದಡಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

'ನನ್ನ ವಿರುದ್ಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ಡಿ.ಕೆ.ಶಿವಕುಮಾರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ಈ ಕುರಿತಂತೆ ಆದೇಶಿಸಿದೆ.

ಶಿವಕುಮಾರ್ ಪರ ಹೈಕೋರ್ಟ್ ವಕೀಲ ಎಚ್.ವಿ.ಪ್ರವೀಣ್ ಗೌಡ ಅವರ ವಾದ ಪುರಸ್ಕರಿಸಿರುವ ನ್ಯಾಯಪೀಠ, ಪ್ರಕರಣ ರದ್ದುಗೊಳಿಸಿ ಆದೇಶಿಸಿದೆ.

ಪ್ರಕರಣವೇನು?: ರಾಮ ಜನ್ಮಭೂಮಿ ವಿವಾದಕ್ಕೆ ಸಂಬಂಧಿಸಿದಂತೆ ಹುಬ್ಬಳ್ಳಿಯಲ್ಲಿ ನಡೆದಿದ್ದ ಗಲಭೆ ಪ್ರಕರಣದಲ್ಲಿ ಆರೋಪಿಯಾಗಿದ್ದ ಶ್ರೀಕಾಂತ್ ಪೂಜಾರಿ ಅವರನ್ನು ಪೊಲೀಸರು ಬಂಧಿಸಿದ್ದರು. ಇದನ್ನು ಖಂಡಿಸಿ ಬಿಜೆಪಿ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಿತ್ತು. ಆ ಸಂದರ್ಭದಲ್ಲಿ ಬಿಜೆಪಿ ನಾಯಕರು, 'ನಾನೂ ಕರಸೇವಕ. ನನ್ನನ್ನೂ ಬಂಧಿಸಿ' ಎಂಬ ಒಕ್ಕಣೆ ಹೊಂದಿದ್ದ, ಭಿತ್ತಿಪತ್ರ ಹಿಡಿದು ಅಭಿಯಾನ ನಡೆಸಿದ್ದರು.

ಈ ಅಭಿಯಾನವನ್ನು ಟೀಕಿಸುವ ಉದ್ದೇಶದಿಂದ ಕಾಂಗ್ರೆಸ್ ಪಕ್ಷವು, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಫೋಟೊ ಬಳಸಿ 'ನಾನು ಆರ್‌ಟಿಜಿಎಸ್ ಮೂಲಕ ಲಂಚ ಪಡೆದಿದ್ದೇನೆ. ₹40 ಸಾವಿರ ಕೋಟಿ ಅಕ್ರಮದಲ್ಲಿ ಪಾಲುದಾರನಾದ ನನ್ನನ್ನೂ ಬಂಧಿಸಿ' ಎಂದು ಹಾಗೂ ಶಾಸಕ ವಿ.ಸುನಿಲ್ ಕುಮಾರ್ ಫೋಟೊ ಬಳಸಿ 'ನಾನು ಪರಶುರಾಮ ಮೂರ್ತಿಯ ಕಂಚನ್ನು ಕದ್ದಿದ್ದೇನೆ. ಸಿಮೆಂಟ್ ಕದ್ದಿದ್ದೇನೆ. ನನ್ನನ್ನೂ ಬಂಧಿಸಿ' ಎಂಬ ಒಕ್ಕಣೆಯ ಚಿತ್ರಗಳನ್ನು ಕೆಪಿಸಿಸಿಯ ತನ್ನ ಅಧಿಕೃತ ಫೇಸ್‌ಬುಕ್ ಪೇಜ್‌ನಲ್ಲಿ ಪೋಸ್ಟ್ ಮಾಡಿತ್ತು.

ಪೋಸ್ಟ್ ಪ್ರಕಟಣೆಗೆ ಸಂಬಂಧಿಸಿ, ಡಿ.ಕೆ.ಶಿವಕುಮಾರ್ ಹಾಗೂ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥ ಬಿ.ಆರ್. ನಾಯ್ಡು ವಿರುದ್ಧ ಬಿಜೆಪಿಯ ಕಾನೂನು ಘಟಕದ ಸಂಚಾಲಕ ಯೋಗೇಂದ್ರ ಹೊಡಘಟ್ಟ ಖಾಸಗಿ ದೂರು ದಾಖಲಿಸಿದ್ದರು. ಇದನ್ನು ಆಧರಿಸಿ ಹೈಗ್ರೌಂಡ್ಸ್ ಠಾಣೆ ಪೊಲೀಸರು, ಭಾರತೀಯ ದಂಡ ಸಂಹಿತೆ-1860ರ ಕಲಂ 153(ಎ), 504, 505(2) ಮತ್ತು 464ರ ಅಡಿ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು.

ಬೆಂಗಳೂರು ರೇಸ್

ಮೇನ್ ಮ್ಯಾಜಿಕ್ ಗೆಲ್ಲುವ ನಿರೀಕ್ಷೆ

ಚೀಫ್ ಜಸ್ಟೀಸ್ ಕಪ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮೇನ್ ಮ್ಯಾಜಿಕ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಬ್ಲ್ಯಾಕ್ ಐರಿಶ್ 2, ಡಿಜಿಟಲ್ ಎಂಪ್ರೆಸ್ 6, ದಿ ಆರ್ಚರ್ 5
2ನೇ ರೇಸ್: ಎಕ್ಸೀಡ್ 8, ನಾಟಿ ಕ್ರ್ಯೂ 9, ಕೊರಿಂಥಿಯನ್ 6
3ನೇ ರೇಸ್: ಸ್ಟೆಲ್ಲಾ ಮೇರಿಸ್ 1, ಕಾರ್ಟರ್ 4, ಲೆಕ್ಸ್ ಲೂಥರ್ 10
4ನೇ ರೇಸ್: ಶಟ್ಟರ್‌ಫ್ಲೈ 7, ರಾಯಲ್ ಲೆಗಸಿ 6, ಎಡಿಷನ್ 1
5ನೇ ರೇಸ್: ಮೇನ್ ಮ್ಯಾಜಿಕ್ 3, ಮಿರಾಕಲ್ ಸ್ಟಾರ್ 4, ಅಲ್ಫಾನ್ಸೀನ್ 10
6ನೇ ರೇಸ್: ಡಬಲ್ ಯುವರ್ ಮನಿ 9, ಬ್ರೈಟ್ ಥಂಡರ್ 2, ಇನ್ಸಿಯೊ 12
7ನೇ ರೇಸ್: ವ್ಯಾಲಿಯಂಟ್ ಸ್ಟ್ರೀಮ್ 4, ಈಗಲ್ ಐ 1, ಸಿಕ್ಯಾನ್ 2

ಉತ್ತಮ ಬೆಟ್: ಸ್ಟೆಲ್ಲಾ ಮೇರಿಸ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	3,4,5	6,7,8

ಮಾಜಿ ಶಾಸಕ ಶ್ರೀನಿವಾಸಯ್ಯ ನಿಧನ

ಪ್ರಜಾವಾಣಿ ವಾರ್ತೆ

ಕೋಲಾರ: ಮಾಜಿ ಶಾಸಕ, ವಕೀಲ ಕೆ.ಆರ್. ಶ್ರೀನಿವಾಸಯ್ಯ (94) ಅನಾರೋಗ್ಯ ಹಾಗೂ ವಯೋಸಹಜ ಸಮಸ್ಯೆಗಳಿಂದ ಶುಕ್ರವಾರ ಬೆಂಗಳೂರಿನ ಆಸ್ಪತ್ರೆಯಲ್ಲಿ ನಿಧನರಾದರು.

ಕೆ.ಆರ್. ಶ್ರೀನಿವಾಸಯ್ಯ

ಮೃತರಿಗೆ ಪತ್ನಿ, ನಾಲ್ವರು ಪುತ್ರರು ಇದ್ದಾರೆ. ಹುಟ್ಟೂರಾದ ಕೋಲಾರ ತಾಲ್ಲೂಕಿನ ಈಕಂಬಳ್ಳಿ ಗ್ರಾಮದಲ್ಲಿ ಶನಿವಾರ ಅಂತ್ಯಕ್ರಿಯೆ ನಡೆಯಲಿದೆ. ಅವರು ಈಚೆಗೆ ಜಾರಿ ಬಿದ್ದು ತಲೆಗೆ ಪೆಟ್ಟು ಮಾಡಿಕೊಂಡಿದ್ದರು.

ಅಬ್ದುಲ್ ನಜೀರ್ ಸಾಬ್ (ನೀರ್ ಸಾಬ್) ಜೊತೆಗಿನ ಆತ್ಮೀಯ ಸಂಬಂಧದಿಂದಾಗಿ ಕೋಲಾರ ತಾಲ್ಲೂಕಿನಲ್ಲಿ ಕುಡಿಯುವ ನೀರಿಗಾಗಿ ಹೆಚ್ಚು ಕೊಳವೆ ಬಾವಿಗಳನ್ನು ಕೊರೆಸಿದ ದಾಖಲೆಗೆ ಪಾತ್ರರಾಗಿದ್ದರು.

ನಗರದ ಪಿ.ಸಿ.ಬಡಾವಣೆ ನಿವಾಸದಲ್ಲಿ ಅವರ ಪಾರ್ಥಿವ ಶರೀರ ಇಟ್ಟಿದ್ದು, ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ವಕೀಲರು, ಸಾಮಾಜಿಕ ಕಾರ್ಯಕರ್ತರು ಹಾಗೂ ಸಾರ್ವಜನಿಕರು ದರ್ಶನ ಪಡೆದು, ಅಂತಿನ ನಮನ ಸಲ್ಲಿಸಿದರು. ನ್ಯಾಯಾಲಯ ಕಲಾಪ ರದ್ದುಗೊಳಿಸಿ ವಕೀಲರು ಶ್ರದ್ಧಾಂಜಲಿ ಸಲ್ಲಿಸಿದರು.

ಜಾಗತಿಕ ರ‍್ಯಾಂಕಿಂಗ್‌ನಲ್ಲಿ ವಿಐಟಿ ಸಾಧನೆ

ಕ್ಯೂಎಸ್ ವರ್ಲ್ಡ್ ಯೂನಿವರ್ಸಿಟಿ ರ‍್ಯಾಂಕಿಂಗ್ಸ್-2027ರಲ್ಲಿ 597ನೇ ಸ್ಥಾನಕ್ಕೇರಿದ ವಿಐಟಿ



ಬೆಂಗಳೂರು: ಪ್ರತಿಷ್ಠಿತ ಕ್ಯೂಎಸ್ ವರ್ಲ್ಡ್ ಯೂನಿವರ್ಸಿಟಿ ರ‍್ಯಾಂಕಿಂಗ್ಸ್ 2027ರಲ್ಲಿ ವಿಐಟಿ ಸಂಸ್ಥೆ 597ನೇ ಸ್ಥಾನವನ್ನು ಪಡೆದುಕೊಳ್ಳುವ ಮೂಲಕ ಹೊಸದೊಂದು ಮೈಲಿಗಲ್ಲನ್ನು ಸಾಧಿಸಿದೆ. ಜಾಗತಿಕ ಉನ್ನತ ಶಿಕ್ಷಣ ವಿಶ್ಲೇಷಣಾ ಸಂಸ್ಥೆಯಾದ 'ಕ್ಯೂಎಸ್ ಕ್ವಾಕ್ವರೆಲ್ಲಿ ಸೈಮಂಡ್ಸ್' ತನ್ನ ಜಾಗತಿಕ ವಿಶ್ವವಿದ್ಯಾಲಯಗಳ ರ‍್ಯಾಂಕಿಂಗ್‌ನ ಇತ್ತೀಚಿನ ಆವೃತ್ತಿಯನ್ನು ಬಿಡುಗಡೆ ಮಾಡಿದೆ. ಇದು ವಿಶ್ವಾದ್ಯಂತ 1,500ಕ್ಕೂ ಹೆಚ್ಚು ಸಂಸ್ಥೆಗಳನ್ನು ಸಂಶೋಧನೆ ಮತ್ತು ಆವಿಷ್ಕಾರ, ಕಲಿಕೆಯ ಅನುಭವ, ಉದ್ಯೋಗಾವಕಾಶ, ಅಂತರರಾಷ್ಟ್ರೀಯ ತೊಡಗಿಸಿಕೊಳ್ಳುವಿಕೆ ಮತ್ತು ಸುಸ್ಥಿರತೆ ಎನ್ನುವ ಐದು ಪ್ರಮುಖ ಮಾನದಂಡಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡಿದೆ. ಈ ವರ್ಷ ವಿಐಟಿ ಅತ್ಯುತ್ತಮ ಪ್ರಗತಿಯನ್ನು ಪ್ರದರ್ಶಿಸಿದ್ದು, 2026ರ 691ನೇ ಸ್ಥಾನದಿಂದ 94 ಸ್ಥಾನಗಳನ್ನು ಮುನ್ನಡೆದು ಪ್ರಸಕ್ತ ಸಾಲಿನಲ್ಲಿ 597ನೇ ಸ್ಥಾನಕ್ಕೇರಿದೆ.

ಈ ಸಾಧನೆಯ ಕುರಿತು ಮಾತನಾಡಿದ ವಿಐಟಿ ಚಾನ್ಸಲರ್ ಡಾ.ಜಿ. ವಿಶ್ವನಾಥನ್, 'ತೀವ್ರ ಪೈಪೋಟಿಯಿಂದ ಕೂಡಿರುವ ಜಾಗತಿಕ ವಾತಾವರಣದಲ್ಲಿ, ಕ್ಯೂಎಸ್ ವರ್ಲ್ಡ್ ಯೂನಿವರ್ಸಿಟಿ ರ‍್ಯಾಂಕಿಂಗ್ಸ್‌ನಲ್ಲಿ ವಿಐಟಿ ವಿಶ್ವವಿದ್ಯಾಲಯದ ಈ ಗಮನಾರ್ಹ ಸುಧಾರಣೆಯು ಅತ್ಯಂತ ಹೆಮ್ಮೆಯ ವಿಷಯವಾಗಿದೆ. ವಿಶ್ವವಿದ್ಯಾಲಯವು ಸುಸ್ಥಿರತೆ ವಿಭಾಗದಲ್ಲೂ ಅತ್ಯುತ್ತಮ ಪ್ರದರ್ಶನ ನೀಡಿದ್ದು, 2026ರ ಜಾಗತಿಕ 352ನೇ ಸ್ಥಾನವನ್ನು ಮತ್ತು ಭಾರತದಲ್ಲಿ 7ನೇ ಸ್ಥಾನವನ್ನು ಪಡೆದುಕೊಂಡಿದೆ. ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ವಿಭಾಗದ 'ಕ್ಯೂಎಸ್ ವರ್ಲ್ಡ್ ಯೂನಿವರ್ಸಿಟಿ ರ‍್ಯಾಂಕಿಂಗ್ಸ್ ಬೈ ಸಬ್ಜೆಕ್ಟ್ 2026'ರಲ್ಲಿ ವಿಐಟಿ ಜಾಗತಿಕವಾಗಿ 119ನೇ ಸ್ಥಾನದಲ್ಲಿದ್ದು, ಭಾರತೀಯ ಸಂಸ್ಥೆಗಳ ಪೈಕಿ 6ನೇ ಸ್ಥಾನವನ್ನು ಪಡೆದಿದೆ. ಬೋಧನೆಯಲ್ಲಿ ನಾವೀನ್ಯತೆ ಮತ್ತು ಸಂಶೋಧನೆಯಲ್ಲಿ ಅದ್ಭುತ ಪ್ರಗತಿಯನ್ನು ಸಾಧಿಸುವ ಮೂಲಕ, ಜಾಗತಿಕವಾಗಿ ಅಗ್ರ 200 ವಿಶ್ವವಿದ್ಯಾಲಯಗಳ ಪಟ್ಟಿಗೆ ಸೇರುವ ಗುರಿಯನ್ನು ವಿಐಟಿ ಹೊಂದಿದೆ' ಎಂದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ನಾಗೇಂದ್ರ, ನೆಕ್ಕಂಟಿಗೆ ಜಾಮೀನು ರದ್ದತಿಯ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿನ ಬಹುಕೋಟಿ ರೂಪಾಯಿ ದುರ್ಬಳಕೆ ಪ್ರಕರಣದ ಆರೋಪಿಯಾದ ಮಾಜಿ ಸಚಿವ ಬಿ. ನಾಗೇಂದ್ರ ಅವರ ಆಪ್ತ ನೆಕ್ಕಂಟಿ ನಾಗರಾಜ್; ಸಿಬಿಐ ತನಿಖೆಗೆ ಸರಿಯಾಗಿ ಸಹಕರಿಸದಿದ್ದರೆ ನಿರೀಕ್ಷಣಾ ಜಾಮೀನು ಕೋರಿದ ಅರ್ಜಿಯಲ್ಲಿ ನೀಡಲಾಗಿರುವ ಮಧ್ಯಂತರ ರಕ್ಷಣೆಯನ್ನು ರದ್ದುಪಡಿಸುವುದಾಗಿ ಹೈಕೋರ್ಟ್ ಎಚ್ಚರಿಸಿದೆ.

ನಿರೀಕ್ಷಣಾ ಜಾಮೀನು ಕೋರಿ ನೆಕ್ಕಂಟಿ ನಾಗರಾಜ್ ಸಲ್ಲಿಸಿರುವ ಕ್ರಿಮಿನಲ್ ಅರ್ಜಿ ಮತ್ತು 'ಮಾಜಿ ಸಚಿವ ಬಿ.ನಾಗೇಂದ್ರ ಅವರಿಗೆ ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ 2026ರ ಜನವರಿ 14 ರಂದು ನೀಡಿರುವ ಜಾಮೀನು ರದ್ದುಗೊಳಿಸಬೇಕು' ಎಂದು ಕೋರಿ ಸಿಬಿಐ ಸಲ್ಲಿಸಿರುವ ಪ್ರತ್ಯೇಕ ಕ್ರಿಮಿನಲ್ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್ ಅವರು, 'ನೆಕ್ಕಂಟಿ ನಾಗರಾಜ್ ತನಿಖೆಗೆ ಸರಿಯಾಗಿ ಸಹಕರಿಸುತ್ತಿಲ್ಲ. ಆದ್ದರಿಂದ, ಅವರನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಬೇಕಿದೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ನೆಕ್ಕಂಟಿ ನಾಗರಾಜ್ ಇದೇ 23ರಂದು ಸಿಬಿಐ ಮುಂದೆ ಹಾಜರಾಗಬೇಕು ಮತ್ತು ಸಿಬಿಐ ಪ್ರಶ್ನೆಗಳಿಗೆ ಉತ್ತರಿಸಬೇಕು. ತನಿಖೆಗೆ ಸರಿಯಾಗಿ ಸಹಕರಿಸದಿದ್ದರೆ ಮಧ್ಯಂತರ ರಕ್ಷಣೆ ರದ್ದುಪಡಿಸಲಾಗುವುದು' ಎಂದು ಎಚ್ಚರಿಸಿತು.

ಅಂತೆಯೇ, ಆರೋಪಿಯು ನೀಡಿದ ಉತ್ತರವನ್ನು ಹೈಕೋರ್ಟ್‌ಗೆ ಸಲ್ಲಿಸುವಂತೆ ಸಿಬಿಐ ಪರ ವಕೀಲರಿಗೆ ನಿರ್ದೇಶಿಸಿ, ಆರೋಪಿಯ ವಿರುದ್ಧ ಬಲವಂತದ ಕ್ರಮ ಕೈಗೊಳ್ಳದಂತೆ ಈ ಹಿಂದೆ ನೀಡಿರುವ ಮಧ್ಯಂತರ ಆದೇಶವನ್ನು ವಿಸ್ತರಿಸಿತು.

ನಿರೀಕ್ಷಣಾ ಜಾಮೀನು ಕೋರಿರುವ ಈ ಅರ್ಜಿಯಲ್ಲಿ ನೆಕ್ಕಂಟಿ ನಾಗರಾಜ್ ಅವರಿಗೆ ಹೈಕೋರ್ಟ್, 'ಅವರ ವಿರುದ್ಧ ಬಲವಂತದ ಕ್ರಮ ಕೈಗೊಳ್ಳದಂತೆ' ಈ ಹಿಂದೆಯೇ ಆದೇಶಿಸಿದೆ.

ನಾಗೇಂದ್ರ ಸಹಕರಿಸುತ್ತಿಲ್ಲ: ಅಂತೆಯೇ, ನಾಗೇಂದ್ರ ವಿರುದ್ಧದ ಅರ್ಜಿಯಲ್ಲಿ ವಾದ ಮಂಡಿಸಿದ ಪ್ರಸನ್ನ ಕುಮಾರ್, 'ನಿಗಮದ ಬ್ಯಾಂಕ್ ಖಾತೆಯಿಂದ ಮುಂಬೈನ ಇಬ್ಬರು ಮಹಿಳೆಯರಿಗೆ ₹2.50 ಕೋಟಿ ವರ್ಗಾವಣೆಯಾಗಿದೆ. ಮಹಿಳೆಯರಲ್ಲಿ ಒಬ್ಬರು ತನ್ನನ್ನು ಬಿ.ನಾಗೇಂದ್ರ ಅವರ ಪತ್ನಿ ಎಂದು ಹೇಳಿಕೊಂಡಿದ್ದಾರೆ. ಇದು ಲಭ್ಯವಾಗಿರುವ ದಾಖಲೆಗಳಲ್ಲೂ ಕಂಡುಬಂದಿದೆ. ಆರೋಪಿಗಳ ಮೊಬೈಲ್‌ನಲ್ಲಿ ಕೆಲವು ವಿಡಿಯೊಗಳು ಪತ್ತೆಯಾಗಿವೆ. ಇದರಲ್ಲಿ ಹಣದ ಕಂತೆ ಎಣಿಸುತ್ತಿರುವ ದೃಶ್ಯಗಳಿವೆ. ಅಲ್ಲಿ ನೆಕ್ಕಂಟಿ ನಾಗರಾಜ್ ಮತ್ತಿತರರು ಕಂಡು ಬರುತ್ತಾರೆ. ಈ ಬಗ್ಗೆ ಕೇಳಿದರೆ ಆರೋಪಿಗಳು ವಿಚಾರಣೆಯಲ್ಲಿ ಬಾಯಿ ಬಿಡುತ್ತಿಲ್ಲ' ಎಂದು ಆಕ್ಷೇಪಿಸಿದರು.

'ಈ ಕಾರಣದಿಂದ ಆರೋಪಿಯನ್ನು ಕಸ್ಟಡಿಗೆ ಪಡೆದು ವಿಚಾರಣೆಗೆ ಒಳಪಡಿಸಬೇಕಾಗಿದೆ. ಆದ್ದರಿಂದ, ಅವರಿಗೆ ನೀಡಿರುವ ಜಾಮೀನು ರದ್ದುಗೊಳಿಸಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು. ಇದನ್ನು ಮನ್ನಿಸಿದ ನ್ಯಾಯಪೀಠ ಇದೇ 29ರಂದು ಸಿಬಿಐ ಮುಂದೆ ಹಾಜರಾಗುವಂತೆ ನಾಗೇಂದ್ರ ಅವರಿಗೆ ನಿರ್ದೇಶಿಸಿತು. ಏತನ್ಮಧ್ಯೆ, ಬಿ.ನಾಗೇಂದ್ರ ಪರ ವಕೀಲರು ವಾದ ಮಂಡನೆಗೆ ಕಾಲಾವಕಾಶ ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಎರಡೂ ಅರ್ಜಿಗಳ ವಿಚಾರಣೆಯನ್ನು ಜುಲೈ 3ಕ್ಕೆ ಮುಂದೂಡಿ ಆದೇಶಿಸಿತು.

‘ಕಾಂಗ್ರೆಸ್‌ನಿಂದ ಮೊದಲ ಬಾರಿ ಬಿಜೆಪಿ ಮಾದರಿ’

ಬೆಂಗಳೂರು: ‘ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಮೊದಲ ಬಾರಿಗೆ ಬಿಜೆಪಿ ಮಾದರಿಯನ್ನು ಅಳವಡಿಸಿಕೊಂಡಿದೆ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸತೀಶ ಜಾರಕಿಹೊಳಿ

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಇದು ಕುದುರೆ ವ್ಯಾಪಾರ ಎಂದು ಹೇಳಲು ಸ್ಪಷ್ಟತೆ ಇಲ್ಲ. ಆದರೆ, ಬಿಜೆಪಿ, ಜೆಡಿಎಸ್ ಶಾಸಕರು ಅಡ್ಡ ಮತದಾನ ಮಾಡಿರುವುದು ನಿಜ’ ಎಂದರು. ‘ಸ್ನೇಹದ ಕಾರಣಕ್ಕೆ ವಿರೋಧ ಪಕ್ಷದವರು ಮತ ಹಾಕಿರಬಹುದು ಅಥವಾ ಅವರವರ ಬಾಂಧವ್ಯದ ಕಾರಣಕ್ಕೆ ಹಾಕಿರಬಹುದು. ಬಿಜೆಪಿಯಲ್ಲಿನ ನಾಯಕತ್ವ, ವೈಮನಸ್ಸಿನ ಕಾರಣಕ್ಕೆ ಮತ ಹಾಕಿರಲೂಬಹುದು’ ಎಂದರು.

‘ನಮ್ಮ (ಕಾಂಗ್ರೆಸ್) ಅಭ್ಯರ್ಥಿ ಪಿ.ವಿ. ಮೋಹನ್ ಅವರಿಗೆ 29 ಮತಗಳನ್ನಷ್ಟೆ ಹಂಚಿಕೆ ಮಾಡಲಾಗಿತ್ತು. ಹೀಗಾಗಿ, ನಮ್ಮಲ್ಲಿ ಯಾರೂ ಅಡ್ಡ ಮತದಾನ ಮಾಡಿಲ್ಲ. ನಮ್ಮಲ್ಲಿಯೇ ಮತಗಳ ಹಂಚಿಕೆ ಆಗಿದೆ’ ಎಂದೂ ಹೇಳಿದರು.

‘ಬಿಜೆಪಿ, ಜೆಡಿಎಸ್ ನಾಯಕತ್ವ ತಿರಸ್ಕಾರ’

ಬೆಂಗಳೂರು: ‘ವಿಧಾನಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಐವರು ಅಭ್ಯರ್ಥಿಗಳು ಗೆಲುವು ಸಾಧಿಸಿರುವುದು ನೋಡಿದರೆ, ಬಿಜೆಪಿ ಹಾಗೂ ಜೆಡಿಎಸ್ ಪಕ್ಷದಲ್ಲಿನ ನಾಯಕತ್ವವನ್ನು ಅವರ ಪಕ್ಷದ ಶಾಸಕರೇ ತಿರಸ್ಕರಿಸಿರುವುದು ಸ್ಪಷ್ಟವಾಗಿ ಕಾಣುತ್ತಿದೆ’ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಪ್ರಿಯಾಂಕ್ ಖರ್ಗೆ

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಬಿಜೆಪಿ ಹಾಗೂ ಜೆಡಿಎಸ್‌ನವರಿಗೆ ಅವರ ಪಕ್ಷದ ನಾಯಕತ್ವದಲ್ಲಿ ನಂಬಿಕೆಯಿಲ್ಲ. ಇವತ್ತು ನಮ್ಮ ಸರ್ಕಾರದ ಜನಪರ ಯೋಜನೆಗಳು, ಗ್ಯಾರಂಟಿ ಯೋಜನೆಗಳು ಯಾವ ರೀತಿ ಕುಟುಂಬಗಳಿಗೆ ಆರ್ಥಿಕ ಸ್ಥಿರತೆ, ಸ್ವಾಭಿಮಾನದ ಬದುಕು ನೀಡುತ್ತಿವೆ ಎಂಬುದನ್ನು ನೋಡಿ, ಕೆಲವು ಶಾಸಕರು ನಮಗೆ ಆತ್ಮಸಾಕ್ಷಿಯ ಮತಗಳನ್ನು ನೀಡಿದ್ದಾರೆ’ ಎಂದರು.

ಅಡ್ಡಮತದಾನ: ತನಿಖೆಗೆ ಸಮಿತಿ ರಚನೆ

ಮೀರ್ ಸಾದಿಕರ ವಿರುದ್ಧ ಶಿಸ್ತು ಕ್ರಮ ಖಚಿತ: ಬಿ.ವೈ.ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಕೆಲವರ ಹೆಸರುಗಳನ್ನು ತೇಲಿಬಿಡುವ ಮೂಲಕ ಬಿಜೆಪಿಯಲ್ಲಿ ಬೆಂಕಿ ಹಚ್ಚುವ ಕುತಂತ್ರವನ್ನು ಕಾಂಗ್ರೆಸ್‌ನವರು ಮಾಡುತ್ತಿದ್ದಾರೆ. ಅಡ್ಡ ಮತದಾನ ಮಾಡಿದವರ ಮಾಹಿತಿ 3-4 ದಿನಗಳಲ್ಲಿ ಗೊತ್ತಾಗುತ್ತದೆ
ಬಿ.ವೈ.ವಿಜಯೇಂದ್ರ, ಅಧ್ಯಕ್ಷ, ರಾಜ್ಯ ಬಿಜೆಪಿ

ಮತದಾನ ಸಂಬಂಧ ವಿಪ್ ಜಾರಿ ಮಾಡಲಾಗಿತ್ತು. ನಮಗೆ ನಿಗದಿ ಮಾಡಿದ್ದ ಎನ್‌ಡಿಎ ಅಭ್ಯರ್ಥಿ ಪರವಾಗಿ ಮತ ಚಲಾಯಿಸಿದ್ದೇನೆ. ಮಾಧ್ಯಮಗಳು ಅನಗತ್ಯವಾಗಿ ನನ್ನ ಹೆಸರನ್ನು ಪ್ರಸಾರ ಮಾಡಬಾರದು
ಡಾ. ಚಂದ್ರು ಲಮಾಣಿ, ಶಾಸಕ

ಬೆಂಗಳೂರು: ವಿಧಾನಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಅಡ್ಡ ಮತದಾನ ಮಾಡಿದವರ ಬಗ್ಗೆ ಮಾಹಿತಿ ಕಲೆ ಹಾಕಿ ವರದಿ ಪಡೆಯಲು ಮೂವರು ಸದಸ್ಯರ ಸಮಿತಿಯೊಂದನ್ನು ಬಿಜೆಪಿ ರಚಿಸಿದೆ.

ಈ ಸಮಿತಿಯು ಇದೇ 25ರೊಳಗೆ ವರದಿ ಸಲ್ಲಿಸಬೇಕಿದ್ದು, ಸಮಿತಿಯಲ್ಲಿ ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ, ರಾಜ್ಯ ಘಟಕದ ಉಪಾಧ್ಯಕ್ಷ ಎನ್.ಮಹೇಶ್ ಮತ್ತು ಶಾಸಕ ಮಹೇಶ್ ಟೆಂಗಿನಕಾಯಿ ಇದ್ದಾರೆ.

ಮೀರ್ ಸಾದಿಕರ ವಿರುದ್ಧ ಕ್ರಮ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸುದ್ದಿಗಾರರ ಜತೆ ಮಾತನಾಡಿ, ‘ಅಡ್ಡ ಮತದಾನದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ಅಡ್ಡ ಮತದಾನ ಮಾಡಿದವರನ್ನು ಕ್ಷಮಿಸುವ ಪ್ರಶ್ನೆಯೇ ಇಲ್ಲ. ಪಕ್ಷದ ‘ಮೀರ್ ಸಾದಿಕ’ರ ವಿರುದ್ಧ ಖಂಡಿತ ಶಿಸ್ತು ಕ್ರಮ ಕೈಗೊಳ್ಳಲಾಗುವುದು’ ಎಂದರು.

‘ಯಾರೆಲ್ಲ ಅಡ್ಡ ಮತದಾನ ಮಾಡಿ ಆಟ ಆಡಿರಬಹುದು ಎಂಬ ಮಾಹಿತಿ ಸಿಕ್ಕಿದೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷರಿಗೆ ಮಾಹಿತಿ ನೀಡಲು ಭೇಟಿ ಮಾಡಲು ಅವಕಾಶಕ್ಕೆ ಮನವಿ ಮಾಡಿದ್ದೇನೆ. ಅವರು ಯಾವಾಗ ಅವಕಾಶ ಕೊಟ್ಟರೂ ಭೇಟಿ ಮಾಡಿ ವಿವರ ನೀಡಲಿದ್ದೇನೆ’ ಎಂದು ವಿವರಿಸಿದರು.

‘ಬಿಜೆಪಿ ಟಿಕೆಟ್‌ನಲ್ಲಿ ಗೆದ್ದು ಚುನಾವಣೆಯಲ್ಲಿ ಈ ರೀತಿ ಮತದಾನ ಮಾಡುತ್ತಾರೆ ಎಂದರೆ ಅವರಿಗೆ ಗೆರೆ ಎಳೆಯುವ ಕೆಲಸವನ್ನು ಪಕ್ಷ ಮಾಡಲಿದೆ. ಎಲ್ಲದಕ್ಕೂ ಒಂದು ಮಿತಿ ಇದೆ. ಬಿಜೆಪಿಯಲ್ಲಿನ ಸಣ್ಣಪುಟ್ಟ ಗೊಂದಲದಿಂದಾಗಿ ಕಾರ್ಯಕರ್ತರು ಬೇಸತ್ತಿದ್ದಾರೆ. ಈಗ ಇಂತಹ ಬೆಳವಣಿಗೆ ನಡೆದಿದೆ. ಇದರಿಂದ ನೋವಾಗಿದೆ. ಅಭ್ಯರ್ಥಿಯನ್ನು ಕಣಕ್ಕಿಳಿಸುವ ಬಗ್ಗೆ ಎರಡೂ ಪಕ್ಷದ ಮುಖಂಡರು ಕುಳಿತು ತೀರ್ಮಾನ ಮಾಡಿದ್ದೆವು. ನಮ್ಮ ಪಕ್ಷದ ಇಬ್ಬರು ಗೆಲುವು ಸಾಧಿಸಿರಬಹುದು. ಆದರೆ, ಅಡ್ಡ ಮತದಾನದಿಂದ ಅಪಮಾನ ಆಗಿದೆ. ಇದನ್ನೆಲ್ಲ ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುತ್ತೇವೆ’ ಎಂದು ವಿಜಯೇಂದ್ರ ಹೇಳಿದರು.

‘ಪಕ್ಷದ ರಾಜ್ಯ ಘಟಕದ ಅಧ್ಯಕ್ಷನಾಗಿ ಈ ಬೆಳವಣಿಗೆಯನ್ನು ಗಂಭೀರವಾಗಿ ಪರಿಗಣಿಸುತ್ತೇನೆ. ಅಧ್ಯಕ್ಷನಾಗುವುದಕ್ಕೂ ಮೊದಲು ನಾನು ಕಾರ್ಯಕರ್ತ. ಪಕ್ಷದ ವರಿಷ್ಠರು ಕಾಲ ಕಾಲಕ್ಕೆ ಏನೇನು ತೀರ್ಮಾನ ಮಾಡಬೇಕೋ ಅದನ್ನು ಮಾಡಲಿದ್ದಾರೆ. ಇಂತಹ ಮಹತ್ವದ ಚುನಾವಣೆಯಲ್ಲಿ ಹೀಗೆ ಆಗುತ್ತದೆ ಎಂಬ ಕಲ್ಪನೆ ಇರಲಿಲ್ಲ’ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಎಂಟು– ಹತ್ತು ದಿನಗಳ ಹಿಂದೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಕರೆ ಮಾಡಿ ಮೂರನೇ ಅಭ್ಯರ್ಥಿ ಕಣಕ್ಕಿಳಿಸೋಣ ಎಂದು ಹೇಳಿದ್ದರು. ನೀವಾದರೂ ಹಾಕಿ ನಾವಾದರೂ ಹಾಕ್ತೇವೆ. ಒಳ್ಳೆ ಉದ್ದೇಶ ಇಟ್ಟುಕೊಂಡು ಹೋರಾಟ ಮಾಡೋಣ ಎಂದಿದ್ದರು. ಆಗ ನೀವೇ ಅಭ್ಯರ್ಥಿ ಹಾಕಿ ಒಟ್ಟಾಗಿ ಸೆಣಸಾಟ ಮಾಡೋಣ ಎಂದು ತಿಳಿಸಿದ್ದೆ. ಎರಡೂ ಪಕ್ಷಗಳ ಉದ್ದೇಶ ಒಂದೇ ಆಗಿತ್ತು. ಗುರುವಾರ ನಡೆದ ಮತದಾನದಲ್ಲಿ ಜೆಡಿಎಸ್‌ನಿಂದ ಆರೇಳು ಅಡ್ಡ ಮತದಾನ ಆಗಿದೆ. ಬಿಜೆಪಿಯಿಂದ ನಾಲ್ಕೈದು ಅಡ್ಡ ಮತದಾನ ಆಗಿದೆ. ಇದರಿಂದ ಎರಡೂ ಪಕ್ಷಗಳಿಗೆ ಬೇಸರವಾಗಿದೆ’ ಎಂದು ಹೇಳಿದರು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಚಾಣಕ್ಯರೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ‘ಬಹಳ ಜನ ಚಾಣಕ್ಯರನ್ನು ರಾಜ್ಯದ ಜನ ನೋಡಿದ್ದಾರೆ. ಕುದುರೆ ಓಡೋ ಟೈಮಲ್ಲಿ ಓಡುತ್ತದೆ, ಬೀಳೋ ಟೈಮಲ್ಲಿ ಬೀಳುತ್ತದೆ. ಬಿಜೆಪಿಗೆ ಎಲ್ಲವನ್ನೂ ಎದುರಿಸುವ ಶಕ್ತಿ ಇದೆ. ದೊಡ್ಡ ಸಂಘಟನೆ ಇದೆ. ಕಾರ್ಯಕರ್ತರ ಶಕ್ತಿ ಇದೆ. ಯಾರನ್ನು ಯಾವಾಗ ಹೇಗೆ ಬಗ್ಗಿಸಬೇಕು ಎಂಬುದು ತಿಳಿದಿದೆ’ ಎಂದರು.

ಪಕ್ಷ ಹೇಳಿದವರಿಗೆ ಮತ ಹಾಕಿದ್ದೇನೆ: ಬೈರತಿ ಬಸವರಾಜು

‘ನಾನು ಪಕ್ಷದ ಪ್ರಾಮಾಣಿಕ ಕಾರ್ಯಕರ್ತ. ಯಾವ ಅಭ್ಯರ್ಥಿಗೆ ಮತ ಹಾಕಬೇಕು ಎಂದು ಪಕ್ಷ ಹೇಳಿತ್ತೊ ಅವರಿಗೆ ಮತ ಹಾಕಿದ್ದೇನೆ. ಅಡ್ಡ ಮತದಾನ ಮಾಡಿಲ್ಲ. ಆಮಿಷಕ್ಕೂ ಒಳಗಾಗಿಲ್ಲ’ ಎಂದು ಬಿಜೆಪಿ ಶಾಸಕ ಬೈರತಿ ಬಸವರಾಜು ಹೇಳಿದ್ದಾರೆ.

‘ನಾನು ಅಡ್ಡಮತದಾನ ಮಾಡಿದ್ದೇನೆ ಎಂದು ಪ್ರಚಾರ ಮಾಡಲು ಯಾರೋ ಷಡ್ಯಂತ್ರ ಮಾಡಿದ್ದಾರೆ. ಈ ಬಗ್ಗೆ ಅಧ್ಯಕ್ಷರು ಈಗಾಗಲೇ ಸ್ಪಷ್ಟನೆ ನೀಡಿದ್ದಾರೆ. ಪಕ್ಷದ ಆದೇಶದ ಪ್ರಕಾರ ಪ್ರಾಮಾಣಿಕವಾಗಿ ಮತ ಹಾಕಿದ್ದೇನೆ’ ಎಂದು ತಿಳಿಸಿದರು.

‘ನನ್ನ ವಿರುದ್ಧ ಪ್ರಕರಣವಿದೆ ಎಂಬ ಕಾರಣಕ್ಕೆ ಒತ್ತಡ ಹೇರಿ ಅಡ್ಡ ಮತದಾನ ಮಾಡಿಸಿದ್ದಾರೆ ಎಂಬುದರಲ್ಲಿ ಯಾವುದೇ ಹುರುಳಿಲ್ಲ. ನನ್ನ ಮೇಲೆ ಎಷ್ಟೇ ಪ್ರಕರಣಗಳು ಇರಲಿ, ನ್ಯಾಯಾಲಯ ಏನೇ ತೀರ್ಪು ನೀಡಲಿ, ಅದಕ್ಕೆ ತಲೆ ಬಾಗುತ್ತೇನೆ, ಇದಕ್ಕಾಗಿ ರಾಜಕೀಯ ಒತ್ತಡಕ್ಕೆ ಮಣಿಯುವುದಿಲ್ಲ’ ಎಂದು ಅವರು ಸ್ಪಷ್ಟಪಡಿಸಿದರು.

‘ಅಡ್ಡ ಮತದಾನ ಮಾಡಿದವರ ವಿರುದ್ಧ ಕ್ರಮ ಆಗಬೇಕು. ಅಂತಹವರಿಗೆ ಶಿಕ್ಷೆಯೂ ಆಗಬೇಕು. ಈಗ ಸುಮ್ಮನೆ ಬಿಟ್ಟರೆ ಇದೇ ಚಾಳಿ ಮುಂದುವರೆಯುತ್ತದೆ’ ಎಂದರು.

ಹವಾಲಾ ಮೂಲಕ ಹಣ ಸಂದಾಯ: ಅಶೋಕ

‘ನಮಗೆ ಮೋಸ ಮಾಡುತ್ತಾರೆ ಎಂಬ ಸುಳಿವು ಇರಲಿಲ್ಲ. ಹಣ ಕೊಟ್ಟು ಮತ ಖರೀದಿ ಮಾಡಿದ್ದಾರೆ. ಈ ಖದೀಮರನ್ನು ಬಲಿ ಹಾಕುತ್ತೇವೆ. ಅವರ ರಾಜಕೀಯ ಜೀವನ ಅಂತ್ಯ ಆಗುವ ಹಾಗೆ ಮಾಡುತ್ತೇವೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

‘ನಮ್ಮ ಕಡೆಯಿಂದ ಎಲ್ಲರೂ ಮತ ಚಲಾವಣೆ ಮಾಡಿದ್ದಾರೆ. ಆದರೆ, ಅಡ್ಡ ಮತದಾನ ಆದ ರೀತಿ ನೋಡಿ ನಮಗೆ ಅಚ್ಚರಿ ಆಗಿದೆ. ಎಷ್ಟು ಜನ ಅಡ್ಡ ಮತದಾನ ಮಾಡಿದ್ದಾರೆ ಎಂಬ ಸ್ಪಷ್ಟತೆ ಸಿಗಬೇಕಿದೆ. ಯಾರೆಲ್ಲ ಮಾಡಿದ್ದಾರೆ ಎಂಬುದು ಗೊತ್ತಾಗೇ ಆಗುತ್ತದೆ. ಅದನ್ನು ಮುಚ್ಚಿಡಲು ಸಾಧ್ಯವಿಲ್ಲ. ಹವಾಲಾ ಮೂಲಕ ಹಣ ಸಂದಾಯವಾಗಿದೆ’ ಎಂದು ಅವರು ತಿಳಿಸಿದರು.

ಅಡ್ಡಮತದಾನ ಮಾಡಿಲ್ಲ: ಬಿಜೆಪಿ ಶಾಸಕ ಪತ್ರ


ಎಚ್.ಕೆ.ಸುರೇಶ್

ಬೇಲೂರು (ಹಾಸನ): ‘ಧರ್ಮಸ್ಥಳದ ಮಂಜುನಾಥ, ಬೇಲೂರಿನ ಚನ್ನಕೇಶವನ ಮೇಲೆ ಪ್ರಮಾಣ ಮಾಡಿ ಹೇಳುತ್ತೇನೆ. ನಾನು ವಿಧಾನಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿಲ್ಲ ಮತ್ತು ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ಪಾಲ್ಗೊಂಡಿಲ್ಲ’ ಎಂದು ಶಾಸಕ ಎಚ್.ಕೆ.ಸುರೇಶ್ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಪತ್ರ ಬರೆದಿದ್ದಾರೆ.

‘ನಾನು ಬಿಜೆಪಿಯನ್ನು ತಾಯಿ ಸ್ವರೂಪವಾಗಿ ಗೌರವಿಸುತ್ತೇನೆ. ಪಕ್ಷದ ಹಿತಾಸಕ್ತಿಗೆ ವಿರುದ್ಧವಾದ ಯಾವ ಚಟುವಟಿಕೆಯಲ್ಲೂ ಭಾಗಿಯಾಗಿಲ್ಲ. ಇತರ ಪಕ್ಷದ ಯಾವುದೇ ಮುಖಂಡರಿಂದಾಗಲಿ, ಕಾರ್ಯಕರ್ತರ ಬಳಿಯಿಂದಾಗಲಿ, ಯಾವುದೇ ವಿಷಯಕ್ಕೆ ನಾನು ಆಸೆ, ಆಮಿಷಗಳಿಗೆ ಒಳಗಾಗಿಲ್ಲ’ ಎಂದಿದ್ದಾರೆ. ‘ನಾನು ಆರ್ಥಿಕವಾಗಿ ಸಧೃಡನಾಗಿದ್ದೇನೆ. ಪ್ರಧಾನಿ ನರೇಂದ್ರ ಮೋದಿ ನನ್ನ ಕ್ಷೇತ್ರಕ್ಕೆ ಬಂದು ನನ್ನ ಪರವಾಗಿ ಚುನಾವಣಾ ಪ್ರಚಾರ ಮಾಡಿದ್ದಾರೆ. ಅಂತಹ ಮಹಾನ್ ವ್ಯಕ್ತಿಯ ಪಕ್ಷದ ವಿರುದ್ಧ ಅಡ್ಡ ಮತದಾನ ಮಾಡಿದರೆ ಆ ಭಗವಂತನೂ ನನ್ನನ್ನು ಕ್ಷಮಿಸುವುದಿಲ್ಲ’ ಎಂದು ಹೇಳಿದ್ದಾರೆ.

ನಾನು ಅಡ್ಡ ಮತದಾನ ಮಾಡಿದ್ದೇನೆ ಎಂದು ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿದೆ. ಇದು ಸುಳ್ಳು, ಇಂತಹ ಸುಳ್ಳು ಪ್ರಚಾರವನ್ನು ಮಾಧ್ಯಮಗಳು ಮಾಡಬಾರದು
ಕೃಷ್ಣನಾಯಕ್, ಶಾಸಕ

ಶ್ರೀ ಎನ್.ಎಸ್.ತಿಮ್ಮೇಗೌಡ
(ನೊಸಂತಿ)
(03.10.1947- 20.06.2006)

ನೀವಿಲ್ಲದೆ ಉರುಳಿದ್ದು ಎರಡು ದಶಕ,
ಕಳೆದಿದ್ದು ಬಹಳಷ್ಟು,
ತುಂಗೆಯಲಿ ಹರಿದು ಹೋದ ನೀರದೆಷ್ಟೋ,
ಬದುಕಿನ ಬಂಡಿ ಸಾಗಿ ಬಂದ ದೂರವೆಷ್ಟೋ,
ನಾವು ಮಾತ್ರ ನಿಂತಲ್ಲೇ, ನೀವಿಲ್ಲದ ಶೂನ್ಯದಲ್ಲಿ,
ನಿಮ್ಮ ಪುಸ್ತಕಗಳ ಪ್ರತಿಯೊಂದು ಹಾಳೆ, ಅಕ್ಕರಗಳ ಅಕ್ಕರೆಯ ಓದು,
ಪ್ರತಿಯೊಂದು ಪಾಠ, ಮಾತು - ಹರಟೆ- ನಗು
ನೆನಪಿನ ಸೆಲೆಯಾಗಿ ನಮ್ಮೊಳಗೆ ಭದ್ರ, ನಾವಿರುವಷ್ಟೂ ಕಾಲ.

ನೀವು ಸದಾ ನಮ್ಮೊಂದಿಗೆ, ನಾವು ಸದಾ ನಿಮ್ಮೊಂದಿಗೆ,
ನಿಮ್ಮ ಪ್ರೀತಿಯ
ಉಮಾ ನೊಸಂತಿ, ಸಹನಾ ಪ್ರಿಯದರ್ಶಿನಿ,
ರಾಘವೇಂದ್ರ ಸಿ. ಎನ್, ಸಾರಾ ಉನ್ನತಿ, ಸಿರಿ ಸಂಭ್ರಮ
ಮತ್ತು ಸ್ನೇಹಿತರು

ವಿಚಲಿತನಾಗಿಲ್ಲ: ಎಚ್.ಡಿ. ಕುಮಾರಸ್ವಾಮಿ

ನಾನು ಕೇಂದ್ರದಲ್ಲಿ (ರಾಷ್ಟ್ರ ರಾಜಕಾರಣ) ಇರುವುದು ತಾತ್ಕಾಲಿಕ. ನನಗೆ ರಾಜ್ಯವೇ ಶಾಶ್ವತ. ರಾಜ್ಯ ರಾಜಕಾರಣಕ್ಕೆ ಹೊಸದಾಗೇನೂ ಬರಬೇಕಾಗಿಲ್ಲ
ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

ಮೈಸೂರು: ವಿಧಾನ ಪರಿಷತ್ ಚುನಾವಣೆ ಗೆಲ್ಲುವ ಉದ್ದೇಶ ಇರಲಿಲ್ಲ. ಶಾಸಕರ ನಿಷ್ಠೆ ಪರೀಕ್ಷೆ ಮಾಡಬೇಕಿತ್ತು. ಅದಕ್ಕಾಗಿ ಪಕ್ಷದ ಅಭ್ಯರ್ಥಿ ಕಣಕ್ಕಿಳಿಸಿದ್ದೆ ಎಂದು ಜೆಡಿಎಸ್ ರಾಜ್ಯ ಅಧ್ಯಕ್ಷ ಹಾಗೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಶುಕ್ರವಾರ ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪಕ್ಷದಲ್ಲಿರುವ ಹಿತಶತ್ರುಗಳನ್ನು ಪತ್ತೆ ಮಾಡಬೇಕಿತ್ತು. ಈಗ ಎಲ್ಲದಕ್ಕೂ ಉತ್ತರ ಸಿಕ್ಕಿದೆ. ಯಾರನ್ನೂ ಅತಿಯಾಗಿ ನಂಬಬಾರದು ಎಂಬ ಪಾಠವನ್ನು ಫಲಿತಾಂಶ ಕಲಿಸಿದೆ ಎಂದರು.

‘ಅಡ್ಡಮತದಾನ ನನಗೆ ಆಘಾತ ಅಥವಾ ಅಚ್ಚರಿಯನ್ನೇನೂ ನೀಡಿಲ್ಲ. ಇದರಿಂದ ನಾನು ವಿಚಲಿತನಾಗಿಲ್ಲ. ಯಾರ‍್ಯಾರು ಅಡ್ಡ ಮತದಾನ ಮಾಡಿದ್ದಾರೆ ಎಂಬ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ನಮ್ಮವರು ನಾಲ್ವರು ಅಡ್ಡಮತದಾನ ಮಾಡಿದ್ದಾರೆ. ಯಾವ ಕಾರಣಕ್ಕೆ ಮಾಡಿದ್ದಾರೆ ಎನ್ನುವುದೂ ನನಗೆ ಗೊತ್ತಿದೆ. ಅಡ್ಡ ಮತದಾನ ಮಾಡಿದವರ ವಿರುದ್ಧ ಸೂಕ್ತ ಸಮಯದಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳುತ್ತೇನೆ’ ಎಂದು ತಿಳಿಸಿದರು.

‘ಪಕ್ಷ ಬಿಡುವ ಹಂತದವರೆಗೂ ಅವರೆಲ್ಲರೂ ಚರ್ಚೆ ನಡೆಸಿಯೇ ಅಡ್ಡಮತದಾನ ಮಾಡಿದ್ದಾರೆ. ನಮ್ಮನ್ನು ಬಿಟ್ಟು ಹೋಗುವವರೆಲ್ಲಾ ಹೋಗಲಿ. ಪಕ್ಷ ಕಟ್ಟುವುದು ನನಗೆ ಗೊತ್ತಿದೆ. ಯುವಕರನ್ನು ಹಾಗೂ ಹೊಸಮುಖಗಳನ್ನು ಕರೆತಂದು ಪಕ್ಷ ಕಟ್ಟುತ್ತೇನೆ’ ಎಂದು ಕುಮಾರಸ್ವಾಮಿ ಸವಾಲು ಹಾಕಿದರು.

ಜಿಟಿಡಿ ಎರಡೂ ಕಾಲು ಹೊರಗಿಟ್ಟಿದ್ದಾರೆ: ಶಾಸಕ ಜಿ.ಟಿ. ದೇವೇಗೌಡರ ವಿಚಾರ ಪ್ರಸ್ತಾಪಿಸುತ್ತಿದ್ದಂತೆಯೇ ಅಸಮಾಧಾನಗೊಂಡ ಅವರು, ‘ಥೂ... ಆ ವ್ಯಕ್ತಿಯ ಹೆಸರನ್ನು ನನ್ನ ಮುಂದೆ ಪ್ರಸ್ತಾಪಿಸಬೇಡಿ. ಅದೆಲ್ಲಾ ಮುಗಿದು ಹೋದ ಕತೆ. ಅವರು ಒಂದು ಕಾಲಲ್ಲ, ಎರಡು ಕಾಲುಗಳನ್ನೂ ಪಕ್ಷದಿಂದ ಹೊರಗಡೆ ಇಟ್ಟಿದ್ದಾರೆ. ಅವರ ಬಗ್ಗೆ ನಾನು ಈ ಹಿಂದೆ ಏನು ಹೇಳಿದ್ದೇನೆಯೋ ಅದೇ ಅಂತಿಮ. ಅವರ ವಿಚಾರದಲ್ಲಿ ನನ್ನ ನಿಲುವು ಬಹಳ ಸ್ಪಷ್ಟವಾಗಿದೆ’ ಎಂದರು.

‘ಜಿ.ಟಿ. ದೇವೇಗೌಡರ ಬಗ್ಗೆ ನನ್ನ ಬಳಿ ಚರ್ಚೆ ಮಾಡಲೇಬೇಡಿ. ಅವರು ಯಾರನ್ನು ಬೇಕಾದರೂ ಭೇಟಿಯಾಗಲಿ. ಅವರ ವಿಷಯದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಉಪ ಚುನಾವಣೆಯಿಂದಲೂ ಮೂರು ಬಾರಿ ನನಗೆ ಅನುಭವವಾಗಿದೆ. ನಮ್ಮೊಂದಿಗೆ ಬರಲು ಹೊಸಬರು ಸಾಕಷ್ಟು ಮಂದಿ ಇದ್ದಾರೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ದೊಡ್ಡಗೌಡರಿಗೆ ಜಿ.ಟಿ.ಡಿ. ಮೇಲೆ ಪ್ರೀತಿ, ವ್ಯಾಮೋಹ ಇರುವುದು ಸತ್ಯ. ಆ ವ್ಯಾಮೋಹವನ್ನೇ ಜಿಟಿಡಿ ದುರುಪಯೋಗ ಮಾಡಿಕೊಂಡಿದ್ದಾರೆ. ಇನ್ಮುಂದೆ ಅದಕ್ಕೆ ಅವಕಾಶ ಕೊಡಲ್ಲ ಎಂದರು. ‘ಮುಂಬರುವ ಚುನಾವಣೆಯಲ್ಲಿ ಟಿಕೆಟ್ ವಿಚಾರದಲ್ಲಿ ಅಂತಿಮ ನಿರ್ಣಯ ಮಾಡುವುದು ನಾನೇ. ಇದರಲ್ಲಿ ಯಾವ ಗೊಂದಲವೂ ಬೇಡ. ದೊಡ್ಡಗೌಡರು (ಎಚ್.ಡಿ. ದೇವೇಗೌಡ) ಹೇಳಿದರೂ ಪಕ್ಷದ ಹಿತದೃಷ್ಟಿಯಿಂದ ನನ್ನ ನಿಲುವು ಬದಲಿಸಿಕೊಳ್ಳುವುದಿಲ್ಲ’ ಎಂದು ಸ್ಪಷ್ಟಪಡಿಸಿದರು.

ಮನೆ ಹಣ ತಂದು ರಾಜಕಾರಣ ಮಾಡಾಕಾಗುತ್ತಾ ?

‘ಚುನಾವಣೆ ವೇಳೆ ಮನೆಯಿಂದ ಹಣ ತಂದು ರಾಜಕಾರಣ ಮಾಡುವುದಕ್ಕಾಗುತ್ತಾ? ಆಲೂಗೆಡ್ಡೆ ಬೆಳೆದ ದುಡ್ಡಲ್ಲಿ ಪಕ್ಷ ನಡೆಸಲಿಕ್ಕಾಗುತ್ತಾ’ ಎಂದು ಕುಮಾರಸ್ವಾಮಿ ಕೇಳಿದರು.

‘ವಿಧಾನ ಪರಿಷತ್, ರಾಜ್ಯಸಭಾ ಚುನಾವಣೆ ವೇಳೆ ಟಿಕೆಟ್ ಕೊಡುವಾಗ ಪಕ್ಷಕ್ಕೆ ದೇಣಿಗೆ ತೆಗೆದುಕೊಂಡಿದ್ದೇನೆ. ಅದನ್ನು ಪಕ್ಷ ನಡೆಸಲು ಬಳಸಿದ್ದೇನೆಯೇ ಹೊರತು ಸ್ವಂತಕ್ಕೇನೂ ಬಳಸಿಕೊಂಡಿಲ್ಲ’ ಎಂದು ಸ್ಪಷ್ಟಪಡಿಸಿದರು.

ಪ್ರಜಾವಾಣಿ ಸಿನಿಸಮ್ಮಾನದಲ್ಲಿ ಟಿಪಿಎಂಎಲ್ ನಿರ್ದೇಶಕ ಚೈತನ್ಯ ನೆಟ್ಟಕಲ್ಲಪ್ಪ ಹಾಗೂ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರು ರಚಿತಾರಾಮ್ ಅವರಿಗೆ ವರ್ಷದ ಸಾಧಕಿ ಪ್ರಶಸ್ತಿ ನೀಡಿ ಗೌರವಿಸಿದರು

ಚಿತ್ರರಂಗದ ನಂಟು: ಎಚ್‌ಡಿಕೆ ಮೆಲುಕು

ಬೆಂಗಳೂರು: ‘ಕನ್ನಡ ಚಿತ್ರ ನಿರ್ದೇಶಕರು, ನಿರ್ಮಾಪಕರು, ನಟ–ನಟಿಯರು , ಕಲಾವಿದರು, ತಾಂತ್ರಿಕ ವರ್ಗದವರನ್ನು ಗುರುತಿಸಿ ಗೌರವಿಸುತ್ತಿರುವ ಕನ್ನಡ ನಾಡಿನ ಮನೆ–ಮನೆಯ ಪತ್ರಿಕೆ ‘ಪ್ರಜಾವಾಣಿ’ಗೆ ನಾನು ಚಿತ್ರರಂಗದ ಪರವಾಗಿ ಧನ್ಯವಾದ ಅರ್ಪಿಸುತ್ತೇನೆ’ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ನಟಿ ರಚಿತಾ ರಾಮ್ ಅವರಿಗೆ ‘ವರ್ಷದ ಸಾಧಕಿ’ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

‘ನಾನು ಶಿಕ್ಷಣ ಮುಗಿಸಿ ವೃತ್ತಿ ಆರಂಭಿಸಿದ್ದೇ ಚಿತ್ರರಂಗದಲ್ಲಿ. ಹಂಚಿಕೆದಾರನಾಗಿ, ನಿರ್ಮಾಪಕನಾಗಿ ನಾನು ಚಿತ್ರರಂಗದಲ್ಲಿ ವೃತ್ತಿಜೀವನ ಆರಂಭಿಸಿದ್ದೆ. ಚಿತ್ರ ನಿರ್ಮಾಪಕನಾಗಿ ನನಗೆ ಪ್ರಜಾವಾಣಿಯಿಂದ ಪ್ರೋತ್ಸಾಹ ಸಿಕ್ಕಿದೆ. ಈಗ ಸಿನಿ ಸಮ್ಮಾನದ ಮೂಲಕ ನಾಲ್ಕು ವರ್ಷಗಳಿಂದ ಚಿತ್ರರಂಗವನ್ನು ಮತ್ತೊಂದು ರೀತಿಯಲ್ಲಿ ಪ್ರೋತ್ಸಾಹಿಸುವ ಕೆಲಸವನ್ನು ಪ್ರಜಾವಾಣಿ ಮಾಡುತ್ತಿದೆ. ಈ ಪ್ರೋತ್ಸಾಹ ಹೀಗೆಯೇ ಮುಂದುವರೆಯಲಿ’ ಎಂದರು.

‘ಬಹಳ ಹಿಂದೆ ಉತ್ತಮ ಸಿನಿಮಾಗಳು ಬರುತ್ತಿದ್ದವು. ಆದರೆ, ಕಲಾವಿದರು ಬಹಳ ಕಷ್ಟದಲ್ಲಿ ಬದುಕುತ್ತಿದ್ದರು. ಈಗ ಕಾಲ ಬಹಳ ಬದಲಾಗಿದೆ. ಕನ್ನಡ ಚಿತ್ರರಂಗಕ್ಕೆ ಡಬ್ಬಿಂಗ್ ಸಿನಿಮಾಗಳು ಬರದೇ ಇರುವ ಹಾಗೆ ರಾಜ್‌ಕುಮಾರ್ ಅವರು ಎಚ್ಚರಿಕೆ ವಹಿಸಿದ್ದರು. ಆದರೆ, ಈಗ ಡಬ್ಬಿಂಗ್ ಕನ್ನಡಕ್ಕೆ ಬಂದಿದೆ. ಡಬ್ಬಿಂಗ್ ಚಿತ್ರಗಳ ಹಾವಳಿ, ದುಬಾರಿ ನಿರ್ಮಾಣ ವೆಚ್ಚ, ಪ್ಯಾನ್ ಇಂಡಿಯಾ ಸಿನಿಮಾಗಳ ಹೊಸತಲೆಮಾರಿನ ನಿರ್ಮಾಪಕರು ಮತ್ತು ನಿರ್ದೇಶಕರು ಸಿನಿಮಾ ಮಾಡುತ್ತಿದ್ದಾರೆ. ಅವರ ಧೈರ್ಯವನ್ನು ಮೆಚ್ಚಿಕೊಳ್ಳಬೇಕು. ಅಂತಹವರನ್ನು ಪ್ರಜಾವಾಣಿ ಪ್ರೋತ್ಸಾಹಿಸುತ್ತಿದೆ. ಅದಕ್ಕೂ ನನ್ನ ಧನ್ಯವಾದಗಳು’ ಎಂದು ಹೇಳಿದರು.

‘ರಾಜ್ಯದಲ್ಲಿ ಅನೇಕ ಪತ್ರಿಕೆಗಳು ಇದ್ದರೂ, ಪ್ರಜಾವಾಣಿಗೆ ಇರುವ ಸ್ಥಾನ ವಿಶಿಷ್ಟವಾದುದು. 78 ವರ್ಷಗಳಿಂದ ಸುದ್ದಿಗಳನ್ನು ಪ್ರಾಮಾಣಿಕವಾಗಿ ಕನ್ನಡ ನಾಡಿನ ಮನೆ–ಮನೆಗೆ ತಲುಪಿಸುತ್ತಿರುವ ಪ್ರಜಾವಾಣಿ, ಆ ಎಲ್ಲ ಮನೆಗಳ ಭಾಗವೇ ಆಗಿದೆ’ ಎಂದರು.

‘ಗ್ಯಾರಂಟಿ’ ಯೋಜನೆಗಳ ಕುರಿತು ಸಿ.ಎಂ ಶಿವಕುಮಾರ್ ಸಭೆ

ದುರ್ಬಳಕೆ ತಡೆಗೆ ಕಟ್ಟಪ್ಪಣೆ

ಪ್ರಜಾವಾಣಿ ವಾರ್ತೆ

‘ಗ್ಯಾರಂಟಿ’ಗಳ ಸ್ಥಿತಿ

ಯೋಜನೆ	ಪ್ರಗತಿ
ಶಕ್ತಿ	ಮೇ ಅಂತ್ಯದವರೆಗೆ ಮಹಿಳೆಯರು 763 ಕೋಟಿ ಬಾರಿ ಉಚಿತವಾಗಿ ಪ್ರಯಾಣ, ₹ 2,0047.69 ಕೋಟಿ ವೆಚ್ಚ
ಗೃಹ ಜ್ಯೋತಿ	ಮೇ ಅಂತ್ಯದವರೆಗೆ 1.65 ಕೋಟಿ ಫಲಾನುಭವಿಗಳಿಗೆ ಲಾಭ
ಅನ್ನಭಾಗ್ಯ	ಡಿಬಿಟಿ ಮೂಲಕ ಫಲಾನುಭವಿಗಳ ಖಾತೆಗೆ ₹ 11,561 ಕೋಟಿ ವರ್ಗಾವಣೆ

ಬೆಂಗಳೂರು: ‘ಯಾವುದೇ ಕಾರಣಕ್ಕೂ ಗ್ಯಾರಂಟಿ ಯೋಜನೆಗಳು ಅನರ್ಹರ ಪಾಲಾಗಬಾರದು. ದುರುಪಯೋಗಕ್ಕೆ ತಡೆ ಹಾಕಲೇಬೇಕು. ಇದೇ ವೇಳೆ, ಒಬ್ಬನೇ ಒಬ್ಬ ಅರ್ಹ ಫಲಾನುಭವಿಗೆ ತೊಂದರೆ ಆಗಬಾರದು’ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸರ್ಕಾರದ ಪಂಚ ‘ಗ್ಯಾರಂಟಿ’ಗಳ ಅನುಷ್ಠಾನ ಕುರಿತು ವಿಧಾನಸೌಧದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ, ‘ಗೃಹಲಕ್ಷ್ಮಿ ಯೋಜನೆಯ ಹಣ ಫಲಾನುಭವಿಗಳ ಖಾತೆಗೆ ಜಮೆ ಆದ ತಕ್ಷಣ, ಅವರ ಮೊಬೈಲ್‌ಗೆ ಧ್ವನಿ ಸಂದೇಶದ ಮೂಲಕ ಖಚಿತಪಡಿಸಬೇಕು’ ಎಂದು ಅವರು ಸಲಹೆ ನೀಡಿದರು.

‘ಗ್ಯಾರಂಟಿ ಯೋಜನೆಯ ಹಣ ಜಮೆ ಆಗುವ ಬ್ಯಾಂಕ್ ಖಾತೆಗಳು ಕರ್ನಾಟಕ ರಾಜ್ಯದಲ್ಲಿ ಮಾತ್ರ ಇರಬೇಕು. ಇತರೆ ರಾಜ್ಯಗಳಲ್ಲಿರುವ ಖಾತೆಗಳಿಗೆ ಹಣ ಹೋಗುತ್ತಿರುವುದು ಪತ್ತೆಯಾದರೆ ತಡೆಯಬೇಕು’ ಎಂದು ಸೂಚನೆ ನೀಡಿದರು.

ಒಂದೇ ಖಾತೆಯಲ್ಲಿ ಹಲವು ಫಲಾನುಭವಿಗಳು ಗೃಹಲಕ್ಷ್ಮಿ ಹಣ ಪಡೆಯುತ್ತಿದ್ದಾರೆ. ಒಟ್ಟು ₹ 60 ಕೋಟಿ ಈ ರೀತಿ ಜಮೆ ಆಗಿದೆ ಎಂದು ಮಹಾ ಲೆಕ್ಕಪರಿಶೋಧಕರ ವರದಿ ಹೇಳಿದೆ. ಒಬ್ಬರೇ ಹಲವು ಖಾತೆಗಳನ್ನು ನೋಂದಾಯಿಸಿರುವ ಬಗ್ಗೆ ವರದಿಯಲ್ಲಿ ಉಲ್ಲೇಖ ಆಗಿರುವ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು.

ಡಿ ಕೆ ಶಿವಕುಮಾರ್

ಮೃತ ಫಲಾನುಭವಿಗಳ ಖಾತೆಗೂ ಗೃಹಲಕ್ಷ್ಮಿ ಹಣ ಜಮೆ ಆಗುತ್ತಿರುವುದು ಪತ್ತೆಯಾಗಿದೆ. ಹಲವು ಫಲಾನುಭವಿಗಳು ಬ್ಯಾಂಕ್ ಸಾಲ ಪಡೆದಿರುತ್ತಾರೆ. ಸಾಲದ ಖಾತೆಗೆ ಗೃಹಲಕ್ಷ್ಮಿ ಹಣ ಜಮೆ ಆದ ತಕ್ಷಣ, ಸಾಲದ ಮೊತ್ತಕ್ಕೆ ಜಮೆ ಆಗಿಬಿಡುತ್ತದೆ. ಈ ಕಾರಣಕ್ಕೆ ಕೆಲವು ಫಲಾನುಭವಿಗಳು ಖಾತೆ ಬದಲಾಯಿಸಿರುತ್ತಾರೆ. ಅಂತಹ ಫಲಾನುಭವಿಗಳಿಗೆ ತೊಂದರೆ ಆಗಬಾರದು ಎಂದು ಮುಖ್ಯಮಂತ್ರಿ ನಿರ್ದೇಶನ ನೀಡಿದರು.

‘ಹೊರ ರಾಜ್ಯದಿಂದ ಬಂದು ಕರ್ನಾಟಕದಲ್ಲಿ ನೆಲಸಿ ಗೃಹ ಜ್ಯೋತಿ ಲಾಭ ಪಡೆಯುತ್ತಿರುವವರ ಮಾಹಿತಿ ಸಂಗ್ರಹಿಸಬೇಕು. ಮತದಾರರ ಪಟ್ಟಿಯಲ್ಲಿ ಹೆಸರಿರುವವರು ಮಾತ್ರ ಸರ್ಕಾರದ ಯೋಜನೆಗಳ ಫಲಾನುಭವಿಗಳಾಗಿರುತ್ತಾರೆ. ಆದ್ದರಿಂದ, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಸಂದರ್ಭದಲ್ಲಿ ಫಲಾನುವಿಗಳು ತಮ್ಮ ಹೆಸರು ಬಿಟ್ಟು ಹೋಗದಂತೆ ನೋಡಿಕೊಳ್ಳಬೇಕು. ಅನುಕೂಲಸ್ಥರು ಗ್ಯಾರಂಟಿ ಯೋಜನೆಗಳನ್ನು ಸ್ವಯಂ ಪ್ರೇರಿತವಾಗಿ ಬಿಟ್ಟು ಕೊಡುವ ಮೂಲಕ ಇತರೆ ಅರ್ಹ ಫಲಾನುಭವಿಗಳಿಗೆ ನೆರವಾಗಲು ಮುಂದಾದರೆ ಅಂಥವರನ್ನು ಪ್ರೋತ್ಸಾಹಿಸಬೇಕು ಎಂದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಮೈಸೂರು

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಕರ್ನಾಟಕದಾದ್ಯಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ. 20,000 - 25,000 ಸಂಪಾದಿಸಿ. 8095222026

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

Drivers

ಡ್ರೈವರ್‌ಗಳು ಬೇಕಾಗಿದ್ದಾರೆ. ಸ್ಥಳ: ಎನ್.ಆರ್ ಕಾಲೋನಿ, ಬಸವನಗುಡಿ, ಬೆಂಗಳೂರು. ಸಂಬಳ: Rs 25,000/. ಸಂಪರ್ಕಿಸಿ: 8277193108

Receptionist/ Secretary

ರಾಜಾಜಿನಗರದಲ್ಲಿರುವ ನಮ್ಮ ಸಂಸ್ಥೆಗೆ ಕನ್ನಡ ಟೈಪಿಂಗ್ ಅನುಭವವಿರುವ ಮಹಿಳಾ ಸ್ವಾಗತಕಾರರು ಬೇಕಾಗಿದ್ದಾರೆ. ನಿಮ್ಮ ರೆಸ್ಯೂಮ್ ಅನ್ನು WA ಸಂಖ್ಯೆ 8310917454 ಗೆ ಕಳುಹಿಸಿ.

Security & Detectives

ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಸ್ಥಳ: ಎನ್.ಆರ್ ಕಾಲೋನಿ, ಬಸವನಗುಡಿ, ಬೆಂಗಳೂರು. ಸಂಬಳ: Rs 20,000/. ಸಂಪರ್ಕಿಸಿ: 8277193108

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮ ಮನೆ, ಕಛೇರಿಯ ಮೇಲ್ಛಾವಣಿ, ಸಂಪ್_ಟ್ಯಾಂಕ್, ಬಾತ್_ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕರ್ನಾಟಕ ಸರ್ಕಾರ

ಆಯುಕ್ತರವರ ಕಛೇರಿ, ಬಳ್ಳಾರಿ ಮಹಾನಗರಪಾಲಿಕೆ,

ಬಳ್ಳಾರಿ ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101.
ದೂರವಾಣಿ ಸಂಖ್ಯೆ : 08392–273479/278168 ವೆಬ್‌ಸೈಟ್ : www.ballaricity.mrc.gov.in ಇ–ಮೇಲ್: ka.ballari.cc@gmail.com

ಸಂಖ್ಯೆ:ಮನಪಾಬ/ತಾಂತ್ರಿಕ/ಅಮೃತ್–2.0/2026–27 ದಿನಾಂಕ:18.06.2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಮೂಲಕ)

ಬಳ್ಳಾರಿ ಮಹಾನಗರಪಾಲಿಕೆವತಿಯಿಂದ 2026–27ನೇ ಸಾಲಿನ ಕೇಂದ್ರ ಪುರಸ್ಕೃತ ಅನುದಾನದ ಅಮೃತ್ 2.0 ಯೋಜನೆಯಡಿಯಲ್ಲಿ ಟೆಂಡರ್ ಕೆ.ಪಿ.ಪಿ.ಪಿ. ಮೂಲಕ ಕಾಮಗಾರಿ ಇಂಡೆಂಟ್ ಸಂಖ್ಯೆ: 1) DMA/2026-27/OW/ Work_Indent 59923-Rs.141.46 Lakhs & 2) DMA/2026-27 /OW/ Work_Indent 59927 - Rs.34.11 Lakhs ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:02.07.2026 ರ ರಂದು ಸಂಜೆ 5.30 ಗಂಟೆಯೊಳಗಾಗಿ ಸಲ್ಲಿಸಬಹುದು. ಪೂರ್ವಭಾವಿ ಸಭೆ ದಿನಾಂಕ:29.06.2026 ರ ಬೆಳಿಗ್ಗೆ 11.00 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ:04.07.2026 ರ ಬೆಳಿಗ್ಗೆ 10.30 ಗಂಟೆಗೆ. ಅರ್ಹ ಗುತ್ತಿಗೆದಾರರ ಆರ್ಥಿಕ ಬಿಡ್ ತೆರೆಯುವ ದಿನಾಂಕ:06.07.2026 ರ ಬೆಳಿಗ್ಗೆ 10.30 ಗಂಟೆಗೆ. ಕಾಮಗಾರಿಯ ಎಲ್ಲಾ ವಿವರಗಳಿಗಾಗಿ, ಟೆಂಡರ್ ಕುರಿತಂತೆ ಹಾಗೂ ಯಾವುದೇ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್: http://kppp.karnataka.gov.in ಅನ್ನು ಅನ್ನು ಗಮನಿಸಲು ಹಾಗೂ ಬಳ್ಳಾರಿ ಮಹಾನಗರಪಾಲಿಕೆಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಸಹಿ/–ಆಯುಕ್ತರು, ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ

ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/261

ಬೆಂಗಳೂರು ಕೇಂದ್ರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಚೇರಿ, ಗಾಂಧಿನಗರ ವಿಭಾಗ,
2ನೇ ಮಹಡಿ, ಬಿಎಂಪಿ ಕಾಂಪ್ಲೆಕ್ಸ್, ಧನವಂತರಿ ರಸ್ತೆ,
ಬೆಂಗಳೂರು–560009

ಸಂಖ್ಯೆ: ಕಾಪಾಅ/ಗಾನ/ಟೆಂಡರ್/ಕೆಪಿಪಿಪಿ/003/26-27 ದಿನಾಂಕ: 18-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಐಎಫ್‌ಟಿ)

ದ್ವಿ ಲಕೋಟೆ ಪದ್ಧತಿ (Through GOK KPPP only)
website: https://kppp.karnataka.gov.in

ಕಾರ್ಯಪಾಲಕ ಅಭಿಯಂತರರು ಗಾಂಧಿನಗರ ವಿಭಾಗ, ಬೆಂಕೇನಪಾ, ಬೆಂಗಳೂರು ರವರು ಕೆಳಗೆ ತಿಳಿಸಿರುವ ನಿರ್ಮಾಣ ಕಾಮಗಾರಿಗಳಿಗೆ ಬೆಂಕೇನಪಾ/ ಕೆ.ಪಿ.ಡಬ್ಲ್ಯೂ.ಡಿ/ ಸಿ.ಪಿ.ಡಬ್ಲ್ಯೂ.ಡಿ/ರೈಲ್ವೆ/ಎಂಇಎಸ್/ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

Sl. No.	ಕೆಲಸದ ಹೆಸರು
1.	ವಾರ್ಡ್ ನಂ.123 ಗಾಂಧಿನಗರದ ಶ್ರೀ ಆರ್. ಗುಂಡುರಾವ್ ಕ್ರಿಡಾ ಸಂಕೀರ್ಣದ ಉನ್ನತೀಕರಣ, ಶಿಶುವಿಹಾರ ಮತ್ತು ವ್ಯಾಯಾಮ ಶಾಲೆಯ ಕಟ್ಟಡದ ನಿರ್ಮಾಣ, ತುಳಿಸಿತೋಟ ರಸ್ತೆಯ ಆಟದ ಮೈದಾನ ಮತ್ತು ಉದ್ಯಾನವನದ ಸುಧಾರಣೆ ಮತ್ತು ಇತರ ಸಂಬಂಧಿತ ಕಾಮಗಾರಿಗಳು. (ಕರೆ –2) ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): 1000.00. ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): 796.31. ಇಎಂಡಿ ಮೊತ್ತ (ರೂ.ಗಳಲ್ಲಿ): 11,94,476/–.
2.	ವಾರ್ಡ್ ನಂ.123 ಗಾಂಧಿನಗರ ವಿಧಾನಸಭಾ ಕ್ಷೇತ್ರದ ಶೇಷಾದ್ರಿಪುರಂನ ಈಜುಕೊಳದ ಉನ್ನತೀಕರಣ ಮತ್ತು ಆಟದ ಮೈದಾನಗಳ, ಉದ್ಯಾನವನಗಳ ಸುಧಾರಣೆ ಮತ್ತು ಇತರ ಸಂಬಂಧಿತ ಕಾಮಗಾರಿಗಳು. (ಕರೆ –2) ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): 1000.00. ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): 796.30. ಇಎಂಡಿ ಮೊತ್ತ (ರೂ.ಗಳಲ್ಲಿ): 11,94,458/–.

1) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 01–07–2026 ರಂದು ಸಂಜೆ 4.00 ಗಂಟೆಯವರೆಗೆ 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 03–07–2026 ರಂದು ಮಧ್ಯಾಹ್ನ 12.30 ಗಂಟೆಗೆ. 3) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: ಕೆಪಿಪಿ ಪೋರ್ಟಲ್ ಮೂಲಕ ತಿಳಿಸಲಾಗುವುದು.

ಸಹಿ/–, ಕಾರ್ಯಪಾಲಕ ಅಭಿಯಂತರರು,
ಗಾಂಧಿನಗರ ವಿಭಾಗ, ವಲಯ–2, ಬೆಂಕೇನಪಾ.

ಕರ್ನಾಟಕ ಸರ್ಕಾರ

ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

1) No. : KMCRI/SUP(5)/SURGICAL ONCOLOGY/TENDER-01/127/2026-27 dated 18.06.2026
2) No. : KMCRI/SUP(5)/SURGICAL ONCOLOGY/TENDER-01/130/2026-27 dated 18.06.2026
3) No. : KMCRI/SUP(5)/PEDIATRICS/TENDER-01/129/2026-27 dated 18.06.2026
4) No. : KMCRI/SUP(5)/NEUROLOGY/TENDER-01/128/2026-27 dated 18.06.2026

ಇ–ಟೆಂಡರ ಪ್ರಕಟಣೆ (ಇ–ಪ್ರೋಕ್ಯೂರಮೆಂಟ್ ಮುಖಾಂತರ)

ನಿರ್ದೇಶಕರು, ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ ಇವರು ಅರ್ಹ ಟೆಂಡರ್‌ದಾರರು, ಉತ್ಪಾದಕರು, ಅಧೀಕೃತ ಏಜೆಂಟ್ಸ್ ಮತ್ತು ಅಧಿಕೃತ ವಿತರಕರಿಂದ ಕೆ.ಎಂ.ಸಿ. & ಆರ್.ಐ. ಆಸ್ಪತ್ರೆಯ **SURGICAL ONCOLOGY** ವಿಭಾಗಕ್ಕೆ ಅವಶ್ಯವಿರುವ **(1) LAPAROSCOPIC HAND INSTRUMENTS (2) BONE CUTTING MACHINE, PEDIATRICS** ವಿಭಾಗಕ್ಕೆ ಅವಶ್ಯವಿರುವ **(3) HOSPITAL GRADE BREAST PUMP-03 NOS., NEUROLOGY** ವಿಭಾಗಕ್ಕೆ ಅವಶ್ಯವಿರುವ **(4) POLYSOMNOGRAPHY LAB LEVEL-1** ಉಪಕರಣಗಳನ್ನು ಖರೀದಿಸಲು ಕರ್ನಾಟಕ ಪಾರದರ್ಶಕ ಸಾರ್ವಜನಿಕ ಪೂರೈಕೆ ಕಾಯ್ದೆ 1999 ಶಾಸನ 2000 ಅನ್ವಯ ಇ–ಟೆಂಡರ್ ಮೂಲಕ ಟೆಂಡರ್ ಪ್ರಕಟಣೆ ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ **https://www.kppp. karnataka.gov.in**ನಲ್ಲಿ ಪಡೆಯಬಹುದು. ಟೆಂಡರ್ ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಟೆಂಡರನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– (ನಿರ್ದೇಶಕರು),
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ.

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕಾನೀನಿನಿ.,
ಹೇಮಾವತಿ ಬಲದಂಡೆ ನಾಲಾ ವಿಭಾಗ, ಹೊಳೆನರಸೀಪುರ

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ 02/2026–27 ದಿನಾಂಕ 17.06.2026

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರ ಪರವಾಗಿ ಕಾರ್ಯಪಾಲಕ ಹಾಸನ ಜಿಲ್ಲೆ, ಇವರಿಂದ ಇಂಜಿನಿಯರ್, ಹೇಮಾವತಿ ಬಲದಂಡೆ ನಾಲಾ ವಿಭಾಗ, ಹೊಳೆನರಸೀಪುರ ಹಾಸನ ಜಿಲ್ಲೆ ಇವರಿಂದ ನೊಂದಾಯಿತವಾಗಿರುವ ನಿಗಧಿತ ದರ್ಜೆಯ ಗುತ್ತಿಗೆದಾರರಿಂದ ಈ ಅಧಿಸೂಚನೆಯಲ್ಲಿ ತಿಳಿಸಿರುವಂತೆ ಒಟ್ಟು 07 ಸಂಖ್ಯೆಯ ಕಾಮಗಾರಿಗೆ ಟೆಂಡರ್ ಅನ್ನ ಕೆ ಪಿ ಪಿ ಪಿ ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದೆ. ಈ ಕಾಮಗಾರಿಯ ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ಟೆಂಡರ್‌ಗಿಟ್ಟ ಮೊತ್ತ ಕನಿಷ್ಠ ರೂ. 5.64 ಲಕ್ಷ ಮತ್ತು ಗರಿಷ್ಠ ರೂ 13.20 ಲಕ್ಷಗಳಾಗಿರುತ್ತದೆ. ಅರ್ಜಿ ಬೆಲೆ ಕೆ ಪಿ ಪಿ ಪೋರ್ಟಲ್‌ನಂತೆ ಇರುತ್ತದೆ. ಕೆ ಪಿ ಪಿ ಪಿ ಪೋರ್ಟಲ್‌ನಲ್ಲಿ ಅರ್ಹ ಗುತ್ತಿಗೆದಾರರು ಅಂತರ್ಜಾಲದಲ್ಲಿ ದಿನಾಂಕ 17.06.2026 ರಂದು ಬೆಳಿಗ್ಗೆ 11.00 ಗಂಟೆಯಿಂದ ದಿನಾಂಕ 24.06.2026 ರ ಮಧ್ಯಾಹ್ನ 4.00 ಗಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು https://kppp.karnataka.gov.in/ ನಲ್ಲಿ ಡೌನ್ ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ. ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್ ಅನ್ನು ದಿನಾಂಕ 29.06.2026 ರಂದು ಹೇಮಾವತಿ ಬಲದಂಡೆ ನಾಲಾ ವಿಭಾಗ, ಹೊಳೆನರಸೀಪುರ ಕಚೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿ ಹಾಗೂ ಇತರೆ ನಿಬಂದನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಕಾನೀನಿನಿ,
ಹೇ.ಬ.ನಾ ವಿಭಾಗ, ಹೊಳೆನರಸೀಪುರ

ವಾಸಾಸಂಇ/ಹಿಸನಿ/ಹಾಸನ/255/ಕೆಎಸ್‌ಎಂಸಿಎ/2026–27

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕರ್ನಾಟಕ ಸರ್ಕಾರ

ಜಿಲ್ಲಾ ಆಸ್ಪತ್ರೆ ಮತ್ತು ಸಾಂಕ್ರಾಮಿಕ ರೋಗಗಳ ಆಸ್ಪತ್ರೆ,

ಕೆ.ಆರ್.ಎಸ್.ರಸ್ತೆ, ಮೇಟಹಳ್ಳಿ, ಮೈಸೂರು
ದೂರವಾಣಿ ಸಂ:0821–2517555, ಇ–ಮೇಲ್: dsmysuruhfws@gmail.com

ಸಂಖ್ಯೆ:ಜಿಆ&ಸಾಂರೋಆಮೈ/ಸರಬ/ಎಬಿಎಆರ್‌ಕೆ/ಟೆಂಡರ್/09/2026–27 ದಿನಾಂಕ:16.06.2026

ಟೆಂಡರ್ ಅಧಿಸೂಚನೆ

ಜಿಲ್ಲಾ ಆಸ್ಪತ್ರೆ ಮತ್ತು ಸಾಂಕ್ರಾಮಿಕ ರೋಗಗಳ ಆಸ್ಪತ್ರೆ, ಮೈಸೂರು ಇಲ್ಲಿಗೆ ಬರುವ ರೋಗಿಗಳ ಹಿತದೃಷ್ಠಿಯಿಂದ **Anti Rabies Immunoglobin 300 IU/ml 5ml injection** ಸರಬರಾಜಿಗಾಗಿ **ದಿ: 16.06.2026**ರಂದು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅವಧಿಯು **ದಿ: 31.03.2027 ರವರೆಗೆ ಮಾತ್ರ ಜಾರಿಯಲ್ಲಿರುತ್ತದೆ.** ಟೆಂಡರ್‌ನ ಒಟ್ಟು ಅಂದಾಜು ಮೌಲ್ಯ ವರ್ಷಕ್ಕೆ **ರೂ: 75ಲಕ್ಷ** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ **ದಿನಾಂಕ: 30.06.2026** ಹೆಚ್ಚಿನ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಾಹಣೆ ಪೋರ್ಟಲ್ **website:https//kppp.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ಮೇಲ್ಕಂಡ ವಿಳಾಸದ ಕಛೇರಿಯಿಂದ ಪಡೆಯಬಹುದಾಗಿರುತ್ತದೆ.

ಸಹಿ/–
ಜಿಲ್ಲಾ ಶಸ್ತ್ರಚಿಕಿತ್ಸಕರು,
ಜಿಲ್ಲಾ ಆಸ್ಪತ್ರೆ ಮತ್ತು ಸಾಂಕ್ರಾಮಿಕ ರೋಗಗಳ ಆಸ್ಪತ್ರೆ,
ಮೈಸೂರು

ವಾಸಾಸಂಇ/ಮೈಸೂರು/348/ಶಿರಡಿ ಸಾಯಿ/2026–27

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಕಾರ್ಯಪಾಲಕ ಅಭಿಯಂತರವರ ಕಚೇರಿ
ಕನನೀಸ ಮತ್ತು ಒ.ಚ.ಮಂಡಳಿ, ವಿಭಾಗ ಕಚೇರಿ,
ಧಾರವಾಡ, ಜಲಮಂಡಳಿ ಆವರಣ,
ಸರ್ ಎಂ. ವಿಶ್ವೇಶ್ವರಯ್ಯ ರಸ್ತೆ, ಧಾರವಾಡ–580 001.
NVT QC NABCB QM 012
ಕಚೇರಿ: 0836–2213836, Email: eedwdm@gmail.com

ದರ ವಿಚಾರಣೆ ಅಧಿಸೂಚನೆ

ಧಾರವಾಡ ಜಿಲ್ಲೆಯ ವಿವಿಧ ಪಟ್ಟಣಗಳ ಖಾಸಗಿ ಬಡಾವಣೆಗಳಿಗೆ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ವಿನ್ಯಾಸ ಮತ್ತು ಅಂದಾಜು ಪಟ್ಟಿ ತಯಾರಿಕೆಗಾಗಿ Consultant service ಒದಗಿಸುವ ಕೆಲಸಕ್ಕೆ Sealed quotations ಗಳನ್ನು ಈ ಕಚೇರಿ ದರ ವಿಚಾರಣೆ ಅಧಿಸೂಚನೆ **ಸಂಖ್ಯೆ: 356 ದಿನಾಂಕ: 18–06–2026** ಕರೆಯಲಾಗಿದೆ.

Sl. No	Description	Qnty	Unit	Rate in Rs.	Rate in Words
1	Survey of private layouts for water supply and underground drainage (UGD) coming under Hubli Dharwad Urban Development Authority jurisdiction of Dharwad district. Work involves field survey, Topographical Survey along with ground levels, mapping of existing Utilities like corporation/ town panchayat water supply main line, UGD main line and Data Recording using GIS software. Design of water supply and UGD network using water gem or similar software, Preparation and printing of estimates along with water supply and UGD network drawings in required size of paper in 4 sets. (Both in hard and soft copy).				
1.1	Hubballi-Dharwad	1	Acre		
1.2	Annigeri	1	Acre		
1.3	Navalgund	1	Acre		
1.4	Kalghatagi	1	Acre		
1.5	Alnavar	1	Acre		
1.6	Kundgol	1	Acre		

1. The rates quoted shall be inclusive of all taxes except GST.
2. The sealed envelopes containing quoted rates shall reach to this office on or before **25/06/2026 up to 5.30 PM**.
3. Right to accept any quotation and to reject any or all the quotations rests with the Competent Authority

ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು ಸಂಪರ್ಕಿಸಬಹುದು.

ಸಹಿ/–
ಕಾರ್ಯಪಾಲಕ ಅಭಿಯಂತರರು,
ಕನನೀಸ ಮತ್ತು ಒಚ ಮಂಡಳಿ, ಧಾರವಾಡ.

ವಾ.ಸಾ.ಇ./ಧಾರವಾಡ/331/ 2026–27/ದೇಶಪಾಂಡೆಪಬ್ಲಿಸಿಟಿ

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರ ಕಚೇರಿ,
ಕಂದಾಯ ಭವನ, 8ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು–560009
ದೂ: 080–22220672, e-mail: digr@karnataka.gov.in

ಸಂಖ್ಯೆ: ಸಿಬ್ಬಂದಿ–2–16/2026–27/96162 ದಿನಾಂಕ: 19–06–2026

ಟೆಂಡರ್ ಪ್ರಕಟಣೆ

ನೋಂದಣಿ ಮತ್ತು ಮುದ್ರಾಂಕಗಳ ಇಲಾಖೆಯ ಕೇಂದ್ರ ಕಛೇರಿಗೆ **ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಕಲ್ಪಿಸಲು ಆಸಕ್ತಿ ಹೊಂದಿರುವ ಏಜೆನ್ಸಿಗಳಿಂದ ಟೆಂಡರುಗಳನ್ನು ಆಹ್ವಾನಿಸಲಾಗಿದೆ.** ಟೆಂಡರ್ ಫಾರಂಗಳು ಮತ್ತು ಷರತ್ತುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **https://kppp.karnataka.gov.in** ನಲ್ಲಿ ಪಡೆಯಬಹುದು. ಪೂರ್ಣಗೊಳಿಸಿದ ಟೆಂಡರ್ ಫಾರಂಗಳನ್ನು ದಿನಾಂಕ: **06–07–2026ರ ಸಂಜೆ 5.30 ಗಂಟೆವರೆವಿಗೂ** ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ **ನೋಂದಣಿ ಉಪ ಮಹಾಪರಿವೀಕ್ಷಕರು (ಆಡಳಿತ ಮತ್ತು ಕಾನೂನು), ಬೆಂಗಳೂರು (ದೂ: 080–22220672, e-mail: digr@karnataka.gov.in).** ಇವರನ್ನು ಸಂಪರ್ಕಿಸಿ.

ಸಹಿ/– ನೋಂದಣಿ ಉಪ ಮಹಾಪರಿವೀಕ್ಷಕರು
(ಆಡಳಿತ ಮತ್ತು ಕಾನೂನು), ಬೆಂಗಳೂರು

DIPR/CP/YC/1253/2026-27

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,

ಲೋಕೋಪಯೋಗಿ, ಇಲಾಖೆ ವಿಭಾಗ, ಮಂಡ್ಯ

ಸಂ: 14/2026–2027 ದಿನಾಂಕ: 18.06.2026

ಮಂಡ್ಯ ಜಿಲ್ಲೆಯ ಕಾಮಗಾರಿಗಳಿಗಾಗಿ ಅಲ್ಪಾವಧಿ ಟೆಂಡರ್ ಪ್ರಕಟಣೆ

ಐಟಂವಾರು ದರದ ಟೆಂಡರುಗಳ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ KW-4 ರ ರೀತಿ ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https:// kppp.karnataka.gov.in ಮುಖಾಂತರ ಕಾಮಗಾರಿಗಳ ಟೆಂಡರ್‌ಗಾಗಿ ಭಾಗವಹಿಸಬಹುದು.

ಟೆಂಡರ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಇಂಜಿನಿಯರ್, ರವರ ಕಛೇರಿ ಲೋಕೋಪಯೋಗಿ ಇಲಾಖೆ, ವಿಭಾಗ ಮಂಡ್ಯ, ರವರ ಕಛೇರಿಯಲ್ಲಿ ದಿನಾಂಕ: 22–06–2026 ರಂದು ಬೆಳಿಗ್ಗೆ 11–00 ಗಂಟೆಗೆ ಕರೆಯಲಾಗಿದೆ. ಟೆಂಡರ್ ದಾಖಲಾತಿಗಳನ್ನು ದಿನಾಂಕ 18–06–2026 ರಿಂದ ಇ–ಪೊಕ್ಯೂರ್‌ಮೆಂಟ್ ಪೋರ್ಟಲ್‌ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ವಿಚಾರಣೆ ದಿನಾಂಕ; 25–06–2026 ಸಂಜೆ 4.00 ಘಂಟೆವರೆಗೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 29–06–2026 ಸಂಜೆ 4.30 ಘಂಟೆವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ 30–06–2026 ಸಂಜೆ 4.31 ಗಂಟೆ ನಂತರ ಅಥವಾ ನಂತರದ ಕೆಲಸದ ದಿನಗಳು, ಆರ್ಥಿಕ ಬಿಡ್ ತೆರೆಯುವ ದಿನಾಂಕ: 01–07–2026 ಬೆಳಿಗ್ಗೆ 11.00ಗಂಟೆಗೆ ಅಥವಾ ನಂತರದ ಕೆಲಸದ ದಿನಗಳು. ಟೆಂಡರ್ ಪ್ರಕ್ರಿಯೆ ಬೆಲೆ ಇ–ಪೋರ್ಟಲ್‌ರಂತೆ. ಕಾಲಮಿತಿ: ಮಳೆಗಾಲ ಸೇರಿ 6/9 ತಿಂಗಳು ಒಟ್ಟು 4 (ನಾಲ್ಕು), ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ ರೂ.485.00 ಲಕ್ಷಗಳು ಕನಿಷ್ಠ ಅಂದಾಜು ಮೊತ್ತ ರೂ.200.00 ಲಕ್ಷಗಳು ಇ.ಎಂ.ಡಿ. ಬೆಲೆ ಇ–ಪೋರ್ಟಲ್‌ರಂತೆ, ಕೆಲಸಗಳ ವಿವರ, ಅಂದಾಜು ಮೊತ್ತ, ಇ.ಎಂ.ಡಿ., ಮೊತ್ತ ಮುಂತಾದ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಟಿಪ್ಪಣಿ:– (1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ /ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ.
(2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/–ಕಾ.ಇಂ.,ಲೋ.ಇ.,ವಿಭಾಗ, ಮಂಡ್ಯ

ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/216/2026–27

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ

ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

ಸಂಖ್ಯೆ: ಇ–ಆರ್‌ಡಿ 44 ಜಿಆರ್‌ಸಿ 2026 ದಿನಾಂಕ : 01.06.2026

ಅಧಿಸೂಚನೆ

ಸಹಾಯಕ ಪೊಲೀಸ್ ಆಯುಕ್ತರು, ನಗರ ಅಪರಾಧ ವಿಭಾಗ, ಮೈಸೂರು ನಗರ ರವರ ವರದಿಯನ್ನು ಪರಿಗಣಿಸಿದ ತರುವಾಯ ಹಾಗೂ ಈವಣಿದಾರರ ದೂರುಗಳ ಬಗ್ಗೆ, ಯುಕ್ತ ತನಿಖೆಯ ತರುವಾಯ ಸಿ.ಇ.ಎನ್ ಕ್ರೈಂ ಪೊಲೀಸ್ ಠಾಣೆ, ಮೈಸೂರು ನಗರದಲ್ಲಿ ದಾಖಲಾಗಿರುವ ಮೊಕ್ಕದ್ದಮೆ ಸಂಖ್ಯೆ:0060/2021, 0003/2022 ಮತ್ತು 0009/2021ರ ಆರೋಪಿಗಳಾದ 1) ಸಂಜಯ ಆರ್.ಎನ್–ಆ1 2) ಬಿ. ಅನಿತಾ ಸಂಜಯ–ಆ2 3) ವಿಜಯ ಕುಮಾರ್–ಆ3 4) ಕೂಯಂಬತ್ತೂರು ರಾಮಚಂದ್ರ (ಮೃತ)–ಆ4 5) ದಿನೇಶ ಹೆಚ್.ಆರ್–ಆ5 6) ಶ್ರೀನಿವಾಸಯ್ಯ ಗೋವಿಂದರಾಜು–ಆ6 ಇವರು ಠೇವಣಿದಾರರಿಂದ ಗುಟ್ಟಾಗಿ ಹಾಗೂ ಕಾನೂನುಬಾಹಿರವಾಗಿ ಠೇವಣಿಗಳನ್ನು ಅಥವಾ ಸಾರ್ವಜನಿಕರಿಂದ ಹಣವನ್ನು ಸಂಗ್ರಹಿಸುವ ಮೋಸದ ವ್ಯವಹಾರಗಳಲ್ಲಿ ತೊಡಗಿರುವುದು ಹಾಗೂ ಆ ತರುವಾಯ ಅವಧಿ ಮುಗಿದ ಮೇಲೆ ಅಥವಾ ಠೇವಣಿದಾರರು ಅಥವಾ ಫಿರ್ಯಾದುದಾರು ಸಲ್ಲಿಸಿದ ಬೇಡಿಕೆ ಮೇಲಾಗಲಿ ಆಶ್ವಾಸನೆ ನೀಡಿದ ಬಡ್ಡಿ ಹಾಗೂ ಇತರೆ ಖಾತರಿ ಪ್ರಯೋಜನಗಳನ್ನು ನೀಡಲು ವಿಫಲವಾಗಿರುವುದು ಹಾಗೂ ಅವರಿಗೆ ಆಶ್ವಾಸನೆ ನೀಡಿದ ಸೇವೆಗಳನ್ನು ಒದಗಿಸಲು ವಿಫಲವಾಗಿರುವುದುಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಸಿ.ಇ.ಎನ್ ಕ್ರೈಂ ಪೊಲೀಸ್ ಠಾಣೆ, ಮೈಸೂರು ನಗರದಲ್ಲಿ ದಾಖಲಾಗಿರುವ ಮೊಕ್ಕದ್ದಮೆ ಸಂಖ್ಯೆ.0060/2021, 0003/2022 ಮತ್ತು 0009/2021ರ ಆರೋಪಿಗಳು ಹಾಗೂ ಅವರ ಸಹವರ್ತಿ ಜನರು ಠೇವಣಿದಾರರಿಂದ ಅಥವಾ ಫಿರ್ಯಾದುದಾರರಿಂದ ಸಂಗ್ರಹಿಸಲಾದ ಹಣದಿಂದ ಜಮೀನು, ಚರ ಹಾಗೂ ಸ್ಥಿರಾಸ್ತಿಗಳನ್ನು, ನಗದು ಹಾಗೂ ಇತರೆ ವಸ್ತುಗಳನ್ನು ಅರ್ಜಿಸಿರುವುದು ಹಾಗೂ ಆ ಮೂಲಕ ಠೇವಣಿ ಹಾಗೂ ಹಣವನ್ನು ಪಡೆದಿರುವ ಉದ್ದೇಶಿತ ಉದ್ದೇಶಗಳಿಗೆ ಬಳಸದೆ ಬೇರೆ ಕಡೆ ವರ್ಗಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಸಿ.ಇ.ಎನ್ ಕ್ರೈಂ ಪೊಲೀಸ್ ಠಾಣೆ, ಮೈಸೂರು ನಗರದಲ್ಲಿ ದಾಖಲಾಗಿರುವ ಮೊಕ್ಕದ್ದಮೆ ಸಂಖ್ಯೆ:0060/2021, 0003/2022 ಮತ್ತು 0009/2021ರ ಆರೋಪಿಗಳು ಹಾಗೂ ಅವರ ಸಹವರ್ತಿ ಜನರು ಇವರ ಕೃತ್ಯಗಳು ಮುಗ್ಧ ಜನರಿಗೆ ವಂಚಿಸುವ ಉದ್ದೇಶದಿಂದ ಠೇವಣಿದಾರರ ಅಥವಾ ಫಿರ್ಯಾದುದಾರರ 'ಹಿತಾಸಕ್ತಿಗೆ ವಿರುದ್ಧವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ನಂಬಲು ಸರ್ಕಾರವು ಕಾರಣಗಳನ್ನು ಹೊಂದಿದ್ದು, ಸಿ.ಇ.ಎನ್ ಕ್ರೈಂ ಪೊಲೀಸ್ ಠಾಣೆ, ಮೈಸೂರು ನಗರದಲ್ಲಿ ದಾಖಲಾಗಿರುವ ಮೊಕ್ಕದ್ದಮೆ ಸಂಖ್ಯೆ:0060/2021, 0003/2022 ಮತ್ತು 0009/2021ರ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ಅಗತ್ಯವಾಗಿರುತ್ತದೆ.

ಆದ್ದರಿಂದ, ಸರ್ಕಾರವು ಉಪವಿಭಾಗಾಧಿಕಾರಿಗಳು, ಮೈಸೂರು ಉಪ ವಿಭಾಗ ಹಾಗೂ ಸಕ್ಷಮ ಪ್ರಾಧಿಕಾರಿಗಳು, ರವರ ವರದಿಯನ್ನು ಪರಿಗಣಿಸಿ ಹಾಗೂ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ತುರ್ತು ಅಗತ್ಯವಿದೆ ಎಂದು ಸ್ವಯಂ ಮನವರಿಕೆ ಮಾಡಿ ಕೊಂಡು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿನ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣಾ ಅಧಿನಿಯಮ, 2004 (2005ರ ಕರ್ನಾಟಕ ಅಧಿನಿಯಮ, 30)ರ 3ನೇ ಪ್ರಕರಣದ (2)ನೇ ಉಪ–ಪ್ರಕರಣದ ಪುದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಕೆಳಕಂಡಂತೆ ಆದೇಶವನ್ನು ಮಾಡುತ್ತದೆ:

"ಆದೇಶ"

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣಾ ಅಧಿನಿಯಮ,2004(2005ರ ಕರ್ನಾಟಕ ಅಧಿನಿಯಮ,30) ರ 3ನೇ ಪ್ರಕರಣದ (2)ನೇ ಉಪ–ಪ್ರಕರಣದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಈ ಮೇಲ್ಕಂಡ ಸನ್ನಿವೇಶಗಳ ಹಿನ್ನಲೆಯಲ್ಲಿ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವ ಸಲುವಾಗಿ ಸಿ.ಇ.ಎನ್ ಕ್ರೈಂ ಪೊಲೀಸ್ ಠಾಣೆ, ಮೈಸೂರು ನಗರದಲ್ಲಿ ದಾಖಲಾಗಿರುವ ಮೊಕ್ಕದ್ದಮೆ ಸಂಖ್ಯೆ 0060/2021, 0003/2022 ಮತ್ತು 0009/2021ರ ಆರೋಪಿಗಳಿಗೆ ಸೇರಿದೆ ಎನ್ನಲಾದ ಸ್ಥಿರಾಸ್ತಿ ಮತ್ತು ಚರಾಸ್ತಿ ಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಅವಶ್ಯಕವಾಗಿದೆ ಎಂದು ಮನಗಂಡಿರುವುದರಿಂದ, ಸದರಿ ಹಣಕಾಸು ಸಂಸ್ಥೆಯ ಅಂಥ ಹಣ ಅಥವಾ ಅಂಥ ಇತರೆ ಸ್ವತ್ತುಗಳು ಅಥವಾ ಸಂಸ್ಥೆಯ ಪ್ರವರ್ತಕರ, ಪಾಲುದಾರರ,ನಿರ್ದೇಶಕರ, ವ್ಯವಸ್ಥಾಪಕರ ಅಥವಾ ಸದಸ್ಯರ ಅಥವಾ ಯಾರೇ ಇತರೆ ವ್ಯಕ್ತಿಯ ವೈಯಕ್ತಿಕ ಆಸ್ತಿಗಳು ಠೇವಣಿಗಳನ್ನು, ಬಡ್ಡಿ ಅಥವಾ ಇತರ ಖಾತ್ರಿ ಪ್ರಯೋಜನಗಳನ್ನು ಠೇವಣಿದಾರರಿಗೆ ಮರುಸಂದಾಯ ಮಾಡುವುದಕ್ಕೆ ಸಂಬಂಧಿಸಿದಂತೆ ಪ್ರಯಾಪ್ತವಾಗಿಲ್ಲವೆಂದು ಗೊತ್ತಾದಲ್ಲಿ ಸಿ.ಇ.ಎನ್ ಕ್ರೈಂ ಪೊಲೀಸ್ ಠಾಣೆ, ಮೈಸೂರು ನಗರದಲ್ಲಿ ದಾಖಲಾಗಿರುವ ಮೊಕ್ಕದ್ದಮೆ ಸಂಖ್ಯೆ:0060/2021, 0003/2022 ಮತ್ತು 0009/2021ರ ಆರೋಪಿಗಳು ಸಂಗ್ರಹಿಸಲಾದ ಠೇವಣಿಗಳಿಂದ ತನ್ನ ಹೆಸರಿನಲ್ಲಾಗಲಿ ಅಥವಾ ಯಾರೇ ಇತರೆ ವ್ಯಕ್ತಿಗಳ ಹೆಸರಿನಲ್ಲಿ ಅರ್ಜಿಸಿದೆ ಎನ್ನಲಾದ ಈ ಆದೇಶದ ಅನುಬಂಧ 1 ರಲ್ಲಿ ನಿರ್ದಿಷ್ಟ ಪಡಿಸಲಾದಂತೆ ಸ್ಥಿರಾಸ್ವತ್ತುಗಳನ್ನು ಸರ್ಕಾರವು ಈ ಮೂಲಕ ಜಪ್ತಿ ಮಾಡಿಕೊಳ್ಳುತ್ತದೆ.

ಟಿಪ್ಪಣಿ: ವಿಶೇಷ ನ್ಯಾಯಾಲಯದ ಮುಂದಿನ ಆದೇಶದವರೆಗೆ ಬಾಕಿ ಇರಿಸಿ, ಮೇಲೆ ಹೇಳಿದ ಸ್ಥಿರಾ ಸ್ವತ್ತುಗಳನ್ನು ಅಧಿಕೃತ ರಾಜ್ಯಪತ್ರದಲ್ಲಿ ಈ ಆದೇಶವು ಪ್ರಕಟಣೆಗೊಂಡ ದಿನಾಂಕದಿಂದ ಸರ್ಕಾರವು ನೇಮಕ ಮಾಡಿರುವ ಸಕ್ಷಮ ಪ್ರಾಧಿಕಾರದಲ್ಲಿ ಕೂಡಲೇ ನಿಯುತವಾಗತಕ್ಕದ್ದು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ/–
(ಅನ್ವರ್ ಬಾಷ)
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–1,
ಭೂಮಾಪನ ಮತ್ತು ವಿಶೇಷ ಕೋಶ)

ಅನುಬಂಧ–1

Details of the Properties in the name of Accused, with respect to FIR No. 0060/2021, 0003/2022 and 0009/2021 (Solar Project) registered at CEN Police Station, Mysuru City

Sl. No	Property	Seller	Purchaser	Sale Deed No. and Date	Amount	Market Value	Remarks
1	All that piece and parcel of land bearing Survey No.165/2 of Hebbale village, Kushalnagar Hobli, Kushal nagar Taluk measuring to an extent of 1 Acre	ಹೆಚ್. ಎಂ. ಆಶಾ ಲತ, ಜಯಗೋಪಾಲ್, ಜ್ಯೋತಿ ಹೆಚ್.ಎಂ, ವಿನೋದ್ ಕುಮಾರ್ ಹೆಚ್, ಎಂ. ಮಮತ ಹೆಚ್. ಎಂ, ರಮ್ಯ ಹೆಚ್. ಎಂ, ಕವಿತಾ ಹೆಚ್. ಸಿ	ಶ್ರೀಮತಿ ಬಾನುಮತಿ ಹೆಚ್. ಎಸ್ ಮತ್ತು ಕುಮಾರಿ ಮೌಲ್ಯ ಹೆಚ್.ಡಿ	1229/ 2023-24 04.09.2023	400000.00	Will be obtained from the authorized valuer at the time of valuation	H M Asha, Latha jayagopal, Jyothi H M, Vinod Kumar H M, Mamatha H M, Ramya H M, Kavitha H C. saled the property to Mrs. BANUMATHI H.S Kumari. MOULYA H.D through sale Deed No. KUS-1-01229-2023-24, Dated: 11-07-2022 Later, the property right got transferred to Mr. Madhu J.G, vide Deed No. KUS-1-00573-2024-25 Dated: 12.06.2024 ***Presently RTC stands in the name of Madhu J G**
2	All that piece and parcel of land bearing Survey No.8/2 of Guddenahalli village, Harana halli Hobli, Periya patna Taluk measuring to an extent of 1 Acre	ಕೆ ಆರ್ ರಾಜೀವ ಬಿನ್ ಟಿ ರಾಜು, ಮಹಾದೇವಿ ಕೋಂ ಟಿ ರಾಜು, ಕೆ ಆರ್ ಶಾಲಿನಿ ಬಿನ್ ಟಿ ರಾಜು, ಟಿ ರಾಜು ಬಿನ್ ತಮ್ಮಣ್ಣೇಗೌಡ ಉರುಫ್ ತಮ್ಮೇಗೌಡ	ಚಂದ್ರ ಎನ್ ಬಿನ್ ಲೇಟ್ ನಾಗರಾಜು	4185/ 17-18 22.02.2018	2450000.00	Will be obtained from the authorized valuer at the time of valuation	ಕೆ ಆರ್ ರಾಜೀವ ಬಿನ್ ಟಿ ರಾಜು, ಮಹಾದೇವಿ ಕೋಂ ಟಿ ರಾಜು, ಕೆ ಆರ್ ಶಾಲಿನಿ ಬಿನ್ ಟಿ ರಾಜು, ಟಿ ರಾಜು ಬಿನ್ ತಮ್ಮಣ್ಣೇಗೌಡ ಉರುಫ್ ತಮ್ಮೇಗೌಡ ರವರಿಂದ ಚಂದ್ರ ಎನ್ ಬಿನ್ ಲೇಟ್ ನಾಗರಾಜು ರವರಿಗೆ ಕ್ರಯವಾಗಿ ಬಂದಿರುತ್ತದೆ. Deed No. BTP 1-04185-2017-18 ***Presently RTC stands in the name of Chandra N**
3	All that piece and parcel of land bearing Survey No.7/20 of Guddenahalli village, Harana halli Hobli, Periya patna Taluk measuring to an extent of 2 Acres 21 Guntas	B B ರೋಹಿಣಿ ಬಿನ್ BK ಭಾಸ್ಕರ್ BB ಭಾರತಿ, ಬಿನ್ BK ಭಾಸ್ಕರ್ ಇವರ ಪರವಾಗಿ GPA Holder ಆಗಿ ಪಿ ಎನ್ ವಿಜಯೇಂದ್ರ ಬಿನ್ ಲೇಟ್ ಹೆಚ್ ಜಿ ನಾರಾಯಣ ಮೂರ್ತಿ	ದಿನೇಶ್ ಹೆಚ್ ಆರ್ ಬಿನ್ ರಾಜಪ್ಪ	4907	220000.00	Will be obtained from the authorized valuer at the time of valuation	B B ರೋಹಿಣಿ ಬಿನ್ BK ಭಾಸ್ಕರ್ BB ಭಾರತಿ, ಬಿನ್ BK ಭಾಸ್ಕರ್ ಇವರ ಪರವಾಗಿ GPA Holder ಆಗಿ ಪಿ ಎನ್ ವಿಜಯೇಂದ್ರ ಬಿನ್ ಲೇಟ್ ಹೆಚ್ ಜಿ ನಾರಾಯಣ ಮೂರ್ತಿ aled the property to ದಿನೇಶ್ ಹೆಚ್ ಆರ್ ಬಿನ್ ರಾಜಪ್ಪ through sale Deed No. BTP-1-04907-2018-19 Dated: 24.12.2018. Later, the property right got transferred to Mr. B J Basavaraju, vide Deed No. KUS-1-00573-2024-25 Dated: 12.06.2024 ***Presently RTC stands in the name of B J Basavaraju**
4	All that piece and parcel of land bearing Survey No 7/17 of Guddenahalli village, Harana halli Hobli, Periya patna Taluk measuring to an extent of 1 Acres 13 Guntas	ಕೆ ಆರ್ ರಾಜೀವ ಬಿನ್ ಟಿ ರಾಜು, ಮಹಾದೇವಿ ಕೋಂ ಟಿ ರಾಜು, ಕೆ ಆರ್ ಶಾಲಿನಿ ಬಿನ್ ಟಿ ರಾಜು, ಟಿ ರಾಜು ಬಿನ್ ತಮ್ಮಣ್ಣೇಗೌಡ ಉರುಫ್ ತಮ್ಮೇಗೌಡ	ಚಂದ್ರ ಎನ್ ಬಿನ್ ಲೇಟ್ ನಾಗರಾಜು	2065/ 2020-21 21.08.2020	2450000.00	Will be obtained from the authorized valuer at the time of valuation	ಕೆ ಆರ್ ರಾಜೀವ ಬಿನ್ ಟಿ ರಾಜು, ಮಹಾದೇವಿ ಕೋಂ ಟಿ ರಾಜು, ಕೆ ಆರ್ ಶಾಲಿನಿ ಬಿನ್ ಟಿ ರಾಜು, ಟಿ ರಾಜು ಬಿನ್ ತಮ್ಮಣ್ಣೇಗೌಡ ಉರುಫ್ ತಮ್ಮೇಗೌಡ. saled the property to ಚಂದ್ರ ಎನ್ ಬಿನ್ ಲೇಟ್ ನಾಗರಾಜು through sale Deed No.BTP-1-04182-2017-18, Later, the property right got transferred to ರಘು ಬಿನ್ ಲೇಟ್ ಕೃಷ್ಣಪ್ಪಶೆಟ್ಟಿ, vide Deed No. BTP-1-03215-2019-18 ***Presently RTC stands in the name of B J Basavaraju**
5	All that piece and parcel of land bearing Survey No 7/18 of Guddenahalli village, Harana halli Hobli, Periya patna Taluk measuring to an extent of 2 Acres	ಕೆ ಆರ್ ರಾಜೀವ ಬಿನ್ ಟಿ ರಾಜು, ಮಹಾದೇವಿ ಕೋಂ ಟಿ ರಾಜು, ಕೆ ಆರ್ ಶಾಲಿನಿ ಬಿನ್ ಟಿ ರಾಜು, ಟಿ ರಾಜು ಬಿನ್ ತಮ್ಮಣ್ಣೇಗೌಡ ಉರುಫ್ ತಮ್ಮೇಗೌಡ	ಚಂದ್ರ ಎನ್ ಬಿನ್ ಲೇಟ್ ನಾಗರಾಜು	2065/ 2020-21 21.08.2020	2450000.00	Will be obtained from the authorized valuer at the time of valuation	ಕೆ ಆರ್ ರಾಜೀವ ಬಿನ್ ಟಿ ರಾಜು, ಮಹಾದೇವಿ ಕೋಂ ಟಿ ರಾಜು, ಕೆ ಆರ್ ಶಾಲಿನಿ ಬಿನ್ ಟಿ ರಾಜು, ಟಿ ರಾಜು ಬಿನ್ ತಮ್ಮಣ್ಣೇಗೌಡ ಉರುಫ್ ತಮ್ಮೇಗೌಡ. saled the property to ಚಂದ್ರ ಎನ್ ಬಿನ್ ಲೇಟ್ ನಾಗರಾಜು through sale Deed No.BTP-1-04183-2017-18, ***Presently RTC stands in the name of Chandra N**
6	All that piece and parcel of immovable property bearing Survey No 7/16 measuring 5 Acres 07 guntas situated at Guddenahalli village, Harana halli Hobli, Periya patna Taluk and being converted for residential purpose vide official memorandum dated 07.03.2019 bearing No LNDC 10002105 being undeveloped land	ಬಿ ಜೆ ಬಸವರಾಜು ಬಿನ್ ಜವರೇಗೌಡ	ದಿನೇಶ್ ಹೆಚ್ ಆರ್ ಬಿನ್ ರಾಜಪ್ಪ	5645	55635.00	Will be obtained from the authorized valuer at the time of valuation	ಬಿ ಜೆ ಬಸವರಾಜು ಬಿನ್ ಜವರೇಗೌಡ saled the property to ದಿನೇಶ್ ಹೆಚ್ ಆರ್ ಬಿನ್ ರಾಜಪ್ಪ through sale Deed No.BTP-1-05645-2018-19 Later, the property converted for residential purpose vide official memorandum dated 07.03.2019 bearing No LNDC_10002105 being undeveloped land ***Presently RTC stands in the name of Dinesh H R**
7	All that piece and parcel of immovable property bearing Survey No 7/23 measuring 5 Acres situated at Guddenahalli village, Harana halli Hobli, Periya patna Taluk	ದಿನೇಶ್ ಹೆಚ್ ಆರ್ ಬಿನ್ ರಾಜಪ್ಪ	ಬಿ ಜೆ ಬಸವರಾಜು ಬಿನ್ ಜವರೇಗೌಡ	5272/ 20-21 25.02.2021	8000000.00	Will be obtained from the authorized valuer at the time of valuation	ದಿನೇಶ್ ಹೆಚ್ ಆರ್ ಬಿನ್ ರಾಜಪ್ಪರವರು ಬಿ ಜೆ ಬಸವರಾಜು ಬಿನ್ ಜವರೇಗೌಡ ರವರಿಗೆ ಹಕ್ಕು ಖುಲಾಸೆ ಮಾಡಿಸಿರುತ್ತಾರೆ through Deed No.BTP-1-01141-2021-22 dated 27.07.2021 ***Presently RTC stands in the name of B J Basavaraju**

ಸಹಿ/–
(ಅನ್ವರ್ ಬಾಷ)
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–1, ಭೂಮಾಪನ ಮತ್ತು ವಿಶೇಷ ಕೋಶ)

ವಾಸಾಸಂಇ/ವಾಪ್ರ/ಜಿಎ/1240/2026–27

ಷೇರುಪೇಟೆ ವಹಿವಾಟು

77,409 ಹಿಂದಿನ ಅಂತ್ಯ — 607 — 76,802 ಇಂದಿನ ಅಂತ್ಯ



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	24,168
ಇಂದಿನ ಅಂತ್ಯ:	24,013
ದಿನದ ಕನಿಷ್ಠ:	23,901
	▼154

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹705
12 ಕ್ಕೆ	₹94
ಮೈಸೂರು: 100 ಕ್ಕೆ	₹720

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹269
ಆರ್‌ಎಸ್‌ಎಸ್-5	₹263
ಗುಡ್ ಲಾಟ್	₹230

ರಾಮನಗರ ರೇಷ್ಮೆಗೂಡು (10 ಕೆ.ಜಿಗೆ)

ಮಿಶ್ರತಳಿ(ಸಿ.ಬಿ)	₹418-742
ದ್ವಿತಳಿ (ಬಿ.ವಿ)	₹425-888

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1450 (1460)
ಸೂರ್ಯಕಾಂತಿ (ರಿಫೈನ್ಡ್)	₹1650 (1650)
ಪಾಮೋಲಿನ್	₹1470 (1460)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹23250
ಎಸಿ	₹14000
ಆರ್‌ಪಿ	₹18600
ಆರ್‌ಸಿ	₹10050

ಮುಂಬೈ ಧಾರಣೆ (ಶೇಂಗಾ)

19-06-2026	
ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9100-9200
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಪಾಮ್ ವಾರದ ಡೆಲಿವರಿ	1468 (1458)
ಸೂರ್ಯಕಾಂತಿ ಎಣ್ಣೆ ಕಚ್ಚಾ	1570 (1575)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,44,800 (1,48,000)
ಬೆಳ್ಳಿ ಕೆ.ಜಿಗೆ	2,33,000 (2,40,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಬಂಟ್ವಾಳ	₹10000-12000
ಪುತ್ತೂರು	₹5000-14500

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಐಪಿಒಗೆ ದಾಖಲೆ ಸಲ್ಲಿಸಿದ ಜಿಯೊ

ಅಂದಾಜು ₹37,700 ಕೋಟಿ ಬಂಡವಾಳ ಸಂಗ್ರಹಿಸಲು ಮುಂದಾದ ಕಂಪನಿ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ (ಆರ್‌ಐಎಲ್) ಡಿಜಿಟಲ್ ಸೇವೆಗಳ ವಿಭಾಗವಾದ ಜಿಯೊ ಪ್ಲಾಟ್‌ಫಾರ್ಮ್ಸ್ ಲಿಮಿಟೆಡ್ ಕಂಪನಿಯು ಐಪಿಒ ಮೂಲಕ ಬಂಡವಾಳ ಸಂಗ್ರಹಿಸಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಶುಕ್ರವಾರ ಕರಡು ದಾಖಲೆಗಳನ್ನು ಸಲ್ಲಿಸಿದೆ.

ಈ ಐಪಿಒ ಭಾರತದ ಬಂಡವಾಳ ಮಾರುಕಟ್ಟೆ ಇದುವರೆಗೆ ಕಂಡಿರುವ ಅತಿದೊಡ್ಡ ಐಪಿಒ ಎನ್ನಲಾಗಿದೆ. ಐಪಿಒ ಮೂಲಕ ಕಂಪನಿಯು 4 ಬಿಲಿಯನ್ ಡಾಲರ್ (ಅಂದಾಜು ₹37,700 ಕೋಟಿ) ಬಂಡವಾಳ ಸಂಗ್ರಹಿಸಲು ಮುಂದಾಗಿದೆ ಎನ್ನಲಾಗಿದೆ.

ಜಿಯೊ ಪ್ಲಾಟ್‌ಫಾರ್ಮ್ಸ್ ಕಂಪನಿಯು 27 ಕೋಟಿ ಹೊಸ ಷೇರುಗಳನ್ನು ಬಿಡುಗಡೆ ಮಾಡಲಿದೆ ಎಂದು ಸೆಬಿಗೆ ಸಲ್ಲಿಕೆಯಾಗಿರುವ ಡಿಆರ್‌ಎಚ್‌ಪಿ ದಾಖಲೆ ಹೇಳಿದೆ.

‘ಐಪಿಒ ಮೂಲಕ ಸಂಗ್ರಹಿಸುವ ಬಂಡವಾಳವನ್ನು ಕೆಲವು ಅಂಗ ಸಂಸ್ಥೆಗಳು ಪಡೆದಿರುವ ಸಾಲವನ್ನು ಪೂರ್ತಿಯಾಗಿ ಅಥವಾ ಆಂಶಿಕವಾಗಿ ಮರುಪಾವತಿಸಲು ಬಳಸಲಾಗುತ್ತದೆ, ಕೆಲವು ಕಾರ್ಪೊರೇಟ್ ಉದ್ದೇಶಗಳಿಗಾಗಿ ಬಳಕೆ ಮಾಡಲಾಗುತ್ತದೆ’ ಎಂದು ಡಿಆರ್‌ಎಚ್‌ಪಿ ದಾಖಲೆಯಲ್ಲಿ ಉಲ್ಲೇಖಿಸಲಾಗಿದೆ.

ಜಿಯೊ ಪ್ಲಾಟ್‌ಫಾರ್ಮ್ಸ್‌ನ ಮಾರುಕಟ್ಟೆ ಮೌಲ್ಯವು 137 ಬಿಲಿಯನ್ ಡಾಲರ್ (₹12.91 ಲಕ್ಷ ಕೋಟಿ) ಎಂದು ಅಂದಾಜು ಮಾಡಲಾಗಿದೆ. ಸಂಗ್ರಹಿಸಲಾಗುವ ಬಂಡವಾಳವನ್ನು ಅಂದಾಜು ₹27,500 ಕೋಟಿ ಸಾಲವನ್ನು ಪೂರ್ತಿಯಾಗಿ ಅಥವಾ ಭಾಗಶಃ ಮರುಪಾವತಿಸಲು ಬಳಸಲಾಗುತ್ತದೆ ಎಂದು ಮೂಲವೊಂದು ತಿಳಿಸಿದೆ.

ಜಿಯೊ ಪ್ಲಾಟ್‌ಫಾರ್ಮ್ಸ್ ಕಂಪನಿಯು 2020ರಲ್ಲಿ ಮೆಟಾ ಕಂಪನಿಯಿಂದ ₹43,574 ಕೋಟಿ ಬಂಡವಾಳ ಸಂಗ್ರಹಿಸಿದೆ. ಮೆಟಾ ಕಂಪನಿಯು ಜಿಯೊ ಪ್ಲಾಟ್‌ಫಾರ್ಮ್ಸ್‌ನಲ್ಲಿ ಶೇ 9.99ರಷ್ಟು ಪಾಲು ಹೊಂದಿದೆ. ಗೂಗಲ್ ಕಂಪನಿಯು ಶೇ 7.73ರಷ್ಟು ಪಾಲು ಹೊಂದಿದ್ದು ₹33,737 ಕೋಟಿ ಬಂಡವಾಳ ತೊಡಗಿಸಿದೆ.

ಮೆಟಾ ಮತ್ತು ಗೂಗಲ್ ಅಲ್ಲದೆ ಇನ್ನೂ ಹಲವು ಜಾಗತಿಕ ಸಂಸ್ಥೆಗಳು ಜಿಯೊ ಪ್ಲಾಟ್‌ಫಾರ್ಮ್ಸ್‌ನಲ್ಲಿ ಹೂಡಿಕೆ ಮಾಡಿವೆ. ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಈಗ ಜಿಯೊ ಪ್ಲಾಟ್‌ಫಾರ್ಮ್ಸ್‌ನಲ್ಲಿ ಶೇ 66.43ರಷ್ಟು ಪಾಲು ಹೊಂದಿದೆ.

ವಾರ್ಷಿಕ ಮಹಾಸಭೆಯಲ್ಲಿ ಘೋಷಣೆ

ಶುಕ್ರವಾರ ನಡೆದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ 49ನೆಯ ವಾರ್ಷಿಕ ಮಹಾಸಭೆಯನ್ನು ಉದ್ದೇಶಿಸಿ ಮಾತನಾಡಿದ ಕಂಪನಿಯ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಮುಕೇಶ್ ಅಂಬಾನಿ ಅವರು, ‘ಈ ವರ್ಷದಲ್ಲಿ ನಡೆಯುವ ಜಿಯೊ ಐಪಿಒ ರಿಲಯನ್ಸ್‌ನ ಷೇರುದಾರರ ಸಂಪತ್ತಿನ ಮೌಲ್ಯವನ್ನು ಹೆಚ್ಚಿಸುತ್ತದೆ, ಹೊಸಬರಿಗೆ ಕಂಪನಿಯ ಬೆಳವಣಿಗೆಯಲ್ಲಿ ಭಾಗಿಯಾಗಲು ಅವಕಾಶ ಒದಗಿಸುತ್ತದೆ’ ಎಂದು ಹೇಳಿದ್ದಾರೆ.

ಐಪಿಒ ಪ್ರಕ್ರಿಯೆಯ ನೇತೃತ್ವವನ್ನು ತಮ್ಮ ಮಕ್ಕಳಾದ ಆಕಾಶ್, ಇಶಾ ಮತ್ತು ಅನಂತ್ ಅವರು ವಹಿಸಿಕೊಂಡಿದ್ದಾರೆ, ಜಿಯೊ ಕಂಪನಿಯ ಮುಂದಿನ ಹಂತದ ಬೆಳವಣಿಗೆಯ ನೇತೃತ್ವವನ್ನೂ ಅವರೇ ವಹಿಸಿಕೊಳ್ಳಲಿದ್ದಾರೆ ಎಂದಿದ್ದಾರೆ.

‘ಭಾರತವು ಜಾಗತಿಕ ಮಟ್ಟದ, ಸಾಮರ್ಥ್ಯದ ಮತ್ತು ಮೌಲ್ಯದ ತಂತ್ರಜ್ಞಾನ ಕಂಪನಿಗಳನ್ನು ಕಟ್ಟಬಲ್ಲದು ಎಂಬುದನ್ನು ಜಿಯೊ ಐಪಿಒ ಜಗತ್ತಿಗೆ ತೋರಿಸಿಕೊಡಲಿದೆ’ ಎಂದು ಕೂಡ ಅಂಬಾನಿ ಹೇಳಿದ್ದಾರೆ.

ಸುದ್ದಿ 2 ನಿಮಿಷ

ಐ.ಟಿ ಕುಸಿತ, ಸೂಚ್ಯಂಕ ಇಳಿಕೆ

ಮುಂಬೈ (ಪಿಟಿಐ): ಮಾಹಿತಿ ತಂತ್ರಜ್ಞಾನ ವಲಯದ ಕಂಪನಿಗಳ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ಅಮೆರಿಕದ ತಂತ್ರಜ್ಞಾನ ಕಂಪನಿ ಆಕ್ಸೆಂಚರ್ ಪ್ರಸಕ್ತ ಹಣಕಾಸು ವರ್ಷದಲ್ಲಿ ತನ್ನ ವರಮಾನ ಮುನ್ನೋಟದ ಅಂದಾಜನ್ನು ಕಡಿಮೆಗೊಳಿಸಿದೆ. ಇದು ಐ.ಟಿ. ಕಂಪನಿಗಳ ಷೇರುಗಳ ಮೇಲೆ ಪ್ರಭಾವ ಬೀರಿತು. ಅಲ್ಲದೆ, ಸತತ ಐದು ವಹಿವಾಟಿನಲ್ಲಿ ಷೇರುಪೇಟೆ ಸೂಚ್ಯಂಕಗಳು ಏರಿಕೆಯಾಗಿದ್ದು, ಇದರ ಲಾಭ ಪಡೆದುಕೊಳ್ಳಲು ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಮುಂದಾಗಿದ್ದರಿಂದ ಸೂಚ್ಯಂಕಗಳು ಇಳಿದವು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಅಮೆರಿಕ–ಇರಾನ್ ಒಪ್ಪಂದದ ಅಂತಿಮ ಹಂತದ ಮಾತುಕತೆಯು ಮುಂದೂಡಿಕೆ ಆಗಿರುವುದು ಮಾರುಕಟ್ಟೆಯಲ್ಲಿ ಅನಿಶ್ಚಿತತೆ ಉಂಟು ಮಾಡಿದೆ. ಇದು ಸಹ ಸೂಚ್ಯಂಕ ಇಳಿಕೆಗೆ ಕಾರಣವಾಯಿತು ಎಂದು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 607 ಅಂಶ ಇಳಿಕೆಯಾಗಿ, 76,802ಕ್ಕೆ ವಹಿವಾಟು ಕೊನೆಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 154 ಅಂಶ ಕಡಿಮೆಯಾಗಿ, 24,013ಕ್ಕೆ ಅಂತ್ಯಗೊಂಡಿದೆ.

ಇನ್ಫೊಸಿಸ್ ಕಂಪನಿಯ ಷೇರಿನ ಮೌಲ್ಯ ಶೇ 6.69ರಷ್ಟು ಇಳಿದಿದೆ. ಟಿಸಿಎಸ್ ಶೇ 3.53, ಎಚ್‌ಸಿಎಲ್ ಶೇ 2.74 ಮತ್ತು ಟೆಕ್ ಮಹೀಂದ್ರದ ಷೇರಿನ ಮೌಲ್ಯ ಶೇ 2.45ರಷ್ಟು ಕಡಿಮೆ ಆಗಿದೆ.

ಬಿಡದಿ ಟೌನ್‌ಶಿಪ್: ಪರಿಹಾರ ವಿತರಣೆ ಶುರು

ರಾಮನಗರ: ತಾಲ್ಲೂಕಿನ ಬಿಡದಿ ಹೋಬಳಿಯಲ್ಲಿ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆ (ಜಿಬಿಐಟಿ) ವಿರೋಧಿಸಿ ರೈತರು, ವಿರೋಧ ಪಕ್ಷಗಳು ಹೋರಾಟ ತೀವ್ರಗೊಳ್ಳುತ್ತಿರುವ ಬೆನ್ನಲ್ಲೇ, ಜಮೀನು ಕೊಡಲು ಒಪ್ಪಿರುವ ಮಾಲೀಕರಿಗೆ ತರಾತುರಿಯಲ್ಲಿ ಪರಿಹಾರದ ಚೆಕ್ ವಿತರಿಸಲಾಯಿತು.

ನಗರದ ಜಿಬಿಡಿಎ ಕಚೇರಿಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ, ಭೂ ಸ್ವಾಧೀನಕ್ಕೆ ಅಂತಿಮ ಅಧಿಸೂಚನೆಯಾಗಿರುವ 3 ಗ್ರಾಮಗಳ ಪೈಕಿ ಕೆಂಪಯ್ಯನಪಾಳ್ಯ ಗ್ರಾಮದ 7 ಭೂ ಮಾಲೀಕರಿಗೆ ಸಾಂಕೇತಿಕವಾಗಿ ಶಾಸಕ ಎಚ್.ಸಿ.ಬಾಲಕೃಷ್ಣ ಪರಿಹಾರದ ಚೆಕ್ ಹಸ್ತಾಂತರಿಸಿದರು. ಪರಿಹಾರದ ಜೊತೆಗೆ ಹೆಚ್ಚುವರಿಯಾಗಿ ₹5 ಲಕ್ಷ ಇಡುಗಂಟಿನ ಚೆಕ್ ವಿತರಿಸಿದರು. ಬಿಡದಿ ಹೋಬಳಿಯ ಬೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ 9 ಕಂದಾಯ ಗ್ರಾಮಗಳಲ್ಲಿ ಟೌನ್‌ಶಿಪ್ ನಿರ್ಮಾಣವಾಗಲಿದೆ.

ಪಾದಚಾರಿಗಳಿಗೆ ‘ಸುಪ್ರೀಂ’ ರಕ್ಷೆ

ಒಂದನೇ ಪುಟದಿಂದ...

ಸುಪ್ರೀಂ ಕೋರ್ಟ್ ನೀಡಿರುವ ಈ ಮಹತ್ವದ ತೀರ್ಪು ದೇಶದಾದ್ಯಂತ ನಗರ ಯೋಜನೆ, ರಸ್ತೆ ಸುರಕ್ಷತೆ ಮತ್ತು ಪಾದಚಾರಿ ಮೂಲಸೌಕರ್ಯಗಳ ಮೇಲೆ ದೂರಗಾಮಿ ಪರಿಣಾಮಗಳನ್ನು ಬೀರಲಿದೆ ಎಂದು ವಿಶ್ಲೇಷಿಸಲಾಗಿದೆ. ಇದು ನಗರಗಳು, ಪಟ್ಟಣಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಪಾದಚಾರಿ ಮಾರ್ಗಗಳಿಗೆ ಆದ್ಯತೆ ನೀಡಲು ಅಧಿಕಾರಿಗಳನ್ನು ನಿರ್ಬಂಧಪಡಿಸುವ ಸಾಧ್ಯತೆಯಿದೆ.

ಪಾದಚಾರಿಗಳ ಹಕ್ಕಿನ ರಕ್ಷಣೆಗೆ ಸೂಕ್ತ ಕಾನೂನು ರೂಪಿಸಲಿಕ್ಕಾಗಿ ಈ ತೀರ್ಪಿನ ಪ್ರತಿಗಳನ್ನು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ, ಗ್ರಾಮೀಣಾಭಿವೃದ್ಧಿ, ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಹಾಗೂ ಕಾನೂನು ಆಯೋಗಕ್ಕೆ ಕಳುಹಿಸುವಂತೆ ನ್ಯಾಯಾಲಯವು ತನ್ನ ರಿಜಿಸ್ಟ್ರಿಗೆ ನಿರ್ದೇಶನ ನೀಡಿತು. ಪಾದಚಾರಿಗಳ ನಡೆದಾಡುವ ಹಕ್ಕನ್ನು ರಕ್ಷಿಸಲು ನಿಯಂತ್ರಕ ವ್ಯವಸ್ಥೆಯನ್ನು ಸ್ಥಾಪಿಸುವಂತೆಯೂ ಸೂಚಿಸಿತು.

ಏನಿದು ಪ್ರಕರಣ?

ಐದು ವರ್ಷದ ಬಾಲಕನ ಸಾವಿಗೆ ಕಾರಣವಾದ ವಾಹನ ಅಪಘಾತ ಪರಿಹಾರ ಪ್ರಕರಣದ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದೆ. ಮಗನನ್ನು ಕಳೆದುಕೊಂಡ ಶೇಖ್ ರಿಯಾಜ್ ಎಂಬವರು ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆಯನ್ನು ಪೀಠ ನಡೆಸಿತು.

ಬೆಳಿಗ್ಗೆ 9ರ ಸುಮಾರಿಗೆ ತಂದೆ ತನ್ನ ಮಗನನ್ನು ಶಾಲೆಗೆ ಕರೆದುಕೊಂಡು ಹೋಗುತ್ತಿದ್ದಾಗ, ಹಿಂದಿನಿಂದ ಪಾದಚಾರಿ ಮಾರ್ಗಕ್ಕೆ ಏರಿಬಂದ ಟ್ಯಾಂಕರ್ ಡಿಕ್ಕಿ ಹೊಡೆದಿತ್ತು. ಗಂಭೀರವಾಗಿ ಗಾಯಗೊಂಡ ಮಗು ಸ್ಥಳದಲ್ಲೇ ಮೃತಪಟ್ಟಿತ್ತು.

ಪರಿಹಾರದ ಮೊತ್ತವನ್ನು ಕಡಿಮೆಗೊಳಿಸಿ ಹೈಕೋರ್ಟ್ ನೀಡಿದ್ದ ತೀರ್ಪನ್ನು ರದ್ದುಗೊಳಿಸಿದ ಸುಪ್ರೀಂ ಕೋರ್ಟ್, ಮೃತ ಮಗುವಿನ ತಂದೆಗೆ ಎರಡು ತಿಂಗಳೊಳಗೆ ₹11.44 ಲಕ್ಷ ಪರಿಹಾರ ನೀಡುವಂತೆ ಆದೇಶಿಸಿತು.

ಅಡಿಕೆ ಧಾರಣೆ

ಕುಮಟಾ		ಸಿದ್ದಾಪುರ (ಮುಂದುವರಿದ)			
ಚಿಪ್ಪು	29999-33599	ರಾಶಿ	41099-53499	ಬಿಳಿಗೋಟು	27199-35199
ಕೋಕ	16899-32999	ಗೊರಬಲು	19009-43569	ಚಾಲಿ	44100-48459
ಫ್ಯಾಕ್ಟರಿ	10189-25999	**ಸಿದ್ದಾಪುರ**		ಕೆಂಪುಗೋಟು	29118-35099
ಹಳೆಚಾಲಿ	43099-46598	ಬಿಳಿಗೋಟು	25699-34139	ರಾಶಿ	49299-52400
ಹೊಸಚಾಲಿ	36999-46519	ಚಾಲಿ	39199-47500	**ಯಲ್ಲಾಪುರ**	
ಪುತ್ತೂರು		ಕೋಕ	22699-32109	ಬಿಳಿಗೋಟು	16899-36999
ಕೋಕ	20000-33500	ಕೆಂಪುಗೋಟು	34400-38800	ಚಾಲಿ	37778-48509
ಹೊಸತು	30000-47000	ರಾಶಿ	44119-50099	ಕೋಕ	17000-30899
ಶಿವಮೊಗ್ಗ		ತಟ್ಟಿಬೆಟ್ಟೆ	41600-46199	ಕೆಂಪುಗೋಟು	22699-35799
ಸರಕು	64269-90209	**ಶಿರಸಿ**		ರಾಶಿ	48499-53519
ಬೆಟ್ಟೆ	48569-61619	ಬೆಟ್ಟೆ	34699-45869	ತಟ್ಟಿಬೆಟ್ಟೆ	36715-47469

ಸ್ವಿಟ್ಜರ್ಲೆಂಡ್ ಭೇಟಿ ಮುಂದೂಡಿದ ಅಮೆರಿಕದ ಉಪಾಧ್ಯಕ್ಷ ಜೆ.ಡಿ ವ್ಯಾನ್ಸ್

ಇರಾನ್–ಅಮೆರಿಕ ಮಾತುಕತೆ ವಿಳಂಬ

ಜ್ಯೂರಿಚ್ (ಎಪಿ): ಅಮೆರಿಕದ ಉಪಾಧ್ಯಕ್ಷ ಜೆ.ಡಿ ವ್ಯಾನ್ಸ್ ಅವರ ಸ್ವಿಟ್ಜರ್ಲೆಂಡ್ ಭೇಟಿಯನ್ನು ಮುಂದೂಡಲಾಗಿದ್ದು, ನಿಗದಿಯಂತೆ ಶುಕ್ರವಾರ ಆರಂಭವಾಗಬೇಕಿದ್ದ ಅಮೆರಿಕ- ಇರಾನ್ ನಡುವಿನ ಮಾತುಕತೆ ಅನಿಶ್ಚಿತತೆಯಲ್ಲಿದೆ.

ಪಶ್ಚಿಮ ಏಷ್ಯಾ ಸಂಘರ್ಷವನ್ನು ಕೊನೆಗೊಳಿಸುವ ಒಪ್ಪಂದಕ್ಕೆ ಅಮೆರಿಕ ಮತ್ತು ಇರಾನ್ ಗುರುವಾರ ಸಹಿ ಹಾಕಿವೆ. ಒಪ್ಪಂದದ ಪ್ರಕಾರ, ಉಭಯ ದೇಶಗಳು ಮುಂದಿನ 60 ದಿನಗಳಲ್ಲಿ ಅಂತಿಮ ಒಪ್ಪಂದಕ್ಕೆ ಸಂಬಂಧಿಸಿದ ಮಾತುಕತೆ ಪೂರ್ಣಗೊಳಿಸಬೇಕು. ಎರಡೂ ದೇಶಗಳ ಪ್ರತಿನಿಧಿಗಳು ಸ್ವಿಟ್ಜರ್ಲೆಂಡ್‌ನ ನಿಡ್ವಾಲ್ಡೆನ್‌ನಲ್ಲಿರುವ ರೆಸಾರ್ಟ್‌ನಲ್ಲಿ ಶುಕ್ರವಾರ ಮಾತುಕತೆ ಆರಂಭಿಸಲು ನಿರ್ಧರಿಸಲಾಗಿತ್ತು.

ಇರಾನ್‌ನ ಪ್ರತಿನಿಧಿಗಳ ಜತೆ ನಡೆಯುವ ಮಾತುಕತೆಯಲ್ಲಿ ಅಮೆರಿಕದ ನಿಯೋಗದ ನೇತೃತ್ವವನ್ನು ಜೆ.ಡಿ. ವ್ಯಾನ್ಸ್ ವಹಿಸಲಿದ್ದಾರೆ. ವ್ಯಾನ್ಸ್ ಅವರು ಗುರುವಾರ ರಾತ್ರಿ ವಾಷಿಂಗ್ಟನ್‌ನಿಂದ ಜ್ಯೂರಿಚ್‌ಗೆ ಪ್ರಯಾಣಿಸಬೇಕಿತ್ತು. ಆದರೆ, ಕೊನೆಯ ಕ್ಷಣದಲ್ಲಿ ಪ್ರಯಾಣ ರದ್ದುಗೊಳಿಸಲಾಗಿದೆ.

‘ಮಾತುಕತೆಯ ವೇಳೆ ಚರ್ಚೆಗೆ ತೆಗೆದುಕೊಳ್ಳಬೇಕಾದ ವಿಷಯಗಳನ್ನು ಅಂತಿಮಗೊಳಿಸಲಾಗಿಲ್ಲ. ಅಮೆರಿಕದ ನಿಯೋಗವು ಶೀಘ್ರದಲ್ಲೇ ಸ್ವಿಟ್ಜರ್ಲೆಂಡ್‌ಗೆ ಪ್ರಯಾಣ ಬೆಳೆಸಲಿದೆ’ ಎಂದು ಶ್ವೇತಭವನದ ಪ್ರಕಟಣೆ ತಿಳಿಸಿದೆ.

ವ್ಯಾನ್ಸ್ ಅವರು ಶಾಂತಿ ಒಪ್ಪಂದಕ್ಕೆ ಸಹಿ ಹಾಕುವ ಔಪಚಾರಿಕ ಸಮಾರಂಭದಲ್ಲಿ ಪಾಲ್ಗೊಳ್ಳಲು ಸ್ವಿಟ್ಜರ್ಲೆಂಡ್‌ಗೆ ತೆರಳಬೇಕಿತ್ತು. ಆದರೆ ವ್ಯಾನ್ಸ್ ಅವರ ಬದಲಾಗಿ ಟ್ರಂಪ್ ಅವರೇ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಮತ್ತೊಂದೆಡೆ, ಇರಾನ್ ಪರವಾಗಿ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಒಪ್ಪಂದಕ್ಕೆ ಅಂಕಿತ ಹಾಕಿದ್ದಾರೆ.

ಐಎಇಎಗೆ ಇರಾನ್ ಆಹ್ವಾನ: ಇರಾನ್ ತನ್ನ ಪರಮಾಣು ಸ್ಥಾವರಗಳನ್ನು ಪರಿಶೀಲಿಸಲು ಅಂತರರಾಷ್ಟ್ರೀಯ ಅಣುಶಕ್ತಿ ಏಜೆನ್ಸಿಯನ್ನು (ಐಎಇಎ) ಆಹ್ವಾನಿಸಲಿದೆ ಎಂದು ಟ್ರಂಪ್ ಅವರ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್ ಗುರುವಾರ ತಿಳಿಸಿದ್ದಾರೆ.

ಸಮೃದ್ಧೀಕರಿಸಿದ ಯುರೇನಿಯಂ ಸಂಗ್ರಹಿಸಿಟ್ಟಿರುವ ಸ್ಥಳವನ್ನು ಪತ್ತೆಹಚ್ಚಲು ಐಎಇಎ ಅಧಿಕಾರಿಗಳಿಗೆ ‘ಇರಾನ್ ಅವಕಾಶ ನೀಡಲಿದೆ’ ಎಂದು ವಿಟ್ಕಾಫ್ ಅವರು ಅಮೆರಿಕದ ಸಂಸದರಿಗೆ ತಿಳಿಸಿದ್ದಾಗಿ ಮೂಲಗಳು ಹೇಳಿವೆ.

‘ಮಾತುಕತೆ ರದ್ದಾಗಿದೆ’

ಜೆರುಸಲೇಂ: ‘ದಕ್ಷಿಣ ಲೆಬನಾನ್‌ನಲ್ಲಿ ಇಸ್ರೇಲ್ ಹಾಗೂ ಹಿಜ್ಬುಲ್ಲಾ ಬಂಡುಕೋರರ ನಡುವೆ ಸಂಘರ್ಷ ತೀವ್ರಗೊಂಡಿರುವ ಕಾರಣ ಅಮೆರಿಕ–ಇರಾನ್ ನಡುವಿನ ಮಾತುಕತೆ ರದ್ದಾಗಿದೆ’ ಎಂದು ಮೂವರು ಅಧಿಕಾರಿಗಳು ತಿಳಿಸಿದ್ದಾರೆ.

‘ಮಾತುಕತೆ ಆರಂಭಕ್ಕೂ ಮುನ್ನ ಲೆಬನಾನ್‌ನಲ್ಲಿ ಸಂಘರ್ಷ ನಿಲ್ಲಬೇಕು ಎಂದು ಇರಾನ್ ಒತ್ತಾಯಿಸಿದೆ. ಇರಾನ್‌ನ ಪ್ರತಿನಿಧಿಗಳು ನಿಗದಿಯಂತೆ ಸ್ವಿಟ್ಜರ್ಲೆಂಡ್‌ಗೆ ಪ್ರಯಾಣಿಸಿಲ್ಲ’ ಎಂದು ಹೆಸರು ಬಹಿರಂಗ ಪಡಿಸಲು ಇಚ್ಛಿಸದ ಅಧಿಕಾರಿಗಳು ಹೇಳಿದ್ದಾರೆ. ಆದರೆ ಮಾತುಕತೆ ರದ್ದಾಗಿರುವ ಬಗ್ಗೆ ಅಮೆರಿಕ ಮತ್ತು ಇರಾನ್ ಅಧಿಕೃತವಾಗಿ ಯಾವುದೇ ಹೇಳಿಕೆ ನೀಡಿಲ್ಲ.

ಇಸ್ರೇಲ್ ಸೇನೆಯು ಗುರುವಾರ ರಾತ್ರಿಯಿಡೀ ದಕ್ಷಿಣ ಮತ್ತು ಪೂರ್ವ ಲೆಬನಾನ್‌ನಲ್ಲಿ ತನ್ನ ಗುರಿಗಳ ಮೇಲೆ ದಾಳಿ ನಡೆಸಿದೆ. ಇಸ್ರೇಲ್ ದಾಳಿಯಲ್ಲಿ 21 ಮಂದಿ ಮೃತಪಟ್ಟಿರುವುದಾಗಿ ಲೆಬನಾನ್‌ನ ಆರೋಗ್ಯ ಸಚಿವಾಲಯ ಹೇಳಿದೆ. ಹಿಜ್ಬುಲ್ಲಾ ನಡೆಸಿದ ದಾಳಿಯಲ್ಲಿ ತನ್ನ ನಾಲ್ವರು ಯೋಧರು ಮೃತಪಟ್ಟಿರುವುದಾಗಿ ಇಸ್ರೇಲ್ ತಿಳಿಸಿದೆ.

ಮೊಜ್ತಬಾ ಖಮೇನಿ ಸಮ್ಮತಿ

ದುಬೈ: ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಮೊಜ್ತಬಾ ಖಮೇನಿ ಅವರು ಇರಾನ್ ಮತ್ತು ಅಮೆರಿಕ ನಡುವಿನ ಮಾತುಕತೆಗೆ ತಮ್ಮ ಸಮ್ಮತಿ ಸೂಚಿಸಿದ್ದಾರೆ.

‘ಮುಂದಿನ ದಿನಗಳಲ್ಲಿ ನೇರ ಮಾತುಕತೆ ನಡೆಯಲಿದೆ. ಆದರೆ, ಶತ್ರುಗಳ ಅಭಿಪ್ರಾಯಗಳನ್ನು ನಾವು ಸ್ವೀಕರಿಸುತ್ತೇವೆ ಎಂಬುದು ಇದರ ಅರ್ಥವಲ್ಲ’ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಶಾಂತಿ ಒಪ್ಪಂದದ ಬಳಿಕ ಮೊಜ್ತಬಾ ನೀಡಿರುವ ಮೊದಲ ಪ್ರತಿಕ್ರಿಯೆ ಇದಾಗಿದೆ.

ಬಂದರುಗಳ ಮೇಲಿನ ದಿಗ್ಬಂಧನ ತೆರವು

ಇರಾನ್‌ನ ಬಂದರುಗಳ ಮೇಲೆ ವಿಧಿಸಿದ್ದ ದಿಗ್ಬಂಧನವನ್ನು ಅಮೆರಿಕ ಸೇನೆಯು ತೆಗೆದುಹಾಕಿದೆ. ಈ ವಿಷಯವನ್ನು ಅಮೆರಿಕದ ಸೆಂಟ್ರಲ್ ಕಮಾಂಡ್ ತನ್ನ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಗುರುವಾರ ತಿಳಿಸಿದೆ.

ಶಾಂತಿ ಒಪ್ಪಂದದಂತೆ ಇರಾನ್, ಹೊರ್ಮುಜ್ ಜಲಸಂಧಿಯನ್ನು ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸಿದ್ದು, ಅದರ ಬೆನ್ನಲ್ಲೇ ಅಮೆರಿಕವು ದಿಗ್ಬಂಧನವನ್ನು ತೆಗೆದುಹಾಕಿದೆ. ‘ಆದರೂ, ಒಪ್ಪಂದದ ಎಲ್ಲ ಅಂಶಗಳು ಜಾರಿಯಾಗಿವೆ ಎಂಬುದು ಖಚಿತವಾಗುವವರೆಗೂ ಅಮೆರಿಕದ ಯುದ್ಧ ನೌಕೆಗಳು ಪರ್ಶಿಯನ್ ಕೊಲ್ಲಿಯಲ್ಲಿ ಇರಲಿವೆ’ ಎಂದು ಸೆಂಟ್ರಲ್ ಕಮಾಂಡ್ ಹೇಳಿದೆ.

ಮಾಜಿ ಶಾಸಕ ಲಿಂಗೇಶ್ ಸೇರಿ 12 ಜನರ ಬಂಧನ

ಪ್ರಜಾವಾಣಿ ವಾರ್ತೆ

ಕೆ.ಎಸ್. ಲಿಂಗೇಶ್

ಬೇಲೂರು(ಹಾಸನ): ಬಗರ ಹುಕುಂ ಸಮಿತಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅಕ್ರಮವಾಗಿ ಭೂ ಮಂಜೂರಾತಿ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಬೇಲೂರು ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ, ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಎಸ್. ಲಿಂಗೇಶ್ ಸೇರಿ 12 ಜನರನ್ನು ಶುಕ್ರವಾರ ಸಿಐಡಿ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರಿನಿಂದ ಬಂದಿದ್ದ ಸಿಐಡಿ ತಂಡ ತಾಲ್ಲೂಕಿನ ಹಳೇಬೀಡಿನ ಕರಿಕಟ್ಟಿಹಳ್ಳಿಯ ಮನೆಯಲ್ಲಿ ಲಿಂಗೇಶ್ ಅವರನ್ನು ಬಂಧಿಸಿ ಕರೆದೊಯ್ದು ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ಹಾಜರು ಪಡಿಸಿದೆ.

ಲಿಂಗೇಶ್ ಜೊತೆಗೆ ಅಂದಿನ ತಹಶೀಲ್ದಾರ್ ಮೋಹನ್ ಕುಮಾರ್, ರಾಜಸ್ವ ನಿರೀಕ್ಷಕರಾಗಿದ್ದ ನಾಗರಾಜು, ನಿಂಗರಾಜು, ಉದಿತ್, ಗ್ರಾಮ ಲೆಕ್ಕಾಧಿಕಾರಿಗಳಾದ ಬಸಪ್ಪ, ರಾಜ್ ಸಾಬ್, ಅಂಕೇಗೌಡ, ಸಾಗರ್, ರವಿನಾಯಕ್, ಲಿಂಗರಾಜು ಅವರನ್ನು ಬಂಧಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

‘70 ಲಕ್ಷ ಉದ್ಯೋಗ ಸೃಷ್ಟಿ’

ಪಿಎಂ–ವಿಬಿಆರ್‌ವೈ: ₹2,400 ಕೋಟಿ ಬಿಡುಗಡೆ

ನವದೆಹಲಿ (ಪಿಟಿಐ): ‘ಪ್ರಧಾನ ಮಂತ್ರಿ ವಿಕಸಿತ ಭಾರತ ರೋಜಗಾರ್ ಯೋಜನೆಯು (ಪಿಎಂ–ವಿಬಿಆರ್‌ವೈ) ಇದುವರೆಗೆ ದೇಶದಲ್ಲಿ 70 ಲಕ್ಷಕ್ಕೂ ಅಧಿಕ ಉದ್ಯೋಗ ಸೃಷ್ಟಿಸಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ನವದೆಹಲಿಯ ವಿಜ್ಞಾನ ಭವನದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಅವರು, ಮೊದಲ ಬಾರಿಗೆ ಉದ್ಯೋಗ ಪಡೆದ 15 ಲಕ್ಷ ಉದ್ಯೋಗಿಗಳು ಮತ್ತು ಅವರ ಉದ್ಯೋಗದಾತರಿಗೆ ಒಟ್ಟು ₹2,400 ಕೋಟಿ ಪ್ರೋತ್ಸಾಹಧನವನ್ನು ಬಿಡುಗಡೆ ಮಾಡಿದರು. ಈ ಹಣ ಫಲಾನುಭವಿಗಳ ಖಾತೆಗೆ ನೇರವಾಗಿ (ಡಿಬಿಟಿ) ಜಮೆ ಆಗಲಿದೆ.

ಹೊಸ ಉದ್ಯೋಗ ಸೃಷ್ಟಿಸುವ ಕಂಪನಿಗಳು ಅಥವಾ ಉದ್ಯೋಗದಾತರಿಗೆ ಸರ್ಕಾರವು ಉತ್ತೇಜನ ನೀಡುತ್ತದೆ. ಈ ಯೋಜನೆಯು ಮೊದಲ ಬಾರಿಗೆ ಉದ್ಯೋಗಕ್ಕೆ ಬರುವವರನ್ನು ಸಬಲೀಕರಿಸುವ, ಯುವಕರು ಮತ್ತು ಉದ್ಯಮದ ನಡುವೆ ಸೇತುವೆಯನ್ನು ನಿರ್ಮಿಸುವ ಕೆಲಸ ಮಾಡುತ್ತದೆ ಎಂದಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಪಿಎಂ–ವಿಬಿಆರ್‌ವೈ ಪ್ರೋತ್ಸಾಹಧನ ಬಿಡುಗಡೆ ಮಾಡಿದರು. ಕೇಂದ್ರ ಸಚಿವರಾದ ಮನಸುಖ್ ಮಾಂಡವೀಯ ಮತ್ತು ಶೋಭಾ ಕರಂದ್ಲಾಜೆ ಇದ್ದರು —ಪಿಟಿಐ ಚಿತ್ರ

ಮುಂಬರುವ ದಿನಗಳಲ್ಲಿ ಜಾಗತಿಕ ಬೆಳವಣಿಗೆ, ನಾವೀನ್ಯ ಮತ್ತು ಉದ್ಯಮಶೀಲತೆಯನ್ನು ಮುನ್ನಡೆಸುವಲ್ಲಿ ಭಾರತದ ಯುವಕರು ಮುಂಚೂಣಿಯಲ್ಲಿರುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಎರಡು ವರ್ಷದಲ್ಲಿ ಈ ಯೋಜನೆಯ ಅಡಿ 3.5 ಕೋಟಿ ಉದ್ಯೋಗ ಸೃಷ್ಟಿ ಮಾಡುವ ಉದ್ದೇಶ ಹೊಂದಿದ್ದು, ಸರ್ಕಾರವು ₹99,446 ಕೋಟಿ ನೆರವು ನೀಡಲಿದೆ. ಮೊದಲ ಬಾರಿಗೆ ಉದ್ಯೋಗಕ್ಕೆ ಸೇರುವವರಿಗೆ ₹15 ಸಾವಿರ ಮತ್ತು ಉದ್ಯೋಗದಾತರಿಗೆ ಪ್ರತಿ ಹೊಸ ಉದ್ಯೋಗಿಗೆ ಮಾಸಿಕ ₹3 ಸಾವಿರದವರೆಗೆ ಪ್ರೋತ್ಸಾಹಧನ ಸಿಗಲಿದೆ.

ಕಳೆದ ವರ್ಷದ ಆಗಸ್ಟ್ 1ರಂದು ಪ್ರಧಾನ ಮಂತ್ರಿ ವಿಕಸಿತ ಭಾರತ ರೋಜ್‌ಗಾರ್ ಯೋಜನೆಯನ್ನು ಆರಂಭಿಸಲಾಗಿತ್ತು.

ರಾಜ್ಯದಲ್ಲಿ ಹಲವೆಡೆ ಕಾರ್ಯಕ್ರಮ

ರಾಷ್ಟ್ರ ಮಟ್ಟದಲ್ಲಿ ನಡೆದ ಕಾರ್ಯಕ್ರಮದ ಭಾಗವಾಗಿ ರಾಜ್ಯದಲ್ಲಿ ಕಾರ್ಮಿಕರ ಭವಿಷ್ಯನಿಧಿ ಕೇಂದ್ರದ ವಿವಿಧ ವಲಯಗಳಲ್ಲಿ ಪ್ರೋತ್ಸಾಹಧನ ವಿತರಣೆ ಕಾರ್ಯಕ್ರಮ ನಡೆಯಿತು.

ಬೆಂಗಳೂರಿನ ರಾಜ ರಾಜೇಶ್ವರಿನಗರದ ಪ್ರಾದೇಶಿಕ ಇಪಿಎಫ್‌ಒ ಕಚೇರಿಯು ರಾಮನಗರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕಾರ್ಯಕ್ರಮ ಆಯೋಜಿಸಿತ್ತು. ಅದೇ ರೀತಿ ಬೆಂಗಳೂರು (ಕೇಂದ್ರ), ಬೆಳ್ಳಂದೂರು, ಎಲೆಕ್ಟ್ರಾನಿಕ್ ಸಿಟಿ, ಇಂದಿರಾನಗರ, ಕೋರಮಂಗಲ, ಮಲ್ಲೇಶ್ವರ, ಪೀಣ್ಯ, ಯಲಹಂಕ, ಕೆ.ಆರ್.ಪುರ, ತುಮಕೂರು ವಲಯ ಕೇಂದ್ರಗಳ ವತಿಯಿಂದ ಬೇರೆ ಬೇರೆ ಕಡೆ ಕಾರ್ಯಕ್ರಮ ನಡೆಯಿತು.

₹7,506 ಕೋಟಿ ಹೂಡಿಕೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ₹7,506 ಕೋಟಿ ಬಂಡವಾಳ ಹೂಡಿಕೆ ಮತ್ತು 28 ಸಾವಿರಕ್ಕೂ ಹೆಚ್ಚು ಉದ್ಯೋಗ ಸೃಷ್ಟಿ ಮಾಡಲಿರುವ 55 ಕೈಗಾರಿಕಾ ಯೋಜನೆಗಳಿಗೆ ಶುಕ್ರವಾರ ನಡೆದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆ ಒಪ್ಪಿಗೆ ನೀಡಿದೆ.

ಇವುಗಳಲ್ಲಿ 41 ಹೂಡಿಕೆಗಳು ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳನ್ನು ಹೊರತುಪಡಿಸಿ (ಬಿಯಾಂಡ್ ಬೆಂಗಳೂರು) ಉಳಿದ ಕಡೆಗಳಲ್ಲಿ ಆಗಲಿವೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.

ಇವುಗಳಲ್ಲಿ ನಾಲ್ಕು ಯೋಜನೆಗಳು ವಿದೇಶಿ ನೇರ ಹೂಡಿಕೆಯ ಯೋಜನೆಗಳಾಗಿವೆ. ತೈವಾನಿನ ಟೀಮಿಂಗ್ ಆಟೋಮೇಷನ್, ದಕ್ಷಿಣ ಕೊರಿಯಾದ ವೈ.ಜೆ. ಲಿಂಕ್, ಜರ್ಮನಿಯ ರೇವುಂ ಮತ್ತು ಜಪಾನ್ ಮೂಲದ ಶಿಂಕೋ ಕಂಪನಿಗಳು ಕ್ರಮವಾಗಿ ₹20 ಕೋಟಿ, ₹177.96 ಕೋಟಿ, ₹16.50 ಕೋಟಿ ಮತ್ತು ₹100 ಕೋಟಿ (₹314.46 ಕೋಟಿ) ಹೂಡಿಕೆ ಮಾಡುತ್ತಿವೆ. ಇವುಗಳಿಂದ ಒಟ್ಟು 503 ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದಿದ್ದಾರೆ.

ಒಪ್ಪಿಗೆ ನೀಡಲಾಗಿರುವ ಹೂಡಿಕೆ ಪ್ರಸ್ತಾವಗಳಲ್ಲಿ ₹50 ಕೋಟಿಗೂ ಹೆಚ್ಚು ಬಂಡವಾಳ ತೊಡಗಿಸಲಿರುವ ಯೋಜನೆಗಳ ಸಂಖ್ಯೆ 35ರಷ್ಟಿದೆ. ಹಾಗೆಯೇ 15 ಯೋಜನೆಗಳಿಂದ ತಲಾ ₹15 ಕೋಟಿಯಿಂದ ₹50 ಕೋಟಿವರೆಗೆ ಹೂಡಿಕೆ ಆಗಲಿದೆ. ಐದು ಕಂಪನಿಗಳು ಹೆಚ್ಚುವರಿ ಬಂಡವಾಳ ಹೂಡಿಕೆ ಮಾಡಲಿದ್ದು, ಇವುಗಳಿಂದ ₹223.61 ಕೋಟಿ ಹರಿದು ಬರಲಿದೆ. ಒಟ್ಟು 55 ಯೋಜನೆಗಳಲ್ಲಿ ಹೆಚ್ಚಿನವು ಏರೋಸ್ಪೇಸ್, ಇ.ಎಸ್.ಡಿ.ಎಂ, ಜನರಲ್ ಎಂಜಿನಿಯರಿಂಗ್ ಕ್ಷೇತ್ರಕ್ಕೆ ಸಂಬಂಧಪಟ್ಟಿವೆ ಎಂದು ಪಾಟೀಲ ಹೇಳಿದ್ದಾರೆ.

ಇತರೆಡೆ ಹೂಡಿಕೆಗಳು: ಕೇನ್ಸ್ ಎಲೆಕ್ಟ್ರಾನಿಕ್ಸ್ ಚಾಮರಾಜನಗರ ಜಿಲ್ಲೆಯಲ್ಲಿ ₹495 ಕೋಟಿ, ಎಸ್‌ಎಫ್‌ಒ ಟೆಕ್ನಾಲಜೀಸ್ ದೊಡ್ಡಬಳ್ಳಾಪುರದಲ್ಲಿ ₹490 ಕೋಟಿ, ಆರ್ಬಿಟ್ ಇಂಡಸ್ಟ್ರಿಯಲ್ ಪಾರ್ಕ್ ಕೋಲಾರದಲ್ಲಿ ₹454 ಕೋಟಿ, ಟೆರ್ರಾ ಸರ್ಕ್ಯೂಟ್ಸ್ ವಿಜಯಪುರದಲ್ಲಿ ₹441 ಕೋಟಿ, ಬೆಲಾಟ್ರಿಕ್ಸ್ ಏರೋಸ್ಪೇಸ್ ಬೆಂಗಳೂರು ಗ್ರಾಮಾಂತರದಲ್ಲಿ ₹404 ಕೋಟಿ, ಜಿಂದಾಲ್ ಪೋರ್ಟ್ ಬಳ್ಳಾರಿಯಲ್ಲಿ ₹380 ಕೋಟಿ, ಶಾಹಿ ಎಕ್ಸ್‌ಪೋರ್ಟ್ಸ್ ಕಲಬುರಗಿಯಲ್ಲಿ ₹337 ಕೋಟಿ, ಇನ್ಫ್ರಾಗಲಾಕ್ಸಿ ದಕ್ಷಿಣ ಕನ್ನಡದಲ್ಲಿ ₹300 ಕೋಟಿ, ಹೈಟೆಕ್ ಮೆಟಾಲಿಕ್ಸ್ ವಿಜಯಪುರದಲ್ಲಿ ₹250 ಕೋಟಿ, ಪ್ರಾಕ್ಸೈರ್ ಇಂಡಿಯಾ ಬೆಂಗಳೂರು ಗ್ರಾಮಾಂತರದ ಹೊಸಕೋಟೆಯಲ್ಲಿ ₹210 ಕೋಟಿ, ಶೋಭಾ ರಿಯಾಲ್ಟಿ ಬೆಂಗಳೂರು ನಗರ ಜಿಲ್ಲೆಯಲ್ಲಿ ₹201.15 ಕೋಟಿ, ಆರ್.ಎಂ.ಝಡ್ ಹೊಸಕೋಟೆಯ ಎಂ.ಹೊಸಹಳ್ಳಿಯಲ್ಲಿ ₹198.62 ಕೋಟಿ ರೂ. ಹೂಡಿಕೆ ಮಾಡಲಿವೆ ಎಂದು ವಿವರಿಸಿದ್ದಾರೆ.

ಅಲ್ಲದೇ, ಗದಗಿನಲ್ಲಿ ರೋನ್ ಪವರ್ ₹177.20 ಕೋಟಿ , ವಾಹಿನಿ ಪಾಲಿಟೆಕ್ ತುಮಕೂರಿನಲ್ಲಿ ₹170 ಕೋಟಿ, ಕೋಲಾರದಲ್ಲಿ ಏರಿಸ್ ರಿಫೈನರಿ ₹157.45 ಕೋಟಿ, ಜುರೋಜಿನ್ ಡೆವಲಪರ್ಸ್ ₹137 ಕೋಟಿ ಮತ್ತು ಅರ್ಬೆನೋ ರಿಯಾಲ್ಟಿ ₹125 ಕೋಟಿ, ಕೊಡಗಿನಲ್ಲಿ ಆಯತನ ಹಾಸ್ಪಿಟಾಲಿಟೀಸ್ ₹110.27 ಕೋಟಿ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಬಲ್ಕ್ ಲಿಕ್ವಿಡ್ ಸೊಲ್ಯೂಷನ್ಸ್ ₹110 ಕೋಟಿ ಬಂಡವಾಳ ತೊಡಗಿಸಲಿವೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ಸ್ಪರ್ಧೆಯಿಂದ ಓಡಿ ಹೋಗಲಾರೆ: ಕಿಯರ್ ಸ್ಟಾರ್ಮರ್

ಲಂಡನ್ (ಎಪಿ): ‘ಸ್ಪರ್ಧೆ ಎದುರಾದ ಸಂದರ್ಭದಲ್ಲಿ ನಾನು ನನ್ನ ಹುದ್ದೆ ತೊರೆದು ಓಡಿ ಹೋಗುವುದಿಲ್ಲ, ಬದಲಾಗಿ ಪ್ರಬಲ ಸ್ಪರ್ಧೆ ಒಡ್ಡುತ್ತೇನೆ’ ಎಂದು ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಹೇಳಿದ್ದಾರೆ.

ಕಿಯರ್ ಸ್ಟಾರ್ಮರ್

ಗ್ರೇಟರ್ ಮ್ಯಾಂಚೆಸ್ಟರ್‌ನ ಮೇಯರ್ ಆ್ಯಂಡಿ ಬರ್ನ್‌ಹ್ಯಾಮ್ ಅವರು ಈಚೆಗೆ ನಡೆದ ವಿಶೇಷ ಚುನಾವಣೆಯಲ್ಲಿ ಬ್ರಿಟನ್ ಸಂಸತ್ತಿಗೆ ಆಯ್ಕೆ ಆಗಿದ್ದಾರೆ. ಅವರು ಲೇಬರ್ ಪಕ್ಷದ ನಾಯಕ ಹಾಗೂ ದೇಶದ ಪ್ರಧಾನಿ ಸ್ಟಾರ್ಮರ್ ಅವರಿಗೆ ಪರ್ಯಾಯವಾಗಿ ಬೆಳೆಯಲು ಯತ್ನಿಸುತ್ತಿರುವ ಸಂದರ್ಭದಲ್ಲಿ ಈ ಹೇಳಿಕೆ ಹೊರಬಿದ್ದಿದೆ.

ಪಾಕ್ ಭಯೋತ್ಪಾದನೆಯ ‘ಪೆಡಂಭೂತ’

ವಿಶ್ವಸಂಸ್ಥೆ: ಪಾಕ್ ಆರೋಪಕ್ಕೆ ತಿರುಗೇಟು ನೀಡಿದ ಭಾರತ

ವಿಶ್ವಸಂಸ್ಥೆ: ‘ಭಯೋತ್ಪಾದಕರಿಗೆ ಆತಿಥ್ಯ, ತರಬೇತಿ ಮತ್ತು ನಿಯೋಜನೆ’ ಕಲ್ಪಿಸುವ ಪಾಕಿಸ್ತಾನವು ‘ಪೆಡಂಭೂತ’ ಎಂದು ಭಾರತವು ವಿಶ್ವಸಂಸ್ಥೆಯಲ್ಲಿ ಹೇಳಿದೆ.

‘ಪಾಕಿಸ್ತಾನವು ಭಯೋತ್ಪಾದನೆಯನ್ನು ಪೋಷಿಸುವುದು ಮತ್ತು ತಾನೇ ಸೃಷ್ಟಿಸಿದ ಪೆಡಂಭೂತ ತನ್ನ ಮೇಲೆಯೇ ತಿರುಗಿ ಬಿದ್ದಾಗ ಆಘಾತವನ್ನು ವ್ಯಕ್ತಪಡಿಸುವುದು ವಿರೋಧಾಭಾಸ’ ಎಂದು ಭಾರತ ಪ್ರತಿಪಾದಿಸಿತು.

ವಿಶ್ವಸಂಸ್ಥೆಯ ಹೈಕಮೀಷನರ್ ಅವರ ವಾರ್ಷಿಕ ವರದಿಯ ಕುರಿತ ಚರ್ಚೆಯ ಸಂದರ್ಭದಲ್ಲಿ ಪಾಕಿಸ್ತಾನ ಮತ್ತು ಇಸ್ಲಾಮಿಕ್ ಸಹಕಾರ ಸಂಘಟನೆಯು (ಒಐಸಿ) ಜಮ್ಮು ಮತ್ತು ಕಾಶ್ಮೀರದ ವಿಷಯವನ್ನು ಪ್ರಸ್ತಾಪಿಸಿದಾಗ, ವಿಶ್ವಸಂಸ್ಥೆಯಲ್ಲಿನ ಭಾರತದ ಶಾಶ್ವತ ಮಿಷನ್‌ನ ಮೊದಲ ಕಾರ್ಯದರ್ಶಿ ಅನುಪಮಾ ಸಿಂಗ್ ಅವರು ಇದಕ್ಕೆ ಶಕ್ತವಾದ ತಿರುಗೇಟು ನೀಡಿದರು.

‘ಪಾಕಿಸ್ತಾನ ಮತ್ತು ಒಐಸಿ ಮಾಡಿದ ಆಧಾರರಹಿತ ಮತ್ತು ದುರುದ್ದೇಶಪೂರಿತ ಆರೋಪಗಳನ್ನು ಭಾರತವು ಸ್ಪಷ್ಟವಾಗಿ ತಿರಸ್ಕರಿಸುತ್ತದೆ’ ಎಂದು ಸಿಂಗ್ ಹೇಳಿದರು.

‘ಜಮ್ಮು ಮತ್ತು ಕಾಶ್ಮೀರವು ಯಾವಾಗಲೂ ಭಾರತದ ಅವಿಭಾಜ್ಯ ಅಂಗ. ಮುಂದೆಯೂ ಹಾಗೆಯೇ ಇರುತ್ತದೆ. ಈ ಪ್ರದೇಶದ ಬಗೆಹರಿಯದ ಏಕೈಕ ಸಮಸ್ಯೆಯೆಂದರೆ ಅದು ಪಾಕಿಸ್ತಾನವು ಭಾರತದ ಪ್ರದೇಶಗಳನ್ನು ಅಕ್ರಮವಾಗಿ ಆಕ್ರಮಿಸಿಕೊಂಡಿರುವುದು ಮತ್ತು ಅದನ್ನು ಹಿಂತಿರುಗಿಸದಿರುವುದೇ ಇರುವುದಾಗಿದೆ’ ಎಂದರು.

‘ಸಿಂಧೂ ಜಲ ಒಪ್ಪಂದದ ಕುರಿತು ಭಾರತದ ನಿಲುವು ಎಲ್ಲರಿಗೂ ತಿಳಿದಿದೆ. ಪಹಲ್ಗಾಮ್ ದಾಳಿಯ ನಂತರ ದಶಕಗಳಷ್ಟು ಹಳೆಯದಾದ ಈ ಒಪ್ಪಂದವನ್ನು ಸ್ಥಗಿತಗೊಳಿಸಲಾಯಿತು. ಈ ಒಪ್ಪಂದ ಈಗ ಹಳತಾಗಿದೆ’ ಎಂದು ಹೇಳಿದರು.

ಸಿಂಧೂ ನದಿ ಒಪ್ಪಂದ: ಪಾಕ್ ದೂರು

ಇಸ್ಲಾಮಾಬಾದ್ (ಪಿಟಿಐ): ಭಾರತದಿಂದ ಸಿಂಧೂ ನದಿ ನೀರು ಒಪ್ಪಂದ (ಐಡಬ್ಲ್ಯುಟಿ) ಉಲ್ಲಂಘನೆ ಆಗಿರುವ ಕುರಿತು ಗಮನ ಹರಿಸುವಂತೆ ಪಾಕಿಸ್ತಾನದ ಉಪ ಪ್ರಧಾನಿ ಇಶಾಕ್ ದರ್ ಅವರು ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಮನವಿ ಮಾಡಿದ್ದಾರೆ.

1960ರಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವೆ ಸಿಂಧೂ ನದಿ ಒಪ್ಪಂದ ಆಗಿತ್ತು. 2025ರ ಏಪ್ರಿಲ್‌ನಲ್ಲಿ ಪಹಲ್ಗಾಮ್ ಭಯೋತ್ಪಾದಕ ದಾಳಿ ನಡೆದ ನಂತರ ಭಾರತ ಈ ಒಪ್ಪಂದವನ್ನು ಅಮಾನತಿನಲ್ಲಿರಿಸಿದೆ.

ಟ್ರಂಪ್ ಹೇಳಿಕೆಗೆ ಮೆಲೊನಿ ತಿರುಗೇಟು: ಇಟಲಿ ವಿದೇಶಾಂಗ ಸಚಿವರ ಅಮೆರಿಕ ಪ್ರವಾಸ ರದ್ದು

‘ಫೋಟೊಗಾಗಿ ಮೆಲೊನಿ ಬೇಡಿಕೊಂಡಿದ್ದರು’

ರೋಮ್ (ಎಪಿ): ‘ನನ್ನೊಂದಿಗೆ ಫೋಟೊ ತೆಗೆಸಿಕೊಳ್ಳಿ ಎಂದು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ ಅವರು ನನ್ನನ್ನು ಬೇಡಿಕೊಂಡರು’ ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಯು ವಿವಾದ ಸೃಷ್ಟಿಸಿದೆ. ಇಟಲಿ ವಿದೇಶಾಂಗ ಸಚಿವರು ಮುಂದಿನ ವಾರ ಕೈಗೊಳ್ಳಬೇಕಿದ್ದ ತಮ್ಮ ಅಮೆರಿಕ ಪ್ರವಾಸವನ್ನು ರದ್ದು ಮಾಡಿದ್ದಾರೆ.

ಇಟಲಿಯ ಸುದ್ದಿ ವಾಹಿನಿಯೊಂದಕ್ಕೆ ಟ್ರಂಪ್ ಅವರು ಸಂದರ್ಶನ ನೀಡಿದ್ದರು. ಮೂಲ ಸಂದರ್ಶನವನ್ನು ವಾಹಿನಿಯು ಪ್ರಸಾರ ಮಾಡಿಲ್ಲ. ಆದರೆ, ಟ್ರಂಪ್ ಅವರು ಮೆಲೊನಿ ಕುರಿತು ನೀಡಿದ ಹೇಳಿಕೆ ಭಾಗವನ್ನು ಮಾತ್ರವೇ ಡಬ್ ಮಾಡಿ ಆಡಿಯೊವೊಂದನ್ನು ವಾಹಿನಿ ಪ್ರಸಾರ ಮಾಡಿದೆ. ಜಿ7 ಶೃಂಗಸಭೆಗೆ ಸಂಬಂಧಿಸಿದಂತೆ ಉಕ್ರೇನ್ ಕುರಿತ ಪ್ರಶ್ನೆಗೆ ಟ್ರಂಪ್ ಅವರು ಮೆಲೊನಿ ಅವರನ್ನು ಪ್ರಸ್ತಾಪಿಸಿ ಈ ಹೇಳಿಕೆ ನೀಡಿದ್ದಾರೆ.

ಜಿ7 ಶೃಂಗಸಭೆಯ ವೇಳೆ ಟ್ರಂಪ್ ಹಾಗೂ ಮೆಲೊನಿ ಅವರು ಸೋಫಾದ ಮೇಲೆ ಕುಳಿತು ಮಾತುಕತೆ ನಡೆಸಿದ್ದರು —ಎಎಫ್‌ಪಿ ಚಿತ್ರ

ಟ್ರಂಪ್ ಅವರು ವಿರುದ್ಧ ಮೆಲೊನಿ ಅವರು ತೀವ್ರ ವಾಗ್ದಾಳಿ ನಡೆಸಿದ್ದಾರೆ. ‘ಟ್ರಂಪ್ ಅವರು ಒಂದನ್ನು ನೆನಪಿಟ್ಟುಕೊಳ್ಳಬೇಕು. ಇಟಲಿ ಅಥವಾ ನಾನು ಯಾವುದೇ ಕಾರಣಕ್ಕೂ ಬೇಡಿಕೊಳ್ಳುವುದಿಲ್ಲ’ ಎಂದು ‘ಎಕ್ಸ್’ನಲ್ಲಿ ವಿಡಿಯೊ ಹೇಳಿಕೆ ನೀಡಿದ್ದಾರೆ. ಈ ಹೇಳಿಕೆಯು ಇಟಲಿ ಮತ್ತು ಅಮೆರಿಕದ ಸಂಬಂಧ ಹಳಸುವಂತೆ ಮಾಡಿದೆ.

ಸಭೆಯ ವೇಳೆ ಟ್ರಂಪ್ ಹಾಗೂ ಮೆಲೊನಿ ಅವರು ಸೋಫಾವೊಂದರ ಮೇಲೆ ಇಬ್ಬರೇ ಕುಳಿತು ಮಾತುಕತೆ ನಡೆಸಿದ್ದರು. ಈ ವಿಡಿಯೊ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಟ್ರಂಪ್, ‘ಆಕೆಯೊಂದಿಗಿನ ಮಾತುಕತೆಯಲ್ಲಿ ನನಗೆ ಅಷ್ಟೇನೂ ಆಸಕ್ತಿ ಇರಲಿಲ್ಲ. ನಾನು ಹೆಚ್ಚೇನೂ ಮಾತನಾಡಲಿಲ್ಲ. ಆದರೆ, ನಾನು ಮಾತನಾಡಿದ್ದಕ್ಕೆ ಆಕೆಗೆ ಖುಷಿಯಾಗಿರಬಹುದು’ ಎಂದಿದ್ದಾರೆ.

ಆಕೆ ಬೇಡಿಕೊಂಡರು

ನನ್ನೊಂದಿಗೆ ಫೋಟೊ ತೆಗೆಸಿಕೊಳ್ಳಿ ಎಂದು ಆಕೆ ಬೇಡಿಕೊಂಡರು. ನನ್ನ ಜೊತೆ ಫೋಟೊ ತೆಗೆಸಿಕೊಳ್ಳುವುದಕ್ಕೆ ಆಕೆ ಬಹಳ ಆಸೆಪಟ್ಟಿದ್ದರು. ನಾನು ತೆಗೆಸಿಕೊಳ್ಳದೇ ಇರಬಹುದಿತ್ತು. ಆದರೆ, ಆಕೆಯ ಬಗ್ಗೆ ನನಗೆ ಬೇಸರವಾಯಿತು

ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

ಸಂಪೂರ್ಣ ಸುಳ್ಳು

ಟ್ರಂಪ್ ಹೇಳಿದ್ದು ಸಂಪೂರ್ಣ ಸುಳ್ಳು. ಹೇಳಿಕೆಯಿಂದ ನನಗೆ ಆಶ್ಚರ್ಯವಾಗಿದೆ. ಅವರು ಈ ರೀತಿ ಮಾಡುತ್ತಿರುವುದು ಇದು ಮೊದಲ ಬಾರಿ ಏನಲ್ಲ. ಮಿತ್ರ ದೇಶಗಳೊಂದಿಗೆ ಅಮೆರಿಕ ಅಧ್ಯಕ್ಷರು ಯಾಕೆ ಹೀಗೆ ವರ್ತಿಸುತ್ತಾರೆ ಎನ್ನುವುದೇ ತಿಳಿಯುತ್ತಿಲ್ಲ. ಶತ್ರು ದೇಶಗಳ ನಾಯಕರನ್ನು ಬಹಳ ಗೌರವಯುತವಾಗಿ ನಡೆಸಿಕೊಳ್ಳುತ್ತಾರೆ

ಜಾರ್ಜಿಯಾ ಮೆಲೊನಿ, ಇಟಲಿ ಪ್ರಧಾನಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಟೆಲಿಗ್ರಾಮ್: ನಿರ್ಬಂಧ ಎತ್ತಿಹಿಡಿದ ಹೈಕೋರ್ಟ್

ಕೇಂದ್ರ ಸರ್ಕಾರದ ಕ್ರಮ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿ ತಿರಸ್ಕೃತ ● ಸಂದೇಶ ತಿದ್ದುವ ಆಯ್ಕೆ ಜೂನ್ 30ರವರೆಗೆ ನಿಷ್ಕ್ರಿಯ

ನವದೆಹಲಿ (ಪಿಟಿಐ): ಜೂನ್ 21ರಂದು ನಡೆಯಲಿರುವ ನೀಟ್–ಯುಜಿ ಮರುಪರೀಕ್ಷೆಗೆ ಮುನ್ನ ಟೆಲಿಗ್ರಾಮ್ ಆ್ಯಪ್ ಬಳಕೆಯನ್ನು ತಾತ್ಕಾಲಿಕವಾಗಿ ನಿರ್ಬಂಧಿಸುವ ಕೇಂದ್ರ ಸರ್ಕಾರದ ನಿರ್ಧಾರ ಸರಿಯಾಗಿದೆ ಎಂದಿರುವ ದೆಹಲಿ ಹೈಕೋರ್ಟ್, ಈ ಬಗ್ಗೆ ಟೆಲಿಗ್ರಾಮ್ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿದೆ.

'ನಿರ್ಬಂಧಕ್ಕೆ ಕಾರಣಗಳನ್ನು ಒದಗಿಸಿಲ್ಲ ಎನ್ನುವ ಟೆಲಿಗ್ರಾಮ್‌ನ ಮನವಿಯನ್ನು ನಿಜವೆಂದು ಪರಿಗಣಿಸಲಾಗುವುದಿಲ್ಲ' ಎಂದಿರುವ ನ್ಯಾಯಮೂರ್ತಿ ತೇಜಸ್ ಕರಿಯಾ ಅವರಿದ್ದ ರಜಾಕಾಲದ ಪೀಠವು, 'ಈ ವಿಷಯವಾಗಿ ಎಲ್ಲ ವಾದಗಳನ್ನು ಪರಿಗಣಿಸಿದ್ದೇವೆ. ಟೆಲಿಗ್ರಾಮ್ ನಿಷೇಧಕ್ಕೆ ಕೇಂದ್ರ ಒದಗಿಸಿರುವ ಕಾರಣಗಳು ಸಾಕಷ್ಟಿವೆ. ಸರ್ಕಾರವು ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 69ಎ ಪ್ರಕಾರ ಕಾರ್ಯವಿಧಾನವನ್ನು ಅನುಸರಿಸಿದೆ. ಇದು ನ್ಯಾಯಿಕ ಪರಿಶೀಲನೆಗೆ ಮನವರಿಕೆ ಆಗಿದೆ' ಎಂದು ಅಭಿಪ್ರಾಯಪಟ್ಟಿತು.

ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿದ್ದ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಮತ್ತು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹಾಗೂ ಟೆಲಿಗ್ರಾಮ್ ಪರ ಹಾಜರಿದ್ದ ಹಿರಿಯ ವಕೀಲ ಧ್ರುವ ಮೆಹ್ತಾ ಅವರ ವಾದಗಳನ್ನು ಪೀಠವು ಗುರುವಾರ ಆಲಿಸಿತ್ತು.

'ಕೆಲವರಿಗೆ ಪರೀಕ್ಷೆ ಇದೆ ಎಂಬ ಕಾರಣಕ್ಕೆ, ಟೆಲಿಗ್ರಾಮ್ ಅಪ್ಲಿಕೇಷನ್ ಬಳಸುವ 15 ಕೋಟಿ ಬಳಕೆದಾರರ ಹಕ್ಕುಗಳನ್ನು ಹೇಗೆ ಮೊಟಕುಗೊಳಿಸಬಹುದು' ಎಂದು ಕೇಂದ್ರ ಸರ್ಕಾರವನ್ನು ಕೋರ್ಟ್ ಪ್ರಶ್ನಿಸಿತ್ತು.

ಐ.ಟಿ ಕಾಯ್ದೆಯಡಿ ಅಧಿಕಾರ

ರಾಷ್ಟ್ರೀಯ ಭದ್ರತೆ, ಕಾನೂನು ಸುವ್ಯವಸ್ಥೆ ಮತ್ತು ದೇಶದ ಸಾರ್ವಭೌಮತ್ವ ರಕ್ಷಿಸಲು ಯಾವುದೇ ಆನ್‌ಲೈನ್ ಮಾಹಿತಿ, ವೆಬ್‌ಸೈಟ್, ಅಥವಾ ಅಪ್ಲಿಕೇಷನ್ ಬಳಕೆಯ ಮೇಲೆ ಸಾರ್ವಜನಿಕರಿಗೆ ನಿರ್ಬಂಧ ವಿಧಿಸಲು ಕೇಂದ್ರ ಸರ್ಕಾರಕ್ಕೆ ಐ.ಟಿ ಕಾಯ್ದೆಯ ಸೆಕ್ಷನ್ 69ಎ ಅಧಿಕಾರ ಕಲ್ಪಿಸುತ್ತದೆ.

ಆದರೆ, ನಿರ್ಬಂಧವು ತಾರತಮ್ಯದ ವರ್ತನೆ ಮತ್ತು ಐ.ಟಿ ಕಾಯ್ದೆಯ ಸೆಕ್ಷನ್ 14ರ ಉಲ್ಲಂಘನೆ ಎಂದು ಟೆಲಿಗ್ರಾಮ್ ವಾದಿಸಿತ್ತು. ಜೂನ್ 9ರಂದು ಸರ್ಕಾರದಿಂದ ಸೂಚನೆ ಬಂದ ಒಂದು ಗಂಟೆಯಲ್ಲೇ ನೀಟ್ ಪರೀಕ್ಷೆಗೆ ಸಂಬಂಧಿಸಿದ ಕಾನೂನುಬಾಹಿರವಾದ 900ಕ್ಕೂ ಹೆಚ್ಚು ಲಿಂಕ್‌ಗಳನ್ನು ಟೆಲಿಗ್ರಾಮ್‌ನಿಂದ ತೆಗೆದುಹಾಕಿದ್ದಾಗಿ ಹೇಳಿಕೊಂಡಿತ್ತು.

ಈ ವಾದವನ್ನು ತಳ್ಳಿಹಾಕಿರುವ ನ್ಯಾಯಪೀಠವು, ಸೆಕ್ಷನ್ 69ಎ ಅಡಿಯಲ್ಲಿ ಟೆಲಿಗ್ರಾಮ್ ಬಳಕೆ ಮೇಲೆ ನಿರ್ಬಂಧ ಹೇರಲು ಕೇಂದ್ರಕ್ಕೆ ಅಧಿಕಾರ ಇದೆ. ಜತೆಗೆ ಸರ್ಕಾರ ಕೈಗೊಂಡ ಕ್ರಮಗಳು ಕಡಿಮೆ ನಿರ್ಬಂಧದಿಂದ ಕೂಡಿವೆ' ಎಂದು ಅಭಿಪ್ರಾಯಪಟ್ಟಿತು. ಟೆಲಿಗ್ರಾಮ್‌ನಲ್ಲಿ ಈಗಾಗಲೇ ಪೋಸ್ಟ್ ಮಾಡಲಾದ ಸಂದೇಶಗಳಿಗೆ (ಜೂನ್ 30ರವರೆಗೆ) ಸಂಪಾದನೆ ವೈಶಿಷ್ಟ್ಯವನ್ನು ನಿಷ್ಕ್ರಿಯಗೊಳಿಸಬೇಕು ಎಂಬ ಪ್ರತ್ಯೇಕ ಸೂಚನೆಯನ್ನೂ ನೀಡಲಾಗಿದೆ.

ಅಣಕು ಕಾರ್ಯಾಚರಣೆ

ನವದೆಹಲಿ (ಪಿಟಿಐ): ನೀಟ್ ಮರುಪರೀಕ್ಷೆಯನ್ನು ಸುಗಮ, ಸುರಕ್ಷಿತ, ಪಾರದರ್ಶಕವಾಗಿ ನಡೆಸುವ ಸಲುವಾಗಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಜೂನ್ 20ರಂದು ದೇಶದಾದ್ಯಂತ ಅಣಕು ಕಾರ್ಯಾಚರಣೆ ನಡೆಸಲಿದೆ.

'ಜೂನ್ 21ರಂದು ನಡೆಯಲಿರುವ ಮರುಪರೀಕ್ಷೆಗೆ, ಗೋಪ್ಯ ಸಾಮಗ್ರಿಗಳನ್ನು ಸುರಕ್ಷಿತವಾಗಿ ಸಾಗಿಸಲು ಜಿಲ್ಲಾಡಳಿತ, ಪೊಲೀಸ್ ಪಡೆ ಮತ್ತು ಬ್ಯಾಂಕುಗಳು ತಂಡದೊಂದಿಗೆ ಸಂಪೂರ್ಣ ಸಿದ್ಧತೆ ನಡೆಸಲಾಗಿದೆ. 2 ಲಕ್ಷಕ್ಕೂ ಅಧಿಕ ಸಿಬ್ಬಂದಿ ನಿಯೋಜನೆಗೊಂಡಿದ್ದಾರೆ' ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಎಸ್‌ಎಂಎಸ್, ಇ–ಮೇಲ್ ರವಾನೆ

ನವದೆಹಲಿ (ಪಿಟಿಐ): ನೀಟ್–ಯುಜಿ 2026 ಮರುಪರೀಕ್ಷೆಯ ಪ್ರವೇಶಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳುವಂತೆ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು (ಎನ್‌ಟಿಎ) ಅಭ್ಯರ್ಥಿಗಳಿಗೆ ಎಸ್‌ಎಂಎಸ್, ಇ–ಮೇಲ್ ಮತ್ತು ವಾಟ್ಸ್‌ಆ್ಯಪ್ ಮೂಲಕ ಸಂದೇಶಗಳನ್ನು ಕಳುಹಿಸಿದೆ.

ಮರುಪರೀಕ್ಷೆಯ ಪ್ರವೇಶಪತ್ರವನ್ನು ಈಗಾಗಲೇ ಡೌನ್‌ಲೋಡ್ ಮಾಡಿಕೊಂಡವರು ಮತ್ತೊಮ್ಮೆ ಡೌನ್‌ಲೋಡ್ ಮಾಡಿಕೊಳ್ಳುವ ಅಗತ್ಯವಿಲ್ಲ. ಈವರೆಗೆ ಡೌನ್‌ಲೋಡ್ ಮಾಡಿಕೊಳ್ಳದವರಿಗಾಗಿ ಸಂದೇಶ ಕಳುಹಿಸಲಾಗಿದೆ ಎಂದು ಎನ್‌ಟಿಎ ತಿಳಿಸಿದೆ.

ಅಧಿಕೃತ ಐ.ಡಿ 'ಎನ್‌ಐಸಿಪಿಎಸ್' ಮೂಲಕ ಎಸ್‌ಎಂಎಸ್ ಸಂದೇಶ ಮತ್ತು 'no-reply.neet.nta@nic.in' ವಿಳಾಸದ ಮೂಲಕ ಇ–ಮೇಲ್ ಸಂದೇಶಗಳನ್ನು ಕಳುಹಿಸಲಾಗಿದೆ ಎಂದು ಏಜೆನ್ಸಿ ಪ್ರಕಟಣೆಯ ಮಾರ್ಗಸೂಚಿಯಲ್ಲಿ ತಿಳಿಸಿದೆ.

'ಪ್ರವೇಶಪತ್ರ ಡೌನ್‌ಲೋಡ್‌ಗೆ neet.nta.nic.in ಮಾತ್ರ ಅಧಿಕೃತ ವೆಬ್‌ಸೈಟ್. ಎನ್‌ಟಿಎ ಯಾವುದೇ ಪಾವತಿ ಮಾಡುವಂತೆ ಕೇಳುವುದಿಲ್ಲ, ಪ್ರಶ್ನೆಪತ್ರಿಕೆ ಮತ್ತು ಉತ್ತರಗಳನ್ನು ಕಳುಹಿಸುವುದಿಲ್ಲ. ಸೋರಿಕೆಯಾದ ಪತ್ರಿಕೆ ಅಥವಾ ಪ್ರವೇಶ ಪತ್ರಿಕೆಯನ್ನು ಕಳುಹಿಸುವಂತೆ ಕೇಳುವುದಿಲ್ಲ. ಅಂಥ ಸಂದೇಶಗಳು ಬಂದರೆ ಪ್ರತಿಕ್ರಿಯೆ ನೀಡದೆ, ಏಜೆನ್ಸಿಗೆ ಮಾಹಿತಿ ನೀಡಬೇಕು' ಎಂದು ಸೂಚಿಸಿದೆ.

'ಪರೀಕ್ಷೆ ಮತ್ತು ಪರೀಕ್ಷಾ ಕೇಂದ್ರದ ಕುರಿತ ಮಾಹಿತಿಯನ್ನು ವಾಟ್ಸ್‌ಆ್ಯಪ್ ಮೂಲಕ ಕಳುಹಿಸಲಾಗುವುದು. 'ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ' ಮತ್ತು ನೀಲಿ ಚುಕ್ಕೆ ಇರುವ ಖಾತೆಯಿಂದ ಸಂದೇಶ ಬಂದಿರುವುದನ್ನು ಅಭ್ಯರ್ಥಿಗಳು ಖಚಿತಪಡಿಸಿಕೊಳ್ಳಬೇಕು. ಕೇವಲ 'ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ' ಹೆಸರು ಇದ್ದು ಅದರ ಜತೆ ನೀಲಿ ಚುಕ್ಕೆ ಇಲ್ಲದಿದ್ದರೆ ಅದು ಅಧಿಕೃತವಲ್ಲ ಎಂದು ಪರಿಗಣಿಸಬೇಕು' ಎಂದು ತಿಳಿಸಿದೆ.

ತುರ್ತು ವಿಚಾರಣೆಗೆ ನಕಾರ

ನೀಟ್ ಮರುಪರೀಕ್ಷೆ ಪ್ರಶ್ನಿಸಿ ಸಲ್ಲಿಕೆ ಆಗಿದ್ದ ಎರಡು ಪ್ರತ್ಯೇಕ ಅರ್ಜಿಗಳ ತುರ್ತು ವಿಚಾರಣೆಗೆ ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

'ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರ ನೇತೃತ್ವದ ಪೀಠವು ಜುಲೈನಲ್ಲಿ ಈ ಅರ್ಜಿಗಳ ವಿಚಾರಣೆ ನಡೆಸಲಿದೆ' ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ವಿ.ಮೋಹನ ಅವರಿದ್ದ ರಜಾಪೀಠವು ತಿಳಿಸಿತು.

ಅರ್ಜಿಯ ತುರ್ತು ವಿಚಾರಣೆ ನಡೆಸುವಂತೆ ವಕೀಲರೊಬ್ಬರು ಮಾಡಿದ ಮನವಿಗೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ನೀಟ್‌ಗೆ ಸಂಬಂಧಿಸಿದ ಎಲ್ಲ ಅರ್ಜಿಗಳನ್ನು ನ್ಯಾ. ನರಸಿಂಹ ಅವರ ಪೀಠ ವಿಚಾರಣೆ ನಡೆಸಲಿದೆ' ಎಂದು ಹೇಳಿತು. ನೀಟ್ ಮರುಪರೀಕ್ಷೆಯನ್ನು ಮುಂದೂಡುವಂತೆ ಕೇಂದ್ರ ಮತ್ತು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಅರ್ಜಿದಾರರು ಮನವಿ ಮಾಡಿದ್ದರು.

ವಿದ್ಯಾರ್ಥಿನಿ ಆತ್ಮಹತ್ಯೆ

ಲಖನೌ (ಪಿಟಿಐ): ನೀಟ್ ಮರುಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದ ಅಭ್ಯರ್ಥಿಯೊಬ್ಬರು ಉತ್ತರಪ್ರದೇಶದ ಲಖನೌನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನೀಟ್–ಯುಜಿ 2026 ರದ್ದಾದ ಬಳಿಕ ಈ ವಿದ್ಯಾರ್ಥಿನಿ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದರು ಎಂದು ಅವರ ಕುಟುಂಬದವರು ತಿಳಿಸಿದ್ದಾರೆ.

ವಿದ್ಯಾರ್ಥಿನಿ ಸುಹಾನಿ ಯಾದವ್ ಅವರು ತಮ್ಮ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

'ಸುಹಾನಿ ಮೇ 3ರಂದು ನಡೆದಿದ್ದ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ದೊರೆಯುವ ಭರವಸೆ ಹೊಂದಿದ್ದರು. ಪರೀಕ್ಷೆ ರದ್ದುಗೊಂಡಿದ್ದರಿಂದ ಖಿನ್ನತೆಗೆ ಒಳಗಾಗಿದ್ದರು. ಮೂರು ನಾಲ್ಕು ದಿನಗಳ ಬಳಿಕ ಮರು ಪರೀಕ್ಷೆಗೆ ತಯಾರಿ ನಡೆಸಲು ಆರಂಭಿಸಿದ್ದರು. ಆದರೆ, ತುಂಬಾ ಮಾನಸಿಕ ಒತ್ತಡದಲ್ಲಿದ್ದರು' ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ವೈದ್ಯಕೀಯ ವಿದ್ಯಾರ್ಥಿಗಳಿಗೆ ರಜೆ ಇಲ್ಲ

ದೇಶದ ಎಲ್ಲ ವೈದ್ಯಕೀಯ ಕಾಲೇಜುಗಳು ಮತ್ತು ತನ್ನ ವ್ಯಾಪ್ತಿಗೆ ಬರುವ ಎಲ್ಲ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಜೂನ್ 20 ಮತ್ತು 21ರಂದು ರಜೆ ನೀಡದಂತೆ ರಾಷ್ಟ್ರೀಯ ವೈದ್ಯಕೀಯ ಆಯೋಗ ನಿರ್ದೇಶನ ನೀಡಿದೆ.

ವೈದ್ಯಕೀಯ ವಿದ್ಯಾರ್ಥಿಗಳು ಈ ಹಿಂದೆ ನೀಟ್ ಪರೀಕ್ಷಾ ಪ್ರಕ್ರಿಯೆಗೆ ಧಕ್ಕೆ ತರುವ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಕಾರಣ ಈ ಭಾರಿ ಪರೀಕ್ಷೆ ಸುಗಮವಾಗಿ ನಡೆಯುವಂತೆ ಮಾಡಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಆಯೋಗ ತಿಳಿಸಿದೆ. ವಿದ್ಯಾರ್ಥಿಗಳ ಮೇಲೆ ನಿಗಾ ವಹಿಸುವಂತೆಯೂ ಆಯೋಗ ಸೂಚಿಸಿದೆ.

ಮೇಕೆದಾಟು ವಿರುದ್ಧ ತಮಿಳುನಾಡು ನಿರ್ಣಯ

ಚೆನ್ನೈ (ಪಿಟಿಐ): ಮೇಕೆದಾಟು ಬಳಿ ಸಮತೋಲನ ಜಲಾಶಯ ನಿರ್ಮಿಸುವ ಕರ್ನಾಟಕ ಸರ್ಕಾರದ ಯೋಜನೆಯನ್ನು ವಿರೋಧಿಸಿ ತಮಿಳುನಾಡು ವಿಧಾನಸಭೆ ಶುಕ್ರವಾರ ಸರ್ವಾನುಮತದ ನಿರ್ಣಯ ಅಂಗೀಕರಿಸಿದೆ.

ಸಿ.ಜೋಸೆಫ್ ವಿಜಯ್

ಅಲ್ಲದೆ ಈ ವಿಷಯಕ್ಕೆ ಸಂಬಂಧಿಸಿದಂತೆ ತಮಿಳು ನಾಡು ಸರ್ಕಾರ ತೆಗೆದುಕೊಳ್ಳುವ ಎಲ್ಲ ಕ್ರಮಗಳನ್ನೂ ಬೆಂಬಲಿಸಿದೆ.

ಕರ್ನಾಟಕದ ಜತೆಗಿನ ಸುಮಾರು 13 ವರ್ಷಗಳ ವಿವಾದದ ಕುರಿತು ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಸರ್ಕಾರದ ನಿರ್ಣಯವನ್ನು ಸದನದಲ್ಲಿ ಮಂಡಿಸಿದರು. ವಿರೋಧ ಪಕ್ಷದ ನಾಯಕ ಉದಯನಿಧಿ ಸ್ಟಾಲಿನ್ ಮತ್ತು ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ. ಪಳನಿಸ್ವಾಮಿ ಸೇರಿದಂತೆ ವಿರೋಧ ಪಕ್ಷಗಳ ಸದಸ್ಯರು ನಿರ್ಣಯವನ್ನು ಬೆಂಬಲಿಸಿದರು.

ಟಿವಿಕೆ ಸರ್ಕಾರದ ಭಾಗವಾಗಿರುವ ಕಾಂಗ್ರೆಸ್ ಸಹ ಕರ್ನಾಟಕದ ಯೋಜನೆಯನ್ನು ವಿರೋಧಿಸಿ ನಿರ್ಣಯಕ್ಕೆ ಬೆಂಬಲ ಸೂಚಿಸಿತು.

'ಕಾವೇರಿ ಜಲ ವಿವಾದ ಕುರಿತು ನ್ಯಾಯಮಂಡಳಿಯ ಅಂತಿಮ ತೀರ್ಪು ಮತ್ತು ಸುಪ್ರೀಂ ಕೋರ್ಟ್‌ನ ತೀರ್ಪನ್ನು ಗೌರವಿಸದೆ ಕರ್ನಾಟಕ ಸರ್ಕಾರ ಏಕಪಕ್ಷೀಯವಾಗಿ ಮೇಕೆದಾಟುವಿನಲ್ಲಿ ಜಲಾಶಯ ನಿರ್ಮಿಸಲು ಮುಂದಾಗಿರುವುದು ಸ್ವೀಕಾರಾರ್ಹವಲ್ಲ. ಅದಕ್ಕೆ ಸದನ ಬಲವಾದ ಆಕ್ಷೇಪಣೆ ದಾಖಲಿಸುತ್ತದೆ' ಎಂದು ಮುಖ್ಯಮಂತ್ರಿ ವಿಜಯ್ ಹೇಳಿದರು.

'ಮೇಕೆದಾಟು ಯೋಜನೆಯನ್ನು ಹೊಸ ವಿವಾದವೆಂದು ಪರಿಗಣಿಸಬೇಕು ಮತ್ತು ಅಂತರರಾಜ್ಯ ನದಿ ನೀರು ವಿವಾದ ಕಾಯ್ದೆ–1956ರ ಅಡಿ ಹೊಸ ನ್ಯಾಯಮಂಡಳಿ ಸ್ಥಾಪಿಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕು' ಎಂದು ಡಿಎಂಕೆ ನಾಯಕ ಉದಯನಿಧಿ ತಿಳಿಸಿದರು.

'ಮೇಕೆದಾಟುವಿನಲ್ಲಿ ಯಾವುದೇ ಅಣೆಕಟ್ಟು ಕಟ್ಟಬಾರದು ಎಂಬುದು ಡಿಎಂಕೆಯ ದೃಢ ನಿಲುವು. ಈ ಯೋಜನೆಗೆ ತಡೆಯೊಡ್ಡಲು ತೆಗೆದುಕೊಳ್ಳುವ ಎಲ್ಲ ಕಾನೂನು ಕ್ರಮಗಳನ್ನು ಪಕ್ಷ ಬೆಂಬಲಿಸುತ್ತದೆ' ಎಂದರು.

'ಈ ಯೋಜನೆ ತಡೆಯಲು ಸರ್ಕಾರ ಕೈಗೊಳ್ಳುವ ಎಲ್ಲ ಕಾನೂನು ಹೋರಾಟಗಳನ್ನು ಪಕ್ಷ ಬೆಂಬಲಿಸುತ್ತದೆ' ಎಂದು ಎಐಎಡಿಎಂಕೆ ನಾಯಕ ಪಳನಿಸ್ವಾಮಿ ಹೇಳಿದರು. ಈ ಹಿಂದೆ 2014ರಲ್ಲಿ ಜಯಲಲಿತಾ ನೇತೃತ್ವದ ಸರ್ಕಾರ, 2015ರಲ್ಲಿ ಒ. ಪನ್ನೀರ್‌ಸೆಲ್ವಂ, 2018ರಲ್ಲಿ ಪಳನಿಸ್ವಾಮಿ, 2022ರಲ್ಲಿ ಎಂ.ಕೆ ಸ್ಟಾಲಿನ್ ನೇತೃತ್ವದ ಸರ್ಕಾರದ ಅವಧಿಯಲ್ಲಿ ತಮಿಳು ನಾಡು ವಿಧಾನಸಭೆಯು ಮೇಕೆದಾಟು ಯೋಜನೆ ವಿರೋಧಿಸಿ ಸರ್ವಾನುಮತದ ನಿರ್ಣಯ ಅಂಗೀಕರಿಸಿತ್ತು.

ಟಿಎಂಸಿ: 20 ಸಂಸದರ ಅನರ್ಹಕ್ಕೆ 20 ಪ್ರತ್ಯೇಕ ಅರ್ಜಿ ಸಲ್ಲಿಕೆ

ನವದೆಹಲಿ (ಪಿಟಿಐ): ತಮ್ಮ ಪಕ್ಷದ 20 ಭಿನ್ನಮತೀಯ ಸಂಸದರನ್ನು ಅನರ್ಹಗೊಳಿಸಬೇಕು ಎಂದು ಲೋಕಸಭೆಯಲ್ಲಿ ತೃಣ ಮೂಲ ಕಾಂಗ್ರೆಸ್‌ನ ನಾಯಕ ಅಭಿಷೇಕ್ ಬ್ಯಾನರ್ಜಿ ಅವರು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಶುಕ್ರವಾರ 20 ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಿದ್ದಾರೆ.

'ಸ್ವಯಂಪ್ರೇರಿತರಾಗಿ ಪಕ್ಷದ ಸದಸ್ಯತ್ವವನ್ನು ತ್ಯಜಿಸಿದವರು ಸಂಸದ ಸ್ಥಾನದಿಂದಲೂ ಅನರ್ಹರಾಗುತ್ತಾರೆ ಎಂಬುದು ಸಂವಿಧಾನದ 10ನೇ ಪರಿಚ್ಛೇದದಲ್ಲಿ ಸ್ಪಷ್ಟವಾಗಿದೆ. ಈ ಕಾರಣದಿಂದ, ಪಕ್ಷ ತೊರೆದ ಎಲ್ಲ 20 ಸಂಸದರನ್ನು ಅನರ್ಹಗೊಳಿಸಬೇಕು' ಎಂದು ತಿಳಿಸಿದರು.

'ಮೂರನೇ ಎರಡರಷ್ಟು ಸದಸ್ಯರು ಪಕ್ಷ ತೊರೆದು ಬೇರೆ ಪಕ್ಷದೊಂದಿಗೆ ವಿಲೀನಗೊಂಡರೆ ಅವರನ್ನು ಅನರ್ಹ ಮಾಡುವಂತಿಲ್ಲ ಎಂಬ ನಿಯಮ ಶಾಸಕಾಂಗ ಪಕ್ಷಕ್ಕಷ್ಟೇ ಅನ್ವಯಿಸುವುದಿಲ್ಲ, ಬದಲಾಗಿ ಇಡೀ ಪಕ್ಷಕ್ಕೇ ಅನ್ವಯಿಸುತ್ತದೆ' ಎಂದು ಅವರು ಪ್ರತಿಪಾದಿಸಿದರು.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಸಂಕ್ಷಿಪ್ತ ಸುದ್ದಿ

ಕಾಲ್ತುಳಿತ: ಖುದ್ದು ಹಾಜರಾಗಲು ಅಲ್ಲು ಅರ್ಜುನ್‌ಗೆ ನೋಟಿಸ್

ಹೈದರಾಬಾದ್ (ಪಿಟಿಐ): 'ಪುಷ್ಪ 2' ಸಿನಿಮಾ ಪ್ರೀಮಿಯರ್ ಶೋ ವೇಳೆ ನಡೆದ ಕಾಲ್ತುಳಿತದಲ್ಲಿ ಮಹಿಳೆ ಸಾವಿಗೀಡಾದ ಪ್ರಕರಣದ ವಿಚಾರಣೆಗೆ ಜೂನ್ 22ರಂದು ಖುದ್ದಾಗಿ ಹಾಜರಾಗುವಂತೆ ತೆಲುಗು ನಟ ಅಲ್ಲು ಅರ್ಜುನ್ ಮತ್ತು ಇತರ ಆರೋಪಿಗಳಿಗೆ ನಗರ ನ್ಯಾಯಾಲಯವು ನೋಟಿಸ್ ಜಾರಿ ಮಾಡಿದೆ.

ಅಲ್ಲು ಅರ್ಜುನ್

ಕಳೆದ ವರ್ಷ ಡಿಸೆಂಬರ್ 4ರಂದು ಇಲ್ಲಿನ ಸಂಧ್ಯಾ ಚಿತ್ರಮಂದಿರದಲ್ಲಿ ನಡೆದ ಪ್ರೀಮಿಯರ್ ಶೋ ವೇಳೆ ಸಂಭವಿಸಿದ ಕಾಲ್ತುಳಿತದಲ್ಲಿ ಮಹಿಳೆಯೊಬ್ಬರು ಮೃತಪಟ್ಟು, ಅವರ 8 ವರ್ಷದ ಮಗು ಗಾಯಗೊಂಡಿತ್ತು. ಡಿ.13ರಂದು ಅಲ್ಲು ಅರ್ಜುನ್ ಅವರನ್ನು ಬಂಧಿಸಿದ್ದ ಪೊಲೀಸರು, ಡಿ.24ರಂದು ಒಟ್ಟು 23 ಜನರ ವಿರುದ್ಧ ಆರೋಪ ಪಟ್ಟಿ ಸಲ್ಲಿಸಿದ್ದರು.

ಕೋಲ್ಕತ್ತ: ಇಂಡಿಗೊ ವಿಮಾನಕ್ಕೆ ಬಡಿದ ಸಿಡಿಲು

ಕೋಲ್ಕತ್ತ (ಪಿಟಿಐ): ಕೋಲ್ಕತ್ತ ವಿಮಾನ ನಿಲ್ದಾಣದಲ್ಲಿ, ಗುಡುಗು ಸಹಿತ ಮಳೆ ಸುರಿಯುತ್ತಿದ್ದ ವೇಳೆ ಇಂಡಿಗೊ ಎ320 ವಿಮಾನಕ್ಕೆ ಸಿಡಿಲು ಬಡಿದಿದೆ ಎಂದು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಗರ್ತಲಾಗೆ ತೆರಳಲು ವಿಮಾನವು ಏರೋಬ್ರಿಡ್ಜ್ 56ಎಲ್‌ನಲ್ಲಿ ನಿಂತಿದ್ದಾಗ ಘಟನೆ ನಡೆದಿದೆ. ಸಿಡಿಲು ಬಡಿದ ಕಾರಣ ವಿಮಾನದಲ್ಲಿ ವಿದ್ಯುತ್ ಸ್ಥಗಿತಗೊಂಡಿತು. ಘಟನೆ ನಡೆದಾಗ 141 ಪ್ರಯಾಣಿಕರು ಹಾಗೂ 6 ಸಿಬ್ಬಂದಿ ವಿಮಾನದಲ್ಲಿದ್ದರು. ಈ ವೇಳೆ ಯಾರಿಗೂ ತೊಂದರೆಯಾಗಿಲ್ಲ ಎಂದರು. ಮುನ್ನೆಚ್ಚರಿಕೆ ಕ್ರಮವಾಗಿ ಪ್ರಯಾಣಿಕರನ್ನು ಕೆಳಗಿಳಿಸಿ, ಬೇರೊಂದು ವಿಮಾನದಲ್ಲಿ ಕಳುಹಿಸಲಾಯಿತು.

ಪರಶುರಾಮನಂತೆ ರಾಹುಲ್ ಚಿತ್ರಣ: ಬಿಜೆಪಿ ಕಿಡಿ

ನವದೆಹಲಿ (ಪಿಟಿಐ): 'ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯ 56ನೇ ಜನ್ಮದಿನಾಚರಣೆ ವೇಳೆ ಅವರನ್ನು ಪರಶುರಾಮ ಎಂದು ಬಿಂಬಿಸುವ ಮೂಲಕ ಕಾಂಗ್ರೆಸ್ ಪಕ್ಷವು ಹಿಂದೂಗಳ ನಂಬಿಕೆಯನ್ನು ಅವಮಾನಿಸಿದೆ' ಎಂದು ಬಿಜೆಪಿ ಶುಕ್ರವಾರ ಆರೋಪಿಸಿದೆ.

ಯುವ ಕಾಂಗ್ರೆಸ್ ಕಾರ್ಯಕರ್ತರು ವಾರಾಣಸಿಯ ಗಂಗಾ ನದಿಯಲ್ಲಿ ರಾಹುಲ್ ಗಾಂಧಿ ಅವರನ್ನು ಪರಶುರಾಮರಂತೆ ಚಿತ್ರಿಸಿ, ಜನ್ಮದಿನ ಆಚರಿಸಿದರು. 'ಕಾಂಗ್ರೆಸ್‌ಗೆ ಗಾಂಧಿ ದೇವರಾಗಿರಬಹುದು. ಆದರೆ ಹಿಂದೂಗಳಿಗಲ್ಲ. ಹಿಂದೂ ನಂಬಿಕೆಯನ್ನು ಕಾಂಗ್ರೆಸ್ ಅವಮಾನಿಸಿದೆ' ಎಂದು ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲಾ 'ಎಕ್ಸ್'ನಲ್ಲಿ ಆರೋಪಿಸಿದ್ದಾರೆ.

ಕಾಂಗ್ರೆಸ್ ತಿರುಗೇಟು: ಬಿಜೆಪಿಯು ಪರಶುರಾಮರ ಹಕ್ಕುಸ್ವಾಮ್ಯವನ್ನು ಹೊಂದಿದೆಯೇ ಎಂದು ಪ್ರಶ್ನಿಸಿರುವ ಕಾಂಗ್ರೆಸ್, ರಾಮ ಮಂದಿರಕ್ಕೆ ಮೀಸಲಾದ 'ಕಾಣಿಕೆ ಹಣ' ಕಳ್ಳತನಕ್ಕೆ ನಾಥೂರಾಮ್ ಅನುಯಾಯಿಗಳು ಮೊದಲು ಉತ್ತರಿಸಬೇಕು ಎಂದಿದೆ.

ಪರಶುರಾಮನಂತೆ ರಾಹುಲ್ ಅವರನ್ನು ಬಿಂಬಿಸುವ ಚಿತ್ರ –ಪಿಟಿಐ ಚಿತ್ರ

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ವಿಶ್ವೇಶ್ವರಯ್ಯ ನಾಲಾ ವಿಭಾಗ, ಮಂಡ್ಯ
ದೂ : 08232–225046, ಇ–ಮೇಲ್ : vcdnmndya@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ :03/2026–27 ದಿ:14.05.2026
ದ್ವಿ–ಲಕೋಟೆ ಪದ್ಧತಿ

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು/ಬೆಂಗಳೂರು ಇವರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಕಾಮಗಾರಿಗೆ ಐಟಂವಾರು ದರದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಒಟ್ಟು ಕಾಮಗಾರಿಗಳ ಸಂಖ್ಯೆ–04, ಟೆಂಡರ್‌ಗಿಟ್ಟ ಕನಿಷ್ಟ ಮೊತ್ತ ರೂ. 100.00 ಲಕ್ಷಗಳಿಂದ ಗರಿಷ್ಠ ಮೊತ್ತ ರೂ. 10,000.00 ಲಕ್ಷಗಳು, ಕೆಲಸ ಪೂರ್ಣಗೊಳಿಸಲು ನಿಗಧಿ ಪಡಿಸಿರುವ ಅವಧಿ 120 ದಿನಗಳು (ಮಳೆಗಾಲ ಸೇರಿ) ಮತ್ತು 540ದಿನಗಳು (ಮಳೆಗಾಲ ಬಿಟ್ಟು) ಇ.ಎಂ.ಡಿ ಶುಲ್ಕವನ್ನು ಟೆಂಡರಿಗಿಟ್ಟ ಮೊತ್ತಕ್ಕೆ ಶೇ 2.0% & 1.0% ರಷ್ಟು ಇ–ಪೇಮೆಂಟ್ ಮೂಲಕ ಸಂದಾಯ ಮಾಡುವುದು. Date of access in e-portal: As per e-portal, ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿ ಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ: As per e-portal, ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: As per e-portal, ಆರ್ಥಿಕ ಬಿಡ್ ತೆರೆಯುವ ದಿನಾಂಕ : As per e-portal.
ಹೆಚ್ಚಿನ ವಿವರಗಳಿಗೆ kppp.karnataka.gov.in ನಲ್ಲಿ ಹಾಗೂ ಈ ಕಛೇರಿಯ ದೂರವಾಣಿ ಸಂಖ್ಯೆ 08232 225046 ನಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಕಾವೇರಿ ನೀರಾವರಿ ನಿಗಮ(ನಿ), ವಿ.ಸಿ.ವಿಭಾಗ, ಮಂಡ್ಯ
ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/221/2026–27

ಪೊಲೀಸ್ ಇಲಾಖೆ
ಪೊಲೀಸ್ ಮಹಾನಿರೀಕ್ಷಕರವರ ಕಚೇರಿ, ಪೊಲೀಸ್ ಗಣಕ ವಿಭಾಗ
7ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು –560001.
ದೂರವಾಣಿ: 080–22353871 mail: dgppcw@ksp.gov.in

ಸಂಖ್ಯೆ 12:/ಸಂಗ್ರಹ/ಡಿಜಿಪಿ/ಪಿಸಿಡಬ್ಲ್ಯೂ/2025–26 ದಿನಾಂಕ: 19.06.2026

ಇ–ಟೆಂಡರ್ ಪ್ರಕಟಣೆ

ಪೊಲೀಸ್ ಗಣಕ ವಿಭಾಗ, ಕರ್ನಾಟಕ ರಾಜ್ಯ ಪೊಲೀಸ್ ಬೆಂಗಳೂರು ರವರಿಂದ ವಿವಿಧ ಉಪಕರಣ/ತಂತ್ರಾಂಶಗಳ ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (https://kppp.karnataka.gov.in) ಮೂಲಕ ಟೆಂಡರ್‌ಗಳನ್ನು ಈ ಕೆಳಕಂಡಂತೆ ಆಹ್ವಾನಿಸಲಾಗಿದೆ.

ಕ. ಸಂ.	ಟೆಂಡರ್ ವಿವರಗಳು	ಟೆಂಡರ್ ಸಂಖ್ಯೆ, ದಿನಾಂಕ	ಅಂದಾಜು ಮೌಲ್ಯ ರೂ. ಲಕ್ಷಗಳಲ್ಲಿ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	Procurement of Video Management Application	KSP/2026/27/ IND0597 (Call-2)	93.00	30.06.2026 17.30 HRS
2	Purchase of Biometric Attendence Device	GeM/2026/B/ 7666818 (Call-2)	35.15	30.06.2026 17.30 HRS

ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಇತರೆ ಮಾಹಿತಿಯನ್ನು https://kppp.karnataka.gov.in ನಲ್ಲಿ ಲಭ್ಯವಿರುತ್ತದೆ.

ಸಹಿ/– ಪೊಲೀಸ್ ಮಹಾನಿರೀಕ್ಷಕರು
ಪೊಲೀಸ್ ಗಣಕ ವಿಭಾಗ ರವರ ಪರವಾಗಿ
ಬೆಂಗಳೂರು
DIPR/CP/1268/SA/2026-27

ಕರ್ನಾಟಕ ಸರ್ಕಾರ
ಕರ್ನಾಟಕ ಪರೀಕ್ಷಾ ಪ್ರಾಧಿಕಾರ
18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012.
ದೂರವಾಣಿ: 080-23361786, 23564583, ಫ್ಯಾಕ್ಸ್: 080-23461576
ಇ–ಮೇಲ್: keaauthority-ka@nic.in / keaacts2013@gmail.com
ಸಂಖ್ಯೆ: ಕಾನಿ/ಕಪಪ್ರಾ/ಲೆಶಾ–04/ಸಿಆರ್–98/2026–27 ದಿನಾಂಕ: 18/06/2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಅರ್ಹ ಸಂಸ್ಥೆಗಳಿಂದ **"ಎಲ್‌ಇಡಿ ವಾಲ್, ಡಿಸ್ಪ್ಲೇ, ಸ್ಪೀಕರ್ ಮತ್ತು ಇತರೆ ವಸ್ತುಗಳನ್ನು ಸರಬರಾಜು ಮಾಡಿ, ಅಳವಡಿಸಿ, ನಿರ್ವಹಣೆ"** ಗಾಗಿ ಅಲ್ಪಾವಧಿ ಇ–ಟೆಂಡರ್ ಅನ್ನು ರಾಜ್ಯ ಸರ್ಕಾರದ ಇ–ಗವರ್ನೆನ್ಸ್ ಪೋರ್ಟಲ್‌ನಲ್ಲಿ "ಎರಡು ಬಿಡ್ ವ್ಯವಸ್ಥೆಯಲ್ಲಿ" ಬಿಡ್‌ಗಳನ್ನು ಆಹ್ವಾನಿಸಿದೆ. Tender reference no. KEACET/2026-27/IND0021 Dated: 17/06/2026.
ಆಸಕ್ತ ಅರ್ಹ ಬಿಡ್‌ದಾರರು ಕರ್ನಾಟಕ ರಾಜ್ಯ ಸರ್ಕಾರದ ಇ–ಗವರ್ನೆನ್ಸ್ ಪೋರ್ಟಲ್: **https://kppp.karnataka.gov.in** ನಲ್ಲಿ ಟೆಂಡರ್ ಡಾಕ್ಯುಮೆಂಟ್ ಪಡೆದು ತಮ್ಮ ಇ–ಬಿಡ್‌ಗಳನ್ನು **ದಿನಾಂಕ 25/06/2026 ಸಂಜೆ 05.29 ರೊಳಗೆ ಸಲ್ಲಿಸುವುದು.**

ಸಹಿ/–
DIPR/CP/RO1248/AAPL/2026-27 ಕಾರ್ಯ ನಿರ್ವಾಹಕ ನಿರ್ದೇಶಕರು, ಕಪಪ್ರಾ

ಕರ್ನಾಟಕ ಸರ್ಕಾರ
ಕರ್ನಾಟಕ ಪರೀಕ್ಷಾ ಪ್ರಾಧಿಕಾರ
18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012.
ದೂರವಾಣಿ: 080-23361786, 23564583, ಫ್ಯಾಕ್ಸ್: 080-23461576
ಇ–ಮೇಲ್: keaauthority-ka@nic.in / keaacts2013@gmail.com
ಸಂಖ್ಯೆ: ಕಾನಿ/ಕಪಪ್ರಾ/ಲೆಶಾ–04/ಸಿಆರ್–96/2026–27 ದಿನಾಂಕ: 18/06/2026

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಅರ್ಹ ಸಂಸ್ಥೆಗಳಿಂದ **"ಕೆಇಎ ಪುಸ್ತಕ ವಿನ್ಯಾಸ, ಮುದ್ರಣ & ಸರಬರಾಜು ಮಾಡಲು"** ಇ–ಟೆಂಡರ್ ಅನ್ನು "ಎರಡು ಬಿಡ್ ವ್ಯವಸ್ಥೆಯಲ್ಲಿ" ರಾಜ್ಯ ಸರ್ಕಾರದ ಇ–ಗವರ್ನೆನ್ಸ್ ಪೋರ್ಟಲ್ ನಲ್ಲಿ ಆಹ್ವಾನಿಸಿರುತ್ತದೆ. ಟೆಂಡರ್ ಉಲ್ಲೇಖ ಸಂಖ್ಯೆ: KEACET/2026-27/IND 0020 ದಿನಾಂಕ: 16/06/2026 ಮತ್ತು **"ಕೆಇಎಗೆ ತಿಂಡಿ ಮತ್ತು ಊಟಗಳನ್ನು ತಯಾರಿಸಿ, ಸರಬರಾಜು ಮಾಡಿ ವಿತರಿಸಲು"** ಇ–ಟೆಂಡರ್ ಅನ್ನು "ಎರಡು ಬಿಡ್ ವ್ಯವಸ್ಥೆಯಲ್ಲಿ" ರಾಜ್ಯ ಸರ್ಕಾರದ ಇ–ಗವರ್ನೆನ್ಸ್ ಪೋರ್ಟಲ್ ನಲ್ಲಿ ಆಹ್ವಾನಿಸಿರುತ್ತದೆ: ಟೆಂಡರ್ ಉಲ್ಲೇಖ ಸಂಖ್ಯೆ: KEACET/2026-27/IND0022 ದಿನಾಂಕ: 18/06/2026.
ಆಸಕ್ತ ಅರ್ಹ ಬಿಡ್‌ದಾರರು ಕರ್ನಾಟಕ ರಾಜ್ಯ ಸರ್ಕಾರದ ಇ–ಗವರ್ನೆನ್ಸ್ ಪೋರ್ಟಲ್: **https://kppp.karnataka.gov.in** ನಲ್ಲಿ ಟೆಂಡರ್ ಡಾಕ್ಯುಮೆಂಟ್ ಪಡೆದು ತಮ್ಮ ಇ–ಬಿಡ್‌ಗಳನ್ನು ಕ್ರಮವಾಗಿ **ದಿನಾಂಕ 01/07/2026 ಸಂಜೆ 5.29 ರೊಳಗೆ ಮತ್ತು ದಿನಾಂಕ 03/07/2026 ಸಂಜೆ 5.29 ರೊಳಗೆ ಸಲ್ಲಿಸುವುದು.**

ಸಹಿ/–
DIPR/CP/RO1247/AAPL/2026-27 ಕಾರ್ಯ ನಿರ್ವಾಹಕ ನಿರ್ದೇಶಕರು, ಕಪಪ್ರಾ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ
ಪಂಚಾಯತರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ
ಸಂಖ್ಯೆ: ಕಾನಿಅ/ಪಂರಾಇಂ/ವಿಕ/ತಾಶಾ/ಟೆಂಡರ/2026–27/1098 ದಿನಾಂಕ : 18/06/2026

:: ಇ–ಪ್ರೊಕ್ಯೂರಮೆಂಟ್ ಟೆಂಡರ ಪ್ರಕಟಣೆ – 3ನೇ ಕರೆ (ದ್ವಿ–ಲಕೋಟೆ ಪದ್ಧತಿಯಲ್ಲಿ) ::

1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ: Construction of Four Class Rooms and Others to Govt Higher Primary School at Dandgund Village in Chittapur Taluka Dise Code 29040402601 under KKRDB Indent No.24679/Call-3, 2) ಲೆಕ್ಕ ಶೀರ್ಷಿಕೆ : ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಯೋಜನೆ, 3) ಟೆಂಡರಿಗಿಟ್ಟ ಅಂದಾಜು ಮೊತ್ತ: ರೂ. **55,34,692.38**, 4) ಗುತ್ತಿಗೆದಾರರ ಅರ್ಹತೆ: 3ನೇ ದರ್ಜೆ ಮತ್ತು ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ: **17.06.2026 ರಿಂದ 29.06.2026 ಸಾಯಂಕಾಲ 4:00 ಗಂಟೆವರೆಗೆ**, 6) ಟೆಂಡರ ಅರ್ಜಿ ಬೆಲೆ: ಇ–ಪ್ರೊಕ್ಯೂರಮೆಂಟ್ ನಿಯಮಾನುಸಾರ, 7) ಇ.ಎಂ.ಡಿ.: ರೂ. 1,11,000.00, 8) ಟೆಂಡರ ಸಲ್ಲಿಸುವ ದಿನಾಂಕ: **17.06.2026 ರಿಂದ 29.06.2026 ಸಾಯಂಕಾಲ 4:00 ಗಂಟೆವರೆಗೆ**, 9) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **30.06.2026 ಸಾಯಂಕಾಲ 4:00 ಗಂಟೆ ನಂತರ**, 10) ಆರ್ಥಿಕ ಬಿಡ್ ತೆರೆಯುವ ದಿನಾಂಕ: **02.07.2026 ಬೆಳಿಗ್ಗೆ 11:00 ಗಂಟೆ ನಂತರ**, 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕರ್ನಾಟಕ ಗ್ರಾಮೀಣ ಬ್ಯಾಂಕ ಎದುರಿಗೆ ಕುಸನೂರ ರಸ್ತೆ ರಾಜಾಪೂರ ಕಲಬುರಗಿ, 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಪಂಚಾಯತರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/232/ಕೆ.ಎಸ್.ಎಂ.ಸಿ.&ಎ/2026–27

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ನೊಂದಾಯಿತ ಕಚೇರಿ: 9ನೇ ಮಹಡಿ, 'ಇ' ಮತ್ತು 'ಎಫ್' ಬ್ಲಾಕ್, ಕಾವೇರಿ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು–560 009.
ದೂರವಾಣಿ ಸಂಖ್ಯೆ: 23118888. ವೆಬ್‌ಸೈಟ್: https://ashraya.karnataka.gov.in, e-mail: rgrhclgmtech@gmail.com
ಸಂ: RGHCL 01 (GEN)31 2026-27 ದಿನಾಂಕ: 19.06.2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ)

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದಿಂದ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗೆ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅಲ್ಪಾವಧಿ ಟೆಂಡರ್ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 04.07.2026.

ವಿವರಗಳು ಕೆಳಕಂಡಂತಿವೆ

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಮೊತ್ತ (ಜಿ.ಎಸ್.ಟಿ ಹೊರತುಪಡಿಸಿ) (ರೂ.ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ.ಲಕ್ಷಗಳಲ್ಲಿ)
1	ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ವತಿಯಿಂದ ವಿವಿಧ ಜಿಲ್ಲೆಗಳಲ್ಲಿ 08 ಸ್ಥಳಗಳು ಜಿ+1 ಮಾದರಿಯಲ್ಲಿ (ಪ್ಯಾಕೇಜ್ 2) ಮಹಿಳಾ ಕಾಲೇಜು ಕಟ್ಟಡ ನಿರ್ಮಾಣದ ಸಂಬಂಧ (ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಕೋಲಾರ, ತುಮಕೂರು, ರಾಮನಗರ) (Fixed Price No Variation) Indent No: RGRHCL/2025-26/BD/WORK_INDENT53/CALL-3	3669.41	36.69
2	ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕು, ಜಗಳೂರು ಗ್ರಾಮಗಳಲ್ಲಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕೆ ಪಿ ಎಸ್ ಮಾದರಿ ಉರ್ದು ಶಾಲಾ ಕಟ್ಟಡ (New work) ಕಾಮಗಾರಿಗಳನ್ನು ಜಿ+3 ಮಾದರಿಯಲ್ಲಿ ನಿರ್ಮಾಣದ ಸಂಬಂಧ (ಪ್ಯಾಕೇಜ್ 3D) (Fixed Price No Variation) Indent No: RGRHCL/2026-27/BD/WORK_INDENT89/CALL-2	502.16	7.53
3	ಧಾರವಾಡ ಜಿಲ್ಲೆ, ಆಳ್ನಾವರ ಸ್ಥಳಗಳಲ್ಲಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕೆ ಪಿ ಎಸ್ ಉರ್ದು ಶಾಲಾ ಜಿ+2 ಮಾದರಿಯಲ್ಲಿ ಕಟ್ಟಡ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ (Extension Work) (ಪ್ಯಾಕೇಜ್ 6A) (Fixed Price No Variation) Indent No: RGRHCL/2026-27/BD/WORK_INDENT103/CALL-2	384.49	5.76

ಕಾಮಗಾರಿಯ / ಇನ್ನಿತರೆ ವಿವರಗಳನ್ನು https://kppp.karnataka.gov.in / https://ashraya.karnataka.gov.in ಗಳಲ್ಲಿ ನೋಡಬಹುದು

ಸಹಿ/– ಪ್ರಧಾನ ವ್ಯವಸ್ಥಾಪಕರು (ಸಾ ಅ)
DIPR/CP/1269/SA/2026-27

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ನ್ಯಾಕ್ ಎ' ಮಾನ್ಯತೆ, ಆಸ್ತಿ ಅಧಿಕಾರಿಗಳ ಕಛೇರಿ,
ನಾಯಕ್ ಭವನ, ಗಾಕೃವಿಕೆ. ಬೆಂಗಳೂರು–560 065.
ಸಂಖ್ಯೆ.ಆಅ/ಟಿ.ಎನ್/7/2026–27, ದಿನಾಂಕ :15–06–2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಕಾಮಗಾರಿ ಕೆಲಸಗಳನ್ನು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–1 ಮತ್ತು 2ರಂತೆ ನೋಂದಣಿ ಪಡೆದ ಕೆಪಿಡಬ್ಲ್ಯೂಡಿ / ಪಿಡಬ್ಲ್ಯೂಡಿ/ ಗುತ್ತಿಗೆದಾರರುಗಳಂದ ಕ್ರಮಸಂಖ್ಯೆ.1 ರಿಂದ 4ರವರೆಗಿನ ಕಾಮಗಾರಿಗಳಿಗೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ಕಾಮಗಾರಿಯ ವಿವರಗಳು ವೆಬ್‌ಸೈಟ್ **https://www.kppp.karnataka.gov.in.**ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಮಾದರಿಯಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.

ಮೇಲಿನ ಕಾಮಗಾರಿಯು ದ್ವಿಲಕೋಟೆ ಪದ್ಧತಿಯಲ್ಲಿರುತ್ತದೆ. ದ್ವಿಲಕೋಟೆ ಪದ್ಧತಿಯ ಷರತ್ತುಗಳ ವಿವರಗಳನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ರಂತೆ ಅಪ್‌ಲೋಡ್ ಮಾಡಲಾಗಿದೆ.

ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು **www.kppp.karnataka.gov.in** ಇಂದ ಪಡೆಯಬಹುದು. ಟೆಂಡರ್ ಸಲ್ಲಿಸುವಕೊನೆ ದಿನಾಂಕ: **25–06–2026 ರಂದು ಸಾಯಂಕಾಲ 4.00 ಗಂಟೆಯವರೆಗೆ** ಆಗಿರುತ್ತದೆ. ತಾಂತ್ರಿಕ ಬಿಡ್ಡನ್ನು **ದಿನಾಂಕ: 27–06–2026 ರಂದು ಬೆಳಗ್ಗೆ 10.30ಕ್ಕೆ** ತೆರೆಯಲಾಗುವುದು ಮತ್ತು ಹಣಕಾಸಿನ ಬಿಡ್ಡನ್ನು **ದಿನಾಂಕ: 30–06–2026 ರಂದು ಬೆಳಗ್ಗೆ 10.30ಕ್ಕೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ **ದೂರವಾಣಿ ಸಂಖ್ಯೆ. 080–23332765 ರಲ್ಲಿ** ಸಂಪರ್ಕಿಸುವುದು. ಇ–ಪ್ರೊಕ್ಯೂರ್‌ಮೆಂಟ್‌ನ ಸಹಾಯವಾಣಿ: **support@eprochelpdesk.com** ಅಥವಾ **8046010000 ಮತ್ತು 8068948777.**

ಸಹಿ/–
ಆಸ್ತಿ ಅಧಿಕಾರಿಗಳು
DIPR/CP/RO1246/AAPL/2026-27

ಕರ್ನಾಟಕ ಸರ್ಕಾರ
ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ –585401.
Email: eokvafsu@gmail.com, ಕಛೇರಿ ದೂರವಾಣಿ: 08482–245361
ಸಂ: ಆ.ಅ/ಕಪಪಮೀವಿವಿ/ಟೆ.ನಂ–148–Call–2/ಹೊ.ಗು /2026–27 ದಿನಾಂಕ: 18.06.2026

ಅಲ್ಪಾವಧಿ ಟೆಂಡರ ಪ್ರಕಟಣೆ

1) ಸೇವೆಯ ವಿವರ Engaging non-teaching service personnel for Veterinary College, Puttur through outsourcing. 2) ಸೇವೆಯ ಅಂದಾಜು ಮೊತ್ತ **Rs.70,31,480.00 ವರ್ಷಕ್ಕೆ**, 3) ಗುತ್ತಿಗೆದಾರರ ಅರ್ಹತೆ ವಿವರ e-portal ನಲ್ಲಿನಮೂದಿಸಿದಂತೆ, 4) ಸೇವೆಯ ಟೆಂಡರ ಮೊತ್ತದ ವಿವರ **Rs.70,31,480.00 ವರ್ಷಕ್ಕೆ**, 5) ಟೆಂಡರ ಅರ್ಜಿಯು ಬೆಲೆ ಮತ್ತು ಇ.ಎಮ್.ಡಿ ಮೊತ್ತದ ವಿವರ e-portal ನಲ್ಲಿನಮೂದಿಸಿದಂತೆ, 6) ಪೂರ್ವ ಬಿಡ ಸಭೆ–ಆಸ್ತಿ ಅಧಿಕಾರಿಗಳವರ ಕಛೇರಿ, ಕರ್ನಾಟಕ ಪಶು ವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ, ವಿಶ್ವವಿದ್ಯಾಲಯ, ನಂದಿನಗರ, ಬೀದರ– 585226 **24.06.2026** ರಂದು **11.00 ಗಂಟೆಗೆ**, 7) ಟೆಂಡರ ಫಾರಂ ಸಲ್ಲಿಸಲು ಅಂತಿಮ **ದಿನಾಂಕ 06.07.2026 up to 5.00 PM**, 8) ತಾಂತ್ರಿಕ ಬಿಡ ಟೆಂಡರ್ ತೆರೆಯುವ **ದಿನಾಂಕ 08.07.2026 at 11.30 AM**, 9) ಮೂಲ ಟೆಂಡರ ದಾಖಲೆಗಳೊಂದಿಗೆ ಅಪ್‌ಲೋಡ ಮಾಡಿದ ಟೆಂಡರ ದಾಖಲೆಗಳ ಪರಿಶೀಲನೆ ಮತ್ತು ಸಂಸ್ಥೆಗಳು / ಏಜೆನ್ಸಿಗಳಿಂದ ಕೆಲಸದ ವಿಧಾನದ ಪ್ರಸ್ತುತಿ. ಟೆಂಡರ ವೈಯಕ್ತಿಕವಾಗಿ ಮೂಲ ಟೆಂಡರ ದಾಖಲೆಗಳೊಂದಿಗೆ ಬರಬೇಕು ಮತ್ತು ಅದರ ಒಂದು ನೋಟರೈಸ್ಡ್ ಪ್ರತಿಗಳನ್ನು ಆಸ್ತಿ ವಿಭಾಗ, ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾಲಯ, ನಂದಿನಗರ, ಬೀದರ 585226 ಕ್ಕೆ ಸಲ್ಲಿಸಬೇಕು. (ಒಂದು ವೇಳೆ ಅಂದು ರಜೆ ಘೋಷಣೆಯಾದರೆ, ಮರುದಿನ ಕೆಲಸದ ಸಮಯವನ್ನು ಪರಿಗಣಿಸಲಾಗುವುದು). ಮೂಲ ದಾಖಲಾತಿ ಪರಿಶೀಲನೆಗೆ ಹಾಜರಾಗಲು ಏಜೆನ್ಸಿಗಳು ತಪ್ಪಿದಲ್ಲಿ ಅಂತಹ ಏಜೆನ್ಸಿಗಳ ಟೆಂಡರನ್ನು ತಿರಸ್ಕರಿಸಲಾಗುವುದು. **09.07.2026 at 11.00 AM** (In case the above date is declared as a holiday, verification will done on next working day) 10) ಫೈನಾನ್ಸಿಯಲ ಬಿಡ ಟೆಂಡರ ತೆರೆಯುವ ದಿನಾಂಕ **13.07.2026 at 11.30 AM**, 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ ವಿಳಾಸ, ದೂರವಾಣಿ ಸಂಖ್ಯೆ ಆಸ್ತಿ ಅಧಿಕಾರಿಗಳ ಕಛೇರಿ, ಕಪಪಮೀವಿವಿ, ನಂದಿನಗರ, ಬೀದರ 08482–245446, 12) ಅಂತರ್ಜಾಲ ತಾಣದ ವಿಳಾಸ e-procurement portal- https://kppp.karnataka.gov.in

ಸಹಿ/– ಆಸ್ತಿ ಅಧಿಕಾರಿಗಳು
ಕಪಪಮೀವಿವಿ, ಬೀದರ.
ವಾ.ಸಾ.ಸಂ.ಇ/ಬೀದರ/68/ಕೆಎಸ್‌ಎಂಸಿ&ಎ/2026–27

ಎಸ್‌ಐಆರ್: ಸಂವಹನಕ್ಕೆ ಅವಕಾಶ ಕಲ್ಪಿಸಲು ಆಗ್ರಹ

ಪ್ರಜಾವಾಣಿ ವಾರ್ತೆ


ರಮೇಶ್ ಬಾಬು

ಬೆಂಗಳೂರು: 'ಕರ್ನಾಟಕದಲ್ಲಿ ನಡೆಯುತ್ತಿರುವ ಎಸ್‌ಐಆರ್ ಸಂದರ್ಭದಲ್ಲಿ ಚುನಾಯಿತ ಜನಪ್ರತಿನಿಧಿಗಳು ಮತ್ತು ಮತಗಟ್ಟೆ ಮಟ್ಟದ ಅಧಿಕಾರಿಗಳ (ಬಿಎಲ್‌ಒ) ನಡುವೆ ವ್ಯವಸ್ಥಿತ ಸಂವಹನಕ್ಕೆ ಅವಕಾಶ ಕಲ್ಪಿಸಲು ಸೂಕ್ತ ನಿರ್ದೇಶನ ನೀಡಬೇಕು' ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್ ಬಾಬು ಮನವಿ ಮಾಡಿದ್ದಾರೆ.

ಈ ಕುರಿತು ಪತ್ರ ಬರೆದಿರುವ ರಮೇಶ್ ಬಾಬು, 'ಮತದಾರರ ಪಟ್ಟಿಯ ಸಮಗ್ರತೆ ಹಾಗೂ ನಿಖರತೆಯು ಬಿಎಲ್‌ಒಗಳ ಕರ್ತವ್ಯ ನಿರ್ವಹಣೆಯ ಮೇಲೆ ಅವಲಂಬಿತವಾಗಿದೆ. ಸಂಸದರು, ಶಾಸಕರು ಹಾಗೂ ಪರಿಷತ್ ಸದಸ್ಯರು ಜನರಿಂದ ಚುನಾಯಿತರಾಗಿರುವುದರಿಂದ, ಮತದಾರರ ನೋಂದಣಿ, ಎಣಿಕೆ ನಮೂನೆಗಳು ತಲುಪದಿರುವುದು, ಮತದಾರರ ಹೆಸರುಗಳ ಲೋಪ, ದಾಖಲೆಗಳಲ್ಲಿ ಕಂಡುಬರುವ ದೋಷಗಳು, ದುರ್ಬಲ ವರ್ಗಗಳ ಜನರು ಎದುರಿಸುತ್ತಿರುವ ತೊಂದರೆಗಳು ಹಾಗೂ ಇತರ ಸ್ಥಳೀಯ ಚುನಾವಣಾ ಸಂಬಂಧಿತ ಸಮಸ್ಯೆಗಳ ಕುರಿತು ಸಾರ್ವಜನಿಕರಿಂದ ನಿರಂತರವಾಗಿ ಮಾಹಿತಿ ಮತ್ತು ದೂರುಗಳನ್ನು ಸ್ವೀಕರಿಸುತ್ತಾರೆ. ಈ ಕಾರಣಕ್ಕೆ ಜನಪ್ರತಿನಿಧಿಗಳು ಮತ್ತು ಬಿಎಲ್‌ಒಗಳು ಹಾಗೂ ಮೇಲ್ವಿಚಾರಣಾ ಚುನಾವಣಾ ಅಧಿಕಾರಿಗಳ ನಡುವೆ ಪಾರದರ್ಶಕ ಹಾಗೂ ಸುವ್ಯವಸ್ಥಿತ ಸಂವಹನ ವ್ಯವಸ್ಥೆ ಅಗತ್ಯವಾಗಿದೆ' ಎಂದಿದ್ದಾರೆ.

'ಅಲ್ಲದೆ, ಮತದಾರರ ಹೆಸರುಗಳ ಲೋಪ, ಎಣಿಕೆ ನಮೂನೆಗಳ ವಿತರಣೆ ಆಗದಿರುವುದು ಹಾಗೂ ಇತರೆ ನೈಜ ದೂರುಗಳನ್ನು ಜನಪ್ರತಿನಿಧಿಗಳು ಸಲ್ಲಿಸಿದರೆ ಅವುಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕ್ಷೇತ್ರ ಮಟ್ಟದ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು' ಎಂದೂ ಪತ್ರದಲ್ಲಿ ಕೋರಿದ್ದಾರೆ.

'ಹಸಿರು ಕಾಡು' ಸೃಷ್ಟಿಸಲು ಬಿಡಿಎ ಸಂಕಲ್ಪ

15 ಲಕ್ಷ ಸಸಿ ನೆಟ್ಟು ಗಿನ್ನಿಸ್ ದಾಖಲೆ ಮಾಡುವ ಗುರಿ
• ಮೂರು ವರ್ಷ ಪೋಷಿಸಲು ₹100 ಕೋಟಿ ವೆಚ್ಚ

₹100 ಕೋಟಿ	₹20 ಕೋಟಿ	₹10 ಕೋಟಿ	₹70 ಕೋಟಿ
ಸಸಿ ಅಭಿಯಾನದ ಒಟ್ಟು ವೆಚ್ಚ	ಬಿಡಿಎ ವೆಚ್ಚ ಮಾಡುವ ಹಣ	ಕಾರ್ಮಿಕ ಇಲಾಖೆಯ ವೆಚ್ಚ	ಗಿಡ ನೆಟ್ಟ ಮೇಲೆ ಮೂರು ವರ್ಷ ಎನ್‌ಜಿಒಗಳು ಮಾಡುವ ವೆಚ್ಚ

27 ಜೂನ್	244 ಎಕರೆ	50 ಸಾವಿರ	₹1 ಕೋಟಿ
15 ಲಕ್ಷ ಸಸಿ ನೆಡುವ ಗುರಿ	ಸಸಿ ನೆಡಲು ಗುರುತಿಸಿರುವ ಪ್ರದೇಶ	ಸಸಿ ನೆಡಲು ಭಾಗವಹಿಸುವ ಜನ	ಗಿನ್ನಿಸ್ ದಾಖಲೆಗೆ ಅರ್ಜಿ ಶುಲ್ಕ

ಎಲ್ಲಿ ಗಿಡ?
- ನಾಡಪ್ರಭು ಕೆಂಪೇಗೌಡ ಬಡಾವಣೆ
- ಬನಶಂಕರಿ 6ನೇ ಹಂತ
- ಡಾ. ಶಿವರಾಮ ಕಾರಂತ ಲೇಔಟ್

• ಆರ್. ಮಂಜುನಾಥ್

ಇದು ಸಸಿ ನೆಡುವ ಕಾರ್ಯಕ್ರಮ ಮಾತ್ರವಲ್ಲ, ನಮ್ಮ ನಗರದ ಪರಿಸರ ಭವಿಷ್ಯವನ್ನು ಸುರಕ್ಷಿತಗೊಳಿಸುವ ಜನಾಂದೋಲನ
ಎನ್.ಎ. ಹ್ಯಾರಿಸ್, ಅಧ್ಯಕ್ಷ, ಬಿಡಿಎ

ನಗರದಲ್ಲಿ ಬೃಹತ್ ಪ್ರಮಾಣದಲ್ಲಿ ಹಸಿರು ಪ್ರದೇಶ ಮತ್ತು ಪರಿಸರ ಸಂರಕ್ಷಣಾ ವಲಯ ನಿರ್ಮಿಸುವುದು ನಮ್ಮ ಗುರಿ
ಪಿ. ಮಣಿವಣ್ಣನ್, ಆಯುಕ್ತ, ಬಿಡಿಎ

ಬೆಂಗಳೂರು: ನಗರವನ್ನು 'ಕಾಂಕ್ರೀಟ್ ಕಾಡ'ನ್ನಾಗಿಸುವಲ್ಲಿ ಸಾಕಷ್ಟು ಕೊಡುಗೆ ನೀಡಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಇದೀಗ 'ಹಸಿರು ಕಾಡು' ಸೃಷ್ಟಿಸಿ, ಗಿನ್ನಿಸ್ ದಾಖಲೆ ಮಾಡುವ ಸಂಕಲ್ಪ ತೊಟ್ಟಿದೆ.

ಬಡಾವಣೆಗಳನ್ನು ನಿರ್ಮಿಸಿ ಸಾವಿರಾರು ಕುಟುಂಬಗಳಿಗೆ ನಿವೇಶನ ನೀಡಿ, ನಗರದ ಮೂಲಸೌಕರ್ಯಕ್ಕಾಗಿ ರಸ್ತೆ, ಮೇಲ್ಸೇತುವೆ, ಕೆಳಸೇತುವೆ ಯಂತಹ ಕಾಂಕ್ರೀಟ್ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿರುವ ಬಿಡಿಎ, ತನ್ನ 50ನೇ ವರ್ಷಾಚರಣೆ ಅಂಗವಾಗಿ ನಗರದಲ್ಲಿ 'ಹಸಿರು ಕಾಡು' ಬೆಳೆಸುವತ್ತ ನೋಟ ಹರಿಸಿದೆ.

ನಗರದ ಹೃದಯ ಭಾಗಕ್ಕೆ ಹೊಂದಿ ಕೊಂಡಂತಿರುವ ಕೆಂಪೇಗೌಡ, ಬನಶಂಕರಿ, ಶಿವರಾಮ ಕಾರಂತ ಬಡಾವಣೆಗಳಲ್ಲಿ 15 ಲಕ್ಷ ಗಿಡಗಳನ್ನು ನೆಟ್ಟು, ಜೂನ್ 27ರಂದು ನಾಡಪ್ರಭು ಕೆಂಪೇಗೌಡರ ದಿನಾಚರಣೆಗೆ ವಿಶೇಷ ಕೊಡುಗೆ ನೀಡಲು ನಿರ್ಧರಿಸಲಾಗಿದೆ. ಕೆರೆ– ರಾಜಕಾಲುವೆಗಳ ಬಫರ್ ವಲಯ, ಉದ್ಯಾನ ಮತ್ತು ಸಾರ್ವಜನಿಕ ಸ್ಥಳಗಳನ್ನು ಸಸಿ ನೆಡಲು ಈಗಾಗಲೇ ಗುರುತಿಸಲಾಗಿದೆ. ಇದಕ್ಕೆ ಬೇಕಾದ ತಯಾರಿಯನ್ನೂ ಮಾಡಿಕೊಳ್ಳಲಾಗಿದ್ದು, ಐದು ಲಕ್ಷ ಗಿಡಗಳು ಬಂದಿವೆ. ಉಳಿದ, 10 ಲಕ್ಷ ಹಾಗೂ ಹೆಚ್ಚುವರಿಯಾಗಿ 50 ಸಾವಿರ ಗಿಡಗಳನ್ನು ಮುಂದಿನ ವಾರದ ಆರಂಭದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಸಾಗಣೆ ಮಾಡಿಕೊಳ್ಳಲಾಗುವುದು.

ಬಿಡಿಎ ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಲಕ್ಷಾಂತರ ಗಿಡಗಳನ್ನು ನೆಡುತ್ತಿದೆ. ಅವುಗಳು ಉಳಿದ ಬಗ್ಗೆ ಲೆಕ್ಕಾಚಾರವಿಲ್ಲ. ಆದರೆ, ಈ ಬಾರಿ 15 ಲಕ್ಷ ಗಿಡಗಳನ್ನು ಒಂದೇ ಬಾರಿಗೆ ನೆಡುತ್ತಿರುವುದರಿಂದ ಉತ್ತರದಾಯಿತ್ವವನ್ನು ಹೊಂದಲು ನಿರ್ಧರಿಸಿದೆ. ಪ್ರತಿಯೊಂದು ಗಿಡಕ್ಕೂ 'ಜಿಯೊ ಟ್ಯಾಗ್' ಮಾಡಲಾಗುತ್ತದೆ. ಅದರ ಬೆಳವಣಿಗೆಯನ್ನು ಆನ್‌ಲೈನ್‌ನಲ್ಲಿ ಪರಿಶೀಲಿಸಬಹುದಾಗಿದೆ. ಜೂನ್ 27ರಂದು ನೆಡುವ ಗಿಡಗಳನ್ನು 'ಗಿನ್ನಿಸ್ ವರ್ಲ್ಡ್ ರೆಕಾರ್ಡ್' ಸಂಸ್ಥೆಯ 1000ಕ್ಕೂ ಹೆಚ್ಚು ಜನರು ಲೆಕ್ಕ ಮಾಡಲಿದ್ದಾರೆ. ಇದಾದ ಮೇಲೆ, ಮೂರು ವರ್ಷ ಗಿಡಗಳನ್ನು ಪೋಷಿಸುವ ಜವಾಬ್ದಾರಿಯನ್ನು ಎನ್‌ಜಿಒಗಳಿಗೆ ವಹಿಸಲಾಗಿದೆ. ಸಿಎಸ್‌ಆರ್ ಬಳಸಿಕೊಂಡು ಎನ್‌ಜಿಒಗಳು ಎಲ್ಲ ರೀತಿಯ ಪೋಷಣೆಯ ಜವಾಬ್ದಾರಿಯನ್ನು ನಿರ್ವಹಿಸಲಿದ್ದಾರೆ. ಅವರಿಗೆ ಬೇಕಾದ ನೀರನ್ನು ಮಾತ್ರ ಬಿಡಿಎ ಒದಗಿಸಲಿದೆ.

15 ಲಕ್ಷ ಗಿಡ ನೆಡುವ ಅಭಿಯಾನಕ್ಕೆ ಎನ್‌ಜಿಒ, ಕಾರ್ಪೊರೇಟ್ ಸಂಸ್ಥೆಗಳು, ನಾಗರಿಕ ಸಂಘಗಳು, ಶಿಕ್ಷಣ ಸಂಸ್ಥೆಗಳು ಕೈಜೋಡಿಸಿದ್ದು, ಸಸಿ ನೆಟ್ಟ ಪ್ರತಿಯೊಬ್ಬರಿಗೂ ಬಿಡಿಎ ಪ್ರಮಾಣಪತ್ರ ನೀಡಲಿದೆ. ನೂರಾರು ಜನರು ತಂಡವಾಗಿ ಗಿಡ ನೆಟ್ಟರೆ ಅವರಿಗೆ ಆ ಸಂಸ್ಥೆ ಅಥವಾ ಸಂಘದ ಹೆಸರನ್ನೂ ಆ ಪ್ರದೇಶದಲ್ಲಿ ಕಲ್ಲಿನಲ್ಲಿ ಕೆತ್ತಿಸಲಾಗುತ್ತದೆ.

ಮಾಹಿತಿಗೆ: https://greenbengalurubybda.in/

ರಾಮಗೊಂಡನಹಳ್ಳಿಯಲ್ಲಿ ಮಿಯಾವಾಕಿ ಅರಣ್ಯಕ್ಕೆ ಸಿದ್ಧವಾಗಿರುವ ಭೂಮಿ

ಸ್ಥಳೀಯ ಪ್ರಭೇದಗಳಿಗೆ ಆದ್ಯತೆ

ಮಿಯಾವಾಕಿ ಕಿರು ಅರಣ್ಯ, ಉದ್ಯಾನ ಹಾಗೂ ವೃಕ್ಷವನಗಳ ಮಾದರಿಯಲ್ಲಿ ಸಸಿಗಳನ್ನು ನೆಡುವ ಬಿಡಿಎ ಆಂದೋಲನದಲ್ಲಿ, ಹೊಂಗೆ, ಬೇವು, ಮಾವು, ಹಲಸು, ನೇರಳೆ, ಆಲದಮರ, ಅರಳಿ, ಬಿಲ್ವ, ಕಾಡುಮಾವು, ಹೆಬ್ಬೇವು, ಮಹಾಗನಿ ಸೇರಿದಂತೆ ಚಾವಣಿ ಮರಗಳು, ಪೊದೆಗಳು, ಹೂವಿನ ಗಿಡಗಳು, ಜೀವವೈವಿಧ್ಯಕ್ಕೆ ನೆರವಾಗುವ ಗಿಡಗಳು ಸೇರಿದಂತೆ, ಸ್ಥಳೀಯ ಮತ್ತು ಪರಿಸರ ಸ್ನೇಹಿಯ 350ಕ್ಕೂ ಹೆಚ್ಚು ಪ್ರಭೇದಗಳಿಗೆ ಆದ್ಯತೆ ನೀಡಲಾಗುತ್ತಿದೆ.

ರಾಜ್ಯದ ವಿವಿಧ ಭಾಗಗಳಲ್ಲಿ ಅಪರೂಪದ ತಳಿಗಳು ಹಾಗೂ ನಶಿಸಿಹೋಗುತ್ತಿರುವ ಗಿಡ–ಮರಗಳನ್ನು ಇಲ್ಲಿ ನೆಡಲಾಗುತ್ತಿದೆ. ಇದಕ್ಕಾಗಿ ಹಲವು ನರ್ಸರಿಗಳಿಂದ ಗಿಡಗಳನ್ನು ತರಲಾಗುತ್ತಿದೆ. ಮಿಯಾವಾಕಿ ವಿಧಾನದಿಂದ ನಗರದಲ್ಲಿ ದಟ್ಟ, ಸ್ವಾವಲಂಬಿ ಹಸಿರು ಹೊದಿಕೆಗಳನ್ನು ನಿರ್ಮಿಸಬಹುದಾಗಿದೆ. ಈ ವಿಧಾನದಿಂದ ಸಸಿಗಳು ವೇಗವಾಗಿ ಬೆಳೆಯಲಿದ್ದು, ಸುತ್ತಮುತ್ತಲಿನ ಉಷ್ಣಾಂಶವನ್ನು ಕಡಿಮೆ ಮಾಡುತ್ತದೆ. 15 ಲಕ್ಷ ಸಸಿಗಳೆಲ್ಲವೂ ಮಿಯಾವಾಕಿ ಮಾದರಿಯಲ್ಲೇ ನೆಡಲಾಗುತ್ತಿಲ್ಲ. ಹೆಚ್ಚು ಸ್ಥಳ ಇರುವ ಕಡೆ ಮಿಯಾವಾಕಿ, ಉಳಿದ ಕಡೆಗಳಲ್ಲಿ ಸಾಮಾನ್ಯ ರೀತಿಯಲ್ಲಿ ಗಿಡಗಳನ್ನು ನೆಡಲು ಯೋಜಿಸಲಾಗಿದೆ.

'ಬಿಡಿಎ ವತಿಯಿಂದ ಏಳು ಎಕರೆ ಹಾಗೂ ಎರಡೂವರೆ ಎಕರೆ ಪ್ರದೇಶದಲ್ಲಿ ಈಗಾಗಲೇ ಮಿಯಾವಾಕಿ ಅರಣ್ಯಗಳನ್ನು ಸೃಷ್ಟಿಸಲಾಗಿದೆ. ಇದಕ್ಕೆ ಎನ್‌ಜಿಒಗಳ ಸಹಕಾರವಿದೆ. ಅದರಿಂದ ಸಿಕ್ಕಿರುವ ಯಶಸ್ಸು, ಲಕ್ಷಾಂತರ ಗಿಡಗಳನ್ನು ನೆಡಬಹುದು ಎಂಬ ವಿಶ್ವಾಸ ಮೂಡಿದೆ' ಎಂದು ಬಿಡಿಎ ಅರಣ್ಯ ವಿಭಾಗದ ಡಿಸಿಎಫ್ ಚರಣ್ ಹೇಳಿದರು.

ದಾಖಲೆಗೆ 12 ಗಂಟೆಯ ಗುರಿ

15 ಲಕ್ಷ ಗಿಡಗಳನ್ನು 12 ಗಂಟೆಯಲ್ಲಿ ನೆಟ್ಟರೆ ಗಿನ್ನಿಸ್ ದಾಖಲೆಯಾಗುತ್ತದೆ. ಈವರೆಗಿನ ದಾಖಲೆ ಎಂದರೆ, ಇಂದೋರ್ ನಗರದಲ್ಲಿ 24 ಗಂಟೆಗಳಲ್ಲಿ 12.4 ಲಕ್ಷ ಗಿಡ ನೆಟ್ಟಿರುವುದಾಗಿತ್ತು. ಜೂನ್ 27ರಂದು ಬೆಳಿಗ್ಗೆ 6.30ರಿಂದ ಸಂಜೆ 6.30ರೊಳಗೆ ಸಸಿ ನೆಡಲು ಗುಂಡಿ ತೋಡುವ ಜೊತೆಗೆ, ಅದನ್ನು ನೆಡುವ ಕಾರ್ಯ ಪೂರ್ಣಗೊಳ್ಳಬೇಕು. ಮೊದಲೇ ಗುಂಡಿಯನ್ನು ಮಾಡಿಟ್ಟುಕೊಳ್ಳುವಂತಿಲ್ಲ. ಆದ್ದರಿಂದ, ಸಸಿ ನೆಡುವ ಪ್ರದೇಶವನ್ನು ಬಿಡಿಎ ಈಗಿಂದಲೇ ಹಸನುಗೊಳಿಸುತ್ತಿದೆ.

'ಗಿನ್ನಿಸ್ ದಾಖಲೆ ಮಾಡಿ ಪ್ರಚಾರ ಪಡೆಯಬೇಕೆಂಬ ಉದ್ದೇಶ ನಮ್ಮದಲ್ಲ. ಗಿಡ ನೆಟ್ಟ ಮೇಲೆ ಎಲ್ಲಿ, ಎಷ್ಟು ನೆಟ್ಟಿದ್ದೇವೆ ಎಂಬ ಲೆಕ್ಕ ಮಾಡಬೇಕು. ಬಿಡಿಎಯಿಂದಲೇ ಅದನ್ನು ಮಾಡಿದರೆ ಸಮಂಜಸವಲ್ಲ. ಗಿನ್ನಿಸ್ ದಾಖಲೆಗೆ ನೋಂದಣಿಯಾದರೆ, ಎಲ್ಲ ಲೆಕ್ಕಾಚಾರವನ್ನೂ ಅವರು ಮಾಡುವ ಜೊತೆಗೆ, ಅಂತರರಾಷ್ಟ್ರೀಯ ಮಟ್ಟದ ಪ್ರಮಾಣಪತ್ರವೂ ನಮಗೆ ಲಭ್ಯವಾಗುತ್ತದೆ. ಹೀಗಾಗಿ, ಗಿನ್ನಿಸ್ ದಾಖಲೆಗೆ ನೋಂದಣಿಯಾಗಿದ್ದೇವೆ' ಎಂದು ಮಣಿವಣ್ಣನ್ ಹೇಳಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಆಯೋಜನೆ

ಆಯೋಗದ ಮುಂದೆ ಆರು ಪ್ರಶ್ನೆ, ನಾಲ್ಕು ಪ್ರಸ್ತಾವಗಳು, ಮತದಾರರ ಹಿತಕ್ಕಾಗಿ ಸರ್ಕಾರ ತೆಗೆದುಕೊಳ್ಳಲೇಬೇಕಾದ ಐದು ಕ್ರಮಗಳ ಪ್ರಸ್ತಾವ ಮಂಡನೆ

ಎಸ್‌ಐಆರ್ ವಿರೋಧಿಸಿ ಸಮಾವೇಶ ಇಂದು

ಬೆಂಗಳೂರು: ರಾಜ್ಯದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿರೋಧಿಸಿ ಎಸ್‌ಐಆರ್ ವಿರೋಧಿ ಒಕ್ಕೂಟವು ಇದೇ 20ರಂದು ಬೆಳಿಗ್ಗೆ 10.30ಕ್ಕೆ ಸ್ವಾತಂತ್ರ್ಯ ಉದ್ಯಾನದಲ್ಲಿ ಎಸ್‌ಐಆರ್ ವಿರೋಧಿ ಪ್ರತಿರೋಧ ಸಮಾವೇಶ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಪರವಾಗಿ ಮಾತನಾಡಿನ ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್, 'ರಾಜ್ಯದ ಪ್ರಗತಿಪರ ಸಂಘಟನೆಗಳು ಹಾಗೂ ಜಾತ್ಯತೀತ ಪಕ್ಷಗಳ ಬೆಂಬಲದೊಂದಿಗೆ ಈ ಸಮಾವೇಶ ನಡೆಸಲಾಗುತ್ತಿದೆ. ಪ್ರತಿಭಟನಾ ಸಮಾವೇಶದಲ್ಲಿ ನಾಗರಿಕರ ಪ್ರಶ್ನೆಗಳಿಗೆ ಉತ್ತರಕ್ಕಾಗಿ ಚುನಾವಣಾ ಆಯೋಗ ಮತ್ತು ಸರ್ಕಾರದ ಪ್ರತಿನಿಧಿಗಳನ್ನೂ ಆಹ್ವಾನಿಸಿದ್ದೇವೆ' ಎಂದು ಹೇಳಿದರು.

'ಈ ಸಮಾವೇಶಕ್ಕೆ ಪೂರಕವಾಗಿ ಇದೇ 13ರಿಂದ 'ಎದ್ದೇಳು ಕರ್ನಾಟಕ' ಸಂಘಟನೆಯ ಸಹಯೋಗದಲ್ಲಿ ರಾಜ್ಯದಾದ್ಯಂತ ಜಾಥಾ ನಡೆಸಲಾಗಿದೆ. ಈ ವೇಳೆ 170ಕ್ಕೂ ಹೆಚ್ಚು ಜಾಗೃತಿ ಚಟುವಟಿಕೆಗಳು ನಡೆದಿವೆ. ಜನರು ಎಸ್‌ಐಆರ್‌ನ ಅಪಾಯ ಹಾಗೂ ಅದರ ಹಿಂದಿನ ಷಡ್ಯಂತ್ರವನ್ನು ಅರ್ಥ ಮಾಡಿಕೊಳ್ಳುತ್ತಿದ್ದಾರೆ' ಎಂದು ವಿವರಿಸಿದರು.

ರೈತ ಹೋರಾಟಗಾರ ಜೆ.ಎಂ.ವೀರಸಂಗಯ್ಯ, 'ಸಮಾವೇಶದಲ್ಲಿ ರಾಜ್ಯದ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರದ ಸುಮಾರು 230 ಗಣ್ಯರು ಪಾಲ್ಗೊಳ್ಳುತ್ತಾರೆ. ರಾಜ್ಯ ಸರ್ಕಾರದ ಪ್ರತಿನಿಧಿಗಳಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿ ವಿವಿಧ ಜನಪ್ರತಿನಿಧಿಗಳಿಗೂ ಆಹ್ವಾನ ನೀಡಲಾಗಿದೆ' ಎಂದರು.

'ಟಿವಿಕೆಗೆ ಬೆಂಬಲ ವಾಪಸ್ ಪಡೆಯಿರಿ'

ಪ್ರಜಾವಾಣಿ ವಾರ್ತೆ


ಆರ್. ಅಶೋಕ

ಬೆಂಗಳೂರು: 'ತಮಿಳುನಾಡಿನಲ್ಲಿ ಟಿವಿಕೆ ಪಕ್ಷದ ಸರ್ಕಾರ ಮೇಕೆದಾಟು ಯೋಜನೆಗೆ ವಿರುದ್ಧವಾಗಿ ನಿರ್ಣಯ ಕೈಗೊಂಡಿದೆ. ಆದ್ದರಿಂದ ಕಾಂಗ್ರೆಸ್ ಟಿವಿಕೆ ನೇತೃತ್ವದ ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ಹಿಂಪಡೆಯಲಿ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಸವಾಲು ಹಾಕಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮಿಳುನಾಡಿನಲ್ಲಿ ಡಿಎಂಕೆ ಬೆನ್ನಿಗೆ ಚೂರಿ ಹಾಕಿದ ಕಾಂಗ್ರೆಸ್, ಟಿವಿಕೆ ಜೊತೆ ಸೇರಿಕೊಂಡಿದೆ. ಅದೇ ಟಿವಿಕೆ ಪಕ್ಷ ಈಗ ಮೇಕೆದಾಟು ಯೋಜನೆ ಜಾರಿಯಾಗಲು ಬಿಡುವುದಿಲ್ಲ ಎಂಬ ನಿರ್ಣಯ ಕೈಗೊಂಡಿದೆ ಎಂದರು.

'ಕಾಂಗ್ರೆಸ್ ಪಕ್ಷಕ್ಕೆ ಧೈರ್ಯ ವಿದ್ದರೆ ಟಿವಿಕೆಗೆ ನೀಡಿದ ಬೆಂಬಲವನ್ನು ವಾಪಸ್ ಪಡೆಯಬೇಕು. ಇಲ್ಲವಾದರೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಬ್ಬಗೆ ಧೋರಣೆ ಹಾಗೂ ಎರಡು ನಾಲಿಗೆ ಎಂಬುದನ್ನು ಒಪ್ಪಿಕೊಳ್ಳಬೇಕು. ಕಾಂಗ್ರೆಸ್ ಸರ್ಕಾರ ಇರುವವರೆಗೂ ಮೇಕೆದಾಟು ಯೋಜನೆ ಜಾರಿಯಾಗಲು ಸಾಧ್ಯವಿಲ್ಲ. ಇವರು ಪಾದಯಾತ್ರೆ ಮಾಡಿದ್ದು ಕೇವಲ ಮತಕ್ಕಾಗಿ' ಎಂದು ಅಶೋಕ ಟೀಕೆ ಮಾಡಿದರು.

'ಕಾಂಗ್ರೆಸ್ ಸರ್ಕಾರ ಪಡಿತರ ಚೀಟಿಗಳಿಗೆ ಕತ್ತರಿ ಹಾಕಿ ಗ್ಯಾರಂಟಿ ಫಲಾನುಭವಿಗಳನ್ನು ಕಡಿಮೆ ಮಾಡುತ್ತಿದೆ. ಉಚಿತ ವಿದ್ಯುತ್ ಪಡೆಯುವ ಯೋಜನೆಯಲ್ಲೂ ಬೋಗಸ್ ಇದೆ ಎನ್ನುತ್ತಿದ್ದಾರೆ. ಸುಮಾರು 20 ಲಕ್ಷ ಫಲಾನುಭವಿಗಳನ್ನು ಕಡಿಮೆ ಮಾಡಲು ಕುತಂತ್ರ ಮಾಡಲಾಗಿದೆ. ₹1.20 ಲಕ್ಷ ಕೋಟಿ ಸಾಲವಿದ್ದು, ಅದಕ್ಕೆ ಬಡ್ಡಿ ಕಟ್ಟಲು ಕೂಡ ಆಗುತ್ತಿಲ್ಲ. ನೌಕರರಿಗೆ ಸಂಬಳ ಕೂಡ ನೀಡುತ್ತಿಲ್ಲ. ನಾಲ್ಕು ತಿಂಗಳಿಂದ ಅನೇಕ ಪಿಂಚಣಿಗಳನ್ನು ನೀಡಿಲ್ಲ. ಪಿಂಚಣಿ ನೀಡಿಲ್ಲವೆಂದರೆ ಸರ್ಕಾರ ಪಾಪರ್ ಆಗಿದೆ ಎಂದೇ ಅರ್ಥ' ಎಂದರು.

ಅನುವಾದಕರಿಗೆ ಗೌರವ ಪ್ರಶಸ್ತಿ ಸ್ಥಾಪನೆ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಾರ್ಷಿಕ 'ಗೌರವ ಪ್ರಶಸ್ತಿ'ಗೆ ಮತ್ತೊಂದು ಪ್ರಶಸ್ತಿ ಸೇರ್ಪಡೆಯಾಗಿದ್ದು, ಸಾಹಿತ್ಯ ಕೃತಿಗಳನ್ನು ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದಿಸಿದ ಸಾಹಿತಿಗಳ ಜೀವಮಾನ ಸಾಧನೆ ಗುರುತಿಸಿ ನೀಡಲಾಗುತ್ತದೆ.

ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಗಣನೀಯ ಸಾಧನೆಯನ್ನು ಗುರುತಿಸಿ ಅಕಾಡೆಮಿ ಸದ್ಯ ಐದು ಗೌರವ ಪ್ರಶಸ್ತಿಗಳನ್ನು ನೀಡುತ್ತಿದೆ. ವಿಮರ್ಶಕ ಪ್ರೊ.ಸಿ.ಎನ್.ರಾಮಚಂದ್ರನ್ ಅವರು ಅಕಾಡೆಮಿಯಲ್ಲಿ ₹10 ಲಕ್ಷ ಠೇವಣಿ ಇರಿಸಿದ್ದಾರೆ. ಅನುವಾದ ಕ್ಷೇತ್ರದಲ್ಲಿನ ಸಾಧನೆ ಪರಿಗಣಿಸಿ ನೀಡುವ ಈ ಪ್ರಶಸ್ತಿ, ₹ 50 ಸಾವಿರ ನಗದು ಒಳಗೊಂಡಿದೆ. ಪ್ರಸಕ್ತ ಸಾಲಿನ ಪ್ರಶಸ್ತಿಗೆ ಅವರು ಪ್ರತ್ಯೇಕವಾಗಿ ₹50 ಸಾವಿರ ನೀಡಿದ್ದಾರೆ. ಇದರಿಂದಾಗಿ ಗೌರವ ಪ್ರಶಸ್ತಿಗಳ ಸಂಖ್ಯೆ ಆರಕ್ಕೆ ಏರಿಕೆಯಾಗಿದೆ ಎಂದು ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ತಿಳಿಸಿದ್ದಾರೆ. ವಾರ್ಷಿಕ ಬಡ್ಡಿ ದರದಲ್ಲಿ ದತ್ತಿ ದಾನಿಗಳ ಆಶಯದಂತೆ ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದ ಕಾರ್ಯ ಕೈಗೊಂಡ ಹಿರಿಯ ಅನುವಾದಕರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ನಗರದಲ್ಲಿ ಇಂದು

ಭಾರತೀಯ ಯಂತ್ರ ಕ್ರೀಡಾ ಮಹೋತ್ಸವ: ಉದ್ಘಾಟನೆ: ಶೋಭಾ ಕರಂದ್ಲಾಜೆ, ಸಿ.ಎನ್. ಅಶ್ವತ್ಥ ನಾರಾಯಣ, ಆಯೋಜನೆ: ನಮ್ಮ ಮಲ್ಲೇಶ್ವರ, ಸ್ಥಳ: ಬೀಗಲ್ಸ್ ಬ್ಯಾಸ್ಕೆಟ್‌ಬಾಲ್ ಕ್ರೀಡಾಂಗಣ, ಮಲ್ಲೇಶ್ವರ 15ನೇ ಕ್ರಾಸ್, ಬೆಳಿಗ್ಗೆ 9.30

ವಾರ್ಷಿಕೋತ್ಸವ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ: ಅಧ್ಯಕ್ಷತೆ: ಸುಧಾ ದೇಶಪಾಂಡೆ, ಅತಿಥಿಗಳು: ಸುರೇಶ್ ಪಾಟೀಲ, ಮೃದುಲಾ ವಿಜಯೇಂದ್ರ, ಕೃಷ್ಣ ಹನಗುಂದ, ಮಕುಂದ ಗಂಗೂರ, ಪುಸ್ತಕ ಬಿಡುಗಡೆ: ಜಯಲಕ್ಷ್ಮಿ ಮಂಗಳಮೂರ್ತಿ ಅವರ 'ಸಾಧನ' ಕೃತಿ, ಸುಧಾ ದೇಶಪಾಂಡೆ ಅವರ 'ಭಾಗವತಾಮೃತ ಸುಳಾದಿಗಳು' ಕೃತಿ, 'ಮೈತ್ರೇಯಿ ಪ್ರಶಸ್ತಿ' ಪುರಸ್ಕೃತರು: ಗೀತಾ ಜೋಶಿ, ರೇಖಾ ಮುತಾಲಿಕ್, ಮಾನಸ ಕುಲಕರ್ಣಿ, ಸರಸ್ವತಿ ರಾಘವೇಂದ್ರ ಕುಲಕರ್ಣಿ, ವೀಣಾ ವಾದಿರಾಜ ಬರಗಿ, ಅಖಿಲಾ ವಿಜಯ ಕುರಂದವಾಡ, ಪ್ರಿಯಾ ಪ್ರಾಣೇಶ ಹರಿದಾಸ, ರೇಖಾ ಕಾಖಂಡಕಿ, ಶೈಲಜಾ ಕೊಪ್ಪರ, ಜಯಲಕ್ಷ್ಮಿ ಮಂಗಳಮೂರ್ತಿ, ವನಜಾ ಉಪೇಂದ್ರ ನರಸಾಪುರ, ಶೀಲಾ ದಾಸ್, ನಿರ್ಮಲಾ ಗುರುರಾಜ ದೇಶಪಾಂಡೆ, ಆಯೋಜನೆ: ಮೈತ್ರೇಯಿ ಕನ್ನಡ ಮಹಿಳಾ ಹರಿದಾಸ ಟ್ರಸ್ಟ್, ಸ್ಥಳ: ಗೋವರ್ಧನಗಿರಿ ಉಡುಪಿ ಪುತ್ತಿಗೆ ಮಠ, ಬಸವನಗುಡಿ, ಬೆಳಿಗ್ಗೆ 10

ಉಚಿತ ನೋಟ್ ಪುಸ್ತಕ ವಿತರಣಾ ಕಾರ್ಯಕ್ರಮ: ಉದ್ಘಾಟನೆ: ಆರ್. ಅಶೋಕ, ಪುಸ್ತಕ ವಿತರಣೆ: ಎಲ್. ಎಸ್. ತೇಜಸ್ವಿ ಸೂರ್ಯ, ಅಧ್ಯಕ್ಷತೆ: ಸಿ.ಕೆ. ರಾಮಮೂರ್ತಿ, ಉಪಸ್ಥಿತಿ: ಮಳವಳ್ಳಿ ನಟರಾಜ್ (ಗಿಲ್ಲಿ ನಟ), ಆಯೋಜನೆ: ರಕ್ಷಾ ಫೌಂಡೇಷನ್, ಸ್ಥಳ: ಚಂದ್ರಗುಪ್ತ ಮೌರ್ಯ (ಶಾಲಿನಿ) ಆಟದ ಮೈದಾನ, 5ನೇ ಮುಖ್ಯರಸ್ತೆ, ಜಯನಗರ, ಬೆಳಿಗ್ಗೆ 10

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವಾರ್ಷಿಕ ಕಾರ್ಯಕ್ರಮ ಯೋಜನೆ 2026–27ರ ಪುಸ್ತಕ ಬಿಡುಗಡೆ: ಯು.ಟಿ. ಖಾದರ್, ಅಧ್ಯಕ್ಷತೆ: ಪಿ.ಜಿ.ಆರ್. ಸಿಂಧ್ಯ, ಆಯೋಜನೆ ಹಾಗೂ ಸ್ಥಳ: ದಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಅರಮನೆ ರಸ್ತೆ, ಬೆಳಿಗ್ಗೆ 10

ನವೀಕರಿಸಲಾದ ಶಾಲಾ ಕಟ್ಟಡದ ಉದ್ಘಾಟನೆ: ಅತಿಥಿಗಳು: ಕೃಷ್ಣ ರಾಜ್ ಶರ್ಮಾ, ಶೈಲ, ಅಧ್ಯಕ್ಷತೆ: ವಿಜೇತ್ ಆರ್., ಆಯೋಜನೆ ಹಾಗೂ ಸ್ಥಳ: ಪಿಎಂಶ್ರೀ ಸರ್ಕಾರಿ ಸಂಯುಕ್ತ ಪ್ರೌಢಶಾಲೆ, ಕಾಕೋಳು, ದೊಡ್ಡಬಳ್ಳಾಪುರ ರಸ್ತೆ, ರಾಜಾನುಕುಂಟೆ ಸಮೀಪ, ಬೆಳಿಗ್ಗೆ 10

ಬಾಬುಜಗಜೀವನರಾಮ್ ಅವರ 119ನೇ ಜಯಂತಿ ಪ್ರಯುಕ್ತ 'ನವ ಭಾರತದ ನಿರ್ಮಾತೃ ಡಾ.ಬಾಬು ಜಗಜೀವನರಾಮ್' ರಾಷ್ಟ್ರೀಯ ವಿಚಾರ ಸಂಕಿರಣ: ಉದ್ಘಾಟನೆ: ಎಚ್. ಆಂಜನೇಯ, ಅಧ್ಯಕ್ಷತೆ: ಜಯಕರ್ ಎಸ್.ಎಂ., ಅತಿಥಿಗಳು: ಜಿ.ಎಸ್. ಮಂಜುನಾಥ್, ಬಿ. ರಮೇಶ್, ರಾಜೇಶ್ ಜಿ. ಗೌಡ, ಸುಬ್ಬು ಹೊಲೆಯಾರ್, ಮಾವಳ್ಳಿ ಶಂಕರ್, ಕೆ.ಟಿ. ಶಾಂತಲಾ, ಪಿ.ಸಿ. ನಾಗೇಶ್, ಜಿ.ಕೃಷ್ಣಮೂರ್ತಿ, ಎಚ್. ಶಶಿಕಲಾ, ಆಯೋಜನೆ ಹಾಗೂ ಸ್ಥಳ: ಪ್ರೊ. ವೆಂಕಟಗಿರಿಗೌಡ ಸ್ಮಾರಕ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಳಿಗ್ಗೆ 10.30

ರೇಬಾ ಹೋರೆ ಜನ್ಮಶತಮಾನೋತ್ಸವ ಪ್ರಯುಕ್ತ 'ಬ್ರೋಕನ್ ಫುಟ್ ಜರ್ನಲ್ ಮತ್ತು ಇತರ ಕಥನಗಳು' ವಿಶೇಷ ಕಲಾ ಪ್ರದರ್ಶನ: ಆಯೋಜನೆ: 'ಸೀಗಲ್' ಕೋಲ್ಕತ್ತ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಖಾಸಗಿ ಆಂಗ್ಲ ಶಾಲೆಗಳ ಕನ್ನಡ ದ್ರೋಹ ತಡೆಯಲು

'ಯಕ್ಷ ಪರ್ವ' ಯಕ್ಷಗಾನ ಪ್ರಸಂಗಗಳ ಪ್ರದರ್ಶನ: 'ಚೂಡಾಮಣಿ', 'ವಾಲಿ ವಧೆ' ಮತ್ತು 'ಶ್ರೀಕೃಷ್ಣ ಕಲ್ಯಾಣ' ಯಕ್ಷಗಾನ ಪ್ರಸಂಗಗಳು, ಹಿಮ್ಮೇಳ: ಹೆಬ್ರಿ ಗಣೇಶ್, ರಾಘವೇಂದ್ರ ಆಚಾರ್ಯ ಜನ್ಸಾಲೆ, ರಾಮಕೃಷ್ಣ ಹಿಲ್ಲೂರು, ಚಿನ್ಮಯ ಭಟ್ ಕಲ್ಲಡ್ಕ, ಶಶಾಂಕ್ ಆಚಾರ್ಯ, ಅಕ್ಷಯ್ ಆಚಾರ್ಯ, ಸುಜನ್ ಹಾಲಾಡಿ, ಪ್ರಜ್ವಲ್ ಮುಂಡಾಡಿ, ಅಕ್ಷಯ್ ವಿಟ್ಲ, ಶ್ರೀಶ ರಾವ್, ಮುಮ್ಮೇಳ: ವಿದ್ಯಾಧರ ಜಲವಳ್ಳಿ, ರಮೇಶ್ ಭಂಡಾರಿ ಮೂರೂರು, ಅಶೋಕ್ ಭಟ್ ಸಿದ್ದಾಪುರ, ನೀಲ್ಕೋಡು ಶಂಕರ್ ಹೆಗಡೆ, ಶಶಿಕಾಂತ್ ಶೆಟ್ಟಿ ಕಾರ್ಕಳ, ಶೈಲೇಶ್ ತೀರ್ಥಹಳ್ಳಿ, ಸುಣ್ಣಂಬಳ ವಿಶ್ವೇಶ್ವರ ಭಟ್, ಪೆರ್ಮುದೆ ಜಯಪ್ರಕಾಶ್ ಶೆಟ್ಟಿ, ಪಂಜು ಕುಮಾರ್ ಬಗ್ವಾಡಿ, ವಿಶ್ವನಾಥ್ ಹೆನ್ನಾಬೈಲ್, ಕಾರ್ತಿಕ್ ಚಿಟ್ಟಾಣಿ, ಚಂದ್ರಶೇಖರ ಧರ್ಮಸ್ಥಳ, ಭರತ್ ರಾಜ್ ಪರ್ಕಳ, ಸಾಯಿರಾಮ್, ಕಿಶನ್ ಅಗ್ಗಿತ್ತಾಯ, ಆಯೋಜನೆ: ಟೀಮ್ ತಿತ್ತಿತ್ತೈ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ರಾತ್ರಿ 9.30

ದುಂಡುಮೇಜಿನ ಸಭೆ: ಭಾಗವಹಿಸುವ ಪ್ರಮುಖರು: ಟಿ.ಎಸ್. ನಾಗಾಭರಣ, ಎಲ್. ಹನುಮಂತಯ್ಯ, ಪುರುಷೋತ್ತಮ ಬಿಳಿಮಲೆ, ಬಿ.ಟಿ. ಲಲಿತಾ ನಾಯಕ್, ಸಂತೋಷ ಹಾನಗಲ್, ತಲಕಾಡು ಚಿಕ್ಕರಂಗೇಗೌಡ, ಅರೇನಹಳ್ಳಿ ಧರ್ಮೇಂದ್ರ, ವಿ. ನಾಗೇಂದ್ರ ಪ್ರಸಾದ್, ನೇ.ಭ. ರಾಮಲಿಂಗ ಶೆಟ್ಟಿ, ಬಿ.ಎಂ. ಹನೀಫ್, ಭೀಮ ಶಂಕರ್ ಪಾಟೀಲ, ಆಯೋಜನೆ: ಕನ್ನಡ ಮೊದಲು ಬಳಗ, ಸ್ಥಳ: ಹೋಟೆಲ್ ವುಡ್‌ಲ್ಯಾಂಡ್ಸ್, ಸಂಪಂಗಿರಾಮ ನಗರ, ಮಧ್ಯಾಹ್ನ 2.30

ಮನೆಯಂಗಳದಲ್ಲಿ ಮಾತುಕತೆ: ತಿಂಗಳ ಅತಿಥಿ: ಅಕ್ಕೈ ಪದ್ಮಶಾಲಿ, ಉಪಸ್ಥಿತಿ: ಬಿ.ಎಸ್. ಮಂಜುನಾಥ ಸ್ವಾಮಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 4

ಕಮಲಾ ಹಂಪನಾ ಎರಡನೇ ವರ್ಷದ ಸಂಸ್ಮರಣೆ: ಅಧ್ಯಕ್ಷತೆ: ಹಂಪ ನಾಗರಾಜಯ್ಯ, ಅತಿಥಿ: ಬಿ.ಎಸ್. ಮಂಜುನಾಥ ಸ್ವಾಮಿ, ಕಾವ್ಯನಮನದ ಅಧ್ಯಕ್ಷತೆ: ಪ್ರತಿಭಾ ನಂದಕುಮಾರ್, ಆಶಯ ನುಡಿ: ಸುಬ್ಬು ಹೊಲೆಯಾರ್, ಕವಿಗಳು: ದಾದಾಪೀರ್ ಜೈಮನ್, ಪ್ರವರ ಕೊಟ್ಟೂರು, ನದೀಂ ಸನದಿ, ಎಡೆಯೂರು ಪಲ್ಲವಿ, ಗೀತ ನಮನ: ಶ್ರೀನಿವಾಸ ಉಡುಪ, ವೈ.ಕೆ. ಮುದ್ದುಕೃಷ್ಣ, ಸಂಗೀತಾ ಕಟ್ಟಿ, ಅರ್ಚನಾ ಉಡುಪ, ಕೆ.ಎಸ್. ಸುರೇಖಾ, ಎಂ.ಡಿ. ಪಲ್ಲವಿ, ವೇಮಗಲ್ ನಾರಾಯಣಸ್ವಾಮಿ, ಶ್ರುತಿ ಮಹೇಶ್, ಮನೋಹರ್ ಪಟವರ್ಧನ್, ಕುಸುಮಾ ಜೈನ್, ವಿಶೇಷ ಸನ್ಮಾನ: ಸಂಗೀತಾ ಕಟ್ಟಿ, ಇಂದೂ ವಿಶ್ವನಾಥ್, ಜಿನೇಂದ್ರ, ಆಯೋಜನೆ: ಕಮಲಾ ಹಂಪನಾ ಸಾಹಿತ್ಯ ವೇದಿಕೆ, ಸ್ಥಳ: ಮಹಾದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಕುಮಾರ ಕೃಪಾ ರಸ್ತೆ, ಮಧ್ಯಾಹ್ನ 3

ಚಂಪಾ ಸಿರಿಗನ್ನಡ ಪ್ರಶಸ್ತಿ ಪ್ರದಾನ: ಎಸ್.ಜಿ. ಸಿದ್ಧರಾಮಯ್ಯ, ಪ್ರಶಸ್ತಿ ಪುರಸ್ಕೃತರು: ಸಾ.ರಾ. ಗೋವಿಂದು, ಅತಿಥಿಗಳು: ಜಯಮಾಲಾ, ಮೀನಾ ಪಾಟೀಲ, ಅಧ್ಯಕ್ಷತೆ: ಸಿ.ಕೆ. ರಾಮೇಗೌಡ, ಆಯೋಜನೆ: ಕರ್ನಾಟಕ ಸ್ವಾಭಿಮಾನಿ ವೇದಿಕೆ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿತ್ತು, ಚಾಮರಾಜಪೇಟೆ, ಮಧ್ಯಾಹ್ನ 3.30

ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತ್ಯೋತ್ಸವ: ಸಾನ್ನಿಧ್ಯ: ನಿಶ್ಚಲಾನಂದನಾಥ ಸ್ವಾಮೀಜಿ, ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಉದ್ಘಾಟನೆ: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಉಪಸ್ಥಿತಿ: ಶ್ರೀಕಂಠ ಸಿದ್ಧಲಿಂಗರಾಜೇ ಅರಸ್, ಕೃಷ್ಣಕುಮಾರ್ ಮಹಾರಾಜ್, ಸುಭಾಷ್‌ಚಂದ್ರ ರಾಥೋಡ್, ಸಂಗಮೇಶ ಶರಣರು, ಗೌರವ ಪುರಸ್ಕಾರ: ಭಾರತಿ ಎಚ್.ಎಂ., ಹನಸೋಗೆ ಸೋಮಶೇಖರ್, ಎಂ.ಎಸ್. ಅನಿತಾ, ಆಯೋಜನೆ: ನಾಲ್ವಡಿ ಕೃಷ್ಣರಾಜ ಒಡೆಯರ್ ಕ್ರೀಡಾ ಮತ್ತು ಸಾಂಸ್ಕೃತಿಕ ವೇದಿಕೆ, ಕರ್ನಾಟಕ ರಾಜ್ಯ ಭೋವಿ ಯೂತ್ ಬ್ರಿಗೇಡ್ ಒಕ್ಕೂಟ, ಸ್ಥಳ: ಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4

ವಿಶ್ವ ಸಂಗೀತ ದಿನದ ಪ್ರಯುಕ್ತ ಸಂಗೀತ ಕಛೇರಿ: ಗಾಯನ: ಪದ್ಮಾ ಅಡಿಗ, ಪಿಟೀಲು: ಅಚ್ಯುತ ರಾವ್, ಮೃದಂಗ: ನರಸಿಂಹ ರಾಮಸ್ವಾಮಿ ಅಯ್ಯಂಗಾರ್, ಗಾಯನ: ಸಿಕ್ಕಿಲ್ ಗುರುಚರಣ್, ಪಿಟೀಲು: ಎಚ್. ಎಂ.ಸ್ಮಿತಾ, ಮೃದಂಗ: ತುಮಕೂರು ಬಿ. ರವಿಶಂಕರ್, ಖಂಜಿರ: ಜಿ. ಗುರುಪ್ರಸನ್ನ, ಸ್ಥಳ: ರಮಣ ಮಹರ್ಷಿ ಹೆರಿಟೇಜ್ ಆಡಿಟೋರಿಯಂ, ಸಂಜಯ ನಗರ, ಸಂಜೆ 4.15

ವಿಶ್ವ ಸಂಗೀತ ದಿನದ ಪ್ರಯುಕ್ತ 'ಸ್ವರೂಪಾಚಾರ' ಚಿಕಿತ್ಸಕ ಸಂಗೀತ ಕಛೇರಿ ಸರಣಿ: ಗಾಯನ: ಆರ್.ಕೆ. ಪದ್ಮನಾಭ, ಮೃದಂಗ: ಆನೂರು ಅನಂತಕೃಷ್ಣ ಶರ್ಮ, ಪಿಟೀಲು: ಇಂದು ಸುಚೇತನ್, ಖಂಜಿರ: ವ್ಯಾಸ ವಿಠ್ಠಲ, ಆಯೋಜನೆ: ಸ್ವರಕ್ಷೇಮ ಫೌಂಡೇಷನ್, ಶ್ರೀ ಶಂಕರ ಕ್ಯಾನ್ಸರ್ ಫೌಂಡೇಷನ್, ಸ್ಥಳ: ಶ್ರೀ ಶಂಕರ ಕ್ಯಾನ್ಸರ್ ಆಸ್ಪತ್ರೆ, ಶಂಕರಪುರ, ಸಂಜೆ 4.30

ಜೈನ ಸಾಹಿತ್ಯ ಸಿರಿ: 'ನಯಸೇನನ ಧರ್ಮಾಮೃತ–ಧರ್ಮ ಸಂಬಂಧಿ ಆಯಾಮಗಳು' ವಿಷಯದ ಬಗ್ಗೆ ಉಪನ್ಯಾಸ: ಹಾ.ಮ. ನಾಗಾರ್ಜುನ, ಅಧ್ಯಕ್ಷತೆ: ಜಿನೇಂದ್ರ ಖನಗಾವಿ, ಉಪಸ್ಥಿತಿ: ಅರುಣ ಆದಿರಾಜ, ನಾಗಶ್ರೀ ಮುಪ್ಪಾನೆ, ಆಯೋಜನೆ: ಜೈನ ಮಿಲನ್, ಬೆಂಗಳೂರು ಸೆಂಟ್ರಲ್, ಸ್ಥಳ: ಚಕ್ರೇಶ್ವರಿ ಮಹಿಳಾ ಸಮಾಜ, ಆನೆಬಂಡೆ ರಸ್ತೆ, ಜಯನಗರ 3ನೇ ಬಡಾವಣೆ, ಸಂಜೆ 5.30

'ಕಲಾ ಸ್ಪಂದನ' ಸಂಗೀತ–ನೃತ್ಯ: ಅತಿಥಿಗಳು: ವಾಗೀಶ್ ಭಟ್, ಸುಗ್ಗನಹಳ್ಳಿ ಷಡಕ್ಷರಿ, ಹಿಂದೂಸ್ತಾನಿ ಗಾಯನ: ಸ್ಮೃತಿ ಎಸ್. ಭಟ್, ತಬಲಾ: ಎಂ. ಪ್ರಣವ್ ಪೈ, ಹಾರ್ಮೋನಿಯಂ: ಪ್ರಣವ್ ಪಡಿಯಾರ್, ಕಥಕ್: ಅನಿಕಾ ಧವಾಲೆ, ಸಿಯಾ ಕಾರಂತ್, ಆಯೋಜನೆ: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್, ಅಲಂಕೃತ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್, ಸ್ಥಳ: ಸನಾತನ ಕಲಾಕ್ಷೇತ್ರ, ಜಯನಗರ 4ನೇ ಬ್ಲಾಕ್, ಸಂಜೆ 6

ಕೋಟೆ ಮಾರಮ್ಮ ದೇವಸ್ಥಾನದ 48ನೇ ರಜತ ಮಹೋತ್ಸವ: ಅಮ್ಮನವರ ಮೆರವಣಿಗೆ, ಆಯೋಜನೆ ಮತ್ತು ಸ್ಥಳ: ಕೋಟೆ ಶ್ರೀಮಾರಮ್ಮ ದೇವಸ್ಥಾನ ಅನ್ನದಾನ ಸಮಿತಿ, ಕೋಟೆ 'ಇ' ಬೀದಿ, ಕಲಾಸಿಪಾಳ್ಯ, ಸಂಜೆ 6.30

26ನೇ ವರ್ಷದ ಪ್ರವಚನ ವಾಹಿನಿ: ಭಜನೆ: ಶಾರದಾ ಗಾನಾಮೃತ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ಕನಕದಾಸರ ವಿರಚಿತ 'ಕೇಶವನಾಮ' ಪ್ರವಚನ: ಕಲ್ಯಾ ನರಸಿಂಹಮೂರ್ತಾಚಾರ್ಯ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಸುಧೀಂದ್ರನಗರ, ಸಂಜೆ 7

'ದ್ರೋಹಿ ಜಿಂದಗಿ' ನಾಟಕ ಪ್ರದರ್ಶನ: ನಿರ್ದೇಶನ: ಗರ್ಲಿನ್ ಜಡ್ಜ್, ನೇಹಾ ಸಿಂಗ್, ತಂಡ: ರಹೀ ಥಿಯೇಟರ್, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಜೆ.ಪಿ.ನಗರ, ಮಧ್ಯಾಹ್ನ 3.30 ಹಾಗೂ ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಇಂದು ನಗರದ ಹಲವೆಡೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಟಿಸಿಎಲ್‌ನಿಂದ ತುರ್ತು ನಿರ್ವಹಣಾ ಕಾಮಗಾರಿ ಕೈಗೊಂಡಿರುವುದರಿಂದ ನಗರದ ಹಲವು ಕಡೆ ಶನಿವಾರ ಬೆಳಿಗ್ಗೆಯಿಂದ ಸಂಜೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಬೆಳಿಗ್ಗೆ 10ರಿಂದ ಸಂಜೆ 4: ಭರತ್ ಲೇಔಟ್, ಪಟಾಲಮ್ಮ ದೇವಸ್ಥಾನ ಹಿಂಭಾಗ, ಹ್ಯಾಪಿ ವ್ಯಾಲಿ ಲೇಔಟ್, ವಿನಾಯಕ ಲೇಔಟ್, ಉತ್ತರಹಳ್ಳಿ, ಅಪ್ಪಯ್ಯ ಸ್ವಾಮಿ ಲೇಔಟ್, ವಡ್ಡರಪಾಳ್ಯ, ಬನಶಂಕರಿ 5ನೇ ಹಂತ, ಪೂರ್ಣ ಪ್ರಜ್ಞ ಲೇಔಟ್, ಮಂತ್ರಿ ಅಲ್ಲೈನ್ಸ್, ದ್ವಾರಕ ನಗರ, ಬನಶಂಕರಿ 6ನೇ ಹಂತ, 80 ಅಡಿ ರಸ್ತೆ, ಶ್ರೀನಗರ, ಹೊಸಕೆರೆಹಳ್ಳಿ, ಪಿಇಎಸ್ ಕಾಲೇಜ್, ವೀರಭದ್ರನಗರ, ಬ್ಯಾಂಕ್ ಕಾಲೊನಿ, ಎನ್‌ಟಿವೈ ಲೇಔಟ್, ತ್ಯಾಗರಾಜನಗರ, ಬಸವನಗುಡಿ, ಬಿ.ಎಸ್.ಕೆ 3ನೇ ಹಂತ, ಕತ್ತರಿಗುಪ್ಪೆ, ಗಿರಿನಗರ 4ನೇ ಹಂತ, ಐಟಿಐ ಲೇಔಟ್ 100 ಅಡಿ ವರ್ತುಲ ರಸ್ತೆ, ಕಾಮಾಕ್ಯ ಮತ್ತು ಸುತ್ತಮುತ್ತಲ ಪ್ರದೇಶ.

ಬೆಳಿಗ್ಗೆ 10ರಿಂದ ಸಂಜೆ 5: ದೊಮ್ಮಲೂರು 2ನೇ ಹಂತ, ಕೋಡಿಹಳ್ಳಿ, ದೊಮ್ಮಲೂರು ಗ್ರಾಮ, ಯೋಗಾನಂದ ಲೇಔಟ್, ಪರಮಹಂಸ ರಸ್ತೆ, ಧೂಪನಹಳ್ಳಿ, ಎಚ್‌ಎಎಲ್ 2ನೇ ಹಂತ (6ನೇ ಮುಖ್ಯ ರಸ್ತೆಯವರೆಗೆ), ಇಎಸ್‌ಐ ಆಸ್ಪತ್ರೆ, 100 ಅಡಿ ರಸ್ತೆ, ಸಾಲಾರ್‌ಪುರಿಯಾ ಟೆಕ್ ಪಾರ್ಕ್, ಜೆಆರ್‌ಆರ್ ಲೇಔಟ್, ಡೈಮಂಡ್ ಜಿಲ್ಲೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ರಾಮಯ್ಯ ಆಸ್ಪತ್ರೆ, ಪೈಪ್‌ಲೈನ್ ರಸ್ತೆ, ಎಂಎಸ್‌ಆರ್ ನಗರ, ಬಿಇಎಲ್ ರಸ್ತೆ, ಸಿಪಿಆರ್‌ಐ ನಿವಾಸಗಳು, ಸದಾಶಿವನಗರ ಪೊಲೀಸ್ ಠಾಣೆ, ಎಜಿಎಸ್ ಲೇಔಟ್, ಬಿಇಎಲ್ ರಸ್ತೆ, ಎಂಎಸ್‌ಆರ್ ನಗರ, ಜಲದರ್ಶಿನಿ ಲೇಔಟ್, ಎಂಎಸ್‌ಆರ್ ನಗರ, ಪೈಪ್ ಲೈನ್ ರಸ್ತೆ, ರಾಮಯ್ಯ ಬಾಲಕರ ಹಾಸ್ಟೆಲ್, ಎ.ಕೆ. ಕಾಲೋನಿ, ಶ್ರೀನಿಕೇತ್ ಅಪಾರ್ಟ್‌ಮೆಂಟ್, ಕಾಫಿ ಡೇ, ಪಿಜ್ಜಾ ಹಟ್, ರಾಮಯ್ಯ ಆಸ್ಪತ್ರೆ ಎದುರು, ನಾರಾಯಣ ಪ್ರಸಾದ್ ಕಟ್ಟಡ, ಸೀನಪ್ಪ ಲೇಔಟ್, ಬಿಇಎಲ್ ರಸ್ತೆ, ಇಸ್ರೊ, ಡಾಲರ್ಸ್ ಕಾಲೊನಿ, ಬಿಇಎಲ್ ರಸ್ತೆ, ಚಿಕ್ಕಮಾರನಹಳ್ಳಿ, ಗೌರಿ ಅಪಾರ್ಟ್‌ಮೆಂಟ್.

ರೆಸಿಡೆನ್ಸಿ ರಸ್ತೆ, ಹೊಂಡೈ ಆರ್‌ಎಂಯು, ಲ್ಯಾವೆಲ್ಲೆ ರಸ್ತೆ, ವಾಲ್ಟನ್ ರಸ್ತೆ, ವಿಠಲ್ ಮಲ್ಯ ರಸ್ತೆ, ಚರ್ಚ್ ಸ್ಟ್ರೀಟ್, ಕಸ್ತೂರಬಾ ರಸ್ತೆ, ಎಂ.ಜಿ. ರಸ್ತೆ, ಸೇಂಟ್ ಮಾರ್ಕ್ಸ್ ರಸ್ತೆ, ರೆಸಿಡೆನ್ಸಿ ರಸ್ತೆ ಕ್ರಾಸ್, ಕ್ವೀನ್ಸ್ ವೃತ್ತ, ಐಟಿಸಿ ಹೋಟೆಲ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಜೋಗುಪಾಳ್ಯ, ಕಾರ್‌ಸ್ಟ್ರೀಟ್, ಬಜಾರ್ ಸ್ಟ್ರೀಟ್, ಜೋಗುಪಾಳ್ಯ ಮುಖ್ಯ ರಸ್ತೆ, ಆರ್ಟಿಲರಿ ರಸ್ತೆ, ಗೌತಂಪುರ, ಕೇಂಬ್ರಿಜ್ ರಸ್ತೆ, ಆರ್‌ಎಂಝಡ್ ಮಿಲೇನಿಯಾ, ಹಲಸೂರು, ಹಲಸೂರು ರಸ್ತೆ, ಕೆನರಾ ಬ್ಯಾಂಕ್, ಟ್ರಿನಿಟಿ ಸರ್ಕಲ್, ಹೆಚ್‌ಎಎಲ್ 2ನೇ ಹಂತ, ಬೆನ್ನಿಗಾನಹಳ್ಳಿ, ಎ.ನಾರಾಯಣಪುರ, ಬಿ.ನಾರಾಯಣಪುರ, ಕಗ್ಗದಾಸಪುರ, ಆಕಾಶ್ ನಗರ, ಉದಯನಗರ, ಬೈರಸಂದ್ರ, ಸಿ.ವಿ. ರಾಮನ್ ನಗರ, ಎನ್‌ಜಿಇಎಫ್ ಲೇಔಟ್ ಪೂರ್ವ, ಸದಾನಂದನಗರ, ಕಸ್ತೂರಿನಗರ, ಭುವನೇಶ್ವರಿ ನಗರ, ವರ್ತೂರು ರಸ್ತೆ, ನಾಗವಾರಪಾಳ್ಯ, ನಾಗಪ್ಪ ರೆಡ್ಡಿ ಲೇಔಟ್, ಅಬ್ಬಯ್ಯ ಲೇಔಟ್. ವಿಜಿನಾಪುರ ಪೈ ಲೇಔಟ್, ಉದಯನಗರ, ಗಂಗಪ್ಪ ಲೇಔಟ್, ಸದಾನಂದ ನಗರ, ಕಸ್ತೂರಿ ನಗರ, ಕೃಷ್ಣನಪಾಳ್ಯ, ಸುದ್ದಗುಂಟೆ ಪಾಳ್ಯ, ಹಳೆ ಮದ್ರಾಸ್ ರಸ್ತೆ, ನಾಗವಾರಪಾಳ್ಯ ಕುವೆಂಪು ಬೀದಿ, ವಿವೇಕಾನಂದ ಬೀದಿ, ಕೊಂಡಪ ರೆಡ್ಡಿ ಲೇಔಟ್, ಅಂಕಪ್ಪ ರೆಡ್ಡಿ ಲೇಔಟ್, ಶಿವ ದೇವಸ್ಥಾನ ರಸ್ತೆ, ಅಯ್ಯಪ್ಪ ದೇವಸ್ಥಾನ ರಸ್ತೆ ಸುತ್ತಮುತ್ತಲಿನ ಪ್ರದೇಶಗಳು.

ಬೆಳಿಗ್ಗೆ 9.30 ರಿಂದ ಸಂಜೆ 6: ಐಗೇಟ್ ವೃತ್ತ, ಕುಂದಲಹಳ್ಳಿ ಮುಖ್ಯ ರಸ್ತೆ, ಗ್ರಾಫೈಟ್ ವೃತ್ತ, ರಾಧಾ ಹೋಮ್‌ಟೆಲ್, ಫಾರ್ಚೂನ್ ಹೋಟೆಲ್, ನಂದಿ ಟೊಯೋಟಾ, ಎಲ್ ಆ್ಯಂಡ್ ಟಿ ಲಿಮಿಟೆಡ್, ಉಡುಪಿ ಹೋಟೆಲ್, ಚೆಸ್ಸಾ ಡೆಂಟಲ್ ಕೇರ್, ವಾಟರ್ ಟ್ಯಾಂಕ್ ಪ್ರದೇಶ, ಬಿಎಂಟಿಸಿ, ಆರ್‌ಎಂಜೆಡ್ (ಕುಂದಲಹಳ್ಳಿ ಮುಖ್ಯ ರಸ್ತೆ) ಸೇರಿದಂತೆ ಆರ್‌ಎಂಜೆಡ್ ನೆಕ್ಸ್ಟ್, ಚೆನ್ನಮ್ಮ ಲೇಔಟ್, ಎಸ್‌ಎಪಿ ಲ್ಯಾಬ್ಸ್ ಲಿಮಿಟೆಡ್ (ಇಪಿಐಪಿ ಸ್ಟೇಷನ್ ಎದುರು), ಗೋಪಾಲನ್ ಗ್ಲೋಬಲ್ ಆಕ್ಸೆಸ್ ಮತ್ತು ಗೋಪಾಲನ್ ಎಂಟರ್‌ಪ್ರೈಸಸ್, ಮೈಂಡ್ ಕಾಂಪ್, ಬಿಐಪಿ ಡೆವಲಪರ್ಸ್, ಬಾಗ್ಮನೆ ನಿಯಾನ್ ಬಿಲ್ಡಿಂಗ್ ಮತ್ತು ಬಾಗ್ಮನೆ ನಿಯಾನ್ ಬ್ಲಾಕ್, ಆರ್‌ಜಿ ಹಳ್ಳಿ–ಸಿದ್ದಾಪುರ ಗೇಟ್, ಇಪಿಐಪಿ ಲೇಔಟ್ ಮತ್ತು ಇಪಿಐಪಿ ಇಂಡಸ್ಟ್ರಿಯಲ್ ಏರಿಯಾ, ಟಿಸಿಎಸ್ ಸಾಫ್ಟ್‌ವೇರ್, ಎಸ್‌ಜೆಆರ್ ಟೆಕ್ ಪಾರ್ಕ್, ವಿಎಸ್‌ಎನ್‌ಎಲ್ ಫೀಡರ್, ರಿಲಯನ್ಸ್ (ಬಿಗ್ ಬಜಾರ್), ಓರಿಯಂಟಲ್ ಹೋಟೆಲ್, ಏರ್‌ಟೆಲ್, ಬುಶ್ರಾ ಟೆಕ್ ಪಾರ್ಕ್, ಎಸ್‌ಎಡಿಎ ಟೆಕ್ ಪಾರ್ಕ್, ಜಿಇಬಿಇ ಕಂಪನಿ ಮತ್ತು ಸುತ್ತಮುತ್ತಲಿನ ಪ್ರದೇಶ

ಬೆಳಿಗ್ಗೆ 11ರಿಂದ ಸಂಜೆ 5: ಫಿಡೆಲಿಟಿ, ಫಿಲಿಪ್ಸ್, ಇನ್‌ಕ್ಯುಬೇಟರ್, ಐಬಿಎಂ ಡಿ1, ಡಿ2, ಡಿ 3 ಮತ್ತು ಡಿ 4 ಬ್ಲಾಕ್, ಎಫ್ 2 ಬ್ಲಾಕ್, ಎಲ್ 5 ನೋಕಿಯಾ ಬ್ಲಾಕ್, ಎಲ್ 6 ಸೀಮೆನ್ಸ್ ಬ್ಲಾಕ್, ಜಿ 1 ಬ್ಲಾಕ್, ಮಾನ್ಯತಾ ರೆಸಿಡೆನ್ಸಿ, ಬಿಟಿಎಸ್ ಲೇಔಟ್, ಗೋದ್ರೇಜ್ ಅಪಾರ್ಟ್‌ಮೆಂಟ್, ವೆಂಕಟೇಗೌಡ ಲೇಔಟ್, ಜೆಎನ್‌ಸಿ, ಎಂಎಫ್‌ಎಆರ್, ಮಧುವನ ಎಂ 2 ಬ್ಲಾಕ್, ರಾಚೇನಹಳ್ಳಿ, ಶ್ರೀರಾಂಪುರ, ಚಾಮುಂಡೇಶ್ವರಿ ಲೇಔಟ್, ರಾಯಲ್ ಎನ್‌ಕ್ಲೇವ್, ಮೇಸ್ತ್ರಿ ಪಾಳ್ಯ, ಥಣಿಸಂದ್ರ, ಕಾರ್ಲೆ ಟೌನ್ ಸೆಂಟರ್, ಬಿ.ನಾರಾಯಣಪುರ ಕ್ರಾಸ್, ಬಿಡಿಎಸ್ ಲೇಔಟ್, ಫಾತಿಮಾ ಬೋರ್ಡ್ ಲೇಔಟ್, ಸಿ.ಅಮರಜ್ಯೋತಿ ಲೇಔಟ್, ಮರಿಯಣ್ಣಪಾಳ್ಯ, ಉಮಿಯಾ ವೆಲಾಸಿಟಿ, ಬ್ರಿಗೇಡ್ ಕ್ಯಾಲಡಿಯಮ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ವಿಚಾರಸಂಕಿರಣದಲ್ಲಿ ವಕೀಲ ವಿಷ್ಣು ಹೆಗಡೆ ಆಗ್ರಹ

'ಭೂಸ್ವಾಧೀನ: ವೈಜ್ಞಾನಿಕ ಪರಿಹಾರ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರ್ವಜನಿಕ ಉದ್ದೇಶಗಳಿಗೆ ಸ್ವಾಧೀನಪಡಿಸಿಕೊಳ್ಳುವ ಜಮೀನುಗಳಿಗೆ ನೀಡುವ ಪರಿಹಾರ ಮೊತ್ತ ವೈಜ್ಞಾನಿಕ ಮತ್ತು ನ್ಯಾಯಸಮ್ಮತವಾಗಿರಬೇಕು' ಎಂದು ವಕೀಲ ವಿಷ್ಣು ಹೆಗಡೆ ಹೇಳಿದರು.

ಭಾರತೀಯ ಕಿಸಾನ್ ಸಂಘ-ಕರ್ನಾಟಕ ಪ್ರದೇಶ, ಭಾರತೀಯ ಆಗ್ರೋ ಎಕನಾಮಿಕ್ಸ್ ರಿಸರ್ಚ್ ಸೆಂಟರ್ ಶುಕ್ರವಾರ ನಗರದ ಗಾಂಧಿ ಭವನದಲ್ಲಿ ಆಯೋಜಿಸಿದ್ದ 'ಕೃಷಿ ಭೂಮಿಯ ಸ್ವಾಧೀನ-ರೈತರ ಅಸ್ತಿತ್ವಕ್ಕೆ ಪೂರಕವೇ.. ಮಾರಕವೇ..?' ವಿಷಯ ಕುರಿತ ವಿಚಾರಸಂಕಿರಣದಲ್ಲಿ ಮಾತನಾಡಿದರು.

ಮಾರುಕಟ್ಟೆ ಮೌಲ್ಯದ ಆಧಾರದ ಮೇಲೆ ಪರಿಹಾರ ನಿಗದಿಯಾಗಬೇಕು. ಆದರೆ, ಪ್ರಸ್ತುತ ಉಪನೋಂದಣಾಧಿಕಾರಿ ಕಚೇರಿಯ ಮಾರ್ಗಸೂಚಿ ಮೌಲ್ಯದ ಆಧಾರದ ಮೇಲೆ ಪರಿಹಾರ ನೀಡುತ್ತಿದ್ದು, ಇದರಿಂದ ರೈತರಿಗೆ ಸಮರ್ಪಕ ನ್ಯಾಯ ದೊರೆಯುತ್ತಿಲ್ಲ ಎಂದು ಹೇಳಿದರು.

ರಸ್ತೆ, ರೈಲು, ಕೈಗಾರಿಕಾ ಕಾರಿಡಾರ್ ಹಾಗೂ ಇತರೆ ಮೂಲಸೌಕರ್ಯ ಯೋಜನೆಗಳಿಗಾಗಿ ಭೂಸ್ವಾಧೀನ ಮಾಡಲಾಗುತ್ತಿದ್ದರೂ ರೈತರ ಜೀವನೋಪಾಯ ಮತ್ತು ಭವಿಷ್ಯದ ಭದ್ರತೆಗೂ ಸಮಾನ ಆದ್ಯತೆ ನೀಡಬೇಕಿದೆ. 2013ರ ಭೂಸ್ವಾಧೀನ, ನ್ಯಾಯಸಮ್ಮತ ಪರಿಹಾರ ಮತ್ತು ಪಾರದರ್ಶಕತೆ ಹಕ್ಕು ಹಾಗೂ ಪುನರ್ವಸತಿ ಕಾಯ್ದೆ ಪ್ರಕಾರ ಭೂಮಿ ಕಳೆದುಕೊಳ್ಳುವವರಿಗೆ ಪರಿಹಾರದ ಜತೆಗೆ ಪುನರ್ವಸತಿ ಕಲ್ಪಿಸಬೇಕಿದೆ. ಆದರೆ, ಹಲವು ಸಂದರ್ಭಗಳಲ್ಲಿ ಈ ನಿಬಂಧನೆಗಳು ಪರಿಣಾಮಕಾರಿಯಾಗಿ ಜಾರಿಯಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಒಂದು ಅಥವಾ ಎರಡು ಎಕರೆ ಭೂಮಿಯೇ ಜೀವನಾಧಾರವಾಗಿರುವ ರೈತ ಅದನ್ನು ಕಳೆದುಕೊಂಡ ನಂತರ ಎಲ್ಲಿಗೆ ಹೋಗಬೇಕು? ಪರಿಹಾರದ ಹಣ ಮುಗಿದ ಬಳಿಕ ಆತನ ಕುಟುಂಬದ ಭವಿಷ್ಯ ಏನು? ಎಂಬ ಪ್ರಶ್ನೆಯನ್ನು ಅವರು ಮುಂದಿಟ್ಟರು.

ಭೂಸ್ವಾಧೀನಕ್ಕೆ ಸಂಬಂಧಿಸಿದ ಪರಿಹಾರ ಹಾಗೂ ದೀರ್ಘಕಾಲಿಕ ಜೀವನ ಭದ್ರತೆ ಕುರಿತು ಅಧ್ಯಯನ ನಡೆಸಲು ವಿಶೇಷ ಸಮಿತಿ ರಚಿಸುವ ಅಗತ್ಯವಿದೆ. ಮಾರುಕಟ್ಟೆ ಮೌಲ್ಯವನ್ನು ಪರಿಗಣಿಸಿ ಸರ್ಕಾರ ರೈತರ ಜಮೀನನ್ನು ಖರೀದಿಸಬೇಕು. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಸಂಬಂಧಿತ ರೈತರ ಅಭಿಪ್ರಾಯಕ್ಕೆ ಮನ್ನಣೆ ನೀಡಬೇಕು ಎಂದು ಸಲಹೆ ನೀಡಿದರು.

ಭಾರತೀಯ ಆಗ್ರೋ ಎಕನಾಮಿಕ್ಸ್ ರಿಸರ್ಚ್ ಸೆಂಟರ್ ಅಧ್ಯಕ್ಷ ಪ್ರಮೋದ್ ಚೌಧರಿ, ರಾಜ್ಯ ಸಂಚಾಲಕ ಪುಟ್ಟಸ್ವಾಮಿ ಗೌಡ, ಅಖಿಲ ಭಾರತೀಯ ಕಿಸಾನ್ ಸೆಂಟರ್‌ನ ರಾಷ್ಟ್ರೀಯ ಅಧ್ಯಕ್ಷ ಸಾಯಿರೆಡ್ಡಿ, ಭಾರತೀಯ ಕಿಸಾನ್ ಸಂಘದ ರಾಜ್ಯ ಅಧ್ಯಕ್ಷ ಬೀಮ್ ಸೇನ್ ಕೊಕರೆ ಹಾಜರಿದ್ದರು.

ನಗರದ ಗಾಂಧಿ ಭವನದಲ್ಲಿ ಶುಕ್ರವಾರ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ವಕೀಲ ವಿಷ್ಣು ಹೆಗಡೆ, ಭೀಮಸೇನ್ ಕೊಕರೆ, ಸಾಯಿ ರೆಡ್ಡಿ, ಪ್ರಮೋದ್ ಚೌಧರಿ, ಪುಟ್ಟಸ್ವಾಮಿ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಪ್ತಗಿರಿ ಪ್ರಮೋಟರ್ಸ್ ಮತ್ತು ಡೆವಲಪರ್ಸ್ ವತಿಯಿಂದ ನೂತನ ಪ್ರಾಜೆಕ್ಟ್

ಸಪ್ತಗಿರಿ ಎಲಿಗೇನ್ಸ್

Sapthagiri PROMOTERS & DEVELOPERS

ನೆಲಮಂಗಲ - ದೊಡ್ಡಬಳ್ಳಾಪುರ ರಸ್ತೆ

(ನೆಲಮಂಗಲ ಬಸ್ ನಿಲ್ದಾಣದಿಂದ ಕೇವಲ 5 ನಿಮಿಷಗಳ ಅಂತರ)

Attached to PRR Ring Road

100% Site Realeased & Layout work completed
A Khatha is Ready for Registration

ಸೌಕರ್ಯಗಳು

ಒಳಚರಂಡಿ ಸೌಲಭ್ಯ | ವಿದ್ಯುತ್ ಸೌಲಭ್ಯ | ಬೀದಿ ದೀಪಗಳು | ನೀರಿನ ಸೌಲಭ್ಯ | ನೈರ್ಮಲ್ಯ ಸೌಲಭ್ಯ | ಗೇಟೆಡ್ ಸಮುದಾಯ | ಅಗಲವಾದ ಬಿಳಿ ಮೇಲ್ಮಾರ್ಗದ ರಸ್ತೆಗಳು (ಸಿಸಿ ರಸ್ತೆ)

9686 49 49 49

Bank Loan Available

For Booking and more information call: **7026 11 88 99**

REAL ESTATE SELLING

Sites

Banashankari

BDA SITE For Sale In BANASHANKARI 6th Stage 1st Block #100/L 1937-Sqft North Facing 16,000/- Per Sqft Near NPS School. CONTACT: 9535575774/ 9343668888

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

"BUYING AND Selling of Residency/ Commercial/ Industrial Properties in Bangalore only genuine Buyers/ Sellers Call: 9845286505"

BANASHANKARI 6TH stage. 50x80. Commercial 100 Feet Road. And 40x60. Corners Sites For Sale. -9916817739

"BANASHANKARI 2ND-STAGE 30x50, 35x55, 40x60, Banashankari 3rd Stage 40x60, Kanakapura Road 30x40. Call: 9845286505"

Bannerghatta Road

SALE 40X60 North Facing Manjunath Nagar Near Vijaya Bank Layout BTM 4th Stage Broker Excuse 8147734144

Chandapura

EXCELLENT VILLA Plot for sale. 30x50, 1500 sft, West Facing, The Imperial Address, Hosur Road, Chandapura Main Road, BMRDA Approved, E- Khatha, Price Rs. 7000/- sft for details. Please contact:- krishna Murthy:- 9845465339.

Hosur Road

"ATTIBELE NRI LAYOUT 40x60 South facing Site for sale near TVS Factory Excellent location. 9845500019/ 7019314962"

Kanakapura Road

SITE FOR Sale 30x40 west facing, BCCHS Layout, Vajarahalli. Brokers Excuse. Genuine buyers Contact: 9880252008.

Jigani

KHB Sites Near India 2nd International Cricket Stadium
Jigani, Electronic city, Bommasandra, Ready for Registration, SBI Bank loan avbl, Land owner Sites Call: 70260 13388

Koramangala

KORAMANGALA 8TH Block 3350 Sqft Revenue Site For Sale Clear Title. Brokers Excuse. Contact: 9481801053

Kempegowda Layout

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

Magadi Road

SITE 5717 Sqft For Sale Magadi Main Road 30km Rs. 2000/- Per Sqft. 9342552428 Chandrashekar

Mysore

J V partners required for Prime property on Bangalore mysore express way before toll near to mysore contact owner 9741019028

Nelamangala

FEW SITES FOR SALE
Sondekoppa Road
Nelamangala Town Limits
Nagarasabha E-Katha
Ready for Registration
Rs.3300/- per sqft.
Negotiable
Bank Loan Available.
Contact : 9611525588, 9945390709

BYRASHETTYHALLI VILLAGE. Aiswarya County. BMRDA. 40X60. East facing site for sale. loan available. Owner. 9620117773

VCNR VISTA NEAR NELAMANGALA & HESARGHATTA 30X40 & 30X50 BOOK A SITE VISIT CONTACT:9986896859

Rajarajeshwari Nagar

40X60 SITE FOR SALE: Rajarajeshwari Nagar,BEML Layout Global Tech Park Back Gate.Ideal for`PG.&.Rental Income`Building Prime`Location. Serious Buyers`only. Call-8147618891

Vishweshwariah Layout

VISHWESHWARIAH LAYOUT 7th Block BDA 30x40 For Immediate Sale Good Location. More Details Contact: 7975986504

WANTED / AVAILABLE 20x30, 30x40, 40x60, 50x80 STIES @
FOR SALE
Visveshwaraiah Layout BSK 6th Stg, Kempegowda Lyt, Nagarabhavi, ITI Lyt, Vidhanasouda Layout. Immediate Registration
CALL: 9845 488 488

VISHVESHWARAIAH LAYOUT BDA SITE 30*40 south facing, 4th Block, near Bus stop. 10500/ sq.ft. Owner meeting. Call: 9663330221

Agricultural Land

Mysore

MYSORE 1 ACRE LAND available, Near New Mysore-Bangalore Highway, suitable for all Commercial Purposes. Contact: 7348831599

Commercial Land

General

UDUPI KOTA BEACH Front 15 To 92 Cents Villa Plots Converted For Sale. Contact: 9481801053

Farm House/ Land/ Resorts

Magadi Road

MAGADI ROAD Tavarekere (Bangalore), 1 Acre, Half Acre Coconut Farm Land. Rs. 7,00,000/ Gunta. 92434-19641.

Flat

Banashankari

KATHRIGUPPE EAST, GH RESIDENCY, 3BHK FLATS For Sale, Ready to Move. 9000/ SFT. 80507-27159/ 96065-03064

Nagarabhavi

FLATS FOR-SALE @ Nagarabhavi/ Chandra Layout 2 & 3 BHK Ready to Move In Good Location Call:9538472420 9845066608

House

Vishweshwariah Layout

20X30 BUILDING for SALE. NORTH FACE, G+3, #2377, Vishveshwaraiah Layout, 8th Block, 1.45 Crore. 9731177977

Rajarajeshwari Nagar

SALE BUILDING 40X60 Duplex House. Ideal Homes sites 40X60, 50×80, BDA, Direct Owner Meeting: 9164409377

Residential/ Commercial

Old Madras Road

FOR SALE A KHATA OMR MAIN ROAD FACING SHOWROOM/ COMMERCIAL PROPERTY. SUITABLE FOR OFFICE/INSTITUTE/BPO/CLINIC CONTACT 9948661379

Agricultural Land Converted

Devanahalli

5 TO 100 Acres Agriculture Conversion Lands Devanahalli Doddaballpura Nandi Hills Chikkaballapur For Immediate Sale Call 9164565566

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Sites

Vishweshwariah Layout

BUYING/ SELLING 20x30,30x40,40x60 50x80 BDA sites VISHVESHWARAIAH LAYOUT,BSK 6th-stage KEMPEGOWDA-LAYOUT.Contact: 9844533371/ 9341733480

Joint Development

South

WANTED PROPERTIES For JV 2400Sqft and Above, Purchase 4 Acres and Above. Suitable: For Apartment & Layout: 9844732229

RENTAL PROPERTIES

Accommodation Available

Flats

INFANTRY ROAD 2 BHK Semi furnished well maintained Spacious Apartment close to Metro, Schools/Colleges, 9880137226

MALLESWARAM, FOR rent 2 BHK 3 BHK and 5BHK. Vegetarians only.No brokerage. Contact 8151991952

TO-LET 3 BHK Sterling Solitaire Syndicate Bank Colony, Bannerghatta Road. Contact: 98440 40351/ 94482 73218

BUSINESS

Business Offers

Finance

START WEEKLY Earning with a Secured Investment Plan Min. Rs50,000 Call 9343832393

Franchise

EXCELLENT COACHING facility available for partnership for institutions/ individuals in vijayangar 1st stage near metro Contact: 6364469552

Business For Sale

A MEDICAL Device Manufacturing Unit, with a ready to market USFDA cleared product, Neuromuscular Transmission Monitoring during surgery, based out of Panjim, GOA, available for sale or takeover. DM at 9561092576 for more details.

SOCIAL SERVICES

Old Age Home

SUKHSHANTHI LUXURY Retirement Home, near Sarjapura Bangalore Rs. 22,575/- monthly Rs. 1,500 per day furnished accommodation. 3 Meals, 24X7 Nurse, Ambulance. Call: 9341289357

JOB OPPORTUNITIES

General

JOB OPPORTUNITY FOR RETIRED ARMY PERSONNEL ONLY
FROM AWPO
35 VACANCIES
RAILWAY POINTSMAN
BENGALURU DIVISION
IN HAND ₹37,040+ PF
JOBS ACROSS THE FOLLOWING DISTRICTS
• Bengaluru Urban • Bengaluru Rural • Tumakuru • Ramanagara • Mandya • Krishnagiri • Kolar
APPLY NOW! APPLY BY JUNE 25
DON'T MISS OUT!
Mob: 9606020080
Ph. No. - 08025580758/59
SEND CV TO: ro.bangalore@awpo.in

Marketing & Sales

IMMEDIATE HIRING for Sales role at Nirvanaa. Whatsapp:+91 8197067858

PERSONAL

Change of Name

CHANGE OF NAME
We, **Bharath Kumar J & Nethravathi M E**, R/at Flat No.G002, Murari abhaya Aprt., Abbaiah Reddy Layout Main Road, Kaggadasapur Main Road, CV Raman Nagar, Bengaluru - 560093, have changed my minor son's name from **BHARGAV B** to **BHARGAV VIHAAN B,** vide affidavit dt: 29.05.2026 before notary K.S. Giridhar, Bengaluru.

CHANGE OF NAME
I, **RYAN CLAUD MAHON,** residing Old No. 30, New No. 33, 6th Cross, Hutchins Road, Near Apd Hutchins Road, Thomas Town, Bengaluru-560084, have changed my name to **RYAN CLAUDE MAHON** vide affidavit dated 18-06-2026 before notary Y.R. Chandrasekar, Bengaluru. Henceforth I shall be called **RYAN CLAUDE MAHON** only

CHANGE OF NAME
I, **GILLIAN LEOLA VAZ, GILLIAN LEOLA VAZ SANJAY,** resident at No. 43/5, Davis Road, Richards Town, Bengaluru- 560084, declare that the above names pertain to me only & henceforth I shall be known as **GILLIAN LEOLA VAZ** vide affidavit dated 18-06-2026 before notary Prasad Shetty K.B., Bangalore.

CHANGE OF NAME
I, **ARUNESH SHRIVASTAVA** and **SHRIVSTAVA ARUNESH,** R/at Flat No. 101, Vars Casa Cerise, 10th Cross, Pai Layout, Doorvaninagar, Bengaluru-560016, declare that the above names pertain to me only. Henceforth I shall be known as **ARUNESH SHRIVASTAVA** vide affidavit dt:17-06-2026 before notary J.Anand Kumar, Bengaluru.

DH Classifieds DECCAN HERALD More value, more impact
REAL ESTATE
www.dhclassifieds.com
ಪ್ರಜಾವಾಣಿ
BOOK YOUR REAL ESTATE ADS IN DH ALL KARNATAKA + PRAJAVANI BENGALURU CITYON SATURDAY + SUNDAY
BOOK NOW
@ 2481/-* FOR 15 WORDS
Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164

ಚಿಟಿಕೆ ಸುದ್ದಿ

ಮಾಜಿ ಶಾಸಕ ಲಿಂಗೇಶ್ ಸೇರಿ 12 ಜನರ ಬಂಧನ

ಬೇಲೂರು(ಹಾಸನ): ಬಗರ ಹುಕುಂ ಸಮಿತಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅಕ್ರಮವಾಗಿ ಭೂ ಮಂಜೂರಾತಿ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಬೇಲೂರು ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ, ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಎಸ್. ಲಿಂಗೇಶ್ ಸೇರಿ 12 ಜನರನ್ನು ಶುಕ್ರವಾರ ಸಿಐಡಿ ಪೊಲೀಸರು ಬಂಧಿಸಿದ್ದಾರೆ.

ಕೆ.ಎಸ್. ಲಿಂಗೇಶ್

ಬೆಂಗಳೂರಿನಿಂದ ಬಂದಿದ್ದ ಸಿಐಡಿ ತಂಡ ತಾಲ್ಲೂಕಿನ ಹಳೇಬೀಡಿನ ಕರಿಕಟ್ಟಹಳ್ಳಿಯ ಮನೆಯಲ್ಲಿ ಲಿಂಗೇಶ್ ಅವರನ್ನು ಬಂಧಿಸಿ ಕರೆದೊಯ್ದು ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ಹಾಜರು ಪಡಿಸಿದೆ.

ಲಿಂಗೇಶ್ ಜೊತೆಗೆ ಅಂದಿನ ತಹಶೀಲ್ದಾರ್ ಮೋಹನ್ ಕುಮಾರ್, ರಾಜಸ್ವ ನಿರೀಕ್ಷಕರಾಗಿದ್ದ ನಾಗರಾಜು, ನಿಂಗರಾಜು, ಉದಿತ್, ಗ್ರಾಮ ಲೆಕ್ಕಾಧಿಕಾರಿಗಳಾದ ಬಸಪ್ಪ, ರಾಜ್ ಸಾಬ್,ಅಂಕೇಗೌಡ, ಸಾಗರ್, ರವಿನಾಯಕ್, ಲಿಂಗರಾಜು ಅವರನ್ನು ಬಂಧಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸುಗಮ ಸಂಗೀತ ಕಲಿಕಾ ಶಿಬಿರ

ಬೆಂಗಳೂರು: ವಿಶ್ವ ಸಂಗೀತ ದಿನದ ಅಂಗವಾಗಿ ಅನುರಾಗ್ಸ್ ಸಂಗೀತ ಗುರುಕುಲ ವತಿಯಿಂದ ಸುಗಮ ಸಂಗೀತ ಕಲಿಕಾ ಶಿಬಿರ ಹಾಗೂ ಕನ್ನಡ ಗಜಲ್ ಗಾಯನ ಯಾತ್ರೆಯ 38ನೇ ಸಂಚಿಕೆ ಸಮಾರಂಭ ಜೂನ್ 21ರಂದು ನಡೆಯಲಿದೆ.

ವಿಜಯನಗರ ಮೆಟ್ರೋ ನಿಲ್ದಾಣದ ಹತ್ತಿರದ ಡಾ. ಎಂ. ಚಿದಾನಂದ ಮೂರ್ತಿ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ರತ್ನಮಾಲಾ ಪ್ರಕಾಶ್ ಅವರು ಗಾಯನದ ಅನುಭವ ಹಂಚಿಕೊಳ್ಳಲಿದ್ದಾರೆ. ಜೊತೆಗೆ ಹಾಡಲು ಹೇಳಿಕೊಡುತ್ತಾರೆ. ಬೆಳಗ್ಗೆ 10 ರಿಂದ 4ರವರೆಗೆ ಶಿಬಿರ ನಡೆಯಲಿದ್ದು, ನೋಂದಣಿಗೆ ಮೊ. 9743752223 ಸಂಪರ್ಕಿಸಬಹುದು.

ಟಾಟಾ ಟ್ರಸ್ಟ್‌ನಿಂದ ಅನುದಾನ

ಬೆಂಗಳೂರು: ನಗರದ ಐಐಎಂನಲ್ಲಿ ಪದವಿ ಕೋರ್ಸ್‌ಗಳ ಕ್ಯಾಂಪಸ್‌ನ ಸರ್ವಾಂಗೀಣ ಅಭಿವೃದ್ಧಿ, ಮೂಲ ವಿಜ್ಞಾನದ ಪೋಷಣೆಗಾಗಿ ಟಾಟಾ ಟ್ರಸ್ಟ್ ಅನುದಾನ ಘೋಷಿಸಿದೆ. ಈ ಮೂಲಕ ಸಂಸ್ಥೆಯ ದೀರ್ಘಕಾಲೀನ ಶೈಕ್ಷಣಿಕ ದೃಷ್ಟಿಕೋನ, ಕ್ಯಾಂಪಸ್ ವಿನ್ಯಾಸ ಮತ್ತು ಉನ್ನತ ಶಿಕ್ಷಣದಲ್ಲಿ ಉತ್ಕೃಷ್ಟ ಸಾಧನೆಗೆ ಟಾಟಾ ಟ್ರಸ್ಟ್ ಬೆಂಬಲ ನೀಡಿದೆ. ಐಐಎಂಬಿಯ ಮುಖ್ಯ ಕ್ಯಾಂಪಸ್‌ನಿಂದ ಸುಮಾರು 27 ಕಿಲೋ ಮೀಟರ್ ದೂರದಲ್ಲಿರುವ ಹೊಸ ಕ್ಯಾಂಪಸ್ ವಸತಿ ಸಹಿತ ಶಾಲೆಯಾಗಿದೆ.

ಆರಂಭದಲ್ಲಿ ನಾಲ್ಕು ವರ್ಷಗಳ ಎರಡು ಕೋರ್ಸ್‌ಗಳನ್ನು ಇಲ್ಲಿ ಕಲಿಸಲಾಗುತ್ತದೆ. ಡೇಟಾ ಸೈನ್ಸ್‌ನಲ್ಲಿ ಮೈನರ್‌ನೊಂದಿಗೆ ಅರ್ಥಶಾಸ್ತ್ರದಲ್ಲಿ ಬಿಎಸ್ಸಿ (ಆನರ್ಸ್) ಮತ್ತು ಅರ್ಥಶಾಸ್ತ್ರದಲ್ಲಿ ಮೈನರ್‌ನೊಂದಿಗೆ ಡೇಟಾ ಸೈನ್ಸ್‌ನಲ್ಲಿ ಬಿಎಸ್ಸಿ (ಆನರ್ಸ್) ಕೋರ್ಸ್ ಈ ವರ್ಷದ ಆಗಸ್ಟ್‌ನಲ್ಲಿ ಆರಂಭವಾಗಲಿದೆ. ಸಂಪರ್ಕ: www.iimb.ac.in/

ಮಕ್ಕಳ ಚಿಕಿತ್ಸೆಗೆ ವಿಶೇಷ ಕ್ಲಿನಿಕ್

ಬೆಂಗಳೂರು: ಹೆಬ್ಬಾಳದ ರೈನ್ ಬೋ ಚಿಲ್ಡ್ರನ್ಸ್ ಹಾಸ್ಪಿಟಲ್ ಆ್ಯಂಡ್ ಬರ್ತ್‌ರೈಟ್ ವತಿಯಿಂದ ನರಸಂಬಂಧಿ, ಸ್ನಾಯು, ನರ ಮತ್ತು ಚಲನಶೀಲತೆಯ ಸಮಸ್ಯೆಗಳಿರುವ ಮಕ್ಕಳ ಚಿಕಿತ್ಸೆಗಾಗಿ ವಿಶೇಷ ಕ್ಲಿನಿಕ್ ಆರಂಭಿಸಲಾಗಿದೆ.

ನ್ಯೂರೋಮಸ್ಕ್ಯುಲರ್ ಸಮಸ್ಯೆಗಳಿರುವ ಮಕ್ಕಳಿಗೆ ಸಕಾಲಿಕ ಚಿಕಿತ್ಸೆಯನ್ನು ತಜ್ಞ ವೈದ್ಯರ ತಂಡ ನೀಡಲಿದೆ. ಪಿಡಿಯಾಟ್ರಿಕ್ ನ್ಯೂರಾಲಜಿ ವಿಭಾಗದ ಸಲಹೆಗಾರರಾದ ಡಾ. ಸಮೀತಾ ಮರ್ಸಿ ಪ್ರಭು ಮಾತನಾಡಿ, 'ನ್ಯೂರೋಮಸ್ಕ್ಯುಲರ್ ಸಮಸ್ಯೆಗಳಿರುವ ಮಕ್ಕಳಿಗೆ ಚಿಕಿತ್ಸೆ ಅಗತ್ಯ. ಬೇರೆ ಕೇಂದ್ರಗಳಿಗೆ ಭೇಟಿ ನೀಡುವುದು ಕುಟುಂಬಗಳಿಗೆ ಕಷ್ಟ ಹಾಗೂ ಸಕಾಲಿಕ ಚಿಕಿತ್ಸೆ ವಿಳಂಬವಾಗುತ್ತದೆ. ವಿಶೇಷ ಕ್ಲಿನಿಕ್‌ನಲ್ಲಿ ಎಲ್ಲಾ ವಿಧದ ಚಿಕಿತ್ಸೆ ದೊರೆಯಲಿದೆ' ಎಂದರು.

ಬಸ್ ಡಿಕ್ಕಿ: ಅಪ್ಪ, ಅಮ್ಮ, ಮಗು ಸಾವು

ಹೊಸಕೋಟೆ: ತಾಲ್ಲೂಕಿನ ದೇವನಹಳ್ಳಿ ರಸ್ತೆಯಲ್ಲಿ ಬೈಕ್‌ಗೆ ಬಿಎಂಟಿಸಿ ಬಸ್ ಡಿಕ್ಕಿ ಹೊಡೆದು ಒಂದೇ ಕುಟುಂಬದ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ದೇವನಹಳ್ಳಿ ತಾಲ್ಲೂಕು ತೆಲ್ಲಹಳ್ಳಿಯ ಅರುಣ್ (33), ಪತ್ನಿ ಅನುಷಾ (28), ಪುತ್ರಿ ಹರಿಣಿ (3) ಮೃತರು.

ಅರುಣ್ ಮತ್ತು ಅನುಷಾ ದಂಪತಿ ಮಕ್ಕಳಾದ ಹರಿಣಿ, ಅನ್ವನಿಕಾ ಅವರೊಂದಿಗೆ ಬೈಕ್‌ನಲ್ಲಿ ಸೂಲಿಬೆಲೆಯಿಂದ ದೇವನಹಳ್ಳಿಗೆ ಹೊರಟ್ಟಿದ್ದರು. ಏಕಪಥದ ವಿರುದ್ಧದ ದಿಕ್ಕಿನಲ್ಲಿ ಯಾವುದೇ ಮುನ್ಸೂಚನೆ ನೀಡಿದೆ ಏಕಾಏಕಿ ಬಸ್ ನುಗ್ಗಿದ್ದರಿಂದ ಮುಖಾಮುಖಿ ಡಿಕ್ಕಿಯಾಗಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

32 ಕೆರೆಗಳ ನೀರು ಅತಿ ಕಲುಷಿತ

ನೀರಿನ ಗುಣಮಟ್ಟ ಸುಧಾರಿಸಲು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿರುವ 32 ಕೆರೆಗಳಲ್ಲಿನ ನೀರು ಅತಿ ಕಲುಷಿತವಾಗಿದ್ದು, ಮಾಲಿನ್ಯ ನಿಯಂತ್ರಣ ಮಂಡಳಿಯ ವರದಿಯಲ್ಲಿ 'ಇ-ವರ್ಗ'ಕ್ಕೆ ಸೇರಿವೆ. ಇವುಗಳ ನೀರಿನ ಗುಣಮಟ್ಟ ಸುಧಾರಿಸಲು ಕ್ರಮ ಕೈಗೊಳ್ಳಬೇಕು ಎಂದು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚಿಸಿದರು.

ಜಿಬಿಎ ವ್ಯಾಪ್ತಿಯ ಕೆ-100 ರಾಜಕಾಲುವೆ, 'ಇ' ವರ್ಗಕ್ಕೆ ಸೇರಿರುವ ಕೆರೆಗಳು ಹಾಗೂ ರಸ್ತೆ ಪುನಶ್ಚೇತನಕ್ಕೆ ಸಂಬಂಧಿಸಿದಂತೆ ನಡೆದ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ನಗರ ಪಾಲಿಕೆಗಳ ಒಡೆತನದ 182 ಕೆರೆಗಳಿದ್ದು, ಅವುಗಳಲ್ಲಿ 32 ಕೆರೆಗಳ ನೀರಿನ ಗುಣಮಟ್ಟವು 'ಇ' ವರ್ಗಕ್ಕೆ ಸೇರಿದೆ ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಏಪ್ರಿಲ್-2026ರಲ್ಲಿ ನೀಡಿರುವ ವರದಿಯಲ್ಲಿ ಉಲ್ಲೇಖಿಸಿದೆ. ಈ ಸಂಬಂಧ ಆಯಾ ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿರುವ ಕೆರೆಗಳನ್ನು, ಪಾಲಿಕೆ ಹಾಗೂ ಜಲಮಂಡಳಿ ಅಧಿಕಾರಿಗಳು ಜಂಟಿಯಾಗಿ ಪರಿಶೀಲನೆ ನಡೆಸಿ, ಅಗತ್ಯ ಪರಿಹಾರ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದರು.

182	ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿರುವ ಕೆರೆಗಳು
93	ಕೆರೆಗಳಲ್ಲಿ ನೀರಿನ ಗುಣಮಟ್ಟದ ಪರೀಕ್ಷೆ
61	ಕೆರೆಗಳ ನೀರಿನ ಗುಣಮಟ್ಟ 'ಡಿ ವರ್ಗ'
32	ಕೆರೆಗಳ ನೀರಿನ ಗುಣಮಟ್ಟ 'ಇ ವರ್ಗ'

* ಡಿ ವರ್ಗ: ವನ್ಯಜೀವಿಗೆ ಕುಡಿಯಲು, ಮೀನುಗಾರಿಕೆಗೆ ಯೋಗ್ಯ

* ಇ ವರ್ಗ: ಲೋಹ, ಕಲ್ಮಶಯುಕ್ತ, ಅತಿ ಕಲುಷಿತ

ಕೆ-100 ರಾಜಕಾಲುವೆ ಮಾರ್ಗದಲ್ಲಿ 19 ಸ್ಥಳಗಳಲ್ಲಿ ಕೊಳಚೆ ನೀರು ಸೇರುತ್ತಿದ್ದು, ಅದನ್ನು ಸಂಪೂರ್ಣವಾಗಿ ತಡೆಯಬೇಕಿದೆ. ಮಿಷನ್ ರಸ್ತೆಯಲ್ಲಿ ಕೆಲವು ಮನೆಗಳಿಂದ ನೇರವಾಗಿ ರಾಜಕಾಲುವೆಗೆ ಕೊಳಚೆ ನೀರು ಹರಿಯುತ್ತಿದ್ದು, ಯಾವ ಮನೆಗಳಿಂದ ಕೊಳಚೆ ನೀರು ಬರುತ್ತಿದೆ ಎಂಬುದನ್ನು ಪರಿಶೀಲಿಸಿ, ಸಂಬಂಧಿಸಿದವರಿಗೆ ನೋಟಿಸ್ ನೀಡಿ ಸಮಸ್ಯೆ ಸರಿಪಡಿಸಿಕೊಳ್ಳಲು ಸೂಚಿಸಬೇಕು. ಕೆ-109ರ ಕೆಎಸ್ ಗಾರ್ಡನ್ ಸಮೀಪ ರಾಜಕಾಲುವೆ ಭಾಗದಲ್ಲಿ ಒಳಚರಂಡಿ ಪೈಪ್ ಹಾದು ಹೋಗಿದ್ದು, ಭಾರಿ ಮಳೆಯ ಸಂದರ್ಭದಲ್ಲಿ ಒಳಚರಂಡಿ ನೀರು ಉಕ್ಕಿ ಹರಿದು ಸಮಸ್ಯೆ ಉಂಟಾಗುತ್ತಿದೆ. ಆದ್ದರಿಂದ ಆ ಭಾಗವನ್ನು ಮರು ವಿನ್ಯಾಸಗೊಳಿಸಿ (ರೀ-ಮಾಡೆಲಿಂಗ್) ಸಮಸ್ಯೆ ಪರಿಹರಿಸಬೇಕು ಎಂದು ತಿಳಿಸಿದರು.

ಡೈಯಿಂಗ್ ಯುನಿಟ್‌ಗಳಿಂದ ಬಣ್ಣ ಮಿಶ್ರಿತ ನೀರು ಕೆ-100ಕ್ಕೆ ಸೇರುತ್ತಿದ್ದು, ಅದನ್ನು ತಡೆಯುವ ಸಲುವಾಗಿ ಸ್ಥಳ ಪರಿಶೀಲನೆ ನಡೆಸಿ ಸೂಕ್ತ ಯೋಜನೆ ರೂಪಿಸಿ ವರದಿ ಸಲ್ಲಿಸಬೇಕು. ಜೊತೆಗೆ ಕೆ-100 ಮಾರ್ಗದಲ್ಲಿ ನೀರಿನ ಗುಣಮಟ್ಟವನ್ನು ನಿಯಮಿತವಾಗಿ ಪರಿಶೀಲಿಸಿ ವರದಿ ನೀಡಬೇಕು ಎಂದು ಸೂಚಿಸಿದರು.

ಜೆ.ಸಿ ರಸ್ತೆ ಸಮೀಪ ರಾಜಕಾಲುವೆ ಮೇಲಿರುವ ಎರಡು ಕಟ್ಟಡಗಳನ್ನು ತೆರವುಗೊಳಿಸಬೇಕು. ಈ ಸಂಬಂಧ ಕೇಂದ್ರ ನಗರ ಪಾಲಿಕೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಕಟ್ಟಡಗಳನ್ನು ನೆಲಸಮಗೊಳಿಸಲು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವಂತೆ ಸೂಚಿಸಿದರು.

ಇ ವರ್ಗದಲ್ಲಿರುವ ಕೆರೆಗಳು

- **ಕೇಂದ್ರ ನಗರ ಪಾಲಿಕೆ:** ಬೈರಸಂದ್ರ ಕೆರೆ
- **ಉತ್ತರ ನಗರ ಪಾಲಿಕೆ:** ಜಕ್ಕೂರು, ಅಮೃತಹಳ್ಳಿ, ಅಲ್ಲಾಳಸಂದ್ರ, ಯಲಹಂಕ, ಅಬ್ಬಿಗೆರೆ, ಸಿಂಗಪುರ, ರಾಚೇನಹಳ್ಳಿ, ಕೋಗಿಲು ಕೆರೆ
- **ದಕ್ಷಿಣ ನಗರ ಪಾಲಿಕೆ:** ಯಡಿಯೂರು, ದೇವರಕೆರೆ, ದೊರೆಕೆರೆ, ಉತ್ತರಹಳ್ಳಿ, ದೊಡ್ಡಕಮ್ಮನಹಳ್ಳಿ, ಬಸವಪುರ, ಪರಪ್ಪನ ಅಗ್ರಹಾರ ಕೆರೆ
- **ಪೂರ್ವ ನಗರ ಪಾಲಿಕೆ:** ದೊಡ್ಡನೆಕ್ಕುಂದಿ, ಸಿದ್ದಾಪುರ, ರಾಮಪುರ, ದೇವರಬೀಸನಹಳ್ಳಿ, ವಿಭೂತಿಪುರ, ದೊಡ್ಡಕನ್ನೇನಹಳ್ಳಿ, ಸೀಗೇಹಳ್ಳಿ, ಭೋಗನಹಳ್ಳಿ, ಸೌಲ್‌ಕೆರೆ, ವಿಜಿನಾಪುರ, ಪಣತ್ತೂರು ಕೆರೆ
- **ಪಶ್ಚಿಮ ನಗರ ಪಾಲಿಕೆ:** ಕೆಂಪಾಂಬುಧಿ, ಕರಿಹೋಬನಹಳ್ಳಿ, ವಿಶ್ವನೀಡಂ, ಹೊಸಕೆರೆಹಳ್ಳಿ, ಕನ್ನಹಳ್ಳಿ ಕೆರೆ.

ಇಲ್ಲಿದೆ ನೋಡಿ ಕಸ...

DH DECCAN HERALD
ಪ್ರಜಾವಾಣಿ
ಸಿಟಿಜನ್ ಕನೆಕ್ಟ್
ಉತ್ತಮ ಬೆಂಗಳೂರಿಗಾಗಿ ಸಹಯೋಗ
96060 38256
dhpvcitizenconnect@printersmysore.co.in

ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳ ಸಂಪರ್ಕ
- ಕರೀಗೌಡ-ಸಿಇಒ- 77605 04651
- ರಮಾಮಣಿ-ಸಿಒಒ- 94481 97256
- ರಾಜೇಶ್-ಸಿಜಿಎಂ- 948068 84046
- ರಾಘವೇಂದ್ರ ಪ್ರಸಾದ್ -ಸಿಜಿಎಂ-91102 89696

ನಗರದಲ್ಲಿ ದಿನವೂ ಕಸ ವಿಲೇವಾರಿ ಆಗುತ್ತಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ಹೇಳುತ್ತಿದ್ದರೂ, ಮುಖ್ಯರಸ್ತೆ, ವಾರ್ಡ್ ರಸ್ತೆಗಳಲ್ಲಿ ಕಸದ ರಾಶಿ ನಿತ್ಯವೂ ಬಿದ್ದಿರುತ್ತದೆ. ನಿಮ್ಮ ಪ್ರದೇಶಗಳಲ್ಲಿ ಇಂತಹ ಸಮಸ್ಯೆ ಇದ್ದರೆ, ಚಿತ್ರಸಹಿತ ವಿವರಗಳೊಂದಿಗೆ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳಿಗೆ ಕಳುಹಿಸಿಕೊಡಿ ಮತ್ತು ಆ ಮಾಹಿತಿಯನ್ನು 'ಪ್ರಜಾವಾಣಿ'ಗೂ ಕಳುಹಿಸಿಕೊಡಿ. ಅದನ್ನು ಪ್ರಕಟಿಸಲಾಗುತ್ತದೆ.

ಶ್ರೀನಿವಾಸನಗರದ 80 ಅಡಿ ರಸ್ತೆಯಲ್ಲಿದ್ದ ಕಸ

ಸಿದ್ದಾಪುರದ ರಸ್ತೆಯಲ್ಲಿ ವಿಲೇವಾರಿಯಾಗದೆ ಇರುವ ತ್ಯಾಜ್ಯ ರಾಶಿ

ಹನುಮಗಿರಿ ಮುಖ್ಯರಸ್ತೆಯಲ್ಲಿ ಎಸೆಯಲಾದ ಕಸ

ಸಪ್ತಗಿರಿ ನಗರ: ಅಸಮರ್ಪಕ ಕಸ ಸಂಗ್ರಹ

ಆರ್.ಆರ್.ನಗರ ವಿಧಾನಸಭೆ ವ್ಯಾಪ್ತಿಯಲ್ಲಿರುವ ಹೊಸಕೆರೆಹಳ್ಳಿಯ ಸಪ್ತಗಿರಿ ನಗರಕ್ಕೆ (ವಾರ್ಡ್ ಸಂಖ್ಯೆ 160) ಎರಡು ದಿನಗಳಿಗೊಮ್ಮೆ ಹಸಿ ಹಾಗೂ ಒಣ ಕಸ ಸಂಗ್ರಹದ ವಾಹನ ಬರುತ್ತಿದ್ದು, ಸಮರ್ಪಕವಾಗಿ ಕಸ ಸಂಗ್ರಹಿಸದ ಪರಿಣಾಮ ಈ ಪ್ರದೇಶವನ್ನು ಸಂಪರ್ಕಿಸುವ ಹನುಮಗಿರಿ ಮುಖ್ಯರಸ್ತೆಯಲ್ಲಿ ಕೆಲವರು ಕಸ ಎಸೆಯುತ್ತಿದ್ದಾರೆ.

ಸಪ್ತಗಿರಿ ನಗರದ ಪ್ರದೇಶ ಇಳಿಜಾರಿನಿಂದ ಕೂಡಿದೆ. ಹಸಿ ಕಸ ಸಂಗ್ರಹದ ವಾಹನವು ಇಲ್ಲಿಗೆ ಬೆಳಿಗ್ಗೆ 6.30ರ ವೇಳೆಗೆ ಬರುತ್ತಿದ್ದು, ವೇಗವಾಗಿ ತೆರಳುವ ಪರಿಣಾಮ ಇಲ್ಲಿನ ನಿವಾಸಿಗಳಿಗೆ ಕಸ ವಿಲೇವಾರಿ ಸವಾಲಾಗಿದೆ. ಹಣ ನೀಡುವ ಕೆಲವರ ಮನೆ ಬಾಗಿಲಿನಲ್ಲಿ ಇರಿಸಲಾದ ಕಸವನ್ನು ವಾಹನಕ್ಕೆ ಹಾಕಿಕೊಳ್ಳುವ ಸಂಗ್ರಹಕಾರರು, ಉಳಿದವರು ಮನೆಯಿಂದ ಹೊರಬಂದು ಕಸ ನೀಡುವಷ್ಟರಲ್ಲಿ ತೆರಳುತ್ತಿದ್ದಾರೆ. ಇದರಿಂದಾಗಿ ಕಸ ವಿಲೇವಾರಿಗೆ ವೃದ್ಧರು, ಮಹಿಳೆಯರು ಸಮಸ್ಯೆ ಎದುರಿಸುತ್ತಿದ್ದಾರೆ. ಪ್ರತಿನಿತ್ಯ ಕಸ ಸಂಗ್ರಹಿಸುವವರು ಬರದ ಕಾರಣ, ವಾರದ ಎಲ್ಲ ದಿನ ಇಟ್ಟಮಡು ಮುಖ್ಯ ರಸ್ತೆಯಿಂದ ಸಪ್ತಗಿರಿ ಲೇಔಟ್ ಹಾಗೂ ಹೊಸಕೆರೆಹಳ್ಳಿಗೆ ಸಂಪರ್ಕ ಕಲ್ಪಿಸುವ ಹನುಮಗಿರಿ ಮುಖ್ಯರಸ್ತೆಯಲ್ಲಿ ಕಸದ ರಾಶಿ ಕಾಣಸಿಗುತ್ತದೆ. ಈ ಪ್ರದೇಶದಲ್ಲಿ ಪ್ರತಿನಿತ್ಯ ಕಸ ಸಂಗ್ರಹಿಸಲು ಹಾಗೂ ಇಳಿಜಾರಿನ ರಸ್ತೆ ಈ ಪ್ರದೇಶದಲ್ಲಿ ಇರುವ ಕಾರಣ, ವಾಹನವನ್ನು ಸೂಕ್ತವಾಗಿ ನಿಲ್ಲಿಸಿ ಕಸ ಸಂಗ್ರಹಿಸಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮವಹಿಸಬೇಕು.

ಸಪ್ತಗಿರಿ ನಗರದ ನಿವಾಸಿಗಳು

'ಅನಿವಾಸಿ ಕನ್ನಡಿಗರಿಗೆ ಸಚಿವಾಲಯ ಶೀಘ್ರ ಕಾರ್ಯೋನ್ಮುಖವಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನಿವಾಸಿ ಕನ್ನಡಿಗರಿಗಾಗಿ ಪ್ರತ್ಯೇಕ ಸಚಿವಾಲಯಕ್ಕೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅನುಮೋದನೆ ನೀಡಿದ್ದು, ಈ ಸಚಿವಾಲಯ ಶೀಘ್ರವೇ ಕಾರ್ಯೋನ್ಮುಖವಾಗಬೇಕು' ಎಂದು ವಿವಿಧ ದೇಶಗಳ ಕನ್ನಡ ಪರ ಸಂಘಟನೆಗಳ ಪದಾಧಿಕಾರಿಗಳು ಹಾಗೂ ನಾಯಕರು ಮನವಿ ಮಾಡಿದ್ದಾರೆ.

ಕಳೆದ ಡಿಸೆಂಬರ್‌ನಲ್ಲಿ ಉದ್ಯಮಿ ರೊನಾಲ್ಡ್ ಕೊಲಾಸೊ ನೇತೃತ್ವದಲ್ಲಿ 30 ದೇಶಗಳ 43 ಅನಿವಾಸಿ ಸಂಘಟನೆಗಳ ಪ್ರತಿನಿಧಿಗಳ ನಿಯೋಗ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಅವರನ್ನು ಭೇಟಿಯಾಗಿ ಅನಿವಾಸಿ ಕನ್ನಡಿಗರಿಗೆ ಪ್ರತ್ಯೇಕ ಸಚಿವಾಲಯ ಸ್ಥಾಪಿಸಬೇಕೆಂದು ಬೇಡಿಕೆ ಮಂಡಿಸಿದ್ದವು.

'ಡಿ.ಕೆ.ಶಿವಕುಮಾರ್ ಅವರು ಸಚಿವಾಲಯಕ್ಕೆ ಸಮ್ಮತಿ ನೀಡಿದ್ದು, ಇದು ಶೀಘ್ರ ಸ್ಥಾಪನೆಯಾದರೆ ಅನಿವಾಸಿ ಕನ್ನಡಿಗರು ಸರ್ಕಾರದೊಂದಿಗೆ ಕೈಜೋಡಿಸಿ ಉದ್ಯಮ, ಹೂಡಿಕೆ ಹಾಗೂ ಅನಿವಾಸಿ ಕನ್ನಡಿಗರ ಸರ್ವತೋಮುಖ ಬೆಳವಣಿಗೆಗೆ ಹೆಚ್ಚಿನ ಬೆಂಬಲ ನೀಡಲು ಇದು ಹೊಸ ವೇದಿಕೆಯಾಗಲಿ' ಎಂದು ರೊನಾಲ್ಡ್ ಕೊಲಾಸೊ ಹೇಳಿದರು.

ಆರತಿ ಕೃಷ್ಣ, ರೊನಾಲ್ಡ್ ಕೊಲಾಸೊ ಅವರು ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಚರ್ಚಿಸಿದರು

ಅನಿವಾಸಿ ಕನ್ನಡಿಗರ ಪೋಷಕರೂ ಆದ ರೊನಾಲ್ಡ್ ಕೊಲಾಸೊ ನೇತೃತ್ವದಲ್ಲಿ ಇತ್ತೀಚೆಗೆ ನಡೆದ ಆನ್‌ಲೈನ್ ಸಭೆಯಲ್ಲಿ ಭಾಗವಹಿಸಿದ್ದ ವಿವಿಧ ದೇಶಗಳ ಕನ್ನಡ ಪರ ಸಂಘಟನೆಗಳ ಪದಾಧಿಕಾರಿಗಳು ಹಾಗೂ ನಾಯಕರು, ಕರ್ನಾಟಕ ಸರ್ಕಾರದ ಈ ನಿರ್ಧಾರಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸಭೆಯಲ್ಲಿ ಗಲ್ಫ್ ರಾಷ್ಟ್ರಗಳು, ಅಮೆರಿಕ, ಯುಕೆ, ಯೂರೋಪ್, ಆಸ್ಟ್ರೇಲಿಯಾ, ಕೆನಡಾ, ಆಫ್ರಿಕಾ ರಾಷ್ಟ್ರಗಳ ಅನಿವಾಸಿ ಕನ್ನಡಿಗರ ಸಂಘಟನೆಗಳು ಮತ್ತು ಪ್ರತಿನಿಧಿಗಳು ಮಾತನಾಡಿ, 'ವಿದೇಶಗಳಲ್ಲಿ ನೆಲಸಿರುವ ಕನ್ನಡಿಗರ ಸಮುದಾಯವು ಕರ್ನಾಟಕದ ಆರ್ಥಿಕತೆಗೆ ಮಹತ್ವದ ಕೊಡುಗೆ ನೀಡುತ್ತಿದ್ದು, ವಿದೇಶಿ ಹಣಕಾಸು ವರ್ಗಾವಣೆ (ರೆಮಿಟೆನ್ಸ್), ಹೂಡಿಕೆ, ಉದ್ಯಮಶೀಲತೆ, ತಂತ್ರಜ್ಞಾನ ವರ್ಗಾವಣೆ ಮೂಲಕ ಅವರು ರಾಜ್ಯದ ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡುತ್ತಿದ್ದಾರೆ. ಮಾತ್ರವಲ್ಲದೆ ಸಮಾಜಸೇವೆ, ದಾನ, ಪರೋಪಕಾರಿ ಚಟುವಟಿಕೆಯಲ್ಲಿಯೂ ಸದಾ ಮುಂದಿದ್ದಾರೆ' ಎಂದು ಮಾಹಿತಿ ಹಂಚಿಕೊಂಡರು.

ಎನ್‌ಆರ್‌ಐ ಅಧ್ಯಕ್ಷರಾಗಿ ಅನುಭವ ಹೊಂದಿರುವ ವಿಧಾನ ಪರಿಷತ್ ಸದಸ್ಯೆ ಆರತಿ ಕೃಷ್ಣ ಅವರನ್ನು ಸಚಿವರಾಗಿ ನೇಮಿಸಬೇಕು ಎಂದು ಎಲ್ಲಾ ಕನ್ನಡಪರ ಸಂಘಟನೆಗಳು ಸರ್ವ ಸಮ್ಮತದಿಂದ ಮನವಿ ಸಲ್ಲಿಸಿದ್ದಾರೆ.

57 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಾಲಯದಲ್ಲಿ ನಡೆಯುತ್ತಿದ್ದ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ 57 ಆರೋಪಿ ಗಳನ್ನು ಪೂರ್ವ ವಿಭಾಗದ ವಿವಿಧ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ವಿವಿಧ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಆರೋಪಿಗಳು, ನ್ಯಾಯಾಲಯ ದಲ್ಲಿ ನಡೆಯುತ್ತಿದ್ದ ವಿಚಾರಣೆಗೆ ನಿರಂತರವಾಗಿ ಗೈರಾಗಿದ್ದರು. ನ್ಯಾಯಾಲಯವು ಆರೋಪಿ ಗಳ ವಿರುದ್ಧ ಬಂಧನದ ವಾರಂಟ್ ಜಾರಿಗೊಳಿಸಿತ್ತು. ತಲೆಮರೆಸಿಕೊಂಡಿದ್ದ ಆರೋಪಿ ಗಳನ್ನು ಪತ್ತೆಹಚ್ಚುವ ಉದ್ದೇಶದಿಂದ ವಿಶೇಷ ತಂಡಗಳನ್ನು ರಚಿಸ ಲಾಗಿತ್ತು. ಕಳೆದ ಹತ್ತು ದಿನಗಳಿಂದ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ.

ಸಮುದ್ರದ ಅಲೆಗಳ ಸೆಳೆತಕ್ಕೆ ಸಿಲುಕಿ ಯುವಕ ಸಾವು

ಪ್ರಜಾವಾಣಿ ವಾರ್ತೆ

ಬ್ರಹ್ಮಾವರ: ಸ್ನೇಹಿತರೊಂದಿಗೆ ಪ್ರವಾಸಕ್ಕೆ ಬಂದಿದ್ದ ಬೆಂಗಳೂರಿನ ಯುವಕನೊಬ್ಬ ಶುಕ್ರವಾರ ತಾಲ್ಲೂಕಿನ ಕೋಡಿ ಕನ್ಯಾಣದಲ್ಲಿ ಸಮುದ್ರದಲ್ಲಿ ಈಜಲು ಹೋಗಿದ್ದ ವೇಳೆ ಅಲೆಗಳ ಸೆಳೆತಕ್ಕೆ ಸಿಲುಕಿ ಮೃತಪಟ್ಟಿದ್ದಾರೆ.

ಬೆಂಗಳೂರಿನ ರಾಜಾಜಿನಗರ ನಿವಾಸಿ ನಿಖಿಲ್ ಕುಮಾರ್ (32) ಮೃತಪಟ್ಟವರು.

'ಆಶ್ರಯ ಮನೆ'ಯಿಂದ 64 ಜನರ ರಕ್ಷಣೆ

ಪ್ರಜಾವಾಣಿ ವಾರ್ತೆ

ಶಿರಾ: ತಾಲ್ಲೂಕಿನ ಗಾಣದಹುಣಸೆ ಗ್ರಾಮದ ತೋಟವೊಂದರಲ್ಲಿ ಅನಧಿಕೃತವಾಗಿ ನಡೆಸುತ್ತಿದ್ದ 'ಭೇದಸ್ಥ ನಿರಾಶ್ರಿತರ ಆಶ್ರಯ ಮನೆ' ಮೇಲೆ ದಾಳಿ ನಡೆಸಿದ ಅಧಿಕಾರಿಗಳು, ಅಲ್ಲಿದ್ದ 64 ಮಂದಿಯನ್ನು ರಕ್ಷಿಸಿ ತುಮಕೂರು ತಾಲ್ಲೂಕಿನ ಕೋರಾ ಬಳಿಯ ಸ ರ್ಕಾರಿ ನಿರಾಶ್ರಿತರ ಕೇಂದ್ರಕ್ಕೆ ಸ್ಥಳಾಂತರಿಸಿದ್ದಾರೆ.

ನಿರ್ಗತಿಕರು, ವೃದ್ಧರು, ಬುದ್ಧಿಮಾಂದ್ಯರನ್ನು ಬಲವಂತವಾಗಿ ಶೆಡ್‌ನಲ್ಲಿ ಕೂಡಿ ಹಾಕಲಾಗಿದೆ. ಅವರಿಗೆ ದೈಹಿಕವಾಗಿ ಹಲ್ಲೆ ಮಾಡಲಾಗುತ್ತಿದೆ ಎಂದು ಬೆಂಗಳೂರಿನ ಸಾಧನಾ ಮಹಿಳಾ ಸಂಘದವರು ನೀಡಿದ ದೂರಿನ ಮೇರೆಗೆ ಅಧಿಕಾರಿಗಳು ದಾಳಿ ನಡೆಸಿದರು.

ಗೀತಮ್ಮ ಎಂಬವರು ತೋಟದಲ್ಲಿ ದೊಡ್ಡದೊಂದು ಶೆಡ್ ನಿರ್ಮಿಸಿದ್ದರು. ಅದಕ್ಕೆ ಗಾಳಿ ಬೆಳಕಿನ ವ್ಯವಸ್ಥೆ ಇಲ್ಲ. ಇಟ್ಟಿಗೆ ಗೋಡೆ ನಡುವೆ ಅಲ್ಲಲ್ಲಿ ಕಿಂಡಿ ಇಡಲಾಗಿತ್ತು. ರಸ್ತೆ ಬದಿ, ಬಸ್, ರೈಲು ನಿಲ್ದಾಣಗಳ ಬಳಿಯಿದ್ದ ದಿಕ್ಕಿಲ್ಲದವರು, ವೃದ್ಧರು, ಅನಾಥರನ್ನು ಕರೆತಂದು ಶೆಡ್‌ನಲ್ಲಿ ಇಟ್ಟುಕೊಂಡಿದ್ದರು. ಯಾರೂ ಹೊರಕ್ಕೆ ಹೋಗದಂತೆ ಬೀಗ ಹಾಕಿ, ಕಾವಲುಗಾರರನ್ನು ನೇಮಿಸಿದ್ದರು. ಊರಿನವರು ಯಾರೂ ಇತ್ತ ಸುಳಿಯದಂತೆ ನೋಡಿಕೊಂಡಿದ್ದರು.

'ದೂರಿನಂತೆ ಗುರುವಾರ ಸಂಜೆ ದಾಳಿ ನಡೆಸಿದಾಗ ಶೆಡ್‌ನಲ್ಲಿ 20 ವರ್ಷದಿಂದ 70 ವರ್ಷ ವಯೋಮಾನದ 64 ಮಂದಿ ಇದ್ದರು. ಶೆಡ್‌ನಲ್ಲಿ ಮಲಗಲು, ಸ್ನಾನ, ಶೌಚಕ್ಕೆ ಒಂದೇ ಕಡೆ ವ್ಯವಸ್ಥೆ ಮಾಡಲಾಗಿತ್ತು. ಗಾಳಿ, ಬೆಳಕು ಇಲ್ಲದೆ ಕೆಲವರು ಚರ್ಮರೋಗಕ್ಕೆ ತುತ್ತಾಗಿದ್ದರು. ದಾಳಿ ಮಾಡಿದಾಗ ಕೆಲವರು ಕಾಲಿಗೆ ಬಿದ್ದು ಆಚೆಗೆ ಕರೆದೊಯ್ಯುವಂತೆ ಗೋಳಾಡಿದರು' ಎಂದು ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಅಂಬಿಕಾ 'ಪ್ರಜಾವಾಣಿ'ಗೆ ತಿಳಿಸಿದರು.

'ನೋಂದಣಿ ಮಾಡದೇ ಎರಡು ವರ್ಷಗಳಿಂದ ಆಶ್ರಯ ಮನೆಯನ್ನು ನಡೆಸುತ್ತಿದ್ದು, ದಿಕ್ಕಿಲ್ಲದವರನ್ನು ಕರೆತಂದು ಕೂಡಿಹಾಕಿರುವ ಹಿಂದಿನ ಉದ್ದೇಶ ಏನೆಂಬುದು ಪೊಲೀಸರ ತನಿಖೆಯಿಂದ ತಿಳಿಯಬೇಕಿದೆ' ಎಂದು ಹೇಳಿದರು.

ಲಲಿತಾ ಸಹಸ್ರನಾಮ ಪೂಜೆ

ಪ್ರಜಾವಾಣಿ ಚಿತ್ರ

ರಕ್ಷಾ ಫೌಂಡೇಷನ್ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಲಲಿತಾ ಸಹಸ್ರನಾಮ ಪೂಜಾ ಕಾರ್ಯಕ್ರಮದಲ್ಲಿ ಮಹಿಳೆಯರು ವಿವಿಧ ಧಾರ್ಮಿಕ ವಿಧಿ-ವಿಧಾನ ನೆರವೇರಿಸಿದರು. ಮಂತ್ರಾಲಯದ ಸುಬುಧೇಂದ್ರ ತೀರ್ಥ ಸ್ವಾಮೀಜಿ, ಜಯನಗರ ಶಾಸಕ ಸಿ.ಕೆ. ರಾಮಮೂರ್ತಿ, ಚಲನಚಿತ್ರ ನಟಿ ಪ್ರಣೀತಾ ಸುಭಾಶ್ ಪಾಲ್ಗೊಂಡಿದ್ದರು

ಈಜು: ತನಿಷಿ ಗುಪ್ತಾಗೆ 'ದಾಖಲೆ'ಯ ಸ್ವರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ತನಿಷಿ ಗುಪ್ತಾ ಅವರು ಅಹಮದಾಬಾದ್‌ನಲ್ಲಿ ನಡೆಯುತ್ತಿರುವ 79ನೇ ರಾಷ್ಟ್ರೀಯ ಸೀನಿಯರ್ಸ್ ಈಜು ಚಾಂಪಿಯನ್‌ಷಿಪ್‌ನ ಮಹಿಳೆಯರ 100 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ಶುಕ್ರವಾರ ನೂತನ ರಾಷ್ಟ್ರೀಯ ದಾಖಲೆಯೊಂದಿಗೆ ಚಿನ್ನದ ಪದಕ ಜಯಿಸಿದರು. ಅಮೋಘ ಪ್ರದರ್ಶನ ಮುಂದುವರಿಸಿರುವ ರಾಜ್ಯದ ಅಥ್ಲೀಟ್‌ಗಳು ನಾಲ್ಕನೇ ದಿನ ಮೂರು ಚಿನ್ನ ಸೇರಿ 8 ಪದಕಗಳನ್ನು ಬಾಚಿಕೊಂಡರು.

ಪದಕಗಳೊಂದಿಗೆ ತನಿಷಿ ಗುಪ್ತಾ

ತಾನ್ಯಾ ಷಡಾಕ್ಷರಿ ಅವರು ಮಹಿಳೆಯರ 400 ಮೀ. ಮೆಡ್ಲೆಯಲ್ಲಿ ಕೂಟ ದಾಖಲೆಯೊಂದಿಗೆ (4ನಿ., 56.78 ಸೆ.) ಸ್ವರ್ಣಕ್ಕೆ ಕೊರಳೊಡ್ಡಿದ್ದರು.

16 ವರ್ಷ ವಯಸ್ಸಿನ ತನಿಷಿ ಅವರು ಫೈನಲ್ ಹೀಟ್ಸ್‌ನಲ್ಲಿ 1 ನಿಮಿಷ 0.07 ಸೆಕೆಂಡುಗಳಲ್ಲಿ ಸ್ಪರ್ಧೆ ಮುಗಿಸಿದರು. ಅದರೊಂದಿಗೆ ತಮ್ಮದೇ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆಯನ್ನು ಸುಧಾರಿಸಿಕೊಂಡರು. ಅವರು ಇದೇ ವರ್ಷ ನಡೆದ ಮಲೇಷ್ಯಾ ಓಪನ್ ಚಾಂಪಿಯನ್‌ಷಿಪ್‌ನಲ್ಲಿ 1ನಿಮಿಷ 0.54 ಸೆಕೆಂಡುಗಳಲ್ಲಿ ಗುರಿ ತಲುಪಿ ರಾಷ್ಟ್ರೀಯ ದಾಖಲೆ ನಿರ್ಮಿಸಿದ್ದರು.

ಪುರುಷರ 200 ಮೀ. ಫ್ರೀಸ್ಟೈಲ್‌ನಲ್ಲಿ ರಾಜ್ಯದ ಅನೀಶ್ ಎಸ್. ಗೌಡ (1 ನಿ., 50.65 ಸೆ.) ಚಿನ್ನದ ಪದಕ ಗೆದ್ದರೆ, ದರ್ಶನ್ ಎಸ್. (1 ನಿ., 51.85 ಸೆ.) ರಜತ ಜಯಿಸಿದರು. ಮಹಿಳೆಯರ 100 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಲಕ್ಷ್ಯಾ ಎಸ್. (1 ನಿ., 14.62 ಸೆ.) ಬೆಳ್ಳಿ ಪದಕಕ್ಕೆ ಕೊರಳೊಡ್ಡಿದರು.

ಮಹಿಳೆಯರ 100 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ತನಿಷಿ (1ನಿ., 05.19 ಸೆ.) ಹಾಗೂ ನೀನಾ ವೆಂಕಟೇಶ್ (1ನಿ., 05.61 ಸೆ.) ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕಕ್ಕೆ ಮುತ್ತಿಕ್ಕಿದರು. ಸೂರ್ಯ ಜೋಯಪ್ಪ, ಆಕಾಶ್ ಮಣಿ, ದಿನಿಧಿ ದೇಸಿಂಗು ಹಾಗೂ ನೈಶಾ ಶೆಟ್ಟಿ ಅವರನ್ನೊಳಗೊಂಡ ರಾಜ್ಯ ತಂಡವು 4x100 ಮೀ. ಮಿಶ್ರ ಮೆಡ್ಲೆ ರಿಲೇಯಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿತು.

ಸ್ವಾಯತ್ತ ಸಂಸ್ಥೆ ನಡವಳಿಕೆ ಸ್ವೇಚ್ಛಾಚಾರವಾಗದಿರಲಿ: ಸಚಿವ ಕೃಷ್ಣ ಬೈರೇಗೌಡ

'ನಮ್ಮ ಮೆಟ್ರೊ': ಉತ್ತರದಾಯಿತ್ವ ಇರಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ ಬಗ್ಗೆ ಬಹಳ ನಿರೀಕ್ಷೆ ಇದೆ. ಅದರೊಂದಿಗೆ ಜನರು ಭಾವನಾತ್ಮಕ ಬಾಂಧವ್ಯ ಬೆಳೆಸಿಕೊಂಡಿದ್ದಾರೆ. ಈ ಭಾವನೆಯನ್ನು ಬಿಎಂಆರ್‌ಸಿಎಲ್ ಅಧಿಕಾರಿಗಳು ಅರ್ಥ ಮಾಡಿಕೊಳ್ಳಬೇಕು. ಸ್ವಾಯತ್ತ ಸಂಸ್ಥೆಯಾಗಿದ್ದರೆ ಸಾಲದು, ಉತ್ತರದಾಯಿತ್ವವೂ ಇರಬೇಕು. ಇಲ್ಲದಿದ್ದರೆ ಅದು ಸ್ವೇಚ್ಛಾಚಾರವಾಗುತ್ತದೆ....'

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರು ಬಿಎಂಆರ್‌ಸಿಎಲ್ ಅಧಿಕಾರಿಗಳೊಂದಿಗೆ ಶುಕ್ರವಾರ ನಡೆದ ಮೊದಲ ಸಭೆಯಲ್ಲಿ ಹೇಳಿದ ಮಾತುಗಳಿವು.

'25 ವರ್ಷದ ಹಿಂದೆ ಶಂಕುಸ್ಥಾಪನೆಗೊಂಡ ನಮ್ಮ ಮೆಟ್ರೊ ಯೋಜನೆಯ ಯಾವ ಕಾಮಗಾರಿಯೂ ಈವರೆಗೆ ಕಾಲಮಿತಿಯಲ್ಲಿ ಪೂರ್ಣಗೊಳಿಸಿಲ್ಲ. ನಿಗದಿತ ಸಮಯಕ್ಕೆ ಮೂರು ವರ್ಷಗಳವರೆಗೂ ಹೆಚ್ಚು ಅವಧಿಯನ್ನು ತೆಗೆದುಕೊಳ್ಳಲಾಗಿದೆ. ಇದರ ಬಗ್ಗೆ ಅಧಿಕಾರಿಗಳು ಆತ್ಮಾವಲೋಕನ ಮಾಡಿಕೊಳ್ಳಬೇಕು. ನಾನು ನಿತ್ಯ ಮೆಟ್ರೊ ಉಪಯೋಗಿಸುವುದಿಲ್ಲ. ಆದರೆ, ದಿನವೂ ಸಂಚಾರ ಮಾಡುವ ನಾಗರಿಕರ ಧ್ವನಿಯಾಗಿ ನಾನು ನಿಮ್ಮನ್ನು ಕೇಳುತ್ತಿದ್ದೇನೆ. ಕೆಲಸದಲ್ಲಿ ವೇಗ ತರಬೇಕು, ಕಾಮಗಾರಿ ಬೇಗ ಮುಗಿಸಲು ಕನಿಷ್ಠ ಪ್ರಾಮಾಣಿಕ ಪ್ರಯತ್ನವನ್ನಾದರೂ ಮಾಡಬೇಕು' ಎಂದು ಅಧಿಕಾರಿಗಳಿಗೆ ಹೇಳಿದರು.

> ನನಗೆ ಬೇರೆ ಉದ್ಯೋಗ ಇಲ್ಲ, ನನಗೆ ಇರುವುದು ಇದೇ ಉದ್ಯೋಗ, ಬೇರೆ ಹವ್ಯಾಸವೂ ಇಲ್ಲ ನಿಮ್ಮ (ಮೆಟ್ರೊ ಅಧಿಕಾರಿಗಳು) ಹಿಂದೆನೇ ಬಿದ್ದಿರುತ್ತೇನೆ
> **ಕೃಷ್ಣ ಬೈರೇಗೌಡ,** ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ

'ಮೆಟ್ರೊ ಕಾಮಗಾರಿ ನಡೆಯುವ ಸ್ಥಳದಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಜಾಗವನ್ನು ತೆಗೆದುಕೊಳ್ಳಲಾಗುತ್ತಿದೆ. ನಿರೀಕ್ಷಿತ ಕಾಲಮಿತಿಗೂ ಮೀರಿ ಆ ಜಾಗವನ್ನು ಉಪಯೋಗಿಸಿಕೊಳ್ಳುತ್ತಿರುವುದರಿಂದ ವಾಹನ ಸಂಚಾರ ದಟ್ಟಣೆ ಉಂಟಾಗುತ್ತಿದೆ. ರಸ್ತೆಯಲ್ಲೇ ಇಡೀ ಸಂಸಾರ ಇರುತ್ತದೆ. ನಿರ್ಮಾಣ ತ್ಯಾಜ್ಯವನ್ನು ರಸ್ತೆಯಲ್ಲೇ ಹಾಕಿ 'ಡಂಪಿಂಗ್ ಸೈಟ್' ಮಾಡಲಾಗಿದೆ. ಇದನ್ನು ನೋಡಿದವರು ಅಲ್ಲೇ ಕಸವನ್ನೂ ಎಸೆಯುತ್ತಿದ್ದಾರೆ. ಹೀಗಾಗಿ, 'ವರ್ಕ್ ಸೈಟ್ ಮ್ಯಾನೇಜ್‌ಮೆಂಟ್' ಸರಿಯಾದ ರೀತಿಯಲ್ಲಿ ಇರಬೇಕು. ರಸ್ತೆಯನ್ನು ಸ್ವೇಚ್ಛಾಚಾರವಾಗಿ ಬಳಸಬಾರದು ಎಂದು ಅಧಿಕಾರಿಗಳಿಗೆ ತಾಕೀತು ಮಾಡಲಾಗಿದೆ' ಎಂದು ಸಭೆಯ ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಗುಲಾಬಿ ಮಾರ್ಗದ ಕಾಳೇನ ಅಗ್ರಹಾರದಿಂದ ತಾವರೆಕೆರೆವರೆಗಿನ 7.5 ಕಿ.ಮೀ ಮಾರ್ಗ ಆಗಸ್ಟ್ 15ರೊಳಗೆ ಕಾರ್ಯಾರಂಭಿಸಬೇಕು. ಡೇರಿ ವೃತ್ತದಿಂದ ನಾಗವಾರದ 13.75 ಕಿ.ಮೀ. ಮಾರ್ಗ 2027ರ ಮಾರ್ಚ್ ವೇಳೆಗೆ ಆರಂಭಿಸಬೇಕು ಎಂದು ಸೂಚಿಸಲಾಗಿದೆ ಎಂದರು.

ಕೆ.ಆರ್. ಪುರದಿಂದ ಮಾರತ್‌ಹಳ್ಳಿ ಮತ್ತು ಮಾರತ್‌ಹಳ್ಳಿಯಿಂದ ಎಚ್‌ಎಸ್‌ಆರ್ ಲೇಔಟ್ ಮಾರ್ಗದಲ್ಲಿ 2026ರ ಅಕ್ಟೋಬರ್‌ನಲ್ಲಿ ಪ್ರಾಯೋಗಿಕ ಸಂಚಾರ ಆರಂಭಿಸಲು ಸೂಚಿಸಲಾಗಿದೆ. ಮಾರತ್‌ಹಳ್ಳಿ ಮತ್ತು ಸಿಲ್ಕ್ ಬೋರ್ಡ್ ನಿಲ್ದಾಣಗಳ ಕಾಮಗಾರಿ ವಿಳಂಬವಾಗಲಿದೆ ಎಂದರು.

ಫೇಸ್ 2-ಬಿ ಅಡಿ ಹೆಬ್ಬಾಳದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮಾರ್ಗ 2027ರ ಜೂನ್ ವೇಳೆಗೆ ಆರಂಭಿಸುವ ಗುರಿ ಹೊಂದಲಾಗಿದ್ದು, ಕೆ.ಆರ್. ಪುರದಿಂದ ಹೆಬ್ಬಾಳದವರೆಗೆ ಮಾರ್ಗ 2027ರ ಡಿಸೆಂಬರ್‌ಗೆ ಆರಂಭಿಸುವ ನಿರೀಕ್ಷೆ ಇದೆ ಎಂದು ಹೇಳಿದರು.

44.65 ಕಿ.ಮೀ ಉದ್ದ ಫೇಸ್ 3 ಯೋಜನೆಗೆ ಕೇಂದ್ರ ಸರ್ಕಾರ ಮುಂದಿನ 20 ದಿನಗಳಲ್ಲಿ ಅನುಮೋದನೆ ನೀಡುವ ನಿರೀಕ್ಷೆ ಇದ್ದು, ಅದರ ನಂತರ ಬಿಎಂಆರ್‌ಸಿಎಲ್ ಟೆಂಡರ್ ಪ್ರಕ್ರಿಯೆ ಆರಂಭಿಸಲಿದೆ ಎಂದರು.

ಮೆಟ್ರೊ ಅಧಿಕಾರಿಗಳಿಗೆ ಪ್ರಶ್ನೆಗಳು

- ಒಂದು ಮೆಟ್ರೊ ಪಿಲ್ಲರ್ ನಿರ್ಮಾಣಕ್ಕೆ 3 ವರ್ಷ ಬೇಕಾ
- ಜನರು ದಟ್ಟಣೆ, ವಾಯುಮಾಲಿನ್ಯ ಸಮಸ್ಯೆ ಎದುರಿಸಬೇಕಾ
- ಮೆಟ್ರೊ ಕಾಮಗಾರಿ ಸ್ಥಳದಲ್ಲಿ ಕಸ-ನಿರ್ಮಾಣ ತ್ಯಾಜ್ಯ ಹಾಕುವುದೇಕೆ
- ಕಾಮಗಾರಿಗೆ ವೇಗ ನೀಡಲು ಪ್ರಯತ್ನ ಮಾಡಲು ಸಾಧ್ಯವಿಲ್ಲವೇ
- ಜನರ ಭಾವನೆ, ನಿರೀಕ್ಷೆ ನಿಮಗೆ ಅರ್ಥವಾಗುವುದಿಲ್ಲವೇ

ಕೃಷ್ಣ ಬೈರೇಗೌಡ

'ಸಮರ್ಪಣಾ ಭಾವದ ವ್ಯಕ್ತಿಗಳ ಅಗತ್ಯವಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮರ್ಪಣಾ ಭಾವ ಹೊಂದಿದ ವ್ಯಕ್ತಿಗಳ ಅವಶ್ಯಕತೆ ಸಮಾಜಕ್ಕೆ ಇದೆ. ವಿಶ್ವವಿದ್ಯಾಲಯದ ಮೂಲಕ ಸಾಂಸ್ಕೃತಿಕ ಪರಂಪರೆ ಪಸರಿಸಿದ ಕೀರ್ತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಅವರಿಗೆ ಸಲ್ಲುತ್ತದೆ' ಎಂದು ಸಾಹಿತಿ ಗೊ.ರು.ಚನ್ನಬಸಪ್ಪ ಅಭಿಪ್ರಾಯಪಟ್ಟರು.

ಬೆಂಗಳೂರು ವಿಶ್ವವಿದ್ಯಾಲಯ ಪ್ರದರ್ಶನ ಕಲಾ ವಿಭಾಗದ ವತಿಯಿಂದ ಜ್ಞಾನಭಾರತಿ ಆವರಣದಲ್ಲಿ ಆಯೋಜಿಸಿದ್ದ 'ರಂಗಭೂಮಿ ಕುರಿತ ಅಂತರ ರಾಷ್ಟ್ರೀಯ ವಿಚಾರ ಸಂಕಿರಣ' ಹಾಗೂ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ನಾಗೇಶ್ ವಿ. ಬೆಟ್ಟಕೋಟೆ ಅವರ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

'ನಾಗೇಶ್ ಅವರು ಪ್ರಾಧ್ಯಾಪಕರಾಗಿ, ಕುಲಪತಿಗಳಾಗಿ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಸಾಕಷ್ಟು ಕೊಡುಗೆ ನೀಡಿದ್ದಾರೆ. ಕನ್ನಡ ರಂಗಭೂಮಿಯನ್ನು ವಿಶ್ವ ಮಟ್ಟಕ್ಕೆ ಕೊಂಡೊಯ್ದಿದ್ದಾರೆ. 60ರ ಹೊಸ್ತಿಲಿನಲ್ಲಿರುವ ಅವರ ಅನುಭವ ಸಮಾಜಕ್ಕೆ ಪೂರಕವಾಗಲಿ' ಎಂದು ಆಶಿಸಿದರು.

ಅಭಿನಂದನಾ ಗ್ರಂಥ ಜನಾರ್ಪಣೆಗೊಳಿಸಿ ಮಾತನಾಡಿದ ಸಂಗೀತ ನಿರ್ದೇಶಕ ಹಂಸಲೇಖ, 'ಸಾಮಾಜಿಕ ಬದಲಾವಣೆಯ ಮೂಲಕ ಧ್ವನಿ ಇಲ್ಲದವರ ಸಾಂಸ್ಕೃತಿಕ ಧ್ವನಿಯಾಗಿ ದುಡಿದಿದ್ದಾರೆ. ಸಾರ್ಥಕ ಹಾದಿ, ಅರ್ಥಪೂರ್ಣ ಬದುಕನ್ನು ಕೊಂಡಾಡುವ ಕ್ಷಣವಿದು' ಎಂದು ಸಂತಸ ವ್ಯಕ್ತಪಡಿಸಿದರು.

ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ ಮಾತನಾಡಿ, 'ನಾಗೇಶ್ ಅವರ ನೇತೃತ್ವದಲ್ಲಿ ಬೆಂ.ವಿ.ವಿ ಕಲಾ ವಿಭಾಗ ರಾಜ್ಯದಲ್ಲಿ ಮುಂಚೂಣಿಯಲ್ಲಿದೆ. ಕ್ರಿಯಾಶೀಲ, ಶಕ್ತಿ ಸಾಮರ್ಥ್ಯದಿಂದ ಮಹತ್ತರ ಕ್ರಮಗಳನ್ನು ಕೈಗೊಂಡು ಗಂಗೂಬಾಯಿ ವಿಶ್ವವಿದ್ಯಾಲಯವನ್ನು ಮನೆ ಮನೆಗೆ ತಲುಪಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ' ಎಂದು ಹರ್ಷ ವ್ಯಕ್ತಪಡಿಸಿದರು.

ತರಳಬಾಳು ಮಠದ ಶಿವಾಚಾರ್ಯ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಎಸ್.ಎಂ.ಜಯಕರ, ವಿಶ್ರಾಂತ ಕುಲಪತಿ ಎಸ್.ಸಿ.ಶರ್ಮಾ, ಪ್ರದರ್ಶನ ಕಲಾ ವಿಭಾಗ ಮುಖ್ಯಸ್ಥರಾದ ಡಾ.ಹಂಸಿನಿ ನಾಗೇಂದ್ರ, ಸಹಾಯಕ ಪ್ರಾಧ್ಯಾಪಕ ಶಿವಣ್ಣ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ದಂಪತಿಯನ್ನು ಸನ್ಮಾನಿಸಲಾಯಿತು. ತರಳಬಾಳು ಮಠದ ಶಿವಾಚಾರ್ಯ ಸ್ವಾಮೀಜಿ, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಎಸ್.ಎಂ. ಜಯಕರ, ವಿಶ್ರಾಂತ ಕುಲಪತಿ ಎಸ್.ಸಿ.ಶರ್ಮಾ, ಪ್ರದರ್ಶನ ಕಲಾ ವಿಭಾಗ ಮುಖ್ಯಸ್ಥರಾದ ಡಾ.ಹಂಸಿನಿ ನಾಗೇಂದ್ರ, ಸಹಾಯಕ ಪ್ರಾಧ್ಯಾಪಕ ಶಿವಣ್ಣ ಉಪಸ್ಥಿತರಿದ್ದರು.

ಸೈಬರ್ ವಂಚನೆ ತಡೆ: ರಾಜ್ಯಕ್ಕೆ 2ನೇ ಸ್ಥಾನ

ಬ್ಯಾಂಕ್‌ನಲ್ಲಿ ₹436 ಕೋಟಿ ತಡೆ

• ಬಿಗಿ ಕ್ರಮ: ಸಚಿವ ಪ್ರಿಯಾಂಕ್ ಖರ್ಗೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 'ಬ್ಯಾಂಕ್ ಫಾಲೋ-ಅಪ್ ಟೀಂ' ರಚನೆ
- ವೈರ್‌ಲೆಸ್ ಸಿಬ್ಬಂದಿಗೆ ವಿಶೇಷ ತರಬೇತಿ

ಬೆಂಗಳೂರು: ಸೈಬರ್ ವಂಚನೆಗೆ ಒಳಗಾದ ಹಣವನ್ನು ಬ್ಯಾಂಕ್‌ಗಳಲ್ಲಿ ತಡೆ ಹಿಡಿಯುವ (ಫ್ರೀಜ್) ಪ್ರಕ್ರಿಯೆಯಲ್ಲಿ ಕರ್ನಾಟಕ ರಾಜ್ಯವು ದೇಶದಲ್ಲಿಯೇ ಎರಡನೇ ಸ್ಥಾನದಲ್ಲಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ನಗರದ ಮಹಾತ್ಮಗಾಂಧಿ ರಸ್ತೆಯಲ್ಲಿರುವ ಪೊಲೀಸ್ ವೈರ್‌ಲೆಸ್ ಕೇಂದ್ರ ಕಚೇರಿಯಲ್ಲಿ ಶುಕ್ರವಾರ ನಡೆದ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

'ವಂಚನೆಗೊಳಗಾದ ಸಾರ್ವಜನಿಕರ ಹಣವನ್ನು ಬ್ಯಾಂಕ್‌ಗಳಲ್ಲಿಯೇ ತಡೆ ಹಿಡಿಯುವಲ್ಲಿ ರಾಜ್ಯದ ಪೊಲೀಸರು ಗಮನಾರ್ಹ ಯಶಸ್ಸು ಸಾಧಿಸಿದ್ದಾರೆ. ಮಹಾರಾಷ್ಟ್ರದಲ್ಲಿ ವಂಚನೆಯಾದ ₹3,203 ಕೋಟಿ ಪೈಕಿ ₹548 ಕೋಟಿಯನ್ನು ಬ್ಯಾಂಕ್‌ನಲ್ಲಿಯೇ ತಡೆ ಹಿಡಿಯಲಾಗಿದೆ. ಕರ್ನಾಟಕದಲ್ಲಿ ವರದಿಯಾದ ₹2,640 ಕೋಟಿ ಮೊತ್ತದ ವಂಚನೆ ಪ್ರಕರಣಗಳಲ್ಲಿ ₹436 ಕೋಟಿಯನ್ನು ತಡೆಹಿಡಿಯುವ ಮೂಲಕ ಸಾರ್ವಜನಿಕರ ಹಣವನ್ನು ರಕ್ಷಿಸಲಾಗಿದೆ' ಎಂದು ಮಾಹಿತಿ ನೀಡಿದರು.

'ದೇಶದಾದ್ಯಂತ ಸೈಬರ್ ಅಪರಾಧಗಳು ಮತ್ತು ಆನ್‌ಲೈನ್ ವಂಚನೆ ಪ್ರಕರಣಗಳು ತೀವ್ರವಾಗಿ ಹೆಚ್ಚಾಗುತ್ತಿರುವ ಬೆನ್ನಲ್ಲೇ, ರಾಜ್ಯದ ಪೊಲೀಸ್ ಇಲಾಖೆ ವಂಚಕರಿಗೆ ಬಿಸಿ ಮುಟ್ಟಿಸಲು ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಬಿಗಿ ಕ್ರಮಗಳನ್ನು ಕೈಗೊಂಡಿದೆ' ಎಂದು ಹೇಳಿದರು.

'2025ರಲ್ಲಿ ವೆಬ್ ಮೂಲಕ ಹಾಗೂ 2026ರಲ್ಲಿ ವಾಟ್ಸ್‌ಆ್ಯಪ್ ಮೂಲಕ ದೂರು ನೀಡುವ ಸೌಲಭ್ಯವನ್ನು ಕಲ್ಪಿಸಲಾಗಿದೆ. ವೈರ್‌ಲೆಸ್ ಘಟಕಕ್ಕೆ ದೂರು ನೀಡುವ ಸಾರ್ವಜನಿಕರ ಸಂಖ್ಯೆಯಲ್ಲಿ ಗಣನೀಯವಾಗಿ ಹೆಚ್ಚಳವಾಗಿದೆ. 2026ರಲ್ಲಿ ಆರಂಭಿಕ (ಜನವರಿ–ಮೇವರೆಗೆ) ಐದು ತಿಂಗಳಲ್ಲೇ 10,33,352 ಕರೆಗಳು ಬಂದಿದ್ದು, 90,225 ದೂರುಗಳು ದಾಖಲಾಗಿವೆ. ಈ ಅವಧಿಯಲ್ಲಿ ₹807 ಕೋಟಿ ವಂಚನೆ ಆಗಿದ್ದು, ಆ ಪೈಕಿ ₹216 ಕೋಟಿ (ಶೇ27ರಷ್ಟು) ಹಣವನ್ನು ತಡೆ ಹಿಡಿಯಲಾಗಿದೆ' ಎಂದು ಮಾಹಿತಿ ನೀಡಿದರು.

ಬ್ಯಾಂಕ್‌ಗಳಲ್ಲಿ ಸೈಬರ್ ವಂಚನೆ ಹಣವನ್ನು ತಕ್ಷಣವೇ ಸ್ಥಗಿತಗೊಳಿಸಲು, 'ಬ್ಯಾಂಕ್ ಫಾಲೋ-ಅಪ್ ಟೀಂ' ರಚಿಸಲಾಗಿದೆ. ವೈರ್‌ಲೆಸ್ ಸಿಬ್ಬಂದಿಗೆ ಸೈಬರ್ ಅಪರಾಧ ಪ್ರಕರಣಗಳ ಪತ್ತೆಗೆ ವಿಶೇಷ ತರಬೇತಿ ನೀಡಲಾಗಿದೆ. ಬ್ಯಾಂಕ್‌ಗಳೊಂದಿಗೆ ನಿರಂತರ ಸಂಪರ್ಕದಲ್ಲಿ ಇರಲು, ಸಿಸಿಟಿವಿ ದೃಶ್ಯಾವಳಿಗಳ ಸಂಗ್ರಹ, ತಡೆ ಹಿಡಿದ ಹಣವನ್ನು ಸಾರ್ವಜನಿಕರಿಗೆ ಮರಳಿ ಕೊಡಿಸಲು ಮತ್ತು ಎಫ್‌ಐಆರ್ ದಾಖಲಿಸಲು ವಿಶೇಷ ಸಂಪರ್ಕ ಅಧಿಕಾರಿಗಳನ್ನು ನೇಮಿಸಲಾಗಿದೆ' ಎಂದು ಹೇಳಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ, ಲಾಜಿಸ್ಟಿಕ್ಸ್ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಎಸ್.ಮುರುಗನ್ ಪಾಲ್ಗೊಂಡಿದ್ದರು.

ಬೆಂಗಳೂರಿನ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಪೊಲೀಸ್ ವೈರ್‌ಲೆಸ್ ಕೇಂದ್ರ ಕಚೇರಿಯಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿದರು

ಸುಳ್ಳು ಸುದ್ದಿ ಹಬ್ಬಿಸುವ ಬೆದರಿಕೆ: ಪತ್ನಿ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣ ಕೊಡದಿದ್ದರೆ ಎಚ್‌ಐವಿ ಸೋಂಕು ಇರುವುದಾಗಿ ವದಂತಿ ಹಬ್ಬಿಸಿ ಮಾನಹಾನಿ ಮಾಡುವುದಾಗಿ ಬೆದರಿಸುತ್ತಿದ್ದ ಪತ್ನಿಯ ವಿರುದ್ಧ ಉದ್ಯಮಿಯೊಬ್ಬರು ಮಾರತ್‌ಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದು ಪ್ರಕರಣ ದಾಖಲಾಗಿದೆ.

ಮಾರತ್‌ಹಳ್ಳಿಯಲ್ಲಿ ಕಂಪ್ಯೂಟರ್ ತರಬೇತಿ ಸಂಸ್ಥೆ ನಡೆಸುತ್ತಿರುವ ಉದ್ಯಮಿಗೆ ಪತ್ನಿ ಹಣಕ್ಕಾಗಿ ಬೆದರಿಕೆ ಹಾಕುತ್ತಿದ್ದರು. ಹಣ ಕೊಡದಿದ್ದರೆ ಎಚ್‌ಐವಿ ಸೋಂಕು ತಗುಲಿರುವುದಾಗಿ ಸುಳ್ಳು ಸುದ್ದಿ ಹಬ್ಬಿಸುತ್ತೇನೆ ಎಂದು ಪತ್ನಿ ಬೆದರಿಕೆ ಹಾಕುತ್ತಿದ್ದರು. ಇದರಿಂದ ರೋಸಿ ಹೋದ ಉದ್ಯಮಿ, ಪತ್ನಿಯ ವಿರುದ್ಧ ದೂರು ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಆರೋಪಿ ವಿರುದ್ಧ ವಂಚನೆ, ನಂಬಿಕೆ ದ್ರೋಹ, ಕಳವು, ಸುಲಿಗೆ, ಮಾನಹಾನಿ, ಬೆದರಿಕೆ ಆರೋಪದ ಅಡಿ ಪ್ರಕರಣ ದಾಖಲಿಸಿಕೊಂಡು ವಿಚಾರಣೆಗೆ ಬರುವಂತೆ ನೋಟಿಸ್ ಜಾರಿ ಮಾಡಿದ್ದೇವೆ' ಎಂದು ಪೊಲೀಸರು ಹೇಳಿದರು.

'2021ರ ಅಕ್ಟೋಬರ್‌ನಲ್ಲಿ ವೈವಾಹಿಕ ಜಾಲತಾಣದಲ್ಲಿ ಮಹಿಳೆ ಪರಿಚಯವಾಗಿದ್ದರು. ಅವರಿಗೆ ಮದುವೆಯಾಗಿ ಒಬ್ಬ ಮಗನಿದ್ದರೂ 2022ರ ಫೆಬ್ರುವರಿಯಲ್ಲಿ 2ನೇ ಮದುವೆಯಾಗಿದ್ದೆ. ಮದುವೆ ಬಳಿಕ ಆಕೆಯ ಮಗನ ಜವಾಬ್ದಾರಿಯನ್ನು ತಾನೇ ವಹಿಸಿಕೊಂಡಿದ್ದೆ. ಆತನ ಶೈಕ್ಷಣಿಕ ವೆಚ್ಚಕ್ಕೆ ಮತ್ತು ಮಹಿಳೆಯ ತಂದೆಯ ಮನೆ ಬಾಡಿಗೆಗೆ ತಾನೇ ಹಣ ಕೊಡುತ್ತಿದ್ದೆ. ಈ ಮಧ್ಯೆ ಪತ್ನಿ ಬೇರೆ ಇಬ್ಬರು ವ್ಯಕ್ತಿಗಳೊಂದಿಗೆ ಸಲುಗೆಯಿಂದ ಇರುವುದು ಗೊತ್ತಾಯಿತು. ಇದೇ ವಿಚಾರಕ್ಕೆ ತಮ್ಮ ನಡುವೆ ಜಗಳವಾಗಿತ್ತು. ನಂತರ, ದೂರವಾಗಿ ಪ್ರತ್ಯೇಕವಾಗಿ ನೆಲಸಿದ್ದೆವು' ಎಂದು ಉದ್ಯಮಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಮನೆಗೆ ನುಗ್ಗಿ ₹18 ಲಕ್ಷ ನಗದು, ಲಕ್ಷಾಂತರ ಮೌಲ್ಯದ ವಿದೇಶಿ ಕರೆನ್ಸಿ, 320 ಗ್ರಾಂ ಆಭರಣ, 1.5 ಕೆ.ಜಿ ಬೆಳ್ಳಿ ಸೇರಿದಂತೆ ಬೆಲೆ ಬಾಳುವ ವಸ್ತುಗಳನ್ನು ಕಳವು ಮಾಡಿದ್ದಾಳೆ. ಈ ಬಗ್ಗೆ ಪ್ರಶ್ನಿಸಿದ್ದಕ್ಕೆ ನಿಂದನೆ ಮಾಡಿದ್ದಾಳೆ. ಅಲ್ಲದೇ ₹50 ಲಕ್ಷ ಕೊಡದಿದ್ದರೆ ಸುಳ್ಳು ಸುದ್ದಿ ಹಬ್ಬಿಸಿ ಮಾನಹಾನಿ ಮಾಡುವುದಾಗಿ ಬೆದರಿಕೆ ಹಾಕಿದ್ದಾಳೆ' ಎಂದು ಉದ್ಯಮಿ ಆರೋಪಿಸಿದ್ದಾರೆ.

₹20 ಲಕ್ಷ ದರೋಡೆ: ಇನ್‌ಸ್ಪೆಕ್ಟರ್ ಸೆರೆ

ಮಹೇಶ್ ಕನಕಗಿರಿ

ಬೆಂಗಳೂರು: ಮಡಿವಾಳದ ಸಿಲ್ಕ್ ಬೋರ್ಡ್ ಸಮೀಪದ ಹೋಟೆಲ್‌ವೊಂದರಲ್ಲಿ ವಾಸ್ತವ್ಯ ಮಾಡಿದ್ದ ಕೇರಳಂನ ಉದ್ಯಮಿಗಳನ್ನು ಬೆದರಿಸಿ ₹20 ಲಕ್ಷ ದರೋಡೆ ಮಾಡಿದ್ದ ಪ್ರಕರಣದಲ್ಲಿ ಸಿಐಡಿ ಇನ್‌ಸ್ಪೆಕ್ಟರ್ ಮಹೇಶ್ ಕನಕಗಿರಿ ಸೇರಿ ಇಬ್ಬರನ್ನು ಮಡಿವಾಳ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಸಿಐಡಿ ಇನ್‌ಸ್ಪೆಕ್ಟರ್ ಸೇರಿ ನಾಲ್ವರ ವಿರುದ್ಧ ಮಡಿವಾಳ ಪೊಲೀಸ್ ಠಾಣೆಯಲ್ಲಿ ಗುರುವಾರ ರಾತ್ರಿ ಪ್ರಕರಣ ದಾಖಲಾಗಿತ್ತು. ಕೃತ್ಯ ನಡೆದ ಕೆಲವೇ ತಾಸಿನಲ್ಲಿ ಕುಪೇಂದ್ರ ಎಂಬಾತನನ್ನು ಬಂಧಿಸಿ, ಇನ್‌ಸ್ಪೆಕ್ಟರ್ ಮಹೇಶ್ ಕನಕಗಿರಿಗೆ ಹುಡುಕಾಟ ನಡೆಸಲಾಗುತ್ತಿತ್ತು. ಶುಕ್ರವಾರ ರಾತ್ರಿ ಅವರನ್ನೂ ಬಂಧಿಸಲಾಗಿದೆ. ತಲೆಮರೆಸಿಕೊಂಡಿರುವ ಇಬ್ಬರ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

'ಇದುವರೆಗೆ ನಡೆದ ತನಿಖೆಯಲ್ಲಿ ಸಿಐಡಿ ಇನ್‌ಸ್ಪೆಕ್ಟರ್ ಪ್ರಕರಣದ ಸೂತ್ರಧಾರ ಎಂಬುದು ಕಂಡುಬಂದಿದೆ' ಎಂದು ಮೂಲಗಳು ಹೇಳಿವೆ. ಕಳೆದ ಕೆಲವು ತಿಂಗಳಿಂದ ಮಹೇಶ್ ಅವರು ಸಿಐಡಿ ವಿಭಾಗದಲ್ಲಿ ನಿಯೋಜನೆ ಮೇಲೆ ಕೆಲಸ ಮಾಡುತ್ತಿದ್ದರು ಎಂಬುದು ಗೊತ್ತಾಗಿದೆ.

'ಕೇರಳಂನ ಮೂವರು ಉದ್ಯಮಿಗಳು ವ್ಯಾಪಾರಕ್ಕೆಂದು ₹20 ಲಕ್ಷ ತೆಗೆದುಕೊಂಡು ಹೋಟೆಲ್‌ಗೆ ಗುರುವಾರ ರಾತ್ರಿ ಬಂದು ವಾಸ್ತವ್ಯ ಮಾಡಿದ್ದರು. ಹಣದೊಂದಿಗೆ ಉದ್ಯಮಿಗಳು ಬಂದಿರುವ ಮಾಹಿತಿ ತಿಳಿದಿದ್ದ ಇನ್‌ಸ್ಪೆಕ್ಟರ್ ಮಹೇಶ್ ಅವರು ಕುಮಾರ್, ಕುಪೇಂದ್ರ ಹಾಗೂ ಮತ್ತಿಬ್ಬರ ಜತೆಗೆ ಸೇರಿಕೊಂಡು ದರೋಡೆ ನಡೆಸಲು ಸಂಚು ರೂಪಿಸಿ ದ್ದರು. ಸಂಚಿನಂತೆಯೇ ಐವರು ಪೊಲೀಸ್ ಜೀಪಿನಲ್ಲೇ ಗುರುವಾರ ರಾತ್ರಿ ಹೋಟೆಲ್ ಬಳಿಗೆ ತೆರಳಿದ್ದರು. ಇಲಾಖೆಯ ಜೀಪಿನಲ್ಲಿ ಇನ್‌ಸ್ಪೆಕ್ಟರ್ ಕುಳಿತಿದ್ದರೆ, ಉದ್ಯಮಿಗಳು ವಾಸ್ತವ್ಯ ಮಾಡಿದ್ದ ಕೊಠಡಿಗೆ ಉಳಿದ ನಾಲ್ವರು ಆರೋಪಿಗಳು ನುಗ್ಗಿದ್ದರು. ಇನ್‌ಸ್ಪೆಕ್ಟರ್ ಗುರುತಿನ ಚೀಟಿಯನ್ನು ತೋರಿಸಿ, 'ನಾವು ಪೊಲೀಸರು' ಎಂಬುದಾಗಿ ಆರೋಪಿಗಳು ಪರಿಚಯಿಸಿಕೊಂಡಿದ್ದರು. 'ಅಕ್ರಮ ವಾಗಿ ಹೂಡಿಕೆ ಮಾಡಲು ಹಣ ತಂದಿದ್ದೀರಿ' ಎಂದು ಉದ್ಯಮಿಗಳನ್ನು ಬೆದರಿಸಿ, ಅವರ ಬಳಿಯಿದ್ದ ಹಣವನ್ನು ದರೋಡೆ ಮಾಡಿದ್ದರು. ಬಳಿಕ, ಪೊಲೀಸ್ ಇಲಾಖೆಯ ವಾಹನದಲ್ಲಿಯೇ ಆರೋಪಿಗಳು ಪರಾರಿ ಆಗಿದ್ದರು' ಎಂದು ಮೂಲಗಳು ಹೇಳಿವೆ.

ಹೆದರಿದ್ದ ಉದ್ಯಮಿಗಳು: 'ಆರಂಭದಲ್ಲಿ ಉದ್ಯಮಿಗಳು ದೂರು ನೀಡಲು ಹೆದರಿದ್ದರು. ನಂತರ, ನಡೆದ ಬೆಳವಣಿಗೆಳಿಂದ ಅನುಮಾನ ಬಂದು, ಮಡಿವಾಳ ಠಾಣೆಗೆ ತೆರಳಿ ದೂರು ನೀಡಿದ್ದರು. ದೂರು ಆಧರಿಸಿ, ಕಾರ್ಯಾಚರಣೆ ನಡೆಸಿ ಕುಪೇಂದ್ರ ಎಂಬಾತನನ್ನು ಬಂಧಿಸಿ ವಿಚಾರಣೆ ನಡೆಸಿದಾಗ ಇನ್‌ಸ್ಪೆಕ್ಟರ್ ಪಾತ್ರದ ಬಗ್ಗೆ ಗೊತ್ತಾಯಿತು' ಎಂದು ಮೂಲಗಳು ತಿಳಿಸಿವೆ.

ಡಿಸಿಪಿ ನೇತೃತ್ವದಲ್ಲಿ ತನಿಖೆ: ಕಮಿಷನರ್

'ಇನ್‌ಸ್ಪೆಕ್ಟರ್ ದರ್ಜೆಯ ಅಧಿಕಾರಿಯೊಬ್ಬರು ಪ್ರಕರಣದಲ್ಲಿ ಶಾಮೀಲಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಆಗ್ನೇಯ ವಿಭಾಗದ ಡಿಸಿಪಿ ಮೊಹಮ್ಮದ್ ಸುಜಿತಾ ನೇತೃತ್ವದಲ್ಲಿ ಪ್ರಕರಣದ ತನಿಖೆ ಆರಂಭವಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಮಾಹಿತಿ ನೀಡಿದರು. 'ಕೃತ್ಯದ ಸಂದರ್ಭದಲ್ಲಿ ಬಳಸಲಾಗಿದ್ದ ವಾಹನ ಹಾಗೂ ಹಣವನ್ನು ವಶಕ್ಕೆ ಪಡೆಯಲಾಗಿದೆ. ₹20 ಲಕ್ಷ ನಗದು ದೂರುದಾರಿಗೆ ಎಲ್ಲಿಂದ ಬಂತು ಎಂಬುದರ ಕುರಿತೂ ತನಿಖೆ ಪ್ರಗತಿಯಲ್ಲಿ ಇದೆ. ಹಣಕ್ಕೆ ಸಂಬಂಧಿಸಿದಂತೆ ದಾಖಲೆ ಒದಗಿಸುವಂತೆಯೂ ದೂರುದಾರರಿಗೆ ಸೂಚಿಸಲಾಗಿದೆ' ಎಂದರು.

ದೃಶ್ಯಾವಳಿ ಸಂಗ್ರಹ

ಕೃತ್ಯ ನಡೆದ ಹೋಟೆಲ್‌ನ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಸಂಗ್ರಹಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಎಲೆಕ್ಟ್ರಿಕ್ ಬಸ್ ಡಿಕ್ಕಿ: ಗಾರೆ ಮೇಸ್ತ್ರಿ ಸಾವು

ಬೆಂಗಳೂರು: ಜ್ಞಾನಭಾರತಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ರಸ್ತೆ ದಾಟುತ್ತಿದ್ದ ಗಾರೆ ಮೇಸ್ತ್ರಿಗೆ ಬಿಎಂಟಿಸಿ ಎಲೆಕ್ಟ್ರಿಕ್ ಬಸ್‌ವೊಂದು ಗುರುವಾರ ರಾತ್ರಿ ಡಿಕ್ಕಿ ಹೊಡೆದ ಪರಿಣಾಮ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಉಲ್ಲಾಳ ಉಪ ನಗರದಲ್ಲಿ ನೆಲಸಿದ್ದ ಮಂಡ್ಯದ ರಾಜು (57) ಮೃತ ಪಾದಚಾರಿ.

ಕೆಲಸ ಮುಗಿಸಿಕೊಂಡು ಮನೆಗೆ ಹೊರಟಿದ್ದರು. ಉಲ್ಲಾಳ ರಸ್ತೆಯ ಮಂಗನಹಳ್ಳಿ ಕ್ರಾಸ್ ಬಳಿ ರಾತ್ರಿ 8 ಗಂಟೆಯ ಸುಮಾರಿಗೆ ರಸ್ತೆ ದಾಟುತ್ತಿದ್ದ ವೇಳೆ ವೇಗವಾಗಿ ಬಂದ, ಬಿಎಂಟಿಸಿ ಎಲೆಕ್ಟ್ರಿಕ್ ಬಸ್ ಅವರಿಗೆ ಡಿಕ್ಕಿ ಹೊಡೆದಿದೆ. ಗಂಭೀರವಾಗಿ ಗಾಯಗೊಂಡಿದ್ದ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಪುನರ್ವಸತಿ ಕೇಂದ್ರದ ಮಾಲೀಕನ ಕೊಲೆ: ಆರೋಪಿಗಳು ಪರಾರಿ

ಅಪರಾಧ ಸುದ್ದಿ

ಬೆಂಗಳೂರು: ಚಂದ್ರಾ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯ ಪುನರ್ವಸತಿ ಕೇಂದ್ರದ ಮಾಲೀಕ ಶಿವಲಿಂಗಯ್ಯ (60) ಅವರನ್ನು ಕೊಲೆ ಮಾಡಿ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

ನ್ಯೂ ಲೈಫ್ ಪುನರ್ವಸತಿ ಕೇಂದ್ರ ವನ್ನು ಶಿವಲಿಂಗಯ್ಯ ನಡೆಸುತ್ತಿದ್ದರು. ನಿತಿನ್, ಕಾರ್ತಿಕ್, ಸೋಹೆಲ್ ಪಾಷಾ ಕೃತ್ಯ ಎಸಗಿರುವ ಶಂಕೆಯಿದ್ದು, ಅವರ ಪತ್ತೆಗೆ ಪೊಲೀಸರು ಮುಂದಾಗಿದ್ದಾರೆ.

ಬಿಸಿಸಿ ಬಡಾವಣೆಯಲ್ಲಿ ನ್ಯೂ ಲೈಫ್ ಪುನರ್ವಸತಿ ಕೇಂದ್ರವಿದ್ದು, ನಿತಿನ್ ಎಂಬಾತ ಕೆಲವು ತಿಂಗಳ ಹಿಂದೆ ಈ ಕೇಂದ್ರಕ್ಕೆ ದಾಖಲಾಗಿದ್ದ. ಕ್ರಮೇಣ ಮಾಲೀಕ ಶಿವಲಿಂಗಯ್ಯ ಅವರ ನಂಬಿಕೆ ಗಿಟ್ಟಿಸಿಕೊಂಡು ಕೇಂದ್ರದ ನಿರ್ವಹಣೆಯಲ್ಲಿ ತೊಡಗಿಸಿಕೊಂಡಿದ್ದ. ಎಲ್ಲ ಜವಾಬ್ದಾರಿಗಳನ್ನು ನೋಡಿಕೊಳ್ಳುತ್ತಿದ್ದ. ಶುಕ್ರವಾರ ಮಧ್ಯಾಹ್ನ ನಿತಿನ್ ಮತ್ತು ಇತರೆ ಆರೋಪಿಗಳು ಯಾವುದೋ ವಿಚಾರಕ್ಕೆ ಶಿವಲಿಂಗಯ್ಯ ಜೊತೆಗೆ ಜಗಳ ಮಾಡಿಕೊಂಡಿದ್ದರು. ಈ ವೇಳೆ ಮೊದಲ ಮಹಡಿಯ ರೂಮ್ ಬಾಗಿಲು ಹಾಕಿದ್ದ ಆರೋಪಿಗಳು, ಶಿವಲಿಂಗಯ್ಯನ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿದ್ದಾರೆ. ಇದರಿಂದ ಶಿವಲಿಂಗಯ್ಯ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಕೃತ್ಯ ಎಸಗಿದ ಆರೋಪಿಗಳು, ಮಾಲೀಕ ಶಿವಲಿಂಗಯ್ಯ ಅವರಿಗೆ ಸೇರಿದ ಕಾರು ಹಾಗೂ ಬೈಕ್‌ಗಳ ಕೀ ತೆಗೆದುಕೊಂಡು ಅದೇ ವಾಹನಗಳಲ್ಲೇ ಪರಾರಿ ಆಗಿದ್ದಾರೆ ಎಂದು ಮೂಲಗಳು ಹೇಳಿವೆ.

ನಟಿ ಫೋಟೊ ಮಾರ್ಪಾಡು: ಸೆರೆ

ಬೆಂಗಳೂರು: ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಬಳಸಿ ನಟಿ ರುಕ್ಮಿಣಿ ವಸಂತ್ ಅವರ ಫೋಟೊ ಹಾಗೂ ವಿಡಿಯೊವನ್ನು ಅಶ್ಲೀಲವಾಗಿ ಮಾರ್ಪಡಿಸಿ ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟಿದ್ದ ಮೂವರನ್ನು ಸೈಬರ್ ಅಪರಾಧ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಚಿಲಕಮುಖಿ ಗ್ರಾಮದ ರವಿಕುಮಾರ್ (24), ಶಿವಮೊಗ್ಗದ ತೀರ್ಥಹಳ್ಳಿಯ ಚಂದ್ರಕಾಂತ್ (33), ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್‌ನ ರಂಜಿತ್ (25) ಬಂಧಿತರು. ಬಂಧಿತರಿಂದ ಕೃತ್ಯಕ್ಕೆ ಬಳಸಿದ 3 ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ ಎಂದು ಸೈಬರ್ ಅಪರಾಧ ಠಾಣೆಯ ಪೊಲೀಸರು ತಿಳಿಸಿದ್ದಾರೆ.

'ಕಾಂತಾರ' ಸಿನಿಮಾ ನಟಿ ರುಕ್ಮಿಣಿ ವಸಂತ್ ಅವರನ್ನು ಅವಮಾನಕರ ರೀತಿಯಲ್ಲಿ ಬಿಂಬಿಸುವ ಸಲುವಾಗಿ ಎ.ಐ ತಂತ್ರಜ್ಞಾನ ಬಳಸಿ ತಯಾರಿಸಿದ ಭಾವಚಿತ್ರ ಮತ್ತು ವಿಡಿಯೊಗಳನ್ನು ಆರೋಪಿಗಳು ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟಿದ್ದರು. ರುಕ್ಮಿಣಿ ಅವರು ಸೈಬರ್ ಠಾಣೆಯ ಪೊಲೀಸರಿಗೆ ಇತ್ತೀಚೆಗೆ ದೂರು ನೀಡಿದ್ದರು. ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿತ್ತು. ರಾಜ್ಯದ ವಿವಿಧೆಡೆ ಕಾರ್ಯಾಚರಣೆ ನಡೆಸಿದ ಮೂವರನ್ನು ಬಂಧಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಬಾಳಿನ ಗಾಳಿಪಟಕ್ಕೆ ಅನುಭವ ಗಾಳಿಯಾದರೆ, ಅದರ ಸೂತ್ರ ವಿವೇಕ.

–ಕೆ.ಎಸ್. ನಿಸಾರ್ ಅಹಮದ್

ಸಂಪಾದಕೀಯ

ಪಕ್ಷಾಂತರ ಪ್ರಹಸನಗಳ ಸರಣಿ ನಿರ್ಲಜ್ಜ ರಾಜಕಾರಣದ ಕನ್ನಡಿ

ಮಹಾರಾಷ್ಟ್ರದಲ್ಲಿ ಪಕ್ಷಾಂತರ ರಾಜಕಾರಣದ ಹೊಸ ಪ್ರಹಸನ ನಡೆಯುತ್ತಿರುವುದನ್ನು ದೇಶ ಗಮನಿಸುತ್ತಿದೆ. ಶಿವಸೇನೆಯ ಉದ್ಧವ್ ಠಾಕ್ರೆ ಬಣಕ್ಕೆ ಸೇರಿದ ಕನಿಷ್ಠ ಆರು ಲೋಕಸಭಾ ಸದಸ್ಯರು, ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಏಕನಾಥ ಶಿಂಧೆ ನೇತೃತ್ವದ ಶಿವಸೇನೆಗೆ ಸೇರ್ಪಡೆಯಾಗಲು ಸಿದ್ಧರಾಗಿದ್ದಾರೆ. ಜೂನ್ 19ರ ಶುಕ್ರವಾರ ಈ ಸೇರ್ಪಡೆ ನಡೆಯುತ್ತದೆಂದು ಹೇಳಲಾಗುತ್ತಿದ್ದು, ಈಗ ದಿನಾಂಕ ಮುಂದಕ್ಕೆ ಹೋಗಿದೆ. 2022ರಿಂದ ಶಿವಸೇನೆಯನ್ನು ವಿಭಜಿಸಿ ಬಿಜೆಪಿಯ ಬೆಂಬಲದೊಂದಿಗೆ ಸರ್ಕಾರ ರಚಿಸಿದ್ದ ಶಿಂಧೆ, ಈಗ ಮತ್ತೊಂದು ಸುತ್ತಿನ ಪಕ್ಷಾಂತರಕ್ಕೆ ಪ್ರೇರಣೆಯಾಗಿದ್ದಾರೆ. ಈ ಕಾರ್ಯಾಚರಣೆಯನ್ನು 'ಆಪರೇಷನ್ ಟೈಗರ್' ಎಂದು ಉದ್ಧವ್ ಠಾಕ್ರೆ ಬಣ ಕರೆದಿದ್ದು, ಪಕ್ಷಾಂತರ ಮಾಡುವ ಪ್ರತಿಯೊಬ್ಬ ಸಂಸದನಿಗೆ ₹50 ಕೋಟಿ ನೀಡುವ ಒಪ್ಪಂದವಾಗಿದ್ದು, ₹15 ಕೋಟಿ ಮುಂಗಡವಾಗಿ ನೀಡಲಾಗಿದೆ ಎಂದು ಆರೋಪಿಸಿದೆ. ಪಕ್ಷದ ಮೂರನೇ ಎರಡರಷ್ಟು ಸಂಸದರು ಎದುರಾಳಿ ಬಣಕ್ಕೆ ಸೇರುತ್ತಿರುವುದರಿಂದ, ಪಕ್ಷಾಂತರ ನಿಷೇಧ ಕಾಯ್ದೆಯಡಿ ಅನರ್ಹತೆ ತಪ್ಪಿಸಿಕೊಳ್ಳಬಹುದು ಎಂದು ಬಣ ಬದಲಾವಣೆಗೆ ಸಿದ್ಧವಾಗಿರುವ ಗುಂಪು ವಾದಿಸುತ್ತಿದೆ. ಇತ್ತೀಚಿನ ಪಕ್ಷಾಂತರ ಪ್ರಕರಣಗಳನ್ನು ಗಮನಿಸಿದರೆ, ಅವರ ವಾದಕ್ಕೆ ಲೋಕಸಭಾ ಸ್ಪೀಕರ್ ಅವರಿಂದ ಸುಲಭವಾಗಿ ಮನ್ನಣೆ ದೊರೆಯಬಹುದು. ಆದರೆ, ಪಕ್ಷಾಂತರ ಪ್ರಕರಣಗಳನ್ನು ಕಾನೂನು ಆಯಾಮದ ಜೊತೆಗೆ ನೈತಿಕ ನೆಲೆಗಟ್ಟಿನಲ್ಲಿಯೂ ಪರಿಶೀಲಿಸಬೇಕಾಗಿದೆ.

ಶಿವಸೇನೆಯ ಈ ಪಕ್ಷಾಂತರ ಪ್ರಹಸನದಂತಹದ್ದೇ ಬೆಳವಣಿಗೆಗಳು ಆಮ್ ಆದ್ಮಿ (ಎಎಪಿ) ಮತ್ತು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷಗಳಲ್ಲಿಯೂ ನಡೆದಿವೆ. ಎಎಪಿಯ ಹತ್ತು ಸಂಸದರಲ್ಲಿ ಏಳು ಮಂದಿ ಕಳೆದ ಏಪ್ರಿಲ್‌ನಲ್ಲಿ ಬಿಜೆಪಿ ಸೇರಿದ್ದರು. ಮೇ ತಿಂಗಳಲ್ಲಿ ಪಶ್ಚಿಮ ಬಂಗಾಳದಲ್ಲಿ ನಡೆದ ವಿಧಾನಸಭಾ ಚುನಾವಣೆಯ ನಂತರ, ಟಿಎಂಸಿಯಲ್ಲಿ ಒಡಕಿನ ಚಟುವಟಿಕೆಗಳು ನಡೆಯುತ್ತಿವೆ. ಟಿಎಂಸಿಯ 28 ಸಂಸದರಲ್ಲಿ 20 ಮಂದಿ, ಪ್ರಧಾನ ಮೂಲದ ಅಪರಿಚಿತವಾದ 'ನ್ಯಾಷನಲಿಸ್ಟ್ ಸಿಟಿಜನ್ಸ್ ಪಾರ್ಟಿ ಆಫ್ ಇಂಡಿಯಾ' (ಎನ್‌ಸಿಪಿಐ) ಜೊತೆ ವಿಲೀನಗೊಳ್ಳುವುದಾಗಿ ಹೇಳಿದ್ದಾರೆ. ವಿಶ್ವಾಸಾರ್ಹವೆನಿಸದ, ಯಾವುದೇ ಶಾಸಕ ಅಥವಾ ಸಂಸದರನ್ನು ಹೊಂದಿರದ 'ಎನ್‌ಸಿಪಿಐ'ನ ನಾಯಕರಿಗೆ, ಟಿಎಂಸಿ ಸಂಸದರು ತಮ್ಮ ಪಕ್ಷವನ್ನು ಸೇರುತ್ತಿದ್ದಾರೆ ಎನ್ನುವ ಮಾಹಿತಿಯೇ ಇರಲಿಲ್ಲ. ಸಮಾಜವಾದಿ ಪಕ್ಷ (ಎಸ್‌ಪಿ) ಹಾಗೂ ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷದ (ಶರದ್ ಪವಾರ್ ಬಣ) ಸಂಸದರೂ ಪಕ್ಷಾಂತರ ಮಾಡುವ ಸಾಧ್ಯತೆಯಿದೆ ಎಂದು ಹೇಳಲಾಗುತ್ತಿದೆ. ಎಸ್‌ಪಿ 37 ಸಂಸದರನ್ನು ಹೊಂದಿದ್ದರೆ, ಎನ್‌ಸಿಪಿ 7 ಸಂಸದರನ್ನು ಹೊಂದಿದೆ.

ಸಂಸದೀಯ ಪ್ರಜಾಪ್ರಭುತ್ವದ ಮೂಲತತ್ತ್ವಗಳಿಗೆ ಪಕ್ಷಾಂತರ ವಿರುದ್ಧವಾದುದು. ಪಕ್ಷಾಂತರ 'ಸಹಜ ಪ್ರಕ್ರಿಯೆ' ಎನ್ನುವಂತಾಗಿರುವುದು ಚುನಾವಣಾ ರಾಜಕಾರಣದ ಬಗ್ಗೆ ಜನ ವಿಶ್ವಾಸ ಕಳೆದುಕೊಳ್ಳಲು ಕಾರಣವಾಗಿದೆ.

ವಿವಿಧ ರಾಜ್ಯಗಳಲ್ಲಿ ನಡೆಯುತ್ತಿರುವ ಈ ಪಕ್ಷಾಂತರ ರಾಜಕೀಯ ಪ್ರಹಸನದ ಸೂತ್ರಧಾರಿ ಬಿಜೆಪಿ ಎಂದು ಹೇಳಲಾಗುತ್ತಿದ್ದು, ಸಂಸತ್ತಿನಲ್ಲಿ ತನ್ನ ಬಲ ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ವಿವಿಧ ಪಕ್ಷಗಳಲ್ಲಿ ಒಡಕು ಸೃಷ್ಟಿಸುತ್ತಿದೆ ಎನ್ನಲಾಗಿದೆ. ಪಕ್ಷಾಂತರದ ಈ ವಿದ್ಯಮಾನಗಳು ರಾಜಕೀಯ ನಡವಳಿಕೆಯ ಅಂಗೀಕೃತ ನಿಯಮಗಳ ಉಲ್ಲಂಘನೆ ಆಗಿವೆ ಹಾಗೂ ಸಂಸದೀಯ ಪ್ರಜಾಪ್ರಭುತ್ವದ ಮೂಲತತ್ತ್ವಗಳಿಗೂ ವಿರುದ್ಧವಾಗಿವೆ. ಯಾವುದೇ ಸಿದ್ಧಾಂತ, ತತ್ತ್ವ ಅಥವಾ ಮೌಲ್ಯಗಳ ಕಾರಣದಿಂದ ಈ ಪಕ್ಷಾಂತರಗಳು ನಡೆಯುತ್ತಿಲ್ಲ. ಅಧಿಕಾರ, ಹಣ, ಕಿರುಕುಳದ ಆತಂಕ, ದೌರ್ಬಲ್ಯ ಹಾಗೂ ಬೆದರಿಕೆಗಳ ಹಿನ್ನೆಲೆಯಲ್ಲಿ ಈಗಿನ ಬೆಳವಣಿಗೆಗಳನ್ನು ನೋಡಬೇಕಾಗಿದೆ. ರಾಜಕೀಯ ಅವಕಾಶವಾದಿತನ ಹಾಗೂ ಪಕ್ಷಾಂತರಗಳನ್ನು ತಡೆಯುವ ಉದ್ದೇಶದಿಂದ ಸಂವಿಧಾನದಲ್ಲಿ ಸೇರಿಸಲಾದ ಹತ್ತನೇ ಪರಿಚ್ಛೇದವು ಪ್ರಸ್ತುತ ಕಾಗದದ ಮೇಲಷ್ಟೇ ಜೀವಂತವಾಗಿದೆ. ಪಕ್ಷವೊಂದರ ಪ್ರತಿನಿಧಿ, ನಿರ್ದಿಷ್ಟ ಸಿದ್ಧಾಂತಗಳ ಆಧಾರದ ಮೇಲೆ ಆಯ್ಕೆಯಾದ ಜನಪ್ರತಿನಿಧಿಗಳು ಮತ್ತೊಂದು ಪಕ್ಷವನ್ನು ಸೇರುವುದರಿಂದಾಗಿ, ಚುನಾವಣಾ ಪ್ರಕ್ರಿಯೆಯ ಮೇಲಿನ ಜನರ ವಿಶ್ವಾಸಕ್ಕೆ ಧಕ್ಕೆಯಾಗುತ್ತದೆ. ಲೋಕಸಭಾ ಸ್ಪೀಕರ್, ರಾಜ್ಯ ವಿಧಾನಸಭೆಗಳ ಸ್ಪೀಕರ್‌ಗಳು ಹಾಗೂ ರಾಜ್ಯಸಭೆಯ ಸಭಾಪತಿ ತಮ್ಮ ಕರ್ತವ್ಯವನ್ನು ನಿಷ್ಪಕ್ಷಪಾತವಾಗಿ ನಿರ್ವಹಿಸಬೇಕೆಂದು ಸಂಸದೀಯ ಪ್ರಜಾಪ್ರಭುತ್ವ ಅಪೇಕ್ಷಿಸುತ್ತದೆ. ಆದರೆ, ಅಂತಹ ಪ್ರಾಂಜಲ ಕಾರ್ಯ ನಿರ್ವಹಣೆ ಇತ್ತೀಚಿನ ವರ್ಷಗಳಲ್ಲಿ ಕಾಣಿಸುತ್ತಿಲ್ಲ. ನೈತಿಕತೆ, ಶಿಷ್ಟಾಚಾರ ಹಾಗೂ ಕಾನೂನಿನ ಬಗ್ಗೆ ಕನಿಷ್ಠ ಗೌರವವೂ ಇಲ್ಲದ ನಿರ್ಲಜ್ಜ ರಾಜಕೀಯ ಸಂಸ್ಕೃತಿಯೊಂದು ರಾಜಕಾರಣವನ್ನು ಆವರಿಸಿಕೊಳ್ಳುತ್ತಿರುವುದು ದುರದೃಷ್ಟಕರ.

ಚಾಟಿ

ಸರಿಯಾದ ದಾರಿಯೆ?

ಪ್ರಜಾಪ್ರಭುತ್ವವನ್ನು ತನಗೆ ಬೇಕಾದಂತೆ ಪಳಗಿಸುತ್ತ ರಣೋತ್ಸಾಹದಲ್ಲಿದ್ದ ಬಿಜೆಪಿಗೆ ಕರ್ನಾಟಕದಲ್ಲಿ ತನ್ನದೇ ಪಕ್ಷ ಸಣ್ಣ ಪ್ರಮಾಣದಲ್ಲಿ ಬೇಟೆಯ ಮಿಕ ಆಗಿರುವುದು, ಅಡ್ಡಮತದಾನ ನಡೆದಿರುವುದನ್ನು ಅರಗಿಸಿಕೊಳ್ಳಲು ಆಗುತ್ತಿಲ್ಲ. ಪ್ರಶ್ನೆ ಇರುವುದು, ವಿರೋಧ ಪಕ್ಷಗಳನ್ನು ಖರೀದಿಸುವ, ಅಕ್ರಮ ದಾರಿಯಲ್ಲಿ ಮುಗಿಸುವ ಕಾರ್ಯತಂತ್ರಗಳಿಗೆ ವಿರೋಧ ಪಕ್ಷಗಳು ಅದೇ ಮಾದರಿಯಲ್ಲಿ ಉತ್ತರಿಸುವುದು ಸರಿಯಾದ ಉತ್ತರವೇ ಎನ್ನುವುದು.

ಮುನೀರ್ ಕಾಟಿಪಳ್ಳ, ಸಾಮಾಜಿಕ ಕಾರ್ಯಕರ್ತ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಟೆಲಿಗ್ರಾಮ್ ಆ್ಯಪ್ ನಿಷೇಧಿಸುವುದು ಸೋಮಾರಿತನದ ಮತ್ತು ಅದಕ್ಷತೆಯನ್ನು ತೋರಿಸುವ ಪ್ರತಿಕ್ರಿಯೆಯಾಗಿದೆ. ನೈಜ ಸಮಸ್ಯೆಯನ್ನು ಪರಿಹರಿಸುವ ಬದಲು ವಿದ್ಯಾರ್ಥಿಗಳನ್ನೇ ಶಿಕ್ಷಿಸುವ ಕ್ರಮವಾಗಿದೆ. ನಿಜವಾದ ಸಮಸ್ಯೆ ಟೆಲಿಗ್ರಾಮ್ ಅಲ್ಲ; ಕೇಂದ್ರ ಸರ್ಕಾರ ಮತ್ತು 'ಎನ್‌ಟಿಎ' ಅಸಮರ್ಥತೆ.

ಪ್ರಿಯಾಂಕ್ ಖರ್ಗೆ, ಗೃಹ ಸಚಿವ

25 ವರ್ಷಗಳ ಹಿಂದೆ

ಬುಧವಾರ, 20-6-2001

• ಮೇಲ್ಮನೆಗೆ ಪ್ರಭಾಕರ ಕೋರೆ, ಉಮಾಶ್ರೀ, ಹಸನಬ್ಬ

ಬೆಂಗಳೂರು, ಜೂನ್ 19– ರಾಜ್ಯ ವಿಧಾನ ಪರಿಷತ್ತಿಗೆ ರಾಜ್ಯಸಭೆ ಮಾಜಿ ಸದಸ್ಯ ಪ್ರಭಾಕರ ಕೋರೆ, ನಟಿ ಉಮಾಶ್ರೀ ಸೇರಿದಂತೆ ಐವರನ್ನು ನಾಮಕರಣ ಮಾಡಿ ರಾಜ್ಯಪಾಲರು ಆದೇಶ ಹೊರಡಿಸಿದ್ದಾರೆ.

ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ದೆಹಲಿಯಿಂದ ಬಂದ ನಂತರ ಇಂದು ಸಂಜೆ ರಾಜ್ಯಪಾಲರ ಅನುಮೋದನೆಗೆ ಐವರ ಪಟ್ಟಿಯನ್ನು ಕಳುಹಿಸಿಕೊಟ್ಟಿದ್ದರು.

ನಾಮಕರಣ ಗೊಂಡ ಇತರ ಗಣ್ಯರೆಂದರೆ ಎಲ್. ಹನುಮಂತಯ್ಯ, ಬಿ.ಎ. ಹಸನಬ್ಬ ಮತ್ತು ಎಂ.ಡಿ. ರಮೇಶ್ ಬಾಬು.

• ರಾಜ್ಯಗಳ ಮಧ್ಯೆ ನೀರು ಹಂಚಿಕೆ ಮಹತ್ವದ ಒಪ್ಪಂದ

ನವದೆಹಲಿ, ಜೂನ್ 19– ರಾಜ್ಯಗಳ ನಡುವಿನ ನೀರು ಹಂಚಿಕೆ ವಿವಾದಗಳನ್ನು ಪರಿಹರಿಸಿಕೊಂಡು ಪುನರ್ ವಿಮರ್ಶಿತ ರಾಷ್ಟ್ರೀಯ ಜಲ ನೀತಿ ರೂಪಿಸಲು ರಚಿಸಲಾಗಿದ್ದ ರಾಜ್ಯ ಸಚಿವರುಗಳ ತಂಡ ನೀರು ಹಂಚಿಕೆ ಅವಕಾಶಗಳಿಗೆ ಸಂಬಂಧಿಸಿ ಮಹತ್ವದ ಒಪ್ಪಂದವೊಂದಕ್ಕೆ ಬಂದಿದೆ. ಆದರೆ, ಉದ್ದೇಶಿತ ನದಿ ಜಲಾನಯನ ಸಂಘಟನೆಗೆ ಶಾಸನಾತ್ಮಕ ಅಧಿಕಾರ ನೀಡದಿರಲೂ ಸಭೆಯಲ್ಲಿ ನಿರ್ಧರಿಸಿದೆ. 'ಆರ್‌ಬಿಒಗಳಿಗೆ ಶಾಸನಾತ್ಮಕ ಅಧಿಕಾರ ನೀಡುವುದಕ್ಕೆ ಕರ್ನಾಟಕದ ವಿರೋಧ ಇತ್ತು' ಎಂದು ಸಭೆಯ ಬಳಿಕ ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು.

75 ವರ್ಷಗಳ ಹಿಂದೆ

ಬುಧವಾರ, 20-6-1951

• 'ನೆಹರೂ ಕೀ ಜೈ' ಬೇಡ; 'ಜೈ ಹಿಂದ್' ಎನ್ನಿ'

ಪಾಟ್ನಾ, ಜೂನ್ 19– ಸಾವಿರಾರು ಜನರು 'ಜವಾಹರ ಲಾಲ್ ನೆಹರೂ ಕೀ ಜೈ' ಮತ್ತು 'ಮಹಾತ್ಮ ಗಾಂಧಿ ಕೀ ಜೈ' ಎಂದು ಕೂಗಿದರು. ಜತೆಗೆ, 'ನೆಹರೂ ಸರ್ಕಾರ್ ಕೀ ಜೈ' ಎಂದು ಕೂಗಿದ ಘೋಷಣೆ ನೆಹರೂ ಅವರಿಗೆ ಪ್ರಿಯವಾಗಲಿಲ್ಲ.

ಸಾರ್ವಜನಿಕ ಸಭೆಗಳಲ್ಲಿ ಪಂಡಿತ ನೆಹರೂ ಅವರು, ತಮಗಾಗಿ 'ಜೈ' ಎಂದು ಕೂಗುವುದಕ್ಕೆ ಬದಲು 'ಜೈ ಹಿಂದ್' ಎನ್ನಬೇಕು ಎಂದರು. ಅನೇಕ ಸಭೆಗಳಲ್ಲಿ ಜನರು 'ಜೈ ಹಿಂದ್' ಎಂದು ಒಕ್ಕೊರಲಿನಿಂದ ಕೂಗುವಂತೆ ಮಾಡಿದರು. ಪಾಟ್ನಾದ ಗಾಂಧಿ ಮೈದಾನದಲ್ಲಿ ಎರಡು ಲಕ್ಷ ಮಂದಿ ಭಾಗಿಯಾಗಿದ್ದ ಸಾರ್ವಜನಿಕ ಸಭೆ ಉದ್ದೇಶಿಸಿ ಪ್ರಧಾನಿ ನೆಹರೂ ಅವರು ಭಾಷಣ ಮಾಡಿದರು.

ಕಾನೂನಿನ ಕಣ್ಣಲ್ಲಿ ಆರ್‌ಎಸ್‌ಎಸ್

ವಿಶ್ಲೇಷಣೆ

ಸಿ.ಎಚ್. ಹನುಮಂತರಾಯ

ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರಿಗೆ ಪ್ರಿಯಾಂಕ್ ಖರ್ಗೆ ಅವರು ಬರೆದಿರುವ ಪತ್ರ, ಸಂಘದ ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯ ಬಗ್ಗೆ ಪ್ರಶ್ನೆಗಳಿಗೆ ಕಾರಣ ಆಗುವಂತಿದೆ. ಪ್ರಿಯಾಂಕ್ ಅವರ ಆರೋಪಗಳನ್ನು ಕಾನೂನಿನ ನಿಕಷದಲ್ಲಿಟ್ಟು ಪರಿಶೀಲಿಸಿದರೆ, ಅವುಗಳ ಅಸ್ತಿತ್ವವೇ ಪ್ರಶ್ನಾರ್ಹವೆನ್ನಿಸುತ್ತದೆ.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಅಸ್ತಿತ್ವವನ್ನೇ ಅಲುಗಾಡಿಸುವಂತೆ ಕಾಣುವ ಪತ್ರವೊಂದನ್ನು ಕರ್ನಾಟಕ ರಾಜ್ಯದ ಗೃಹಮಂತ್ರಿ ಪ್ರಿಯಾಂಕ್ ಖರ್ಗೆಯವರು ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರಿಗೆ ಬರೆದಿದ್ದಾರೆ. ಆರ್‌ಎಸ್‌ಎಸ್ ಸಂಸ್ಥೆಯ ನೋಂದಣಿ, ವ್ಯವಸ್ಥೆ, ಸಂಘಟನಾ ವಿಧಾನ ಮತ್ತು ರಚನಾತ್ಮಕತೆಗಳು ದುರ್ಬಲವಾಗಿವೆ ಎಂದು ಪ್ರಶ್ನಿಸಬಹುದಾದ ಅಂಶಗಳನ್ನು ತಮ್ಮ ಪತ್ರದಲ್ಲಿ ಮುನ್ನೆಲೆಗೆ ಎಳೆದು ತಂದವರಂತೆ ಪ್ರಿಯಾಂಕ್ ಕಾಣಿಸಿಕೊಂಡಿದ್ದಾರೆ. ಇನ್ನೂ ಸ್ವಲ್ಪಮಟ್ಟಿನ ವಿವರಕ್ಕೆ ಹೋಗುವುದಾದರೆ ಸಂಘದ ನೋಂದಣಿ, ಆರ್ಥಿಕ ಪಾರದರ್ಶಕತೆ (ದೇಣಿಗೆ ಸಂಗ್ರಹ, ಆದಾಯ ತೆರಿಗೆ ಪಾವತಿ), ಸಂಘದ ನಾಯಕರ ಹೊಣೆಗಾರಿಕೆ, ಪ್ರವಾಸ ರೂಪದ ಚಲನವಲನಗಳು, ಆಂತರಿಕ ಚಟುವಟಿಕೆಗಳು ಮತ್ತು ಆಡಳಿತ ಸಿಬ್ಬಂದಿಯ ವಿವರಗಳ ಬೇಡಿಕೆಯೂ ಪತ್ರದಲ್ಲಿ ಅಡಕವಾಗಿದೆ. ಇವೆಲ್ಲವೂ ಆರ್‌ಎಸ್‌ಎಸ್‌ನ ಉನ್ನತ ಗಾತ್ರ, ಉತ್ತುಂಗ ಶಿಖರಗಳು, ಉದಾತ್ತ ಧ್ಯೇಯಗಳನ್ನು ಕುರಿತು ಹೇಳುತ್ತಾ, ಸಂಘ ತನ್ನ ಮುಖವಾಡ ಕಾಪಾಡಿಕೊಂಡಿಲ್ಲ ಎಂಬ ಅರ್ಥ ಉಂಟಾಗುವಂತೆ ಪ್ರಿಯಾಂಕ್ ನೋಡಿಕೊಂಡಿದ್ದಾರೆ.

ಒಟ್ಟಾರೆಯಾಗಿ ಅವರ ಸುದೀರ್ಘ ಒಕ್ಕಣೆ ಬರೀ ಒಂದು ಪತ್ರವಾಗಿ ಕಾಣದೆ, ಲೀಗಲ್ ನೋಟಿಸ್‌ನ (ಲಾಯರ್ಸ್ ನೋಟಿಸ್) ಎಲ್ಲ ಲಕ್ಷಣಗಳನ್ನು ಹೊಂದಿದೆ. ಮೊದಲನೆಯದಾಗಿ, ಇಂತಹ ಪತ್ರವನ್ನು ಅರ್ಥಾತ್ ನೋಟಿಸನ್ನು ಕೊಡಲು ಇವರಿಗೆ ಇರುವ ಹಕ್ಕು ಅಥವಾ ಇರುವುದಾದ ಅಂಗೀಕೃತ ಸ್ಥಾನಮಾನ (locus standi) ಎಂಬುದನ್ನು ಚರ್ಚೆಗೆ ಒಳಪಡಿಸಬೇಕು. ಕಾರಣ, ಇಂಥದ್ದನ್ನು ಆದಾಯ ತೆರಿಗೆ ಇಲಾಖೆ, ಉಪ ನೋಂದಣಾಧಿಕಾರಿಗಳು ಇಲ್ಲವೇ ನ್ಯಾಯಾಲಯಗಳು ಸ್ವಯಂ ಪ್ರೇರಿತವಾಗಿ ಮಾತ್ರ ಮಾಡಲು ಸಾಧ್ಯ. ಆದರೆ, ಪ್ರಿಯಾಂಕ್ ಅವರ ವರ್ತನೆ ಇವೆಲ್ಲವುಗಳ ಕಾರ್ಯವ್ಯಾಪ್ತಿಯನ್ನು ಕಿತ್ತುಕೊಂಡಂತೆ ಇಲ್ಲವೇ ಅತಿಕ್ರಮಿಸಿದಂತಾಗಿದೆ. ಮತ್ತವರು, ಅವರು ಈ ರೀತಿಯ ಪ್ರಶ್ನಿಸುವ ಯಾವುದೇ ಅಂಗೀಕೃತ ಸ್ಥಾನವನ್ನು ಹೊಂದಿಲ್ಲ ಎಂಬುದನ್ನೂ ಎತ್ತಿ ಸಾರುತ್ತದೆ.

ಈ ರೀತಿಯ ಪತ್ರವೊಂದನ್ನು ಪ್ರಿಯಾಂಕ್ ಅವರು ಭಾಗವತ್ ಅವರಿಗೆ ಕಳುಹಿಸದೆ ನೇರವಾಗಿ ಸಂಬಂಧ ಪಟ್ಟ ಇಲಾಖೆಯವರಿಗೆ ಬರೆಯಬಹುದಿತ್ತು. ಈ ರೀತಿ ಸ್ವಯಂಪ್ರೇರಿತವಾಗಿ ಮಾಡಲು ಕಾನೂನಿನ ಚೌಕಟ್ಟಿನಲ್ಲಿ ಸಾಧ್ಯವೂ ಇತ್ತು. ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಡಿ ಎಲ್ಲ ವಿಚಾರಗಳನ್ನು ತಲಸ್ಪರ್ಶಿಯಾಗಿ ಕಲೆ ಹಾಕಿ, ಸಂಬಂಧಪಟ್ಟವರಿಗೆ ದೂರು ಕೊಟ್ಟು, ಕಾರ್ಯ ಪ್ರವೃತ್ತರಾಗಬಹುದಿತ್ತು, ಹಾಗೆ ಮಾಡಿದ್ದರೆ ಅದು ಸಮಂಜಸವಾಗಿ ಕಾಣುತ್ತಿತ್ತು. ಆದರೆ, ಈ ಪತ್ರದಲ್ಲಿ ಹಲವು ಬಾರಿ ಆರ್‌ಎಸ್‌ಎಸ್‌ನ ಜಾತಕವನ್ನೇ ಜಾಲಾಡುವ ಪ್ರಯತ್ನ ನಡೆಸಲಾಗಿದೆ. ಅಹಂಭಾವ ತುಂಬಿದ ತಿರಸ್ಕಾರ (Lofty contempt) ಮತ್ತು ದೊಡ್ಡಸ್ತಿಕೆಯ ಸುಪ್ರಸನ್ನತೆ ಈ ಪತ್ರದಲ್ಲಿ ವ್ಯಕ್ತವಾಗುತ್ತದೆ.

ಸಂಘವು ನೂರು ವರ್ಷಗಳಷ್ಟು ಹಿಂದೆಯೇ ನೋಂದಣಿ ಆಗಿರುವುದನ್ನು ಸರ್ಕಾರಿ ದಾಖಲೆಗಳಲ್ಲಿ ವಿಧಿವತ್ತಾಗಿಯೂ, ಸತ್ಯಸತ್ಯ ವಿಚಾರವಾಗಿಯೂ ಇರುವುದನ್ನು ಕಾಣಬಹುದು. ಮಹಾರಾಷ್ಟ್ರದಲ್ಲಿ 2019ರಲ್ಲಿ ಜನಾರ್ದನ ಎಂಬುವರು, ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಫ್ ಸೊಸೈಟಿ ಅವರಿಗೆ 'ರಾಷ್ಟ್ರೀಯ ಸ್ವಯಂ ಸೇವಕ ಸಂಘ'ದ ಹೆಸರಿನಲ್ಲಿ ಚಾರಿಟಬಲ್ ಸೊಸೈಟಿಯೊಂದನ್ನು ನೋಂದಣಿ ಮಾಡಿಕೊಡುವಂತೆ ಮನವಿ ಸಲ್ಲಿಸಿದ್ದರು. ಈ ಮನವಿ ಪತ್ರಕ್ಕೆ ಮೆಮೊರಾಂಡಮ್ ಆಫ್ ಅಸೋಸಿಯೇಷನ್ ಮತ್ತು ಇತರ ಅಗತ್ಯ ಕಾಗದ ಪತ್ರಗಳನ್ನು ಲಗತ್ತು ಮಾಡಿ ಹಾಜರುಪಡಿಸಿದ್ದರು. ಆದರೆ, ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಫ್ ಸೊಸೈಟಿಯವರು ಇದನ್ನು; ಸೊಸೈಟಿ ರಿಜಿಸ್ಟ್ರೇಶನ್ ಆ್ಯಕ್ಟ್-1860 ಸೆಕ್ಷನ್ 3 (ಎ)ರ ಅಡಿಯಲ್ಲಿ ನೋಂದಣಿ ಮಾಡಲು ತಿರಸ್ಕರಿಸಿದರು. ತಿರಸ್ಕಾರಕ್ಕೆ ಕೊಟ್ಟ ಕಾರಣ ಈ ಸಂದರ್ಭದಲ್ಲಿ ಮುಖ್ಯವಾದುದು. ಅದೇನೆಂದರೆ; ಅದಾಗಲೇ ರಾಷ್ಟ್ರೀಯ ಸ್ವಯಂ ಸೇವಕ ಸಂಘ ನೋಂದಣಿಯಾದ ಸಂಸ್ಥೆಯಾಗಿತ್ತು. ಪುನಃ ಅದೇ ಹೆಸರಿನಲ್ಲಿ ಮತ್ತೊಂದು ಸಂಘ ಅಥವಾ ಸಂಸ್ಥೆ ರೂಪ ತಾಳದ ಕುರಿತು 'ಸೆಕ್ಷನ್ 3ಎ'ನಲ್ಲಿ ನಿಬಂಧ ಇರುವುದನ್ನು ಮನಗಾಣಿಸಲಾಯಿತು. ಇದನ್ನು ಪ್ರಶ್ನಿಸಿ ಜನಾರ್ದನ ಅವರು ಹೈಕೋರ್ಟ್ ಮೆಟ್ಟಿಲೇರಿದರೂ ಯಶಸ್ಸು ಕಾಣಲಿಲ್ಲ. ಹಟಕ್ಕೆ ಬಿದ್ದ ಅವರು ಸುಪ್ರೀಂ ಕೋರ್ಟ್ ಕದವನ್ನೂ ತಟ್ಟಿದರು. ಆದರೆ, ಸುಪ್ರೀಂ ಕೋರ್ಟ್ ಪ್ರಾರಂಭಿಕ ಹಂತದಲ್ಲೇ ಅರ್ಜಿಯನ್ನು ಸಾರಾಸಗಟಾಗಿ ತಿರಸ್ಕರಿಸಿತು. ಇದು ಆರ್‌ಎಸ್‌ಎಸ್‌ನ ನೋಂದಣಿಯನ್ನು ಎಂದೆಂದಿಗೂ ಭದ್ರಗೊಳಿಸಿತು.

ಸಾಬೀತುಪಡಿಸುವ ವಿಚಾರದಲ್ಲಿ ಸತ್ಯದ ತೋರಿಕೆಯು ರುಜುವಾತಾಗುವುದಿಲ್ಲ (Verysimilitude is not proof), ಎಂಬ ಮಾತು ನ್ಯಾಯಾಲಯಗಳಲ್ಲಿ ಅನಿವಾರ್ಯವಾಗಿ ಬಳಕೆಯಾಗುತ್ತದೆ. ಈ ಮಾತನ್ನು ಇಲ್ಲಿ ಎಳೆದು ತರುತ್ತಿರುವ ಕಾರಣ, ಪ್ರಿಯಾಂಕ್ ಖರ್ಗೆಯವರ ಪತ್ರದಲ್ಲಿ 'ಗುರುದಕ್ಷಿಣೆ' ಎಂಬ ಮುಖ್ಯವಾದ ಪ್ರಸ್ತಾಪವಾಗಿದೆ. ಸಂಘಕ್ಕೆ ಪ್ರತಿವರ್ಷ ಗುರುದಕ್ಷಿಣೆ ರೂಪದಲ್ಲಿ ಕೋಟ್ಯಂತರ ರೂಪಾಯಿ ಸಂದಾಯವಾಗುತ್ತಿದ್ದರೂ ಆದಾಯ ತೆರಿಗೆ ರೂಪದಲ್ಲಿ ಬಿಡಿಗಾಸು ಕೂಡ ಸರ್ಕಾರದ ಬೊಕ್ಕಸಕ್ಕೆ ಬೀಳದಿರುವ ವಿಚಾರವನ್ನು ಒತ್ತಿ ಹೇಳಲಾಗಿದೆ. ಈ ಆಪಾದನೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಆರ್‌ಎಸ್‌ಎಸ್ 100 ವರ್ಷಗಳಷ್ಟು ದೀರ್ಘಾವಧಿಯಿಂದ ಸರ್ಕಾರಕ್ಕೆ ಆದಾಯ ತೆರಿಗೆ ಪಾವತಿ ಮಾಡದೆ ವಂಚಿಸಿದೆ ಎನ್ನುವ ಧ್ವನಿ ಹೊರಡುತ್ತದೆ.

ಗುರುದಕ್ಷಿಣೆ ಪಡೆದ ಮೇಲೆ ಲೆಕ್ಕಪತ್ರಗಳನ್ನು ಒದಗಿಸಲು ಮುಂದೆ ಬಾರದೆ ಇರುವ ವಿಚಾರ ವಿಸ್ತೃತವಾದ ಬಹುಮುಖ್ಯವಾದ ಮಾಹಿತಿ 1994ರಲ್ಲಿ ಬಾಂಬೆ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿಯೊಂದನ್ನು ಸಲ್ಲಿಸಲಾಗಿತ್ತು. ಆ ಕೇಸಿನ ಹೆಸರು Commissioner of Income tax v/s RSS ಎಂದೇ ಹೆಸರುವಾಸಿಯಾಗಿದೆ. ಆದರೆ ಸುದೀರ್ಘ ವಿಚಾರಣೆಯ ಹಂತದಲ್ಲಿ ಬಾಂಬೆ ಹೈಕೋರ್ಟ್ ವಿಷಯ ವಸ್ತುವಿನ ಎಲ್ಲ ಮಗ್ಗುಲುಗಳನ್ನು ಕೂಲಂಕಷವಾಗಿ ಪರಿಗಣಿಸಿ, ಆರ್‌ಎಸ್‌ಎಸ್ ಆದಾಯ ತೆರಿಗೆಯಿಂದ ವಿನಾಯಿತಿ ಹೊಂದಿರುವುದು ಸರಿಯಾದ ಕ್ರಮವಾದದ್ದೆ ಮತ್ತು ಅದರ ಪಾಲನೆಯೂ ದೋಷರಹಿತವಾಗಿದೆ ಎಂದು ಮುದ್ರೆ ಒತ್ತಿತು. ಕೆಲವು ನಿರ್ದಿಷ್ಟ ಕಾರಣಗಳಿಂದ ನಿರ್ದಿಷ್ಟ ಸಂಸ್ಥೆಗಳನ್ನು ಆದಾಯ ತೆರಿಗೆ ಪಾವತಿಯಿಂದ ಹೊರಗಿಡುವುದಕ್ಕೆ ಆದಾಯ ತೆರಿಗೆ ಕಾಯ್ದೆಯಲ್ಲಿ ಸ್ಪಷ್ಟ ಅವಕಾಶವಿದೆ ಎಂಬುದನ್ನು ವಿಶದಪಡಿಸಿತು. ಇಲ್ಲಿ ಗಮನಿಸಬೇಕಾದ ವಿಶೇಷ ಸಂಗತಿ ಎಂದರೆ, ಆ ತೀರ್ಪಿನ ವಿರುದ್ಧ ಆದಾಯ ತೆರಿಗೆ ಇಲಾಖೆ ಸುಪ್ರೀಂ ಕೋರ್ಟ್‌ನಲ್ಲಿ ವಿಶೇಷ ಮೇಲ್ಮನವಿ ಸಲ್ಲಿಸುವ ಧೈರ್ಯವನ್ನೇ ಮಾಡಲಿಲ್ಲ.

ಸಂಘ, ಒಕ್ಕೂಟ ಮತ್ತು ಸಹಕಾರ ಸಂಘಗಳನ್ನು ಸ್ಥಾಪಿಸುವ ಮೂಲಭೂತ ಹಕ್ಕನ್ನು ಸಂವಿಧಾನದ 19 (1)(ಎ) ಅಡಿಯಲ್ಲಿ ಸಂವಿಧಾನದತ್ತವಾಗಿ ಕೊಡಮಾಡಲಾಗಿದೆ. ಹಾಗೆಯೇ ಸಂಘ, ಒಕ್ಕೂಟ ಮತ್ತು ಸಹಕಾರಿ ಸಂಘಗಳನ್ನು ಸ್ಥಾಪಿಸುವ, ನಡೆಸುವ ಅಥವಾ ಅಂತಹ ಸ್ಥಾಪಿತವಾದ ಸಂಘ ಸಂಸ್ಥೆಯು ತನ್ನ ವ್ಯವಹಾರಗಳನ್ನು ಮುಕ್ತಾಯಗೊಳಿಸುವ ಹಕ್ಕುಗಳು ತನ್ನಿಂದ ತಾನೇ ಅಸ್ತಿತ್ವದಲ್ಲಿವೆ. ಅರ್ಥಾತ್ ಇಂತಹ ಸಂಘ ಸಂಸ್ಥೆ ಒಕ್ಕೂಟಗಳನ್ನು ಕಡ್ಡಾಯವಾಗಿ ನೋಂದಣಿ ಮಾಡಬೇಕು ಎಂದು ಹೇಳಿಲ್ಲ. ಸಂಘಟನಾತ್ಮಕವಾಗಿ ಕಾರ್ಯಕ್ರಮಗಳನ್ನು ಆಯೋಜಿಸುವುದು, ಸಂಪರ್ಕ, ಸಂವಾದ, ಅಭ್ಯಾಸ, ವರ್ಗ ಕಾರ್ಯಾಗಾರ, ವಿಕಾಸ ವರ್ಗ ಇತ್ಯಾದಿಗಳನ್ನು ಖಾಸಗಿ ಸಂಘ ಸಂಸ್ಥೆ ಒಕ್ಕೂಟದ ಅಡಿಯಲ್ಲಿ ನಡೆಸಲು 'ಸಂಘ'ವು ಸ್ವಾತಂತ್ರ್ಯ ಹೊಂದಿದೆ. ನ್ಯಾಯ ಕಾಯ್ದೆ-1882, ಸಂಘಗಳ ನೋಂದಣಿ ಕಾಯ್ದೆ-1860 ಇದಕ್ಕೆ ಅವಕಾಶ ಮಾಡಿಕೊಟ್ಟಿವೆ. ಹಾಗಾಗಿ, ನೋಂದಣಿ ಎನ್ನುವುದು ಐಚ್ಛಿಕ ವಿಷಯವಾಗಿಯೇ ಉಳಿದಿದೆ.

ಆದಾಗ್ಯೂ, ಈ ರೀತಿ ಆಸ್ತಿ ಹೊಂದಿದ ಸಂಘ ಸಂಸ್ಥೆಗಳು ತಮ್ಮ ವೈಚಾರಿಕ ವಿಷಯಗಳ ಪ್ರಸಾರ, ಪ್ರಚಾರ ಇತ್ಯಾದಿಗಳನ್ನು ನೋಂದಣಿ ಇಲ್ಲದಂತಹ ಖಾಸಗಿ ಸಂಘ, ಸಂಸ್ಥೆ, ಒಕ್ಕೂಟ ನೋಂದಣಿ ರಹಿತವಾಗಿ ಕಾರ್ಯ ನಿರ್ವಹಿಸಬಹುದಾಗಿದೆ. ಖಾಸಗಿ ಸಂಘ ಸಂಸ್ಥೆಗಳು; ರಾಷ್ಟ್ರೀಯ ಮಟ್ಟದಲ್ಲಿ, ರಾಜ್ಯ, ಜಿಲ್ಲಾ, ತಾಲ್ಲೂಕು ಅಥವಾ ಶಾಖಾ ಮಟ್ಟದಲ್ಲಿ ಶಾಶ್ವತ ಖಾತೆ ಸಂಖ್ಯೆ (ಪಾನ್ ನಂಬರ್) ಹೊಂದಿ ವಾರ್ಷಿಕ ಲೆಕ್ಕಪತ್ರ, ವ್ಯವಹಾರ ಮಾಡಲು ಕೂಡಾ ಅವಕಾಶ ವಿದೆ. ಆದರೆ, ಸರ್ಕಾರಿ ಸವಲತ್ತು ಬೇಕೆಂದಾಗ ನೋಂದಣಿಯನ್ನು ಕಡ್ಡಾಯ ಮಾಡಲಾಗಿದೆ.

ಪ್ರಿಯಾಂಕ್ ಖರ್ಗೆಯವರ ಪತ್ರವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅವರು ಬಳಸಿರುವ ಪದಗಳಲ್ಲಿ ತಮಗೆ ಬೇಕಾದ ಅರ್ಥಗಳನ್ನು ಕಲ್ಪಿಸಿಕೊಂಡಿರುವಂತಿದೆ. ಅವರು ತಮ್ಮ ಮಾತುಗಳನ್ನು ಅತಿಶಯಗೊಳಿಸಲು ಹಾಗೆಲ್ಲಾ ಹೇಳಿದ್ದಾರೆ ಎಂದು ನಾವು ಭಾವಿಸಬಹುದು. ಆದರೆ, ಇವರ ಮುಂದುವರಿದ ಪತ್ರಿಕಾ ಹೇಳಿಕೆಗಳನ್ನು ನೋಡಿದರೆ ಈ ವಿಚಾರದಲ್ಲಿ ಅವರು ಇನ್ನೂ ಮುಂದುವರಿಯುವ ಇಂಗಿತ ವ್ಯಕ್ತಗೊಳಿಸಿರುವುದು ಕಂಡುಬರುತ್ತದೆ. ಹಾಗಾದಲ್ಲಿ ಅವರು ತಮ್ಮನ್ನೇ ತಾವು ಸೋಲಿಸಿಕೊಳ್ಳಬಹುದೇನೊ?

ಪತ್ರದ ವಿಷಯಗಳನ್ನು ಎಷ್ಟೇ ಸೂಕ್ಷ್ಮವಾಗಿ ಗಮನಿಸಿದರೂ, ಅಲ್ಲಿ ವಾಸ್ತವ ಸಂಗತಿಗಳನ್ನು ಕುರಿತ ವಿವಾದಾಂಶಗಳಾಗಲೀ (issue of facts) ಅಥವಾ ಕಾನೂನನ್ನು ಕುರಿತ ವಿವಾದಂಶಗಳಾಗಲೀ (issue of law) ಕಂಡು ಬರುವುದಿಲ್ಲ. ಆರ್‌ಎಸ್‌ಎಸ್ ಬಿಜೆಪಿಯನ್ನು ಎಲ್ಲ ಬಾಬತ್ತುಗಳಲ್ಲಿ ಮುಕ್ತವಾಗಿ ಬೆಂಬಲಿಸುತ್ತದೆ ಎನ್ನುವುದು ಜನಜನಿತ ಅಭಿಪ್ರಾಯ. ಕಾಂಗ್ರೆಸ್ ಪಕ್ಷ ಇದನ್ನು ಎಲ್ಲ ಸಂದರ್ಭಗಳಲ್ಲಿ ಜಗಜ್ಜಾಹೀರುಗೊಳಿಸಿರುವುದೂ ಅಷ್ಟೇ ಜನಜನಿತ. ಹೀಗಾಗಿ, ರಾಜಕಾರಣಿಗಳು ತಮ್ಮ ಹಿತಾಸಕ್ತಿಗಾಗಿ ಧರ್ಮವನ್ನು ತಮ್ಮ ಪಾಲಿನ ಆಡುಂಬೊಲ ಆಗಿಸಿಕೊಂಡಿದ್ದಾರೆ. ಈ ಪರಿಧಿಯಿಂದ ಆರ್‌ಎಸ್‌ಎಸ್ ಅನ್ನು ಹೊರಗಿಟ್ಟು ಪ್ರಿಯಾಂಕ್ ಖರ್ಗೆ ಮಾಡುತ್ತಿರುವ ಆರೋಪಗಳನ್ನು ನಿಕಷಕ್ಕೆ ಒಳಪಡಿಸಿದರೆ ಪತ್ರದಿಂದ ಉದ್ಭವಿಸುವ ವಿಷಯಗಳಲ್ಲಿ ಸಂಭವನೀಯತೆಯ (prepondarence of probability) ಪ್ರಾಬಲ್ಯ ಆರ್‌ಎಸ್‌ಎಸ್ ಪರವಾಗಿಯೇ ಹೆಚ್ಚು ತೂಗುತ್ತದೆ.

ಲೇಖಕ: ಹೈಕೋರ್ಟ್‌ನ ಹಿರಿಯ ವಕೀಲ



ವಾಚಕರ ವಾಣಿ

ಲೈಬ್ರರಿ ಸಹಾಯಕರ ನೇಮಕಾತಿಗೆ ಗ್ರಹಣ

ಸಾರ್ವಜನಿಕ ಗ್ರಂಥಾಲಯಗಳು ಶ್ರೀಸಾಮಾನ್ಯರ ಪಾಲಿನ ವಿಶ್ವವಿದ್ಯಾಲಯಗಳು. ಅಲ್ಲಿ ಓದಿ ಬದುಕು ಕಟ್ಟಿಕೊಂಡ ಲಕ್ಷಾಂತರ ಜನರ ಕಥೆಗಳು ಸಿಗುತ್ತವೆ. ಇಂತಹ ಮಹತ್ವದ ಸಾರ್ವಜನಿಕ ಕೇಂದ್ರಗಳ ಇಲಾಖೆಯ ಸಿಬ್ಬಂದಿಯ ಸ್ಥಿತಿಯು ಅಯೋಮಯವಾಗಿದೆ. ಇಲಾಖೆಯ ನಿಯಮದಂತೆ ಬೆಳಗ್ಗೆ 8ರಿಂದ ರಾತ್ರಿ 8ರವರೆಗೆ ದೊಡ್ಡ ಗ್ರಂಥಾಲಯಗಳು ಕಾರ್ಯ ನಿರ್ವಹಿಸುತ್ತವೆ. ಬೆಂಗಳೂರು, ಕಲಬುರಗಿ, ಹುಬ್ಬಳ್ಳಿ ಯಂಥ ಮಹಾನಗರ ಹೊರತುಪಡಿಸಿದರೆ, ಉಳಿದ ಜಿಲ್ಲೆಗಳಲ್ಲಿ ಅರ್ಧಕ್ಕಿಂತ ಕಡಿಮೆ ಸಿಬ್ಬಂದಿ ಇದ್ದಾರೆ. ಅವರಿಗೆ ವಾರಕ್ಕೆ ಒಂದು ದಿನದ ರಜೆಯೂ ಸಿಗುತ್ತಿಲ್ಲ.

ಇಲಾಖೆಯ ನಿಯಮ ಮೀರಿ ಹೆಚ್ಚಿನ ಸಮಯ ಹಾಗೂ ರಜಾ ದಿನಗಳಲ್ಲಿ ತೆರೆಯುವ ಸಾಕಷ್ಟು ಗ್ರಂಥಾಲಯಗಳಿವೆ. ವಾರದ ಎಲ್ಲಾ ದಿನವೂ ತೆರೆಯುವುದಕ್ಕೆ ತಕರಾರಿಲ್ಲ; ಆದರೆ, ಅದಕ್ಕೆ ತಕ್ಕಂತೆ ಸಿಬ್ಬಂದಿಯೂ ಬೇಕಲ್ಲವೆ? 2010ರಲ್ಲಿ ಗ್ರಂಥಾಲಯ ಸಹಾಯಕರ ನೇಮಕಾತಿ ನಡೆಯಿತು. ಆ ಬಳಿಕ ನಡೆದಿಲ್ಲ. ಸಿಬ್ಬಂದಿ ನೇಮಕಕ್ಕೆ ಸರ್ಕಾರ ಮುಂದಾಗಲಿ.

ಈರಣ್ಣ ಬಿ., ಹನುಮಂತ, ರಮೇಶ, ಕವಿತಾ, ಧಾರವಾಡ

ಶಾಸಕರು ಮತ್ತು ಆತ್ಮಸಾಕ್ಷಿಯ ಪಿಸುಮಾತು

ರಾಜ್ಯದಲ್ಲಿ ರಾಜ್ಯಸಭೆ ಅಥವಾ ವಿಧಾನ ಪರಿಷತ್ ಚುನಾವಣೆ ನಡೆದಾಗ ಶಾಸಕರು, 'ನಾವು ಆತ್ಮಸಾಕ್ಷಿ ಮತ ನೀಡುತ್ತೇವೆ; ಆತ್ಮಸಾಕ್ಷಿ ಮತ ನೀಡಿದ್ದೇವೆ' ಎಂದು ಮಾಧ್ಯಮಗಳ ಎದುರು ಗಿಳಿಪಾಠ ಒಪ್ಪಿಸುತ್ತಾರೆ. ಹಾಗಿದ್ದರೆ ಪ್ರಜಾಪ್ರಭುತ್ವದ ಹೆಸರಿನಡಿ ಆಯ್ಕೆಯಾದ ಇವರಿಗೆ ಸಾಮಾನ್ಯ ಪ್ರಜೆಗಳಂತೆ ಸ್ವಂತ ತೀರ್ಮಾನದಿಂದ ಮತ ಚಲಾಯಿಸಲು ಆಗುವುದಿಲ್ಲವೆ? ಆಯಾ ಪಕ್ಷದ ವರಿಷ್ಠರ ತೀರ್ಮಾನದನ್ವಯ ಎಲ್ಲವೂ ನಡೆಯುತ್ತಿರುತ್ತದೆ. ಹೀಗಿರುವಾಗ, ಪ್ರಜಾಪ್ರಭುತ್ವದ ನಿಜ ಆಶಯವು ಸಾಕಾರಗೊಂಡಿದೆಯೇ ಎಂಬುದು ಶಾಸಕರ ಆತ್ಮಸಾಕ್ಷಿಗಷ್ಟೆ ಗೊತ್ತು!

ಸುರೇಶ್ ಎಂ.ಎ., ಬೆಂಗಳೂರು

ವಲಸೆ ತಡೆಗೆ ಟೌನ್‌ಶಿಪ್ ಪರಿಹಾರವಲ್ಲ

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಿಡದಿ ಟೌನ್‌ಶಿಪ್ ನಿರ್ಮಾಣಕ್ಕೆ ಟೊಂಕಕಟ್ಟಿದ್ದಾರೆ. ಇದಕ್ಕೆ ರೈತರು ಹಾಗೂ ವಿಪಕ್ಷದಿಂದ ಭಾರೀ ವಿರೋಧ ಇದೆ. ಯೋಜನೆಯೇನೊ ಸರಿ ಇರಬಹುದು; ಬೆಂಗಳೂರಿನ ಒತ್ತಡವೂ ಸ್ವಲ್ಪ ಕಡಿಮೆ ಆಗಿ ಸದ್ಯಕ್ಕೆ ಪರಿಸ್ಥಿತಿ ಸುಧಾರಿಸಬಹುದು. ಆದರೆ, ಭವಿಷ್ಯದಲ್ಲಿ ಮತ್ತೆ ಸಮಸ್ಯೆಗಳು ಉದ್ಭವಿಸುತ್ತವೆಯಲ್ಲವೆ? ಇದಕ್ಕೆ ಉತ್ತಮ ಉದಾಹರಣೆ ಎಂದರೆ ಕೆಂಗೇರಿ, ಯಲಹಂಕ, ಹೊಸಕೋಟೆ ಇತ್ಯಾದಿ. ಟೌನ್‌ಶಿಪ್‌ಗೆ ಪರ್ಯಾಯವಾಗಿ ಎರಡು ಮತ್ತು ಮೂರನೇ ಹಂತದ ನಗರ, ಪಟ್ಟಣಗಳನ್ನು ಅಭಿವೃದ್ಧಿಪಡಿಸುವುದು ಉತ್ತಮ. ಇದರಿಂದ ಸ್ಥಳೀಯ ವಾಗಿಯೂ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ. ಬೆಂಗಳೂರಿಗೆ ವಲಸೆ ಬರುವುದು ತಪ್ಪುತ್ತದೆ; ಒತ್ತಡವೂ ತಗ್ಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ಯೋಚಿಸಲಿ.

ವೈ.ಎನ್. ನಾಗರಾಜ, ಕೆಂಗೇರಿ

ಉನ್ನತ ಶಿಕ್ಷಣಕ್ಕೆ ಬೇಕಿದೆ ಹೊಸ ಸಾರಥ್ಯ

ಕಳೆದ ಹದಿನೈದು ವರ್ಷಗಳಲ್ಲಿ ರಾಜ್ಯದ ಉನ್ನತ ಶಿಕ್ಷಣದಲ್ಲಿ ಯಾವುದೇ ಗುಣಾತ್ಮಕ ಬದಲಾವಣೆ ಕಂಡುಬಂದಿಲ್ಲ. ಕರ್ನಾಟಕ ವಿಶ್ವವಿದ್ಯಾಲಯ ಕಾಯ್ದೆ 2000ಕ್ಕೆ ತಿದ್ದುಪಡಿ ತರುವ ಆಸಕ್ತಿಯನ್ನು ಯಾವ ಸಚಿವರೂ ತೋರಿಸಿಲ್ಲ. ಕೆಲವು ಸರ್ಕಾರಿ ಪದವಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದ್ದರೂ, ಪ್ರಾಧ್ಯಾಪಕರು ಬೋಧನೆ ಕಡೆಗೆ ಆಸಕ್ತಿ ತೋರುತ್ತಿಲ್ಲ. ಅತಿಥಿ ಉಪನ್ಯಾಸಕರ ಅವಲಂಬನೆ ಹೆಚ್ಚುತ್ತಿದೆ. ಸರ್ಕಾರಿ ವಿಶ್ವವಿದ್ಯಾಲಯಗಳ ಸ್ಥಿತಿ ಶೋಚನೀಯವಾಗಿದೆ. ಅವು ಪ್ರಾಧ್ಯಾಪಕರಿಗೆ ಗಂಜಿಕೇಂದ್ರಗಳಾಗಿವೆ.

ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಗಣನೀಯ ಕುಸಿತದ ಪರಿಣಾಮ ಈಗಾಗಲೇ ಸಾಕಷ್ಟು ಕೋರ್ಸ್‌ಗಳನ್ನು ರದ್ದುಪಡಿಸಲಾಗಿದೆ. ಹಾಗಾಗಿ, ಸಚಿವ ಸಂಪುಟದಲ್ಲಿ ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಮಹತ್ವಾಕಾಂಕ್ಷೆ ಹಾಗೂ ಹೊಸ ಹೊಳಹುಗಳುಳ್ಳ ಒಂದು ಹೊಸ ಮುಖವನ್ನು ಪರಿಚಯಿಸಿದರಷ್ಟೇ ಸುಧಾರಣೆಯನ್ನು ನಿರೀಕ್ಷಿಸಬಹುದಾಗಿದೆ. ಇಲ್ಲವಾದರೆ ಕಾಲಕ್ರಮೇಣ ರಾಜ್ಯದ ನಿಷ್ಕ್ರಿಯ ಖಾತೆಗಳ ಸಾಲಿನಲ್ಲಿ ಉನ್ನತ ಶಿಕ್ಷಣವೂ ಸೇರ್ಪಡೆಯಾಗಲಿದೆ.

ತಿಮ್ಮೇಶ ಮುಸ್ಟೂರು, ಜಗಳೂರು

ಗ್ರಂಥ ಖರೀದಿ: 'ಲೋಕಾ' ತನಿಖೆ ಆಗಲಿ

ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಪುಸ್ತಕ ಖರೀದಿಯಲ್ಲಿ ಆಗುತ್ತಿರುವ ಅಕ್ರಮ, ಅವ್ಯವಸ್ಥೆ ಬಗ್ಗೆ ಸಾಕಷ್ಟು ದೂರುಗಳಿವೆ. ಕಳೆದ ಒಂದು ದಶಕಕ್ಕೂ ಹೆಚ್ಚು ಕಾಲದಿಂದ ಇಲಾಖೆಯಿಂದ ಆಗಿರುವ ಪುಸ್ತಕ ಖರೀದಿ ವ್ಯವಹಾರ ಪಾರದರ್ಶಕವಾಗಿಲ್ಲ. ಲೇಖಕರು, ಪ್ರಕಾಶಕರಿಗೆ ನೀಡಬೇಕಿದ್ದ ಆದ್ಯತೆ ದೊರೆಯುತ್ತಿಲ್ಲ. ಒಳಮಾರ್ಗದ ಕಸುಬುದಾರರಿಗೆ ತಿಳಿಯುವ ಮಾಹಿತಿ ಇತರರಿಗೆ ಲಭ್ಯವಾಗುವ ಹೊತ್ತಿಗೆ ಖರೀದಿ ಪ್ರಕ್ರಿಯೆಯೇ ಮುಗಿದು ಹೋಗಿರುತ್ತದೆ ಅಥವಾ ಹಣವೇ ಖಾಲಿ ಆಗಿರುತ್ತದೆ. ಲೇಖಕನಾದವನು ಪ್ರಕಾಶಕರಿಂದಲೂ, ಇಲಾಖೆಯಿಂದಲೂ ನ್ಯಾಯ ಪಡೆಯಲಾಗುತ್ತಿಲ್ಲ. ಇಂತಹ ಅಕ್ರಮ, ಅನ್ಯಾಯದ ಬಗ್ಗೆ ಸರ್ಕಾರ ಕೂಡಲೇ ಸಮಿತಿ ರಚಿಸಿ ತನಿಖೆ ಮಾಡಿಸಲಿ ಅಥವಾ ಲೋಕಾಯುಕ್ತಕ್ಕೆ ಒಪ್ಪಿಸಿ ತನಿಖೆ ನಡೆಸಲಿ.

ಟಿ. ಗೋವಿಂದರಾಜು, ಬೆಂಗಳೂರು

ಭ್ರಷ್ಟಾಚಾರದ ವಿಷಚಕ್ರ: ಏನಿದರ ಮರ್ಮ?

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು 'ಭ್ರಷ್ಟಾಚಾರಮುಕ್ತ ಕರ್ನಾಟಕ' ನಿರ್ಮಿಸುವುದಾಗಿ ಹೇಳಿದ್ದಾರೆ. ಅದು ಸರಳವಲ್ಲ. ಚುನಾವಣೆಗೆ ಕೋಟ್ಯಂತರ ರೂಪಾಯಿ ವೆಚ್ಚ ಮಾಡುವ ಶಾಸಕರು ಹಾಗೂ ಸಚಿವರಿಗೆ ಆ ಹಣ ವಾಪಸ್ ಪಡೆಯಲು ಬೇರೆ ದಾರಿ ಏನಿದೆ? ಪಕ್ಷಗಳು ಚುನಾವಣಾ ಭ್ರಷ್ಟಾಚಾರದ ಬಗ್ಗೆ ಚಕಾರ ಎತ್ತುವುದಿಲ್ಲ. ಚುನಾವಣೆಗೆ ಹೂಡಿದ ಹಣ ಹಿಂಪಡೆಯಲು ಅಧಿಕಾರಿಗಳಿಂದ ಹಣ ಪಡೆಯುವುದು, ಜನಸಾಮಾನ್ಯರಿಂದ ಲಂಚ ಕೀಳುವುದು ಮುಂದುವರಿಯುತ್ತದೆ; ಇದೊಂದು ವಿಷವರ್ತುಲ. ಚುನಾವಣಾ ಭ್ರಷ್ಟಾಚಾರ ನಿಯಂತ್ರಣ ಆಗದ ಹೊರತು ಕಚೇರಿಗಳಲ್ಲಿ ಲಂಚಗುಳಿತನ ಕಡಿಮೆಯಾಗದು.

ಟಿ. ಜಯರಾಂ, ಕೋಲಾರ

ಚುರುಮುರಿ

ಒದ್ದಾಟದ ಪ್ರಶ್ನೆಗಳು!

• ತುರುವೇಕೆರೆ ಪ್ರಸಾದ್

'ನಂಗೊಂದು ಜಿಗ್ನಾಸೆ ಆಗ್ಬುಟ್ಟದೆ' ತಲೆ ಕೆರ್‍ಕಂಡ ಗುದ್ಲಿಂಗ.

'ಓ, ಮಾಮೂಲಿ ಸಂಸಯ ಪಿಶಾಚಿ ಅನ್ನು... ಅದೇನು ಒದರು' ಎಂದ ಮಾಲಿಂಗ!

'ಮಾತು ಮಾತಿಗೂ ಒದ್ದುಬಿಡ್ತೀನಿ ಅನ್ನೋರು ಯಾರಪ್ಪಾ?'

'ಡೌಟೇ ಇಲ್ಲ, ನಾವೇ! ನಮ್ ಶಂಕರ್‌ನಾಗು ಮೂಗನ ಸೇಡು ಪಿಕ್ಚರಲ್ಲಿ ಝಾಡಿಸಿ ಒದಿ ಅಂತ ಪದ ಬುಟ್ಟಿರ್‍ಲಿಲ್ವಾ?' ಎಂದ ಕಲ್ಲೇಶಿ.

'ಬೇರೆಯವರ ತವ ಇರದನ್ನ ಎಂಗಾದ್ರೂ ಪಲ್ಟಿ ಒಡೆದು ಕಿತ್ಕಬೇಕು ಅನ್ನೊ ಚಾಳಿ ಯಾರ್ದು? ಅಂಗೇ ಯಾರಾರಾ ಮುಂದ್ ಓಯ್ತಾರೆ ಅಂದ್ರೆ ತೊಡ್ರುಗಾಲು ಕೊಡೋರು ಯಾರು?'

'ಯಾಮರ್‍ಸೋದು, ತೊಡ್ರಕಾಲ್ ಕೊಡೋದು ಇದ್ರಾಗೆಲ್ಲಾ ನಾವು ಎಕ್ಸ್‌ಪರ್ಟು'.

'ಸಿಗ್ನಲ್ ಜಂಪು, ಟ್ಯಾಕ್ಸು ಕಳ್ಳಾಟ ಅಂತ ಪದೇ ಪದೇ ತಪ್ ಮಾಡಿ ಪೆನಾಲ್ಟಿ ಕಟ್ಟೋರು ಯಾರು?'

'ಅದೂ ಒಂದು ರೀತೀಲಿ ನಾವೇ ಬುಡಪ್ಪ'.

'ನಮ್ಮನ್ನ ಮೂಲೆಗುಂಪು ಅಂದ್ರೆ ಕಾರ್ನರ್ ಮಾಡವ್ರೆ ಅಂತ ಬಾಯ್ ಬಡ್ಕೊಳೋದು ಯಾರು?'

'ಎಲ್ಲದಕ್ಕೂ (ಪುಕ್ಕಟೆ) ಪಾಸ್ ಕೊಡೋರು ಬೇಕು ಅನ್ನೋರು, ಮಾರೋ ಗೋಲಿ ಅನ್ನೋರು, ಕೆಳಗೆ ಬಿದ್ದೋರನ್ನ ಎತ್ತದೆ ಮುಂದಕ್ ಓಡೋರು ಯಾರು?'

'ನಾವೇ ಕಣ್ಲಾ, ಏನೀಗ? ಈ ಬೇತಾಳ ಪ್ರಶ್ನೆ ನಿಲ್ಸುದ್ದಿದ್ರೆ ನಿನ್ ತಲೆ ಒಡೆದಾಕ್ತೀನಿ' ಎಂದ ಪರ್‍ಮೇಶಿ.

'ಸುಮ್ಕೆ ಕ್ಯೋಳಿದ್ದಕ್ಕೆ ಉತ್ರ ಯೋಳು, ಸಿಕ್ಕಾಪಟ್ಟೆ 'ಗೋಲ್‌ಮಾಲ್' ಮಾಡೋರು ಯಾರು?'

'ನಮ್ ರಾಜಕೀಯದೋರು, ಸಿನಿಮಾದೋರು, ರಿಯಲ್ ಎಸ್ಟೇಟ್‌ನೋರು, ಸುಮಾರು ಜನ ಅದ್ನ ಗುತ್ತಿಗೆ ತಗಂಡವ್ರೆ'.

'ಯವಸ್ಥೇಲಿ ಮ್ಯಾಲಿಂದ್ ಮ್ಯಾಲೆ ಇಲ್ಲಿಂದಲ್ಲಿಗೆ ಅಲ್ಲಿಂದಿಲ್ಲಿಗೆ ಕಿಕ್ ಮಾಡ್ತಾವ್ರೆ, ಭಾರೀ ಒದ್ದಾಟ ಅಂತ ವಯ್ಕಳಾದು ಯಾರು?'

'ನಾವೇ ನಾವೇ ನಾವೇ...'

'ಅಂಗಿದ್ಮೇಲೆ ಈಟೆಲ್ಲಾ ಅರ್ಹತೆ ಇದ್ರೂ ನಮ್ಮೋರು ಯಾಕೆ ವಿಶ್ವಕಪ್ ಫುಟ್‌ಬಾಲ್ ಆಡಾಕಿಲ್ಲ?' ಎಂದು ಐನಾತಿ ಪ್ರಶ್ನೆ ಮುಂದಿಟ್ಟ ಗುದ್ಲಿಂಗ.

ಎಲ್ಲಾ ಗುದ್ಲಿಂಗನ ಕಡೆ ಗುರುಗುಟ್ಟಿ ಕೂದಲು ಕಿತ್ತುಕೊಂಡರು.

ಸಂಗತ

'ಎಸ್‌ಐಆರ್' ಕೃಪೆ: ಹೊಸ ನಿರಾಶ್ರಿತರ ಸೃಷ್ಟಿ

ತನ್ನದೇ ನೆಲದಲ್ಲಿ ನಿರಾಶ್ರಿತರ ಹೊಸ ಸಮೂಹವನ್ನು 'ಎಸ್‌ಐಆರ್' ಸೃಷ್ಟಿಸುತ್ತಿದೆ. ಸರ್ಕಾರಿ ಸೌಲಭ್ಯದಿಂದ ವಂಚಿತರಾಗುವ ಆತಂಕದಲ್ಲಿರುವವರಿಗೆ ಯಾರು ದಿಕ್ಕು?

• ಅರುಣ್ ಜೋಳದಕೂಡ್ಲಿಗಿ

'ಹೆತ್ತ ತಾಯಿಯೇ ತನ್ನ ಮಕ್ಕಳನ್ನು ಮನೆಯಿಂದ ಹೊರ ಹಾಕಿದರೆ ಅವರಿಗೆ ಆಶ್ರಯ ಕೊಡುವವರು ಯಾರು?'

ಬೀದರ್ ಜಿಲ್ಲೆಯ ಹುಮನಾಬಾದ್‌ನಲ್ಲಿ ಕೇಂದ್ರ ಚುನಾವಣಾ ಆಯೋಗ ನಡೆಸುತ್ತಿರುವ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ' (ಎಸ್‌ಐಆರ್) ಕುರಿತಾದ ಜಾಗೃತಿ ಸಭೆಯಲ್ಲಿ ಎದುರಾದ ಮುಸ್ಲಿಂ ಸಮುದಾಯದ ಹಿರಿಯರೊಬ್ಬರು ಕೇಳಿದ ಈ ಪ್ರಶ್ನೆಗೆ ಉತ್ತರಿಸಲು ತಡಬಡಾಯಿಸಿದೆ. ಪ್ರಶ್ನೆ ಕೇಳಿದ ಅವರ ಕಣ್ಣೊಳಗಿನ ಆತಂಕ, ದೇಶವನ್ನು ತಾಯಿ ಎಂದು ಭಾವಿಸುವ ಎದೆಯೊಳಗಿನ ಉತ್ಕಟ ಪ್ರೀತಿ ಎದ್ದು ಕಾಣುತ್ತಿತ್ತು. 'ಆಶ್ರಯ ಕೊಡೋರು ಯಾರು?' ಎನ್ನುವ ಅವರ ಪ್ರಶ್ನೆ, ಯುದ್ಧದ ನಂತರ ಎಲ್ಲವನ್ನೂ ಕಳೆದುಕೊಂಡ ನಿರಾಶ್ರಿತರ ಅಳಲಿನಂತೆ ಕೇಳಿಸಿತು.

ಹುಮನಾಬಾದ್‌ನಲ್ಲಿ ನಡೆದ ಸಭೆಯಲ್ಲಿ ಹಲವು ವಲಯಗಳಿಗೆ ಸೇರಿದ ಅಸಂಘಟಿತ ಕಾರ್ಮಿಕರು ಭಾಗವಹಿಸಿದ್ದರು. ಈಗಾಗಲೇ ಎಸ್‌ಐಆರ್ ಮುಗಿದ ರಾಜ್ಯಗಳಲ್ಲಿ ಎಷ್ಟು ಜನರನ್ನು ಮತದಾರರ ಪಟ್ಟಿಯಿಂದ ತೆಗೆಯಲಾಗಿದೆ? ಯಾವ ಯಾವ ಕಾರಣಕ್ಕೆ ತೆಗೆಯಲಾಗಿದೆ ಎನ್ನುವುದರ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು. ಪ್ರಶ್ನೋತ್ತರವೂ ನಡೆಯಿತು. ಎಲ್ಲರಲ್ಲಿ ಮಡುಗಟ್ಟಿದ್ದ ಆತಂಕ ಒಂದೇ: 'ಎಸ್‌ಐಆರ್' ಪ್ರಕ್ರಿಯೆ ಸ್ವಂತ ನೆಲದಲ್ಲಿಯೇ ನಿರಾಶ್ರಿತರನ್ನು ಸೃಷ್ಟಿಸುತ್ತಿರುವುದು.



ವಿಶ್ವಸಂಸ್ಥೆಯ ನಿರಾಶ್ರಿತರ ಸಂಸ್ಥೆಯು ಅಂದಾಜು ಮಾಡಿರುವಂತೆ, 2025ರ ಡಿಸೆಂಬರ್ ಅಂತ್ಯದ ವೇಳೆಗೆ ಸುಮಾರು 1.16 ಕೋಟಿ ನಿರಾಶ್ರಿತರು ವಿಶ್ವದ ವಿವಿಧ ಭಾಗಗಳಲ್ಲಿದ್ದಾರೆ. ಅವರ ಜೊತೆಗೆ, 90 ಲಕ್ಷ ಜನರು ಆಶ್ರಯದ ನಿರೀಕ್ಷೆಯಲ್ಲಿ ಇರುವವರು ಹಾಗೂ 68.7 ಲಕ್ಷ ಜನರು ತಮ್ಮದೇ ದೇಶದೊಳಗಿನ ಸಂಘರ್ಷ ಅಥವಾ ಹಿಂಸಾಚಾರದಿಂದಾಗಿ ಸ್ಥಳಾಂತರಗೊಂಡವರು ಇದ್ದಾರೆ. ಲಕ್ಷಾಂತರ ಜನರಿಗೆ ನಾಗರಿಕತ್ವ ನಿರಾಕರಿಸಲಾಗಿದೆ. ಶಿಕ್ಷಣ, ಆರೋಗ್ಯ ರಕ್ಷಣೆ, ಉದ್ಯೋಗ ಮತ್ತು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಚಲಿಸುವ ಸ್ವಾತಂತ್ರ್ಯದಿಂದ ಅವರು ವಂಚಿತರಾಗಿದ್ದಾರೆ.

1951ರಲ್ಲಿ ನಡೆದ ಜಾಗತಿಕ ನಿರಾಶ್ರಿತರ ಸಮಾವೇಶದ ನೆನಪಿನಲ್ಲಿ ಪ್ರತಿ ವರ್ಷದ ಜೂನ್ 20ರ ದಿನವನ್ನು 'ವಿಶ್ವ ನಿರಾಶ್ರಿತರ ಹಕ್ಕುಗಳಿಗೆ ದನಿ ಎತ್ತುವ ದಿನ'ವನ್ನಾಗಿ ಆಚರಿಸಲಾಗುತ್ತಿದೆ. ಆ ಸಮಾವೇಶದ ಒಂದನೇ ವಿಧಿ, 'ಜನಾಂಗ, ಧರ್ಮ, ರಾಷ್ಟ್ರೀಯತೆ, ನಿರ್ದಿಷ್ಟ ಸಾಮಾಜಿಕ ಗುಂಪಿನ ಸದಸ್ಯತ್ವ ಅಥವಾ ರಾಜಕೀಯ ಅಭಿಪ್ರಾಯದ ಕಾರಣಕ್ಕಾಗಿ ನಡೆದ ಕಿರುಕುಳದ ಭಯದಿಂದ ತನ್ನ ದೇಶದ ಒಳಗೇ ರಕ್ಷಣೆ ಇಲ್ಲದೆ ಬೇರೆಯವರ ರಕ್ಷಣೆಗಾಗಿ ಕಾಯುವ ಜನರೇ ನಿರಾಶ್ರಿತರು' ಎಂದು ವ್ಯಾಖ್ಯಾನಿಸುತ್ತದೆ.

1951ರ ವಿಶ್ವ ನಿರಾಶ್ರಿತರ ಸಮಾವೇಶದಲ್ಲಿ ಭಾರತದ ಸಹಭಾಗಿತ್ವ ಇರಲಿಲ್ಲ ಹಾಗೂ ರಾಷ್ಟ್ರೀಯ ನಿರಾಶ್ರಿತರ ರಕ್ಷಣೆಗೆ ಸಂಬಂಧಿಸಿದ ನಿರ್ದಿಷ್ಟ ಕಾಯ್ದೆಗಳನ್ನು ಅದು ಹೊಂದಿಲ್ಲ. ಆದರೂ, ನೆರೆಯ ರಾಷ್ಟ್ರಗಳ ನಿರಾಶ್ರಿತರಿಗೆ ಭಾರತ ಆಶ್ರಯ ಕೊಡುತ್ತಲೇ ಬಂದಿದೆ. 1959ರಲ್ಲಿ ದಲೈಲಾಮ ಮತ್ತು ಅವರ ಅನುಯಾಯಿಗಳು ಟಿಬೆಟ್‌ನಿಂದ ನಿರಾಶ್ರಿತರಾದಾಗ ಭಾರತ ಆಶ್ರಯಕೊಟ್ಟಿದೆ. 1971ರಲ್ಲಿ ಪಾಕಿಸ್ತಾನ ದಿಂದ ಬಂದ ನಿರಾಶ್ರಿತರಿಗೆ ಆಶ್ರಯ ನೀಡಿದೆ. 1983 ಮತ್ತು 1986ರಲ್ಲಿ ಶ್ರೀಲಂಕಾ ಮತ್ತು ಬಾಂಗ್ಲಾದೇಶದಿಂದ ಬಂದ ನಿರಾಶ್ರಿತರಿಗೂ ಆಶ್ರಯ ನೀಡಿದೆ. ಮ್ಯಾನ್ಮಾರ್ (ರೋಹಿಂಗ್ಯಾ) ಮತ್ತು ಅಫ್ಗಾನಿಸ್ತಾನದ 46 ಸಾವಿರ ನಿರಾಶ್ರಿತರಿಗೆ ನೆಲೆ ನೀಡಿದೆ. 1992ರ ವೇಳೆಗೆಭಾರತ 2 ಲಕ್ಷ ವಲಸಿಗರಿಗೆ ಮತ್ತು 2.37 ಲಕ್ಷದ ಸ್ಥಳಾಂತರ ಗೊಂಡ ಜನರಿಗೆ ಆಶ್ರಯ ನೀಡಿದೆ.

ನಿರಾಶ್ರಿತರ ಬಗ್ಗೆ ಭಾರತ ತನ್ನ ಸಹಾನುಭೂತಿಯನ್ನು ಸತತವಾಗಿ ವ್ಯಕ್ತಪಡಿಸಿದ್ದರೂ, ಈಗ ನಡೆಯುತ್ತಿರುವ 'ಎಸ್‌ಐಆರ್' ಪ್ರಕ್ರಿಯೆ ನಿರಾಶ್ರಿತರನ್ನು ಗುರಿಯಾಗಿಸಿಕೊಂಡಿರುವುದು ಚಾರಿತ್ರಿಕ ವ್ಯಂಗ್ಯವಾಗಿದೆ. ಚುನಾವಣಾ ಆಯೋಗ ಬಡವರು, ಆದಿವಾಸಿಗಳು, ಬುಡಕಟ್ಟುಗಳು, ಅಲೆಮಾರಿಗಳು, ಕೆಳವರ್ಗದ ಅಲ್ಪಸಂಖ್ಯಾತರು ಹಾಗೂ ಮಹಿಳೆಯರ ಮೇಲೆ 'ಎಸ್‌ಐಆರ್' ಹೆಸರಲ್ಲಿ ಯುದ್ಧ ಸಾರಿದೆಯೇ ಎನ್ನುವ ಆತಂಕ ಮೂಡುತ್ತಿದೆ. ಜಗತ್ತಿನ ನಿರಾಶ್ರಿತರಿಗೆ ಆಶ್ರಯ ನೀಡಿದ ಭಾರತವು, ತನ್ನದೇ ದೇಶದಲ್ಲಿ 'ಎಸ್‌ಐಆರ್' ಹೆಸರಿನಲ್ಲಿ ಹೊಸ ನಿರಾಶ್ರಿತರನ್ನು ಸೃಷ್ಟಿಸುತ್ತಿದೆ ಹಾಗೂ ಅವರ ರಕ್ಷಣೆಯ ಆತಂಕ ಎದುರಾಗಿದೆ.

ಪಶ್ಚಿಮ ಬಂಗಾಳ ಮತ್ತು ಬಿಹಾರಗಳಲ್ಲಿ ಬಿಜೆಪಿ ಮೊದಲ ಬಾರಿಗೆ ಅಧಿಕಾರ ವಹಿಸಿಕೊಂಡಿದೆ. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರ ಸಚಿವ ಸಂಪುಟ 'ಎಸ್‌ಐಆರ್' ಅಡಿಯಲ್ಲಿ ಮತದಾರರ ಪಟ್ಟಿಯಿಂದ ಹೊರಹಾಕಲಾದವರು ರಾಜ್ಯ ಸರ್ಕಾರದ ಕಲ್ಯಾಣ ಯೋಜನೆಗಳಿಗೆ ಅನರ್ಹರಾಗುತ್ತಾರೆ' ಎಂದು ಘೋಷಿಸಿದ್ದಾರೆ. ಬಿಹಾರದ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ, 'ಎಸ್‌ಐಆರ್'ನಿಂದ ಹೊರ ಹಾಕಿಸಿಕೊಂಡವರಿಗೆ ಪಡಿತರ ಸೇರಿದಂತೆ ಯಾವ ಸರ್ಕಾರಿ ಸೌಲಭ್ಯವೂ ಸಿಗುವುದಿಲ್ಲ ಎಂದು ಹೇಳಿದ್ದಾರೆ. ಹಲವು ತಲೆಮಾರುಗಳು ಬಾಳಿದ ಹಾಗೂ ಹುಟ್ಟಿ ಬೆಳೆದ ನೆಲದಲ್ಲೇ ತಿರಸ್ಕಾರಕ್ಕೆ ಒಳಗಾದರೆ, ಅಂತಹವರಿಗೆ ನೆರವಾಗುವವರು ಯಾರು?

ಈ ತನಕ ದೇಶದ 13 ರಾಜ್ಯಗಳ 7.5 ಕೋಟಿ ಜನರು ಚುನಾವಣಾ ಆಯೋಗದ ಅವಕೃಪೆಗೆ ಒಳಗಾಗಿ, ಮತದಾರರ ಪಟ್ಟಿಯಿಂದ ಹೊರಗುಳಿದಿದ್ದಾರೆ. ಈ ದೇಶದ ಒಳಗೇ ನಿರಾಶ್ರಿತರಾದ ಅವರ ದುಗುಡ, ದುಃಖ, ಆತಂಕ, ಅಭದ್ರತೆಯನ್ನು ಆಲಿಸುವವರು ಯಾರು?

ಪ್ರಶಸ್ತಿ ಪುರಸ್ಕೃತರು

ಅತ್ಯುತ್ತಮ ನಟ

ರಿಷಬ್ ಶೆಟ್ಟಿ
ಚಿತ್ರ: ಕಾಂತಾರ: ಚಾಪ್ಟರ್–1

ಅತ್ಯುತ್ತಮ ನಟಿ

ಸಂಧ್ಯಾ ಅರಕೆರೆ
ಚಿತ್ರ: ಸು ಫ್ರಮ್ ಸೋ

ಅತ್ಯುತ್ತಮ ನಿರ್ದೇಶನ

ರಿಷಬ್ ಶೆಟ್ಟಿ
ಚಿತ್ರ: ಕಾಂತಾರ: ಚಾಪ್ಟರ್ 1

ಜನಮೆಚ್ಚಿದ ನಟಿ

ಆಶಿಕಾ ರಂಗನಾಥ್
ಚಿತ್ರ: ಗತವೈಭವ

ಜನಮೆಚ್ಚಿದ ನಟ

ರಿಷಬ್ ಶೆಟ್ಟಿ
ಚಿತ್ರ: ಕಾಂತಾರ: ಚಾಪ್ಟರ್ 1

ಅತ್ಯುತ್ತಮ ಪೋಷಕ ನಟ

ದೀಪಕ್ ರೈ ಪಾಣಾಜೆ
ಚಿತ್ರ: ಸು ಫ್ರಮ್ ಸೋ

ಅತ್ಯುತ್ತಮ ಪೋಷಕ ನಟಿ

ಶ್ರುತಿ
ಚಿತ್ರ: ಮಾದೇವ

ಅತ್ಯುತ್ತಮ ಚೊಚ್ಚಲ ನಿರ್ದೇಶನ

ಜೆ.ಪಿ.ತೂಮಿನಾಡು
ಚಿತ್ರ: ಸು ಫ್ರಮ್ ಸೋ

ಅತ್ಯುತ್ತಮ ಚಿತ್ರ ಹಾಗೂ ಜನಮೆಚ್ಚಿದ ಚಿತ್ರ

ಕಾಂತಾರ: ಚಾಪ್ಟರ್ 1

ಅತ್ಯುತ್ತಮ ಸಂಗೀತ ನಿರ್ದೇಶನ

ಅಜನೀಶ್ ಲೋಕನಾಥ್
ಚಿತ್ರ: ಕಾಂತಾರ: ಚಾಪ್ಟರ್ 1

ನವತಾರೆ

ಶನೀಲ್ ಗೌತಮ್
ಚಿತ್ರ: ಸು ಫ್ರಮ್ ಸೋ

ನವತಾರೆ

ಪ್ರಿಯಾಂಕಾ ಆಚಾರ್
ಚಿತ್ರ: ಏಳುಮಲೆ

ಅತ್ಯುತ್ತಮ ಛಾಯಾಚಿತ್ರಗ್ರಹಣ

ಅರವಿಂದ್ ಕಶ್ಯಪ್
ಚಿತ್ರ: ಕಾಂತಾರ: ಚಾಪ್ಟರ್ 1

ಅತ್ಯುತ್ತಮ ಗೀತಸಾಹಿತ್ಯ

ಶಶಿರಾಜ್ ಕಾವೂರು
ಕಾಂತಾರ: ಚಾಪ್ಟರ್ 1, ಹಾಡು: ಬ್ರಹ್ಮಕಲಶ

ಅತ್ಯುತ್ತಮ ಗಾಯಕ

ಅಬ್ಬಿ ವಿ.
ಚಿತ್ರ: ಕಾಂತಾರ: ಚಾಪ್ಟರ್ 1
ಹಾಡು: ಬ್ರಹ್ಮಕಲಶ

ಅತ್ಯುತ್ತಮ ಗಾಯಕಿ

ಚೈತ್ರ ಜೆ.ಆಚಾರ್
ಚಿತ್ರ: ಸು ಫ್ರಮ್ ಸೋ
ಹಾಡು: ಹೆಣ್ಣು

ಅತ್ಯುತ್ತಮ ನೃತ್ಯ ನಿರ್ದೇಶನ

ಮುರಳಿ ಮಾಸ್ಟರ್
ಹಾಡು: ಬ್ಯಾಂಗಲ್ ಬಂಗಾರಿ
ಚಿತ್ರ: ಎಕ್ಕ

ಅತ್ಯುತ್ತಮ ಚಿತ್ರಕಥೆ

ಪುನೀತ್ ರಂಗಸ್ವಾಮಿ
ಚಿತ್ರ: ಏಳುಮಲೆ

ಅತ್ಯುತ್ತಮ ಸಂಕಲನ

ಸುರೇಶ್ ಮಲ್ಲಯ್ಯ
ಚಿತ್ರ: ಕಾಂತಾರ: ಚಾಪ್ಟರ್ 1

ಅತ್ಯುತ್ತಮ ಸಾಮಾಜಿಕ ಪರಿಣಾಮ ಬೀರಿದ ಚಿತ್ರ

ಬಿಳಿಚುಕ್ಕಿ ಹಳ್ಳಿಹಕ್ಕಿ

ಜನಮೆಚ್ಚಿದ ಹಾಡು

ಬ್ಯಾಂಗಲ್ ಬಂಗಾರಿ
ಚಿತ್ರ: ಎಕ್ಕ

ಅತ್ಯುತ್ತಮ ನಿರ್ಮಾಣ ವಿನ್ಯಾಸ


ಪ್ರಗತಿ ರಿಷಬ್ ಶೆಟ್ಟಿ
ಧರಣಿ
ಚಿತ್ರ: ಕಾಂತಾರ: ಚಾಪ್ಟರ್ 1

ಅತ್ಯುತ್ತಮ ವಿಎಫ್‌ಎಕ್ಸ್, ಎಸ್‌ಎಫ್‌ಎಕ್ಸ್

ಕೆ.ವಿ.ಸಂಜಿತ್
ಚಿತ್ರ: ಕಾಂತಾರ: ಚಾಪ್ಟರ್ 1

ಅತ್ಯುತ್ತಮ ಧ್ವನಿಗ್ರಹಣ ಮತ್ತು ಶಬ್ದವಿನ್ಯಾಸ

ಚಿತ್ರ: ಕಾಂತಾರ: ಚಾಪ್ಟರ್ 1

ಕನ್ನಡದ 'ಧ್ರುವತಾರೆ' ರಮೇಶ್ ಅರವಿಂದ್ • 28 ವಿಭಾಗಗಳಲ್ಲಿ ಸಿನಿಮಾ ಸಾಧಕರಿಗೆ ಗೌರವ

ಚಿತ್ರತಾರೆಯರಿಗೆ 'ಸಿನಿ ಸಮ್ಮಾನ'ದ ಗೌರವ

ಬೆಂಗಳೂರಿನಲ್ಲಿ ಶುಕ್ರವಾರ ನಡೆದ 'ಪ್ರಜಾವಾಣಿ ಕನ್ನಡ ಸಿನಿಸಮ್ಮಾನ' ಕಾರ್ಯಕ್ರಮದಲ್ಲಿ ನಟಿ ಪ್ರಿಯಾಂಕ ಆಚಾರ್ ಹಾಗೂ ಪಾಯಲ್ ಚಂಗಪ್ಪ ನೃತ್ಯ ಪ್ರದರ್ಶನ ನೀಡಿದರು
ಪ್ರಜಾವಾಣಿ ಚಿತ್ರ: ಕೃಷ್ಣಕುಮಾರ್ ಪಿ.ಎಸ್.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡದ ಚಿತ್ರಪರದೆಗಳಲ್ಲಿ ಬದುಕಿನ ಭಿನ್ನಲೋಕಗಳನ್ನು ತೆರೆದಿಟ್ಟ ಚಂದನವನದ ತಾರೆಯರು, ಕಲಾವಿದರು ವೇದಿಕೆಯಲ್ಲಿ ಪ್ರಶಸ್ತಿಗಳನ್ನು ಸ್ವೀಕರಿಸುತ್ತಿದ್ದರೆ, ವೇದಿಕೆಯಾಚೆಯ ಅಂಗಳಕ್ಕೆ ಮೆರುಗು ತಂದಿದ್ದ ಅಭಿಮಾನಿಗಳ ಕರತಾಡನ. ಕನ್ನಡದ ಸಿನಿತಾರೆಯರಿಗೆ ಅವರದ್ದೇ ಜೀವನದ ಕ್ಷಣವೊಂದನ್ನು ಎದುರುಗೊಳ್ಳುವ ಕ್ಷಣ, ಕನ್ನಡ ಚಿತ್ರರಸಿಕರನ್ನು ರಂಜಿಸಿದ್ದ ಹಾಡು–ನೃತ್ಯ–ದೃಶ್ಯಗಳ ಮರುಸೃಷ್ಟಿ...

ನಗರದ ಅರಮನೆ ಮೈದಾನದಲ್ಲಿ ಸೃಷ್ಟಿಸಲಾಗಿದ್ದ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ನಾಲ್ಕನೇ ಆವೃತ್ತಿಯ ಅದ್ದೂರಿ ವೇದಿಕೆಯಲ್ಲಿ ತೆರೆದುಕೊಂಡಿದ್ದ ಲೋಕವಿದು.

ಕನ್ನಡ ಚಿತ್ರರಂಗದಲ್ಲಿ ಅಭೂತಪೂರ್ವ ಸಾಧನೆ ತೋರಿ ತಮ್ಮದೇ ಛಾಪು ಮೂಡಿಸಿದ ದಿಗ್ಗಜರಿಗೆ ಜೀವಮಾನದ ಪ್ರಶಸ್ತಿ ಪ್ರದಾನದ ಸೊಗಡು. 28 ವಿಭಾಗಗಳಲ್ಲಿ ಸಾಧನೆ ತೋರಿದವರಿಗೆ ನಾಡಿನ ಹೆಸರಾಂತ ನಾಯಕರು, ಚಿತ್ರರಂಗದ ದಿಗ್ಗಜರು ಮತ್ತು ಸಾಹಿತಿಗಳು ಪ್ರಶಸ್ತಿ ಪ್ರದಾನ ಮಾಡಿ ಖುಷಿ ಪಸರಿಸಿದರು.

ಪ್ರಶಸ್ತಿ ಪಡೆದವರು, ಪ್ರಶಸ್ತಿ ಪ್ರದಾನ ಮಾಡುವವರು, ಎಲ್ಲರದ್ದೂ ಒಂದೇ ಮಾತು. 'ಪ್ರಜಾವಾಣಿ'ಯಂತಹ ವಿಶ್ವಾಸಾರ್ಹ ಪತ್ರಿಕೆ ಈ ಪ್ರಶಸ್ತಿ ನೀಡುತ್ತಿರುವುದು ದೊಡ್ಡ ಗೌರವ' ಎಂಬ ಮೆಚ್ಚುಗೆ ಅವರದ್ದು.

CASAGRAND building aspirations Presents ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ನಿರೂಪಣೆಗೆ ಅಂದ ತಂದ ಅಕುಲ್ ಬಾಲಾಜಿ ಮತ್ತು ಅನುಶ್ರೀ ಅವರ ಅರಳು ಹುರಿದಂತಹ ಮಾತುಗಳು ನಾಲ್ಕಾರು ತಾಸಿನ ಕಾರ್ಯಕ್ರಮದಲ್ಲಿ ನೋಡುಗರನ್ನು ಹಿಡಿದಿಟ್ಟು ಕೂರಿಸಿದ್ದವು. ಮಧ್ಯೆ–ಮಧ್ಯೆ ನೃತ್ಯಗಳು ಎಲ್ಲರನ್ನೂ ರಂಜಿಸಿದವು.

ಕನ್ನಡ ಸಿನಿ ಸಮ್ಮಾನದ 'ಧ್ರುವತಾರೆ' ಪ್ರಶಸ್ತಿಗೆ ಪಾತ್ರರಾದ ರಮೇಶ್ ಅರವಿಂದ್ ಅವರ 40 ವರ್ಷಗಳ ಸಿನಿಪಯಣದ ಪ್ರಮುಖ ಪಾತ್ರಗಳನ್ನು ಒಳಗೊಂಡ ಮೀಮ್ ಎಲ್ಲರನ್ನೂ ರಂಜಿಸಿತು.

ಸಂಗೀತ, ನೃತ್ಯ ನಿರ್ದೇಶನ ಸೇರಿ ವಿವಿಧ ವಿಭಾಗಗಳಲ್ಲಿ ಡಿಜಿಟಲ್ ಪರದೆಯಲ್ಲಿ ಪ್ರಶಸ್ತಿ ನಾಮನಿರ್ದೇಶಿತರ ಹೆಸರು ಬರುವಾಗ ಹಲವರಿಗೆ ಕುತೂಹಲ ಮತ್ತು ದುಗುಡ ಒಟ್ಟೊಟ್ಟಿಗೆ ಉಂಟಾಯಿತು. ವಿಜೇತರ ಹೆಸರು ಘೋಷಣೆ ಆಗುತ್ತಿದ್ದಂತೆ ವಿಜೇತರು ಸಂಭ್ರಮಿಸಿದರೆ, ಉಳಿದವರು ಕೈಕುಲುಕಿ ಅಭಿನಂದನೆ ಸಲ್ಲಿಸಿದರು.

ಪ್ರಶಸ್ತಿ ಸ್ವೀಕರಿಸಿ ಕೆಲವರು ಭಾವುಕರಾದರು. ಹಲವರಲ್ಲಿ ಸಾರ್ಥಕತೆಯ ಭಾವ ಮೂಡಿತು. ತಮಗೆ ಅವಕಾಶ ನೀಡಿದ ನಿರ್ದೇಶಕ, ನಿರ್ಮಾಪಕರು ಸೇರಿ ಚಿತ್ರತಂಡದ ಸದಸ್ಯರನ್ನು, ಚಿತ್ರೀಕರಣದ ವೇಳೆ ನಡೆದ ಘಟನೆಗಳನ್ನು ಸ್ಮರಿಸಿಕೊಂಡರು. ಹೆತ್ತವರ, ಗೆಳೆಯರ ಪ್ರೋತ್ಸಾಹಗಳನ್ನು ನೆನಪು ಮಾಡಿಕೊಂಡರು. ಧನ್ಯವಾದ ಅರ್ಪಿಸಿದರು. ಅಂತಹ ಹಲವು ಭಾವುಕ ಕ್ಷಣಗಳಿಗೆ ವೇದಿಕೆ ಸಾಕ್ಷಿಯಾಯಿತು.

ಬಿ.ಜಯಶ್ರೀ, ದತ್ತಣ್ಣ, 'ಪ್ರಜಾವಾಣಿ' ಸಿನಿ ಸಮ್ಮಾನದ ಮೂರನೇ ಆವೃತ್ತಿಯ ಜೀವಮಾನದ ಸಾಧನೆ ಪ್ರಶಸ್ತಿಗೆ ಪಾತ್ರರಾಗಿದ್ದ ಶ್ರೀನಾಥ್, ಜಯಮಾಲಾ, ಸುನಿಲ್ ಕುಮಾರ್ ದೇಸಾಯಿ ಅವರಂತಹ ಹಿರಿಯರು, ಸುಮನ್ ಕಿತ್ತೂರು, ತಾರಾ ಅನೂರಾಧ, ಶ್ರುತಿ, ಪೂಜಾ ಗಾಂಧಿ, ರುಕ್ಮಿಣಿ ವಸಂತ ಮೊದಲಾದವರು ಸಿನಿ ಸಮ್ಮಾನ ಕಾರ್ಯಕ್ರಮದ ಮೆರುಗು ಹೆಚ್ಚಿಸಿದರು.

ರಾಜಕೀಯ ಕ್ಷೇತ್ರದವರೂ ಸಮಾರಂಭಕ್ಕೆ ಸಾಕ್ಷಿಯಾದರು. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಗಿರೀಶ ಕಾಸರವಳ್ಳಿ ಅವರಿಗೆ ಜೀವಮಾನದ ಸಾಧನೆ ಪ್ರಶಸ್ತಿ ಪ್ರದಾನ ಮಾಡಿದರು. ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಸಿನಿ ಸಮ್ಮಾನದ ಸಂಭ್ರಮಕ್ಕೆ ಸಾಕ್ಷಿಯಾದರು.

ಸುದೀಪ್ ಜತೆಗೆ ಸಂವಾದ

ಚಿತ್ರನಟ ಸುದೀಪ್ ಅವರ ಜತೆಗೆ ನಡೆಸಿದ ಸಂವಾದವು ಸಿನಿ ಸಮ್ಮಾನ ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಿತು. 2004ರಿಂದ ಈವರೆಗೆ ಒಂದೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಭಾಗಿಯಾಗದ ಕಿಚ್ಚ ಸುದೀಪ್ ಅವರು, 'ಪ್ರಜಾವಾಣಿ' ಸಿನಿ ಸಮ್ಮಾನದಲ್ಲಿ ಭಾಗಿಯಾಗಿದ್ದು ಕಾರ್ಯಕ್ರಮದ ಆಕರ್ಷಣೆಯನ್ನು ಹೆಚ್ಚಿಸಿತ್ತು. ಸಂವಾದವನ್ನು 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು ನಡೆಸಿಕೊಟ್ಟರು.

ತಮ್ಮ 30 ವರ್ಷಗಳ ಸಿನಿಮಾ ಬದುಕಿನ ಅಪರೂಪದ ಕ್ಷಣಗಳನ್ನು ಹಂಚಿಕೊಂಡ ಸುದೀಪ್ ಅವರು, ಕನ್ನಡ ಚಿತ್ರರಂಗವು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಮಾತನಾಡಿದರು. 'ಚಿತ್ರರಂಗಕ್ಕೆ ಈಗ ಜ್ವರ ಬಂದಿದೆ. ಚಿಕಿತ್ಸೆ ಪಡೆದುಕೊಂಡು ಹಾಗೇ ಇದ್ದರೆ, ಎಲ್ಲವೂ ಸರಿ ಆಗಲಿದೆ' ಎಂದು ಹೇಳಿದರು.

Fashion Partner: TRENDS | Mobility Partner: Akshaya Motors | Banking Partner: ಕೆನರು ಬ್ಯಾಂಕ್ केनरा बैंक Canara Bank A Government of India Undertaking, Together We Can | Wardrobe Partner: MALLESHWARAM Sudarshan Silks | Mobile Partner: HUMAN MOBILE DEVICES HMD | Taste Partner: Sunpure | EV Partner: VIDA Powered by Hero | Travel Partner: ಅಡಿಗಾಸ್ ಯಾತ್ರಾ | Knowledge Partners: GM UNIVERSITY DAVANAGERE, INSIGHTSIAS, GITAM
State Partner: उत्तराखण्ड शासन | Associate Sponsors: Amruth ಅಮೃತ್ ಆರ್ಗ್ಯಾನಿಕ್ ಫರ್ಟಿಲೈಸರ್ಸ್, ಅಡ್ಕರ್ ನಂಬಿಕೆ. ನಿರಂತರ., MSIL ಚಿಟ್ಸ್ Chits, The Janatha Co-operative Bank Ltd., Malleswaram, Bangalore, AYURVEDIC MEDICINE KAYAM TABLET, Bindu, एनबीसीसी NBCC A Navratna CPSE | Audit Partner: EY | Television Partner: Z ಕನ್ನಡ

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

20 ಜೂನ್ 2026 ಶನಿವಾರ ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ನಿಜ ಜ್ಯೇಷ್ಠ ಶುಕ್ಲ ಷಷ್ಠಿ ಗಂ. 15-47 **ನಕ್ಷತ್ರ:** ಮಘ ಗಂ. 9-26 **ಯೋಗ :** ವಜ್ರ ಗಂ. 12-49 **ಕರಣ:** ತೈತಿಲ ಗಂ. 15-47, ಮಿಥುನ ಮಾಸದ 05 ನೇ ದಿನ. ಮಳೆ ನಕ್ಷತ್ರ : ಮೃಗಶಿರ 4 ನೇ ಪಾದ. **ರಾಹುಕಾಲ :** ಬೆಳಿಗ್ಗೆ 09-00 - 10-30 **ಸೂರ್ಯೋದಯ :** 06-09 **ಸೂರ್ಯಾಸ್ತ :** 06-56 **ಮುಸ್ಲಿಂ ದಿನಾಂಕ :** 04 ಮೊಹರಂ **ಅದೃಷ್ಟ ಸಂಖ್ಯೆ :** 10, 3

ಮೇಷ: ಈ ದಿನ ಸತ್ಕಾರ್ಯಗಳ ನಿರ್ವಹಣೆಗೆ ನಿಮ್ಮ ಸಹಾಯ ಸಹಕಾರ ಕೋರಿ ಬರುವವರಿಗೆ ಸಹಾಯವನ್ನು ಮಾಡಿ, ಇದು ನಾಳೆ ನಿಮಗೆ ಶ್ರೀರಕ್ಷೆಯಾಗಲಿದೆ. ಸೊಪ್ಪು ತರಕಾರಿಗಳ ಬೆಳೆಗಾರರು ಹಾಗೂ ಮಾರಾಟಗಾರರಿಗೆ ಲಾಭವಾಗಲಿದೆ.

ವೃಷಭ: ನಿಮ್ಮ ಆಲೋಚನೆಗಳು ಹಾಗೂ ಅದಕ್ಕೆ ತಕ್ಕಂತಹ ನಡತೆಗಳು ಇತರರನ್ನು ಕೆಣಕುವ ಹಾಗೆ ಇರುವುದು ಬೇಡ. ಮನೆಯಲ್ಲಿ ಹೊಸ ವ್ಯಕ್ತಿಯನ್ನು ಸ್ವಾಗತಿಸಲು ಸಂಪೂರ್ಣ ತಯಾರಾಗುತ್ತೀರಿ.

ಮಿಥುನ: ಮೊದಲ ನೋಟದಲ್ಲಿ ನಿಮ್ಮ ಮೇಲೆ ಒಳ್ಳೆಯ ಭಾವನೆಯನ್ನು ಕೊಡುವುದು ನಿಮ್ಮ ವೇಷಭೂಷವಾದ ಕಾರಣ ಇಂದು ನೀವು ಶಿಸ್ತಿನ ಉಡುಗೆ ಧರಿಸುವುದು ಸೂಕ್ತ. ಭಾಗವತ, ಭಗವಚ್ಚಿಂತನೆಗಳಲ್ಲಿ ಆಸಕ್ತಿ ಹೆಚ್ಚಲಿದೆ.

ಕರ್ಕಾಟಕ: ಪುತ್ರರ ಸಹಾಯದಿಂದ ಮನೆತನದ ವ್ಯಾಪಾರ ವ್ಯವಹಾರದಲ್ಲಿ ಮತ್ತಷ್ಟು ಬಲ ಬಂದಂತಾಗಿ ವಿಸ್ತರಣೆಗೆ ಅನುಕೂಲವಾಗಲಿದೆ. ನಿಮ್ಮ ಕಾದಂಬರಿ ಓದುವ ಹವ್ಯಾಸಕ್ಕೆ ಸರಿಯಾದ ಸಂಗಾತಿ ದೊರೆಯಲಿದ್ದಾರೆ.

ಸಿಂಹ: ಸಾಹಿತ್ಯಾತ್ಮಕ ಮನೋಭಾವವನ್ನು ಹೊಂದಿರುವವರಿಗೆ ಇಂದು ನಿಮ್ಮ ಸುತ್ತಮುತ್ತ ನಡೆಯುವ ವಿಚಾರಗಳು ನಿಮ್ಮನ್ನು ಅಂತರ್ಮುಖಿಯನ್ನಾಗಿ ಮಾಡುವುದು. ಹೆಂಡತಿಯ ಸಲಹೆ ದಿನಚರಿಯಲ್ಲಿ ಸಹಾಯಕವಾಗುವುದು.

ಕನ್ಯಾ: ಕುಟುಂಬಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಇರುವ ಧಾರ್ಮಿಕ ಮಾರ್ಗವನ್ನು ಆದಷ್ಟು ಬೇಗ ಅನುಸರಿಸುವುದು ಸೂಕ್ತ. ಪೂರ್ವಜನ್ಮದ ಪುಣ್ಯಫಲವೆಂಬಂತೆ ನಿಮ್ಮ ಹಳೇ ಅಭೀಷ್ಟವು ನೆರವೇರಲಿದೆ.

ತುಲಾ: ಕೃತಕ ಉಸಿರಾಟ ಅಥವಾ ಕೃತಕ ಆಹಾರದಿಂದ ಇರುವವರ ಆರೋಗ್ಯದಲ್ಲಿ ಹಂತ ಹಂತವಾದ ಚೇತರಿಕೆ ಕಂಡುಬರುವುದು. ನ್ಯಾಯಾಂಗ ಇಲಾಖೆಯವರಿಗೆ ಬಡ್ತಿ ಅಥವಾ ವರ್ಗಾವಣೆ ಆಗುವ ಸಾಧ್ಯತೆ ಇದೆ.

ವೃಶ್ಚಿಕ: ನಿಮ್ಮ ದೊಡ್ಡ ಸಾಧನೆಯ ನಂತರದಲ್ಲಿ ವಿರಾಮವನ್ನು ಯೋಚಿಸಲಿಕ್ಕೂ ಹೋಗಬೇಡಿ, ಅದು ಖಂಡಿತವಾಗಿಯೂ ಹಿನ್ನಡೆ ಉಂಟುಮಾಡುತ್ತದೆ. ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಹೆಚ್ಚಿನ ಹಣ ಮೀಸಲಿಡುವಿರಿ.

ಧನು: ಮೌನ ನಿಮಗೆ ಈ ದಿನದ ಕಿವಿ ಮಾತು, ವಿನಾ ಕಾರಣ ಯಾವುದೇ ವಿವಾದಕ್ಕೆ ಸಿಲುಕದಿರಿ. ನಿಮ್ಮ ಕೌಟುಂಬಿಕ ವಿಚಾರದಲ್ಲಿ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳಲು ಹಿಂಜರಿಕೆ ಬೇಡ. ಉತ್ತಮ ಭೋಜನ ಮಾಡುವಿರಿ.

ಮಕರ : ಇತರರನ್ನು ಹೀಯಾಳಿಸುವ, ಅನಾವಶ್ಯಕವಾಗಿ ತಿರಸ್ಕರಿಸುವ ಅಥವಾ ನಿಂದನೆ ಮಾಡುವ ಮನೋಭಾವವನ್ನು ಕಡಿಮೆ ಮಾಡಿಕೊಳ್ಳಿ. ಶೀಘ್ರ ಹಾಗೂ ಸಕಾಲಿಕ ನಿರ್ಧಾರಗಳು ಹಣಕಾಸಿನ ಲಾಭವನ್ನು ತರುತ್ತವೆ.

ಕುಂಭ: ನಿಮ್ಮಲ್ಲಿರುವ ಸಣ್ಣಪುಟ್ಟ ಅಳುಕುಗಳನ್ನು ಬಿಟ್ಟು ಧೈರ್ಯಂ ಸರ್ವತ್ರ ಸಾಧನಂ ಎನ್ನುವ ವಾಕ್ಯದಂತೆ ಹೆದರದೆ ಧೈರ್ಯದಿಂದ ಮುನ್ನುಗ್ಗಿ. ಸಾಮಾಜಿಕ ಕಾರ್ಯಕ್ರಮಗಳಲ್ಲಿ ಪ್ರಮುಖ ಪಾತ್ರವನ್ನು ವಹಿಸುವಿರಿ.

ಮೀನ: ಈ ಋತುವಿನಲ್ಲಿ ಸಿಗುವ ಹಣ್ಣು ತರಕಾರಿಗಳನ್ನು ಸೇವಿಸುವುದರಿಂದ ನಿಮ್ಮ ದೇಹದಲ್ಲಿನ ಕೊರತೆಗಳನ್ನು ನಿವಾರಿಸಿಕೊಳ್ಳಬಹುದು. ಐಷಾರಾಮಿ ವಿದೇಶಿ ವಸ್ತುಗಳ ಖರೀದಿಯು ಮನಸ್ಸಿಗೆ ಸಂತೋಷ ಉಂಟುಮಾಡುತ್ತದೆ.

ಪದಬಂಧ 6439

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಮರವನ್ನೂ ಕೊಚ್ಚಿಕೊಂಡು ಹೋಗುವಂಥ ದೊಡ್ಡ ಪ್ರವಾಹ (4)
3. ಈತ ಅನುಭವವುಳ್ಳವನು (4)
5. ಕೊನೆಗೆ ಬೆಲೆಯನ್ನಿಟ್ಟಾಗಿನ ಸಲುಗೆ (3)
6. ಭ್ರೂಣವನ್ನು ಆವರಿಸಿರುವ ಪೊರೆ (3)
8. ಸಂಗನ ಜೀವನದ ಘಟನೆ! (3)
10. ಒಂದೇ ವಿಷಯದಲ್ಲಿ ಮನಸ್ಸು ನೆಟ್ಟಿರುವಿಕೆ (3)
11. ಕಾಗೆ ಇಲ್ಲಿಗೆ ಹಾರಿ ಬಂದಿದೆ (3)
13. ಅಳುವಿನೊಂದಿಗೆ ಹೆದರಿಕೆಯೂ ಬಂದಿದೆಯಲ್ಲಾ! (3)
15. ಪೂರ್ವದ ಸ್ಥಿತಿಯಿದು (4)
16. ಯುದ್ಧದ ನಗಾರಿಯಿದು (4)

ಮೇಲಿಂದ ಕೆಳಕ್ಕೆ

1. ಮಜದಲ್ಲಿರುವ ಚಕ್ರವರ್ತಿ ಕಾಣಿಸಿದನೇ? (4)
2. ಪಶ್ಚಿಮ ದಿಕ್ಕಿದು (3)
3. ಸುರನ ಹತ್ತಿರ ರಾಕ್ಷಸ ಬಂದಿರುವನಲ್ಲಾ! (3)
4. ಕೊನೆಗೆ ಯೋಗವಿದ್ದದ್ದಕ್ಕೇ ಈ ಹಂಚಿಕೆ (4)
7. ಇದು ರಜೋಗುಣಕ್ಕೆ ಸಂಬಂಧಪಟ್ಟದ್ದು (3)
9. ದಾಯಾದಿ ಮಾಡಿದ ಪಾವತಿ (3)
10. ಹುಟ್ಟುವಳಿ ಮತ್ತು ವೆಚ್ಚ (4)
12. ಒಳ್ಳೆಯ ಆಚಾರವುಳ್ಳವನು (4)
13. ದೇವತೆಗಳ ಜನನಿ (3)
14. ಅಷ್ಟ ದಿಕ್ಪಾಲಕರಲ್ಲಿ ಅತೀ ಶ್ರೀಮಂತ (3)



6438ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗೊತ್ತುಗುರಿ 3.ಕುರವಿ
5.ಗಾನಕಲೆ 7.ವಿನ್ಯಾಸ
8.ಅಂತರ್ದೇಶಿಯ
12.ಗುಲಾಲು 13.ರಸಹೀನ
15.ಗವಾಕ್ಷಿ 16.ಅಪಘಾತ

ಮೇಲಿಂದ ಕೆಳಕ್ಕೆ:
1.ಗೊಣಗಾಟ 2.ಗುಣಕ
4.ವಿಧ್ವಂಸಕ 6.ಲೆಪ್ಪತ
7.ವಿಜಯ 8.ಅಂಗಾಲು
9.ಶೀಕರ 10.ನಗುಮೊಗ
11.ಜನಹಿತ 14.ಸಲ್ಲಾಪ

ಸುಡೊಕು 6822

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	6				8			2
		1		6		3	8	
9		3			2			6
							6	
	2	6	9	4	7			
	4		6		1		7	5
			1		9	8		
8		7						
1	9		8		6	4		3

6821 ಸುಡೊಕು

1	5	8	4	3	2	9	7	6
3	7	6	9	8	1	2	4	5
9	2	4	6	5	7	1	8	3
8	9	5	2	7	4	6	3	1
4	6	1	5	9	3	7	2	8
7	3	2	1	6	8	5	9	4
5	4	9	3	2	6	8	1	7
2	1	7	8	4	5	3	6	9
6	8	3	7	1	9	4	5	2

ಭೂಮಿಕಾ

ಮಹಿಳೆಯರ ಆಪ್ತ ಸಂಗಾತಿ

ಮುದ್ದು ಕಂದನ ಪಡೆಯಬೇಕೆ?

• ಪ್ರೊ. ಸುತ್ತೂರು ಎಸ್. ಮಾಲಿನಿ

ಗರ್ಭಧಾರಣೆ ಪ್ರತಿ ಸ್ತ್ರೀಯ ಸೂಕ್ಷ್ಮ ಹಾಗೂ ಸಂವೇದನಾತ್ಮಕ ಘಟ್ಟ. ಭ್ರೂಣದ ಬೆಳವಣಿಗೆ ಸಂಪೂರ್ಣವಾಗಿ ತಾಯಿಯ ದೈಹಿಕ, ಮಾನಸಿಕ, ಸಾಮಾಜಿಕ, ಲೈಂಗಿಕ ಮತ್ತು ಆಧ್ಯಾತ್ಮಿಕ ಆರೋಗ್ಯವನ್ನು ಅವಲಂಬಿಸಿರುತ್ತದೆ. ತಾಯಿಯ ದೇಹವು ಬೆಳೆಯುತ್ತಿರುವ ಭ್ರೂಣಕ್ಕೆ ಆರೋಗ್ಯಕರ ವಾತಾವರಣವನ್ನು ಕಲ್ಪಿಸಬೇಕು. ಆಕೆ ಸೇವಿಸುವ ಪೌಷ್ಟಿಕಾಂಶಗಳಿಂದ ಕೂಡಿದ ಆಹಾರವು ಭ್ರೂಣದ ಸಮಗ್ರ ಬೆಳವಣಿಗೆಗೆ ಸಹಾಯಕವಾಗಿರಬೇಕು.

ಆದರೆ, ಗರ್ಭಧಾರಣೆಯ ಸಂದರ್ಭದಲ್ಲಿ ತಾಯಿ ಸೇವಿಸಬಹುದಾದ ಕೆಲವು ಅಪಾಯಕಾರಿ ಪದಾರ್ಥಗಳ ಮೂಲಕ ಆಕೆಯ ದೇಹವನ್ನು ಸೇರುವ ರಾಸಾಯನಿಕಗಳು, ಭ್ರೂಣದ ಅಂಗಾಂಗಗಳ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ. ಇದರಿಂದ ಜನ್ಮಜಾತ ದೋಷಗಳು ಕಾಣಿಸಿಕೊಳ್ಳುತ್ತವೆ. ಹೀಗೆ ಶಿಶುವಿನಲ್ಲಿ ಅಂಗವೈಕಲ್ಯವನ್ನು ಉಂಟುಮಾಡುವ ಈ ರಾಸಾಯನಿಕಗಳನ್ನು ವಿಕಾರಜನಕಗಳು (ಟೆರಾಟಜನ್) ಎನ್ನುತ್ತೇವೆ.

ವಿಕಾರಜನಕಗಳ ಬಗ್ಗೆ ಜಗತ್ತಿಗೆ ಅರಿವುಂಟಾಗಿದ್ದು ಅರವತ್ತರ ದಶಕದಲ್ಲಿ. ಅದೂ ಥಾಲಿಡೋಮೈಡ್ ಎಂಬ ಔಷಧ ಯುರೋಪಿನಲ್ಲಿ ಸೃಷ್ಟಿಸಿದ ಅವಘಡದ ನಂತರ.

ಗರ್ಭಿಣಿಯರಲ್ಲಿ ಮೊದಲ ಮೂರು ತಿಂಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ತಲೆಸುತ್ತು, ವಾಕರಿಕೆಯಂತಹ ತೊಂದರೆಗಳನ್ನು ನಿವಾರಿಸಲು, ಅವರ ಮನಸ್ಸು ಶಾಂತಿ, ಸ್ಥಿಮಿತದಿಂದ ಕೂಡಿರುವಂತೆ ನೋಡಿಕೊಳ್ಳಲು ಈ ಔಷಧವನ್ನು ವೈದ್ಯರು ಕೊಡಲಾರಂಭಿಸಿದರು. ಆದರೆ ಯುರೋಪಿನಾದ್ಯಂತ ಈ ಔಷಧದಿಂದಾಗಿಯೇ ಒಂದು ಭಯಾನಕ ಅವಘಡ ಸಂಭವಿಸುತ್ತದೆ ಎಂಬುದನ್ನು ಯಾರೊಬ್ಬರೂ ಊಹಿಸಿರಲಿಲ್ಲ.

ಸಾವಿರಾರು ಸ್ತ್ರೀಯರು ಏಕಕಾಲದಲ್ಲಿ ಅಂಗವಿಕಲ ಮಕ್ಕಳಿಗೆ ಜನ್ಮ ನೀಡಿದರು. ಮಕ್ಕಳು ಮಾನಸಿಕವಾಗಿ ಆರೋಗ್ಯವಂತರಾಗಿದ್ದರೂ ದೈಹಿಕವಾಗಿ ಅಂಗವಿಕಲರಾಗಿದ್ದರು. ಅವರ ಕೈ-ಕಾಲುಗಳ ಬೆಳವಣಿಗೆ ಕುಂಠಿತವಾಗಿತ್ತು. ಈ ಅನಾಹುತದ ನಂತರ ಎಚ್ಚೆತ್ತುಕೊಂಡ ವಿಜ್ಞಾನಿಗಳು, ರಾಸಾಯನಿಕಗಳಿಂದ ಭ್ರೂಣದ ಮೇಲುಂಟಾಗುವ ದುಷ್ಪರಿಣಾಮಗಳ ಕುರಿತು ಹಲವಾರು ಸಂಶೋಧನೆಗಳನ್ನು ನಡೆಸಿದರು. ಇದರ ಫಲವಾಗಿ, ನೂರಾರು ವಿಕಾರಜನಕಗಳನ್ನು ತದನಂತರ ಪತ್ತೆ ಹಚ್ಚಲಾಯಿತು.

ಸರಿಸುಮಾರು ಶೇಕಡ 4ರಿಂದ 5ರಷ್ಟು ಜನ್ಮಜಾತ ಅಂಗವೈಕಲ್ಯಕ್ಕೆ ಕಾರಣ ಈ ವಿಕಾರಜನಕಗಳು. ಗರ್ಭಧಾರಣೆಯ ಮೂರರಿಂದ ಎಂಟು ವಾರಗಳ ಅವಧಿ ಅತ್ಯಂತ ನಿರ್ಣಾಯಕವಾಗಿರುತ್ತದೆ. ಈ ಸಮಯದಲ್ಲಿ ಭ್ರೂಣದ ಅಂಗಾಂಗಗಳು ರೂಪುಗೊಳ್ಳುತ್ತಿರುತ್ತವೆ. ಹೀಗಾಗಿ, ವಿಕಾರಜನಕಗಳಿಂದ ಅವುಗಳ ಬೆಳವಣಿಗೆ ಕುಂಠಿತವಾಗುತ್ತದೆ. ಮುಖ್ಯವಾಗಿ, ನರಕೋಶಗಳ ತೊಂದರೆ ಸರ್ವೇಸಾಮಾನ್ಯ. ಇವು ಪ್ರಮುಖವಾಗಿ ಭ್ರೂಣದ ಡಿಎನ್ಎಯನ್ನು ನಾಶ ಮಾಡುತ್ತವೆ. ಜೀವಕೋಶಗಳ ಚಲನೆಗೆ ತೊಂದರೆ ಉಂಟುಮಾಡುತ್ತವೆ. ಗರ್ಭಪಾತದ ಸಾಧ್ಯತೆ ಹೆಚ್ಚಾಗಿರುತ್ತದೆ. ಭ್ರೂಣದ ಒಂಬತ್ತನೆಯ ವಾರವು ತುಂಬಾ ಸೂಕ್ಷ್ಮವಾಗಿದ್ದು, ವಿಕಾರಜನಕಗಳಿಂದ ಮೆದುಳಿಗೆ ಹಾನಿ, ದೈಹಿಕ ಬೆಳವಣಿಗೆಯಲ್ಲಿ ತೊಂದರೆ ಮತ್ತು ಒಳ ಅಂಗಾಂಗಗಳ ಕಾರ್ಯಕ್ಷಮತೆ ಕುಂಠಿತವಾಗುತ್ತದೆ.

ಗರ್ಭಿಣಿಯರ ಕೆಲವು ವ್ಯಸನಗಳಿಂದಾಗಿಯೂ ವಿಕಾರಜನಕಗಳು ದೇಹವನ್ನು ಸೇರುತ್ತವೆ. ಮದ್ಯಪಾನ ವ್ಯಸನಿಯು ತಾನು ಗರ್ಭವತಿ ಎಂದು ತಿಳಿಯುವ ವೇಳೆಗಾಗಲೇ ಸಾಕಷ್ಟು ದಿನ ಮದ್ಯಪಾನ ಮಾಡಿರುವುದರ ಪರಿಣಾಮವಾಗಿ ಭ್ರೂಣವು ಅನಾರೋಗ್ಯಕ್ಕೆ ತುತ್ತಾಗುತ್ತದೆ. ಇದರಿಂದಾಗಿ ಸಣ್ಣ ತಲೆಬುರುಡೆ, ಬುದ್ಧಿಮಾಂದ್ಯತೆ, ಮುಖದಲ್ಲಿ ಅವಲಕ್ಷಣ ಕಂಡುಬರುತ್ತದೆ. ಹಾಗೆಯೇ ಗರ್ಭಿಣಿಯರ ಧೂಮಪಾನದಿಂದಾಗಿ ಪ್ಲಾಸೆಂಟಾವು ಕುಗ್ಗುತ್ತದೆ. ಅದರಿಂದ ಭ್ರೂಣದ ತೂಕದಲ್ಲಿ ಗಣನೀಯ ಇಳಿಕೆ, ಅವಧಿಗೆ ಮೊದಲೇ ಹೆರಿಗೆ, ಮೆದುಳಿನ ಬೆಳವಣಿಗೆ ಕುಂಠಿತಗೊಳ್ಳುವುದರಿಂದ ಬುದ್ಧಿಮಾಂದ್ಯತೆ, ಆಟಿಸಂ, ಸಣ್ಣ ತಲೆಬುರುಡೆಯಂತಹ ಸಮಸ್ಯೆಗಳು ಸಾಮಾನ್ಯ. ಹೃದಯದ ತೊಂದರೆ, ಸೀಳುತುಟಿ, ಸಣ್ಣ ಕಣ್ಣು, ವಕ್ರಮುಖ ಸಹ ಕಾಣಿಸಿಕೊಳ್ಳಬಹುದು. ತಾಯಿಯ ಮಾದಕದ್ರವ್ಯ ವ್ಯಸನ, ಅಪೌಷ್ಟಿಕತೆಯೂ ಇಂತಹ ದುರಂತಗಳಿಗೆ ಕೊಡುಗೆ ನೀಡುತ್ತವೆ.

ಅಪಸ್ಮಾರ, ಮೈಗ್ರೇನ್ ಹಾಗೂ ಮಾನಸಿಕ ಕಾಯಿಲೆಗಳ ನಿಯಂತ್ರಣಕ್ಕೆ ನೀಡುವ ಕೆಲವು ಔಷಧಗಳು ವಿಕಾರಜನಕಗಳಾಗಿ ವರ್ತಿಸುವುದು ಸಂಶೋಧನೆಗಳಿಂದ ದೃಢಪಟ್ಟಿದೆ. ಅತಿ ಗಂಭೀರವಾದ ಮೊಡವೆ ಸಮಸ್ಯೆ ನಿವಾರಣೆಗೆ ನೀಡುವ ಔಷಧದಿಂದ ಸಹ ಗರ್ಭಿಣಿಯರಿಗೆ ಅಪಾಯ ತಪ್ಪಿದ್ದಲ್ಲ.

ಮಲೇರಿಯಾ ನಿಯಂತ್ರಣಕ್ಕೆ ನೀಡುವ ಔಷಧದ ವ್ಯತಿರಿಕ್ತ ಪರಿಣಾಮಗಳು ಮೊದಲ ಮೂರು ತಿಂಗಳ ಭ್ರೂಣದ ಮೇಲೆ ಅಧಿಕವಾಗಿರುತ್ತವೆ. ಆದರೆ ಎರಡು ಹಾಗೂ ಮೂರನೇ ತ್ರೈಮಾಸಿಕಗಳಲ್ಲಿ ಇದರ ಪರಿಣಾಮ ಕಡಿಮೆಯಿರುತ್ತದೆ. ಅವಧಿಗೆ ಮುನ್ನ ಉಂಟಾಗುವ ಹೆರಿಗೆಯನ್ನು ತಪ್ಪಿಸಲು ನೀಡಲಾಗುತ್ತಿದ್ದ ಔಷಧವೊಂದನ್ನು ನಂತರದ ದಿನಗಳಲ್ಲಿ ಅಮೆರಿಕ ತನ್ನ ಮಾರುಕಟ್ಟೆಯಲ್ಲಿ ನಿಷೇಧಿಸಿತು. ಗರ್ಭಿಣಿಯು ನರಸಂಬಂಧಿ ಕಾಯಿಲೆಯಾದ ಮಲ್ಟಿಪಲ್ ಸ್ಕ್ಲೆರೋಸಿಸ್‌ನಿಂದ ಬಳಲುತ್ತಿದ್ದರೆ ವೈದ್ಯರು ಆಕೆಯ ಗರ್ಭಾವಸ್ಥೆಯನ್ನೇ ಸಂಪೂರ್ಣವಾಗಿ ನಿಯಂತ್ರಿಸಬೇಕು. ಏಕೆಂದರೆ ಆ ಸಂದರ್ಭದಲ್ಲಿ ಆಕೆಗೆ ನೀಡುವ ಕೆಲವು ಔಷಧಗಳು ವಿಕಾರಜನಕಗಳಾಗಿರುವುದರಿಂದ ಭ್ರೂಣಕ್ಕೆ ಮಾರಕವಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಹಾಗೆಯೇ ಗರ್ಭಿಣಿಯು ಸಂಧಿವಾತದಿಂದ ಬಳಲುತ್ತಿದ್ದರೆ, ಪ್ರಥಮ ತ್ರೈಮಾಸಿಕ ಗರ್ಭಾವಸ್ಥೆಯಲ್ಲಿ ನೀಡಬಹುದಾದ ಸ್ಟಿರಾಯ್ಡ್ ಅನ್ನು ನಿಲ್ಲಿಸಿ, ಗರ್ಭಕ್ಕೆ ಯಾವುದೇ ತೊಂದರೆಯಾಗದಂತೆ ವೈದ್ಯರು ಎಚ್ಚರವಹಿಸಬೇಕಾಗುತ್ತದೆ.

ಈ ಎಲ್ಲಾ ಕಾರಣಗಳಿಂದ, ಗರ್ಭಾವಸ್ಥೆಯಲ್ಲಿ ಅನಗತ್ಯ ಔಷಧಗಳ ವರ್ಜ್ಯ ಅತ್ಯಗತ್ಯ. ಜೊತೆಗೆ, ತಾಯಿಯ ಉತ್ತಮ ಜೀವನಶೈಲಿ, ಆರೋಗ್ಯ ಹಾಗೂ ಆಹಾರ ಪದ್ಧತಿಯು ಆರೋಗ್ಯವಂತ ಮಗುವನ್ನು ಪಡೆಯಲು ಅತಿ ಅವಶ್ಯ. ಹಾಗಾಗಿಯೇ ನಮ್ಮ ಸಂಸ್ಕೃತಿಯಲ್ಲಿ ತಾಯಿಗೆ ದೇವರಸ್ಥಾನ ನೀಡಿ ಗೌರವಿಸುವುದು.

ಆರೋಗ್ಯವಂತ ಮಗುವಿನ ಜನನಕ್ಕೆ ಗರ್ಭಿಣಿಯ ಆರೋಗ್ಯ ಅತ್ಯಂತ ಮಹತ್ವದ್ದಾಗಿರುತ್ತದೆ. ಈ ಹಂತದಲ್ಲಿ ಯಾವುದೇ ಕಾರಣಕ್ಕೆ ಆಕೆ ಸೇವಿಸುವ ಅನಗತ್ಯ ಔಷಧ ಹಾಗೂ ಆಕೆಗೆ ಇರಬಹುದಾದ ಕೆಲವು ವ್ಯಸನಗಳು ಭ್ರೂಣಕ್ಕೆ ಮಾರಕವಾಗದಂತೆ ನೋಡಿಕೊಳ್ಳಬೇಕಾದುದು ಬಹಳ ಮುಖ್ಯ.

ಇರಲಿ ಮುನ್ನೆಚ್ಚರಿಕೆ

- ಗರ್ಭಿಣಿಯು ಕೆಲವು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವುದು ಅತ್ಯವಶ್ಯ.
- ಧೂಮಪಾನ, ಮದ್ಯಪಾನ ವರ್ಜನೆ
- ವಿಷಕಾರಿ ಲೋಹಗಳ ಸಂಪರ್ಕ ತಪ್ಪಿಸುವುದು
- ವೈದ್ಯರ ಸಲಹೆಯಿಲ್ಲದೆ ಯಾವ ಔಷಧವನ್ನೂ ತೆಗೆದುಕೊಳ್ಳದಿರುವುದು
- ಕಾಲಕಾಲಕ್ಕೆ ಸೋಂಕಿನ ಪರೀಕ್ಷೆಗೆ ಒಳಪಡುವುದು

ಏನಿದು ವಿಕಾರಜನಕ?

ಭ್ರೂಣದ ವಿರೂಪಕ್ಕೆ ಕಾರಣವಾಗುವ ವಿಕಾರಜನಕಗಳನ್ನು ಮುಖ್ಯವಾಗಿ ಮೂರು ವಿಧಗಳಾಗಿ ವಿಂಗಡಿಸಲಾಗಿದೆ. ಅವು: ಜೈವಿಕ, ಭೌತಿಕ, ರಾಸಾಯನಿಕ ವಿಕಾರಜನಕಗಳು. ಇವು ತಾಯಿಯಲ್ಲಿ ಆರೋಗ್ಯದ ಸಮಸ್ಯೆಗಳಿಗೆ ಕಾರಣವಾಗುತ್ತವೆ.

ಜೈವಿಕ ವಿಕಾರಜನಕ: ಗರ್ಭಾವಸ್ಥೆಯಲ್ಲಿ ಉಂಟಾಗುವ ವೈರಾಣುವಿನ ಸೋಂಕುಗಳಾದ ರುಬೆಲ್ಲಾ, ಹರ್ಪಿಸ್‌ಸಿಂಪ್ಲೆಕ್ಸ್ ಮತ್ತು ಸೈಟೊಮೆಗಲೊ ವೈರಾಣು, ಸ್ಪೈರೊಕೀಟದ ಸೋಂಕಾದ ಸಿಫಿಲೀಸ್, ಏಕಕೋಶ ಜೀವಿಯಿಂದ ಉಂಟಾಗುವ ಟಾಕ್ಸೊಪ್ಲಾಸ್ಮೋಸಿಸ್‌ನಂತಹವು ಭ್ರೂಣದ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ. ಟಾಕ್ಸೊಪ್ಲಾಸ್ಮೋಸಿಸ್ ಮುಖ್ಯವಾಗಿ ಬೆಕ್ಕುಗಳ ಮಲದಿಂದ ಹರಡುವುದರಿಂದ ಗರ್ಭಿಣಿಯರು ಬೆಕ್ಕಿನ ಮಲಮೂತ್ರಗಳಿಂದ ದೂರವಿರುವುದು ಒಳ್ಳೆಯದು.

ಭೌತಿಕ ವಿಕಾರಜನಕ: ಇವುಗಳಲ್ಲಿ ಮುಖ್ಯವಾದದ್ದು ವಿಕಿರಣಗಳು, ಕ್ಷ-ಕಿರಣಗಳು, ಅತಿಯಾದ ಉಷ್ಣತೆ... ಇತ್ತೀಚಿನ ಸಂಶೋಧನೆಯ ಪ್ರಕಾರ, ಗರ್ಭಿಣಿಯರು ಎಕ್ಸ್‌ರೇಯಂತಹ ವಿಕಿರಣಗಳಿಗೆ ಮೈಯೊಡ್ಡಿದರೆ ಹುಟ್ಟುವ ಮಕ್ಕಳಿಗೆ ತೊಂದರೆ ತಪ್ಪಿದ್ದಲ್ಲ. ಇದು ವಿಕಿರಣದ ವಿಧ, ಪ್ರಮಾಣ ಮತ್ತು ಅವಧಿಯ ಮೇಲೆ ಅವಲಂಬಿತವಾಗಿರುತ್ತದೆ.

ರಾಸಾಯನಿಕ ವಿಕಾರಜನಕ: ವೈಜ್ಞಾನಿಕ ತಿಳಿವಳಿಕೆಯಿಂದಾಗಿ ಇತ್ತೀಚಿನ ದಿನಗಳಲ್ಲಿ ಗರ್ಭಿಣಿಯರಿಗೆ ಔಷಧ ನೀಡುವ ಮುನ್ನ ವೈದ್ಯರು ಹಲವಾರು ಬಾರಿ ಚಿಂತನೆ ನಡೆಸುತ್ತಾರೆ. ಅವರು ನೀಡುವ ಔಷಧವು ಭ್ರೂಣಕ್ಕೆ ಹಾನಿಯನ್ನುಂಟು ಮಾಡಬಹುದಾದ್ದರಿಂದ, ಆದಷ್ಟೂ ಔಷಧಗಳ ಅವಶ್ಯಕತೆ ಬರದಂತೆ ಸಂಬಾಳಿಸುತ್ತಾರೆ.

ಮಳೆಗಾಲದ ಉಡುಪು ಹೀಗಿರಲಿ

ಮಳೆಗಾಲದಲ್ಲಿ ಉಡುಪುಗಳನ್ನು ಆಯ್ಕೆ ಮಾಡುವಾಗ ಆರಾಮದಾಯಕ ಹಾಗೂ ಒದ್ದೆಯಾದರೂ ಬೇಗ ಒಣಗುವ ಬಟ್ಟೆಗಳಿಗೆ ಆದ್ಯತೆ ನೀಡುವುದು ಒಳ್ಳೆಯದು. ಮಳೆಗಾಲದ ಟ್ರೆಂಡ್‌ಗೆ ತಕ್ಕಂತೆ ಮೊಣಕಾಲಿನವರೆಗೆ ಬರುವ ಸ್ಕರ್ಟ್‌ಗಳು, ಪಾದದ ಗಂಟಿನವರೆಗೆ ಬರುವ ಪ್ಯಾಂಟ್‌ಗಳು, ಹಗುರವಾದ ಟಾಪ್‌ಗಳನ್ನು ತೊಡಬಹುದು.

ರೆಯಾನ್ ಮತ್ತು ಮೊಡಲ್ ಮಾದರಿಯ ಬಟ್ಟೆಗಳು ತೇವಾಂಶವನ್ನು ಬಹುಬೇಗ ಹೀರಿಕೊಳ್ಳುತ್ತವೆ. ಅಲ್ಲದೆ ಈ ಬಟ್ಟೆಗಳು ಬೇಗ ಒಣಗುವುದರಿಂದ ತೇವಯುಕ್ತ ವಾತಾವರಣಕ್ಕೆ ಪೂರಕವಾಗಿರುತ್ತವೆ. ನೈಲಾನ್ ಮತ್ತು ಪಾಲಿಯಿಸ್ಟರ್ ಮಾದರಿಯ ಟಾಪ್‌ಗಳಿಗೆ ಹೆಚ್ಚು ಆದ್ಯತೆ ನೀಡಿ. ಇವುಗಳಿಗೆ ನೀರನ್ನು ಹೆಚ್ಚು ಹೀರಿಕೊಳ್ಳದ ಗುಣ ಇರುವುದರಿಂದ ಮಳೆಗಾಲಕ್ಕೆ ಹೊಂದಿಕೆಯಾಗುತ್ತವೆ. ಕ್ರೇಪ್ ಮತ್ತು ಜಾರ್ಜೆಟ್ ಬಟ್ಟೆಗಳಿದ್ದರೆ ತೇವವಿದ್ದಾಗಲೂ ಮೈಗೆ ಅಂಟಿಕೊಳ್ಳುವ ಸಾಧ್ಯತೆ ಕಡಿಮೆ ಇರುತ್ತದೆ.

ಮೊಣಕಾಲಿನವರೆಗೆ ಇರುವ ಶಾರ್ಟ್ಸ್, ಸ್ಕರ್ಟ್‌ಗಳು, ಕ್ರಾಪ್ಡ್ ವೈಡ್-ಲೆಗ್ ಪ್ಯಾಂಟ್‌ಗಳು ಅತಿಯಾದ ಮಳೆಯಿಂದ ಬಟ್ಟೆ ಒದ್ದೆಯಾಗುವುದನ್ನು ತಪ್ಪಿಸುತ್ತವೆ. ದೊಗಲೆ ಪ್ಯಾಂಟ್‌ಗಳನ್ನು ಧರಿಸುವ ಬದಲು ಫಿಟ್ ಪ್ಯಾಂಟ್‌ಗಳೊಂದಿಗೆ ಕುರ್ತಾ ಧರಿಸಿಯೂ ಸಾಂಪ್ರದಾಯಿಕ ಲುಕ್‌ನಲ್ಲಿ ಕಾಣಿಸಿಕೊಳ್ಳಬಹುದು. ಒಂದೇ ಬಣ್ಣದ ಕೋ- ಆರ್ಡ್ ಸೆಟ್‌ಗಳು ಹತ್ತಿಬಟ್ಟೆಯವಾಗಿದ್ದರೆ ಉತ್ತಮ. ಇವು ಹಗುರವಾಗಿ ಇರುತ್ತವಲ್ಲದೆ ಸ್ಟೈಲಿಷ್ ಆಗಿಯೂ ಕಾಣುತ್ತವೆ.

ಸಿಂಥೆಟಿಕ್ ಅಥವಾ ಕಾಟನ್ ಮಿಶ್ರಿತ ಬಟ್ಟೆಗಳಿಂದ ತಯಾರಿಸಿದ ಸ್ಲಿಮ್‌ಫಿಟ್ ಕ್ಯಾಪ್ರಿಗಳು ಅಥವಾ ಕ್ರಾಪ್ಡ್ ಟ್ರೌಶರ್ ಮಳೆಗಾಲದ ಕೆಸರಿನಿಂದ ರಕ್ಷಿಸುತ್ತವೆ. ಜೀನ್ಸ್‌ನಂಥ ಭಾರವಾದ ಬಟ್ಟೆಗಳು ಒಣಗಲು ಹೆಚ್ಚು ಸಮಯ ತೆಗೆದುಕೊಳ್ಳುವುದರಿಂದ ಅವುಗಳನ್ನು ತೊಡದೇ ಇರುವುದು ಒಳಿತು. ಮ್ಯಾಕ್ಸಿ ಡ್ರೆಸ್‌ಗಳನ್ನು ಆದಷ್ಟೂ ದೂರವಿಡಿ. ಇವು ಮಳೆನೀರಿಗೆ ತೊಯ್ದು ಹೋಗುತ್ತವೆ.

ಸಾಧ್ಯವಾದಷ್ಟೂ ಬಿಳಿ ಮತ್ತು ಪೇಸ್ಟಲ್ ಬಣ್ಣದ ಬಟ್ಟೆಗಳನ್ನು ತೊಡಬೇಡಿ. ಹಠಾತ್ ಮಳೆ ಬಂದಾಗ ಇಂಥ ಬಟ್ಟೆಗಳು ತೊಯ್ದು ಪಾರದರ್ಶಕವಾಗಿ ಕಾಣುತ್ತವೆ. ಇನ್ನು ಸೀರೆ ಉಡುವವರಾದರೆ ಮಲ್‌ಮಲ್, ಶಿಫಾನ್, ಜಾರ್ಜೆಟ್ ಮಾದರಿಯ ಸೀರೆಗಳನ್ನು ಆಯ್ಕೆ ಮಾಡಿಕೊಳ್ಳುವುದು ಉತ್ತಮ.

ಓ ಗೆಳತಿ



ಹದಿವಯಸ್ಸಿನ ಮಕ್ಕಳನ್ನು ಹೊಡೆದು ಬಡಿದು ಅಥವಾ ಯಾವಾಗಲೂ ಬೈಯುತ್ತಾ ಸರಿದಾರಿಗೆ ತರುತ್ತೇನೆ ಎಂದುಕೊಳ್ಳುವುದು ತಪ್ಪು. ಅದರಿಂದ ಏನೂ ಪ್ರಯೋಜನವಾಗದು. ಕ್ರಾಂತಿಕಾರಿಗಳಂತೆ ಆಡುವ ಮಕ್ಕಳೊಂದಿಗೆ ಸದಾ ಸಿಡಿಮಿಡಿಗುಟ್ಟುತ್ತಾ ಇರುವುದಕ್ಕಿಂತ, ಒಬ್ಬ ಆಪ್ತಸಮಾಲೋಚಕರಂತೆ ಅವರೊಂದಿಗೆ ನಡೆದುಕೊಳ್ಳಬೇಕು. ಹೀಗೆ, ನಿಧಾನವಾಗಿ ಅವರನ್ನು ಒಲಿಸಿಕೊಂಡು, ಸ್ವಾತಂತ್ರ್ಯ ಹಾಗೂ ಸ್ವೇಚ್ಛಾಚಾರದ ಮಿತಿಯನ್ನು ಮನಮುಟ್ಟುವಂತೆ ತಿಳಿಸಿ ಹೇಳಿ, ಅವರು ಹಾದಿ ತಪ್ಪದಂತೆ ಎಚ್ಚರವಹಿಸಬೇಕು.

ಅಮ್ಮ ಹೇಳ್ತಾಳೆ

ಅಕ್ಕಿಹಿಟ್ಟು, ರಾಗಿಹಿಟ್ಟು ಸೇರಿದಂತೆ ಯಾವುದೇ ಹಿಟ್ಟು ಮನೆಯಲ್ಲಿ ಹೆಚ್ಚಾಗಿ ಇದ್ದು, ಅದು ಗೂಡು ಕಟ್ಟಿ ಹಾಳಾಗಿಬಿಡುತ್ತದೆ ಎಂಬ ಆತಂಕ ಕಾಡುತ್ತಿದೆಯೇ? ಹಾಗಿದ್ದರೆ ಆ ಹಿಟ್ಟಿನೊಳಗೆ ಕಲ್ಲುಪ್ಪನ್ನು ಸೇರಿಸಿ, ಚೆನ್ನಾಗಿ ಮಿಶ್ರ ಮಾಡಿ ಇಡು. ಇದರಿಂದ ಹಿಟ್ಟು ಬಹಳ ದಿನಗಳವರೆಗೆ ಹಾಳಾಗುವುದಿಲ್ಲ. ಬಳಸುವಾಗ ಹಿಟ್ಟನ್ನು ಜರಡಿ ಆಡಿಕೊಂಡು ಉಪ್ಪನ್ನು ತೆಗೆ.

ಕಳಲೆ ರುಚಿಯ ಗುಟ್ಟು ಹೇಳಲೆ?

• ಅಮೃತಾ ಹವಳದ್ ಎಚ್.

ರಸಾಸ್ವಾದ

ಬಿಸಿಲಿನ ಧಗೆಯಿಂದ ಮಣ್ಣಲ್ಲಿ ಮುರುಟಿದ್ದ ಸಕಲ ಜೀವರಾಶಿಗಳಿಗೂ ಸೋನೆ ಮಳೆಯಲ್ಲಿ ಕಣ್ಣುಬಿಡುವ ತವಕ. ಪ್ರಕೃತಿಯು ಋತು ಬದಲಿಸುವಾಗ ಮಲೆನಾಡು, ಕರಾವಳಿ ಬೆಟ್ಟಗುಡ್ಡಗಳ ಅಂಚಿನಲ್ಲಿ ಜೀವ ಪಡೆಯುವ 'ಕಳಲೆ'ಯು ಅಡುಗೆ ಮನೆಯಲ್ಲಿ ತರಹೇವಾರಿ ಖಾದ್ಯವಾಗಿ ಜೀವ ತಣಿಸುತ್ತದೆ. ಬಿದಿರಿನ ಹಿಂಡಿನಿಂದ ಒಡಮೂಡುವ ಎಳೆ ಸಸ್ಯವಾದ ಕಳಲೆಯಿಂದ ತಯಾರಾದ ಖಾದ್ಯಗಳು ನಾಲಗೆಯ ರುಚಿಮೊಗ್ಗುಗಳು ಅರಳುವಂತೆ ಮಾಡುತ್ತವೆ. ಸಸ್ಯಾಹಾರಿಗಳು ಪಲ್ಯ, ಕಡುಬು, ವಡೆ, ಇಡ್ಲಿ, ಉಪ್ಪಿನಕಾಯಿ, ಸಾರು, ಫ್ರೈ, ಕೋಸಂಬರಿ ಹೀಗೆ ತರಹೇವಾರಿ ಖಾದ್ಯಗಳನ್ನು ತಯಾರಿಸಿದರೆ, ಮಾಂಸಾಹಾರಿಗಳು ಹಸಿ ಮತ್ತು ಒಣ ಸಿಗಡಿ, ಒಣಗಿಸಿದ ಚಿಪ್ಪೆಕಲ್ಲಿನ ಮಾಂಸ, ಚಿಕ್ಕ ಚಿಕ್ಕ ಒಣಮೀನುಗಳೊಂದಿಗೆ ಕಳಲೆಯನ್ನು ಬಳಸಿ ಖಾದ್ಯ ತಯಾರಿಸಿ ಚಪ್ಪರಿಸುತ್ತಾರೆ. ಚಿಕನ್ ಕರಿ, ಚಿಕನ್ ಡ್ರೈ ಕರಿಗೂ ಕಳಲೆಯಿದ್ದರೆ ರುಚಿ ಹೆಚ್ಚು.

ಅಕ್ಕಿರೊಟ್ಟಿ– ಕಳಲೆ ಪಲ್ಯ ಮಲೆನಾಡಿನ ಸಾಂಪ್ರದಾಯಿಕ, ರುಚಿಕರ ಖಾದ್ಯಗಳಲ್ಲೊಂದು. ಒಂದರಿಂದ ಒಂದೂವರೆ ಅಡಿಯ ಬಿದಿರಿನ ಮೊಳಕೆಯು ಖಾದ್ಯ ತಯಾರಿಗೆ ಸೂಕ್ತ. ಅದು ತುಸು ಬಲಿತರೂ ಖಾದ್ಯ ತಯಾರಿಸಲು ಬರುವುದಿಲ್ಲ. ಮಳೆಗಾಲದಲ್ಲಿ ಮಾತ್ರವೇ ಸಿಗುವ ಈ ಕಳಲೆಯನ್ನು ಸಂಸ್ಕರಿಸಿ ಎಲ್ಲ ಕಾಲದಲ್ಲೂ ಬಳಸುವಂತೆ ಮಾಡಲು ಹಲವು ಪ್ರಯೋಗಗಳು ನಡೆದಿವೆ. ಅಂತೆಯೇ ಉಪ್ಪುನೀರಿನಲ್ಲಿ ಸಂಗ್ರಹಿಸಿ ಇಟ್ಟರೆ ಹಲವು ತಿಂಗಳವರೆಗೆ ಕಳಲೆಯನ್ನು ಬಳಸಬಹುದು. ಕಳಲೆಯನ್ನು ಅಡುಗೆಯಲ್ಲಿ ಬಳಸಲು ಅನುಭವ ಬೇಕು. ಕಳಲೆಯ ಹಲವು ಸುತ್ತು ಸಿಪ್ಪೆ ತೆಗೆದ ಬಳಿಕ ಎಳೆಯ ಮೊಳಕೆಯಂತಹ ಬಿದಿರಿನಿಂದ ಖಾದ್ಯ ತಯಾರಿಸಬಹುದು. ಕಳಲೆಯನ್ನು ಅಡುಗೆಗೆ ಬಳಸುವ ಮುನ್ನ ಕನಿಷ್ಠ 2ರಿಂದ 3 ದಿನ ನೀರಿನಲ್ಲಿ ನೆನೆಸಿಟ್ಟು, ಪ್ರತಿದಿನ ಆ ನೀರನ್ನು ಬದಲಾಯಿಸಬೇಕು. ಇಲ್ಲದಿದ್ದರೆ ಅದರಲ್ಲಿರುವ ನೈಸರ್ಗಿಕ ಕಹಿ ಮತ್ತು ವಿಷದ ಅಂಶ ಹೋಗುವುದಿಲ್ಲ. ಇನ್ನು ಕೆಲವರು ಬಿಸಿನೀರಿನಲ್ಲಿ ಕಳಲೆಯನ್ನು ಕುದಿಸಿ, ಆ ನೀರನ್ನು ಹೊರಚೆಲ್ಲಿ ಕಳಲೆಯನ್ನು ಬಳಸುತ್ತಾರೆ. ಹೀಗೆ ಚೆಲ್ಲಿದ ನೀರನ್ನು ಹಸು–ಕರುಗಳೂ ಕುಡಿಯದಂತೆ ನಮ್ಮ ಹಿರಿಯರು ನೋಡಿಕೊಳ್ಳುತ್ತಿದ್ದರು.

ಕಳಲೆಗೆ ವಿವಿಧ ಭಾಗಗಳಲ್ಲಿ ಬಗೆಬಗೆಯ ನಾಮಾವಳಿಗಳಿವೆ. ಕಳ್ಳುಳ್ಳೆ, ಕಳಿಲೆ, ಕಣಿಲೆ, ಕಳುಲಿ ಹೀಗೆ... ಇನ್ನು ಬಿದಿರಿನ ಚಿಗುರಲ್ಲಿ ಸಾಕಷ್ಟು ಪ್ರೋಟೀನ್, ಕಾರ್ಬೋಹೈಡ್ರೇಟ್, ನಾರಿನಾಂಶ, ಖನಿಜಾಂಶ ಹೇರಳವಾಗಿವೆ. ಈ ಕಾರಣದಿಂದಲೋ ಏನೋ ನಮ್ಮ ಅಜ್ಜಿ ವರ್ಷಕ್ಕೊಮ್ಮೆಯಾದರೂ ಕಳಲೆ ತಿನ್ನಬೇಕು ಎನ್ನುತ್ತಿದ್ದರು. ಇದರಲ್ಲಿ ಸಕ್ಕರೆ ಅಂಶ ಕಡಿಮೆ ಇರುವುದರಿಂದ ಮಧುಮೇಹಿಗಳಿಗೆ ಉತ್ತಮ ಆಹಾರ. ಕಳಲೆ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವುದರ ಜತೆಗೆ ವೈರಸ್, ಬ್ಯಾಕ್ಟೀರಿಯಾ ಹಾಗೂ ಸೋಂಕುಗಳು ತಗುಲದಂತೆ ಆರೋಗ್ಯವನ್ನು ಕಾಪಿಡುತ್ತದೆ. ಕ್ಯಾನ್ಸರ್ ತಡೆಯುವ ಗುಣ ಇದರಲ್ಲಿದ್ದು, ಹೃದಯಸಂಬಂಧಿ ಕಾಯಿಲೆಗಳಿಗೂ ರಾಮಬಾಣವಿದ್ದಂತೆ ಎನ್ನಲಾಗುತ್ತದೆ. ಇಷ್ಟೆಲ್ಲ ಗುಣಗಳನ್ನು ಅಡಗಿಸಿಟ್ಟುಕೊಂಡಿರುವ ಕಳಲೆಯ ಸ್ವಾದದ ವಿವಿಧ ಖಾದ್ಯಗಳು ಇಲ್ಲಿವೆ:

ನಿರೂಪಣೆ: ಸುನಾದ

ರುಚಿರುಚಿ ಕಡುಬು

ಅಕ್ಕಿನುಚ್ಚು 2 ಪಾವು, ಉದ್ದಿನಬೇಳೆ 2 ಲೋಟ (2 ಗಂಟೆ ಮುನ್ನ ನೆನೆಸಿಟ್ಟಿರಬೇಕು), ಅನ್ನ ಎರಡು ಲೋಟ(ಹಿಂದಿನ ದಿನ ಉಳಿದ ಅನ್ನವಾದರೂ ಆದೀತು), ಕಡ್ಲೆ ಬೇಳೆ ಅಥವಾ ಕಡ್ಲೆ ಕಾಳು ಸ್ವಲ್ಪ, ಕಳಲೆ 2 ತುಂಡು, ಉಪ್ಪು ರುಚಿಗೆ, ಬಾಳೆ ಎಲೆ.

ಹೀಗೆ ಮಾಡಿ: ಅಕ್ಕಿಯನ್ನು ತೊಳೆದು ನೆರಳಲ್ಲಿ ಒಣಗಿಸಿ ರವೆಯ ಹದಕ್ಕೆ ಮಿಕ್ಸಿ ಮಾಡಬೇಕು. ನೆನೆಸಿದ ಉದ್ದಿನಬೇಳೆ ಹಾಗೂ ಅನ್ನವನ್ನು ಪ್ರತ್ಯೇಕವಾಗಿ ಸಣ್ಣಗೆ ರುಬ್ಬಿ. ಕಳಲೆಯನ್ನು ಸಣ್ಣಗೆ ಹೆಚ್ಚಿ ರುಬ್ಬಿ ರಸವನ್ನು ಹಿಂಡಿ ಚೆಲ್ಲಿ, ಗಟ್ಟಿಯಾದುದನ್ನು ಅಕ್ಕಿ ರವೆಗೆ ಸೇರಿಸಿ. ಅದಕ್ಕೆ ರುಬ್ಬಿದ ಉದ್ದಿನಬೇಳೆ ಹಿಟ್ಟು ಹಾಗೂ ಅನ್ನವನ್ನು ಸೇರಿಸಿ ಗಟ್ಟಿಯಾಗಿ ಕಲೆಸಿ ರಾತ್ರಿ ಪೂರ ಹಾಗೇ ಇಡಿ. 5–6 ಗಂಟೆ ಬಿಟ್ಟರೂ ಸಾಕು. ನಂತರ ಬಾಳೆ ಎಲೆಯಲ್ಲಿ ಸ್ವಲ್ಪ ಸ್ವಲ್ಪ ಹಿಟ್ಟು ಹಾಕಿ, ದಾರದ ಸಹಾಯದಿಂದ ಪೊಟ್ಟಣದ ರೀತಿ ಕಟ್ಟಿ ಹಬೆಯಲ್ಲಿ ಬೇಯಿಸಿ. ಕೊಬ್ಬರಿ ಚಟ್ನಿಯೊಂದಿಗೆ ಕಳಲೆ ಕಡುಬು ಸವಿಯಿರಿ. ರಾತ್ರಿ ಕಲೆಸಿಟ್ಟ ಹಿಟ್ಟಿಗೆ ಕಡಲೆಬೇಳೆ ಅಥವಾ ಕಡಲೆಕಾಳು ಹಾಕಿಟ್ಟರೆ ರುಚಿ ಹೆಚ್ಚು.

ಉದ್ದಿನವಡೆ ಅಲ್ಲ!

ಉದ್ದಿನಬೇಳೆ 2 ಕಪ್, ಕಡಲೆ ಬೇಳೆ 4 ಟೀ ಚಮಚ, ಹಸಿಮೆಣಸಿನ ಕಾಯಿ 4 ಸಣ್ಣಗೆ ಹೆಚ್ಚಿದ್ದು (ಖಾರ ನೋಡಿಕೊಂಡು ಬಳಸಿ), ಮೆಣಸಿನ ಕಾಳು ಕಾಲು ಚಮಚ, ಕಾಯಿತುರಿ 3 ಚಮಚ, ಕೊತ್ತಂಬರಿ ಕಾಳು ಹಾಗೂ ಜೀರಿಗೆ ಅರ್ಧ ಚಮಚ (ಬೇಕಿದ್ದರೆ ಬಳಸಬಹುದು ಹಾಗೆಯೂ ಮಾಡಬಹುದು), ರುಚಿಗೆ ಉಪ್ಪು, ಕಳಲೆ 2 ತುಂಡು, ಸ್ವಲ್ಪ ಶುಂಠಿ.

ಹೀಗೆ ಮಾಡಿ: ಕಡಲೆಬೇಳೆ ಹಾಗೂ ಉದ್ದಿನಬೇಳೆಯನ್ನು 4 ಗಂಟೆ ನೀರಿನಲ್ಲಿ ನೆನೆಸಿ ರುಬ್ಬಿಕೊಳ್ಳಬೇಕು. ಬಳಿಕ ಕಳಲೆಯನ್ನು ಸಣ್ಣಗೆ ಹೆಚ್ಚಿ ರುಬ್ಬಿಕೊಳ್ಳಬೇಕು. ಅದರ ರಸವನ್ನು ಹಿಂಡಿ ಚೆಲ್ಲಬೇಕು. ನಂತರ ಒಂದು ಪಾತ್ರೆಯಲ್ಲಿ ರುಬ್ಬಿದ ಉದ್ದಿನಬೇಳೆ ಹಿಟ್ಟಿಗೆ ರುಬ್ಬಿದ ಕಳಲೆ ತರಿ, ಕಾಯಿತುರಿ , ಹಸಿಮೆಣಸಿನ ಕಾಯಿ, ಶುಂಠಿ, ಮೆಣಸಿನ ಕಾಳು, ಉಪ್ಪು ಹಾಕಿ ಚೆನ್ನಾಗಿ ಮಿಶ್ರ ಮಾಡಬೇಕು. ಬಳಿಕ ಅದನ್ನು ಉದ್ದಿನವಡೆ ಆಕಾರದಲ್ಲಿ ಎಣ್ಣೆಯಲ್ಲಿ ಕರಿಯಬೇಕು. ತೆಳು ಕೊಬ್ಬರಿ ಚಟ್ನಿ ಜೊತೆಗೆ ಕಳಲೆ ವಡೆ ಸವಿಯಬಹುದು (ಉದ್ದಿನವಡೆ ಮಾಡುವ ರೀತಿಯಲ್ಲೇ ಮಾಡಿ ಕಳಲೆಯನ್ನು ರುಬ್ಬಿ ಸೇರಿಸಿದರೂ ಆದೀತು)

ಹಮ್... ಉಪ್ಪಿನಕಾಯಿ

ಕಳಲೆ 2 ತುಂಡು, ಉಪ್ಪು, ಸಕ್ಕರೆ ರುಚಿಗೆ, ಸಾಸಿವೆ 3 ಚಮಚ, ಖಾರದಪುಡಿ 5 ಚಮಚ, ನಿಂಬೆಹಣ್ಣು 3ರಿಂದ 4, ಅರಸಿನ ಸ್ವಲ್ಪ, ಬೆಳ್ಳುಳ್ಳಿ–2 ಗೆಡ್ಡೆ.

ಹೀಗೆ ಮಾಡಿ: ಕಳಲೆಯನ್ನು ಉಪ್ಪಿನಕಾಯಿ ತುಂಡುಗಳ ಅಳತೆಯಲ್ಲಿ ಹೆಚ್ಚಿ. ಉಪ್ಪು, ಸಕ್ಕರೆ, ಖಾರದಪುಡಿ, ಅರಸಿನ, ಸಾಸಿವೆ ಪುಡಿ, ಬೆಳ್ಳುಳ್ಳಿಯನ್ನು ಕಳಲೆ ತುಂಡುಗಳೊಂದಿಗೆ ಹಾಕಿ ಕಲೆಸಿ. ಬಳಿಕ ನಿಂಬೆಹಣ್ಣಿನ ರಸ ಹಿಂಡಿ, ಹೋಳುಗಳನ್ನು ಹಾಕಿ, ಚೆನ್ನಾಗಿ ಮಿಶ್ರ ಮಾಡಿ ಡಬ್ಬಿಯಲ್ಲಿ ಹಾಕಿಡಿ. 2 ದಿನಗಳ ಬಳಿಕ ಕಳಲೆ ಉಪ್ಪಿನಕಾಯಿ ಸವಿಯಲು ಸಿದ್ಧ. ಬೇಕಾದರೆ ಖಾರದಪುಡಿ ಜಾಗದಲ್ಲಿ ಹಸಿಮೆಣಸಿನಕಾಯಿ ರುಬ್ಬಿ ಹಾಕಿ ಬಳಸಬಹುದು. ಇದು ಭಿನ್ನ ರುಚಿ ನೀಡುತ್ತದೆ.

ನಾಕೌಟ್‌ಗೆ ಲಗ್ಗೆಯಿಟ್ಟ ಮೆಕ್ಸಿಕೊ

ಕೊರಿಯಾ ತಂಡದ ರಕ್ಷಣಾ ಲೋಪದ ಲಾಭ ಪಡೆದ ಆತಿಥೇಯ ತಂಡ

ಗೋಲು ಗಳಿಸಿದ ಸಂಭ್ರಮದಲ್ಲಿ ಮೆಕ್ಸಿಕೊ ತಂಡದ ಲೂಯಿಸ್ ರೊಮೊ (ಎಡ) ಎಎಫ್‌ಪಿ ಚಿತ್ರ

ವದಲ್ಲಹಾರ (ಮೆಕ್ಸಿಕೊ), (ಎಪಿ): ದಕ್ಷಿಣ ಕೊರಿಯಾ ತಂಡದ ರಕ್ಷಣೆಯಲ್ಲಿ ಆದ ಲೋಪದ ಲಾಭ ಎತ್ತಿದ ಮೆಕ್ಸಿಕೊ ತಂಡ ಗುರುವಾರ 1–0 ಗೋಲಿನಿಂದ ಜಯಗಳಿಸಿ, ಫಿಫಾ ವಿಶ್ವಕಪ್ ಟೂರ್ನಿಯ ನಾಕೌಟ್ ತಲುಪಿದ ಮೊದಲ ತಂಡ ಎನಿಸಿತು.

2022ರಲ್ಲಿ ಗುಂಪು ಹಂತದಲ್ಲೇ ಹೊರಬಿದ್ದಿದ್ದ ಮೆಕ್ಸಿಕೊ ತಂಡ ಈ ಬಾರಿ ತವರು ನೆಲದಲ್ಲಿ ಪ್ರೇಕ್ಷಕರ ಹರ್ಷೋದ್ಗಾರಗಳ ನಡುವೆ ಆಡಿದ ಎರಡೂ ಪಂದ್ಯಗಳನ್ನು ಗೆದ್ದುಕೊಂಡಿದೆ. ಅಕ್ರನ್ ಕ್ರೀಡಾಂಗಣದಲ್ಲಿ ಗೆದ್ದ ನಂತರ ಕ್ರೀಡಾಂಗಣದ ಮಧ್ಯದಲ್ಲಿ ಸೇರಿದ ಆಟಗಾರರು ಕಿಕ್ಕಿರಿದು ನೆರೆದಿದ್ದ ಅಭಿಮಾನಿಗಳತ್ತ ಕೈಬೀಸಿ ಸಂಭ್ರಮಿಸಿದರು.

ಲೂಯಿಸ್ ರೊಮೊ ಅವರು 50ನೇ ನಿಮಿಷ ನಿರ್ಣಾಯಕ ಗೋಲು ಗಳಿಸಿದರು. ದಕ್ಷಿಣ ಕೊರಿಯಾದ ಗೋಲ್‌ಕೀಪರ್ ಕಿಮ್ ಸಿಯುಂಗ್‌ಗ್ಯು ಅವರು ಕ್ರಾಸ್ ಒಂದರಲ್ಲಿ ಬಾಕ್ಸ್‌ನ ಮುಂದೆ ಎತ್ತರಕ್ಕೆ ಚಿಮ್ಮಿದ ಚೆಂಡನ್ನು ತಡೆಯುವ ಭರದಲ್ಲಿ ತಮ್ಮದೇ ತಂಡದ ರಕ್ಷಣೆ ಆಟಗಾರನಿಗೆ ಡಿಕ್ಕಿಹೊಡೆದರು. ನಿಯಂತ್ರಣ ತಪ್ಪಿ ಅವರ ಕೈಯಿಂದ ಜಾರಿದ ಚೆಂಡನ್ನು ರೊಮೊ ತಕ್ಷಣ ಗೋಲಿನೊಳಕ್ಕೆ ಒದ್ದರು. ಅವರಿಗೆ ಯಾವ ತಡೆಯೂ ಇರಲಿಲ್ಲ.

ದಕ್ಷಿಣ ಕೊರಿಯಾಕ್ಕೆ 87ನೇ ನಿಮಿಷ ಸ್ಕೋರ್ ಸಮ ಮಾಡುವ ಉತ್ತಮ ಅವಕಾಶವಿತ್ತು. ಚೊ ಗ್ಯು-ಸುಂಗ್ ಅವರು ಗೋಲಿನ ಸಮೀಪದಿಂದ ಹೆಡ್ ಮಾಡಿದ ಚೆಂಡನ್ನು ಮೆಕ್ಸಿಕೊ ಗೋಲ್‌ಕೀಪರ್ ರಾವುಲ್ ರಂಜೆಲ್ ತಡೆದರು. ಕೆಲವೇ ಕ್ಷಣದ ನಂತರ ಯಾಂಗ್ ಹ್ಯುನ್-ಜುನ್ ಅವರು ರಿಬೌಂಡ್ ಆದ ಚೆಂಡನ್ನು ಗೋಲಿನೊಳಕ್ಕೆ ತಳ್ಳಲು ಯತ್ನಿಸಿದಾಗ ರಂಜೆಲ್ ಹಿಂದಿನದ್ದಕ್ಕಿಂತ ಅಮೋಘವಾಗಿ ತಡೆದರು. ತಮ್ಮ ಬಲಗೈಯನ್ನು ಚಾಚಿ ಚೆಂಡು ಗೋಲುಗೆರೆಯೊಳಗೆ ಪ್ರವೇಶಿಸದಂತೆ ನೋಡಿಕೊಂಡರು.

‘ನಾವು ಉತ್ತಮವಾಗಿ ಆಡಿದೆವು. ಪಂದ್ಯ ತೀರಾ ಹೋರಾಟದ್ದಾಗಿರಲಿಲ್ಲ. ನಮ್ಮ ಎದುರಾಳಿಗಳು ನಮಗೆ ಹೆಚ್ಚಿನ ಸ್ವಾತಂತ್ರ್ಯ ನೀಡಲಿಲ್ಲ. ಆದರೂ ಅವರ ಒಂದು ತಪ್ಪಿನಿಂದಾಗಿ ನಾವು ಗೋಲು ಗಳಿಸುವಲ್ಲಿ ಯಶಸ್ವಿಯಾದೆವು. ಜೊತೆಗೆ ನಮಗೆ ಎರಡು– ಮೂರು ಅವಕಾಶ ಗಳಿದ್ದವು’ ಎಂದು ಮೆಕ್ಸಿಕೊ ಕೋಚ್ ಹಾವಿಯರ್ ಅಗಿರೆ ಪ್ರತಿಕ್ರಿಯಿಸಿದರು.

‘ಈ ಗೆಲುವು ನಮ್ಮನ್ನು ಸ್ವಲ್ಪ ಮಟ್ಟಿಗೆ ನಿರಾಳಗೊಳಿಸಿದೆ. ಆಟಗಾರರು ಸಂತಸಗೊಂಡಿದ್ದಾರೆ’ ಎಂದೂ ಹೇಳಿದರು. ಮೆಕ್ಸಿಕೊ ತನ್ನ ಗುಂಪಿನ ಕೊನೆಯ ಪಂದ್ಯವನ್ನು ಮೆಕ್ಸಿಕೊ ಸಿಟಿಯಲ್ಲಿ ಜೆಕ್ ರಿಪಬ್ಲಿಕ್ ವಿರುದ್ಧ ಇದೇ 24ರಂದು ಆಡಲಿದೆ. ದಕ್ಷಿಣ ಕೊರಿಯಾ ಅದೇ ದಿನ ಈಶಾನ್ಯ ಮೆಕ್ಸಿಕೊದ ಮಾಂಟೆರೆಯಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಆಡಲಿದೆ.

ಮೆಕ್ಸಿಕೊ 2 ಪಂದ್ಯಗಳಿಂದ 6 ಪಾಯಿಂಟ್ಸ್ ಪಡೆದಿದೆ. ದಕ್ಷಿಣ ಕೊರಿಯಾ (3) ಎರಡನೇ ಸ್ಥಾನದಲ್ಲಿದೆ. ಜೆಕ್ ರಿಪಬ್ಲಿಕ್ ಮತ್ತು ದಕ್ಷಿಣ ಆಫ್ರಿಕಾ ತಮ್ಮ ಪಂದ್ಯ ಡ್ರಾ ಮಾಡಿಕೊಂಡಿದ್ದು ಒಂದೊಂದು ಪಾಯಿಂಟ್ ಗಳಿಸಿವೆ. ಮೆಕ್ಸಿಕೊ ಮೊದಲ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ 2–0 ಜಯಗಳಿಸಿತ್ತು. ಕೊರಿಯಾ 2–1 ಗೋಲುಗಳಿಂದ ಜೆಕ್ ರಿಪಬ್ಲಿಕ್ ಮೇಲೆ ಜಯಗಳಿಸಿತ್ತು.

48 ತಂಡಗಳನ್ನು 12 ಗುಂಪುಗಳಲ್ಲಿ ವಿಂಗಡಿಸಲಾಗಿದ್ದು, ಮೊದಲ ಎರಡು ಸ್ಥಾನ ಗಳಿಸಿದ ಮತ್ತು ಮೂರನೇ ಸ್ಥಾನದಲ್ಲಿರುವ ಉತ್ತಮ ಸಾಧನೆ ತೋರಿದ ಎಂಟು ತಂಡಗಳು 32ರ ಸುತ್ತಿಗೆ ತಲುಪಲಿವೆ.

ಫಿಫಾ ಕ್ರಮಾಂಕಪಟ್ಟಿಯಲ್ಲಿ ಮೆಕ್ಸಿಕೊ 13ನೇ ಸ್ಥಾನದಲ್ಲಿದೆ. ದಕ್ಷಿಣ ಕೊರಿಯಾ 22ನೇ ಸ್ಥಾನದಲ್ಲಿದೆ. ಎರಡೂ ತಂಡಗಳು ಉತ್ತಮ ಆರಂಭವನ್ನೇನೂ ಮಾಡಲಿಲ್ಲ. ಗೋಲು ಹೊಡೆಯುವ ಸುವರ್ಣಾವಕಾಶವೂ ಲಭ್ಯವಾಗಲಿಲ್ಲ. ವಿರಾಮದ ಸೀಟಿ ಊದಿದಾಗ ಪ್ರೇಕ್ಷಕರು ಎರಡೂ ತಂಡಗಳನ್ನು ಮೂದಲಿಸಿದರು.

ದಕ್ಷಿಣ ಕೊರಿಯಾದ ತಾರೆ ಸನ್ ಹಿಯುಂಗ್-ಮಿನ್ ಮತ್ತೊಮ್ಮೆ ನಿರಾಸೆ ಕಂಡರು. ಈ ಹಿಂದಿನ ಮೂರು ವಿಶ್ವಕಪ್‌ಗಳಲ್ಲಿ ಅವರು 3 ಗೋಲು ಗಳಿಸಿದ್ದರು.

ಪಂದ್ಯಗಳು

ಟರ್ಕಿ	V/s	ಪರಗ್ವೆ
ಶನಿವಾರ ಬೆಳಿಗ್ಗೆ 8.30		
ನೆದರ್ಲೆಂಡ್ಸ್	V/s	ಸ್ವೀಡನ್
ಶನಿವಾರ ರಾತ್ರಿ 10.30		
ಜರ್ಮನಿ	V/s	ಐವರಿಕೋಸ್ಟ್
ಶನಿವಾರ ರಾತ್ರಿ 1.30		
ಇಕ್ವಡಾರ್	V/s	ಕ್ಯುರಸಾವೊ
ಭಾನುವಾರ ಬೆಳಗಿನ ಜಾವ 5.30		

ಲೈವ್: ಯುನೈಟ್ 8 ಸ್ಪೋರ್ಟ್ಸ್ ನೆಟ್‌ವರ್ಕ್, ಜೀ5 ಆ್ಯಪ್

ವದಲ್ಲಹಾರ: ಶಾಂತಿಯುತ ಪ್ರತಿಭಟನೆ

ಒಂದು ಕಡೆ ಅಕ್ರನ್ ಕ್ರೀಡಾಂಗಣದಲ್ಲಿ ಸಂಭ್ರಮ ನೆಲೆಸಿದರೆ, ಹೊರಗಿನ ಪರಿಸ್ಥಿತಿ ಭಿನ್ನವಾಗಿತ್ತು. ಮೆಕ್ಸಿಕೊದಲ್ಲಿ ನಾಪತ್ತೆಯಾದ ಜನರ ಕುಟುಂಬಗಳು ವದಲ್ಲಹಾರದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆ ಶಾಂತಿಯುತವಾಗಿತ್ತು. ಅಧಿಕೃತ ದಾಖಲೆಗಳ ಪ್ರಕಾರ 20 ವರ್ಷಗಳಲ್ಲಿ 1,30,000 ಜನರು ಕಾಣೆಯಾಗಿದ್ದಾರೆ. ಮಾನವೀಯ ಮತ್ತು ಮಾನವಹಕ್ಕುಗಳ ಬಿಕ್ಕಟ್ಟು ತಲೆದೋರಿದ್ದು, ಹಲವು ದಿನಗಳಿಂದ ಪ್ರತಿಭಟನೆ ನಡೆಯುತ್ತಿದೆ.

ಒಂಬತ್ತು ಆಟಗಾರರಿಗೆ ಸೀಮಿತಗೊಂಡ ಕತಾರ್ ತಂಡ

ಜೊನಾಥನ್ ಹ್ಯಾಟ್ರಿಕ್; ಕೆನಡಾಗೆ ಜಯ



ಹ್ಯಾಟ್ರಿಕ್ ಗೋಲು ಹೊಡೆದ ಜೊನಾಥನ್ ಡೇವಿಡ್ ಸಂಭ್ರಮ ಎಎಫ್‌ಪಿ ಚಿತ್ರ

ಲಾಸ್ ಏಂಜಲಿಸ್ (ಎಎಫ್‌ಪಿ): ಮುಂಚೂಣಿ ಆಟಗಾರ ಜೊನಾಥನ್ ಡೇವಿಡ್ ಅವರ ಹ್ಯಾಟ್ರಿಕ್ ನೆರವಿನಿಂದ ಕೆನಡಾ ತಂಡ ಫಿಫಾ ವಿಶ್ವಕಪ್ ‘ಬಿ’ ಗುಂಪಿನ ಪಂದ್ಯದಲ್ಲಿ ಕತಾರ್ ತಂಡವನ್ನು 6–0 ಗೋಲಿನಿಂದ ಸುಲಭವಾಗಿ ಸೋಲಿಸಿತು. ಇಬ್ಬರಿಗೆ ರೆಡ್‌ಕಾರ್ಡ್ ದರ್ಶನವಾದ ಪರಿಣಾಮ ಕೊನೆಯ 37 ನಿಮಿಷ ಕತಾರ್ ತಂಡ 9 ಆಟಗಾರರಿಗೆ ಸೀಮಿತಗೊಂಡಿತು.

ವ್ಯಾಂಕೂವರ್‌ನ ಬಿ.ಸಿ.ಪ್ಲೇಸ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಕೆನಡಾದ ಜಯ ಅಧಿಕಾರಯುತವಾಗಿತ್ತು. ಯುವೆಂಟಸ್‌ಗೆ ಆಡುವ ಜೊನಾಥನ್ ಹ್ಯಾಟ್ರಿಕ್ ಜೊತೆಗೆ ಕೈಲ್ ಲ್ಯಾರಿನ್, ನಥಾನ್ ಸಲಿಬಾ ಮತ್ತು ಮೊಹಮ್ಮದ್ ಮನಾಯ್ ತಲಾ ಒಂದು ಗೋಲು ಗಳಿಸಿದರು.

ಹಾಲಿ ವಿಶ್ವಕಪ್‌ನ ಮೊದಲ ಪಂದ್ಯದಲ್ಲಿ ಬೋಸ್ನಿಯಾ–ಹರ್ಜಗೋವಿನಾ ಜೊತೆ ಡ್ರಾ ಮಾಡಿಕೊಂಡಿದ್ದ ಜಂಟಿ ಆತಿಥೇಯರು, ಎರಡನೇ ಪಂದ್ಯದಲ್ಲಿ ಅಮೋಘ ಜಯಗಳಿಸಿದರು. ಸ್ವಿಟ್ಜರ್ಲೆಂಡ್ ವಿರುದ್ಧ ಕೊನೆಯ ಪಂದ್ಯದಲ್ಲಿ ಒಂದು ಪಾಯಿಂಟ್ ಗಳಿಸಿದರೂ ಗುಂಪಿನಲ್ಲಿ ಅಗ್ರಸ್ಥಾನ ಪಡೆಯಬಹುದಾಗಿದೆ.

ಮಿಡ್‌ಫೀಲ್ಡರ್‌ಗೆ ಗಾಯ: ಈ ಪಂದ್ಯದ 53ನೇ ನಿಮಿಷ ಕತಾರ್‌ನ ಅಸ್ಸಿಮ್ ಮದಿಬೊ ಅವರು ಕೆನಡಾದ ಮಿಡ್‌ಫೀಲ್ಡರ್ ಇಸ್ಮಾಯಿಲ್ ಕೋನ್ ಅವರನ್ನು ಒರಟಾಗಿ ತಡೆದು ಬೀಳಿಸಿದರು. ಇದರಿಂದ ಕೋನ್ ಅವರ ಎಡಗಾಲಿಗೆ ತೀವ್ರ ಪೆಟ್ಟಾಯಿತು. ಮದಿಬೊ ಅವರಿಗೆ ಮೊದಲು ಹಳದಿ ಕಾರ್ಡ್ ತೋರಿಸಲಾಗಿತ್ತು. ನಂತರ ಕೆಂಪು ಕಾರ್ಡ್ ತೋರಿಸಿ ಹೊರಕಳಿಸಲಾಯಿತು.

ಕೋನ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಕಾಲಿನ ಮೂಳೆ ಮುರಿದಿರುವ ಸಾಧ್ಯತೆಯಿದೆ ಎಂದು ಕೋಚ್ ಜೆಸ್ಸಿ ಮಾರ್ಷ್ ತಿಳಿಸಿದರು.

‘ಕೋನ್ ಅವರು ತಂಡದ ಪ್ರಮುಖ ಆಟಗಾರನಾಗಿದ್ದು, ಸಹ ಆಟಗಾರರು ಈ ಘಟನೆಯಿಂದ ಕೊಂಚ ವಿಚಲಿತರಾಗಿದ್ದಾರೆ. ಅವರ ಅಲಭ್ಯತೆ ನಮ್ಮ ಪಾಲಿಗೆ ದೊಡ್ಡ ನಷ್ಟ’ ಎಂದು ಕೋಚ್ ಹೇಳಿದರು.

ಮದಿಬೊ ಅವರಿಗಿಂತ ಮೊದಲು, 34ನೇ ನಿಮಿಷ ಎದುರಾಳಿ ಆಟಗಾರನಿಗೆ ಗೋಲು ಅವಕಾಶವನ್ನು ನಿರಾಕರಿಸಿದ್ದಕ್ಕೆ ಕತಾರ್‌ನ ಹೊಮಮ್ ಎಲ್-ಅಮಿನ್ ಅವರನ್ನು ಹೊರಕಳಿಸಲಾಗಿತ್ತು. ಇದರಿಂದಾಗಿ ತಂಡ 9 ಆಟಗಾರರಿಗೆ ಸೀಮಿತಗೊಂಡಿತು. ಇದರ ಲಾಭ ಪಡೆದ ಕೆನಡಾ ಉತ್ತರಾರ್ಧದಲ್ಲಿ ಮೂರು ಗೋಲುಗಳನ್ನು ಗಳಿಸಿತು. ಗೋಲು ವ್ಯತ್ಯಾಸದಲ್ಲೂ ತಂಡ ಅಗ್ರಸ್ಥಾನದಲ್ಲಿದೆ. ಕೆನಡಾ ಮತ್ತು ಸ್ವಿಟ್ಜರ್ಲೆಂಡ್ ತಲಾ ನಾಲ್ಕು ಪಾಯಿಂಟ್ಸ್ ಗಳಿಸಿವೆ.

ಸ್ವಿಸ್ ಪಡೆಗೆ ಸುಲಭ ಜಯ

ಸ್ವಿಟ್ಜರ್ಲೆಂಡ್ 4 – ಬೋಸ್ನಿಯಾ 1

ಲಾಸ್ ಏಂಜಲೀಸ್‌ನ ಸೋಫಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ‘ಬಿ’ ಗುಂಪಿನ ಪಂದ್ಯದಲ್ಲಿ ಸ್ವಿಟ್ಜರ್ಲೆಂಡ್ ತಂಡ 4–1ರಿಂದ ಬೋಸ್ನಿಯಾ– ಹರ್ಜ ಗೋವಿನಾ ತಂಡವನ್ನು ಸೋಲಿಸಿ ನಾಕೌಟ್ ಅವಕಾಶ ಬಲಪಡಿಸಿಕೊಂಡಿತು.

ಜೊಹಾನ್ ಮುನ್ಜಾಂಬಿ ಎರಡು ಗೋಲುಗಳನ್ನು ಗಳಿಸಿದರೆ, ರುಬೆನ್ ವರ್ಗಾಸ್ ಮತ್ತು ಗ್ರಾನಿಟ್ ಕ್ಸಾಕಾ ಒಂದೊಂದು ಗೋಲು ಗಳಿಸಿದರು. ಬೋಸ್ನಿಯಾ ಪರ ಎರ್ಮಿನ್ ಮಹಮಿಕ್ ಕೊನೆಯ ಕ್ಷಣಗಳಲ್ಲಿ (90 + 3) ಸೋಲಿನ ಅಂತರ ಕಡಿಮೆ ಮಾಡಿದರು. ಬೋಸ್ನಿಯಾ ಈಗ ಎರಡು ಪಂದ್ಯಗಳಿಂದ ಒಂದು ಪಾಯಿಂಟ್ ಅಷ್ಟೇ ಗಳಿಸಿದೆ.

ಜೈಸ್ವಾಲ್, ರಾಹುಲ್ ಮೇಲೆ ಕಣ್ಣು

ಅಫ್ಗಾನಿಸ್ತಾನ ಎದುರು ಮೂರನೇ ಏಕದಿನ ಪಂದ್ಯ ಇಂದು

ಭಾರತ ತಂಡದ ಯಶಸ್ವಿ ಜೈಸ್ವಾಲ್ ಮತ್ತು ಕೆ.ಎಲ್ ರಾಹುಲ್

ಚೆನ್ನೈ (ಪಿಟಿಐ): ಚೆಪಾಕ್ ಕ್ರೀಡಾಂಗಣದಲ್ಲಿ ಶನಿವಾರ ನಡೆಯಲಿರುವ ಅಫ್ಗಾನಿಸ್ತಾನ ವಿರುದ್ಧದ ಮೂರನೇ ಹಾಗೂ ಅಂತಿಮ ಏಕದಿನ ಪಂದ್ಯದಲ್ಲಿ ಭಾರತ ತಂಡವು ‘ಸರಣಿ ಕ್ಲೀನ್ ಸ್ವೀಪ್’ ಮಾಡುವ ಮೂಲಕ ತನ್ನ ಪ್ರಾಬಲ್ಯವನ್ನು ವಿಸ್ತರಿಸಿಕೊಳ್ಳುವತ್ತ ಚಿತ್ತ ನೆಟ್ಟಿದೆ. ಇನ್ನೊಂದೆಡೆ ಕೆ.ಎಲ್. ರಾಹುಲ್ ಮತ್ತು ಯಶಸ್ವಿ ಜೈಸ್ವಾಲ್ ಅವರಿಂದ ದೊಡ್ಡ ಇನಿಂಗ್ಸ್‌ನ ನಿರೀಕ್ಷೆಯೂ ಗರಿಗೆದರಿದೆ.

ತೀವ್ರ ಪೈಪೋಟಿ ಇರುವ ಅಗ್ರ ಕ್ರಮಾಂಕದಲ್ಲಿ ತಮ್ಮ ಸ್ಥಾನವನ್ನು ಗಟ್ಟಿಗೊಳಿಸಲು ಜೈಸ್ವಾಲ್ ಅವರಿಗೆ ಒಂದು ದೊಡ್ಡ ಇನ್ನಿಂಗ್ಸ್ ಅಗತ್ಯವಿದೆ. ಹೋದ ಡಿಸೆಂಬರ್ ನಂತರ ಜೈಸ್ವಾಲ್ ಅವರಿಗೆ ಮೊದಲ ಬಾರಿಗೆ ಏಕದಿನ ಕ್ರಿಕೆಟ್‌ನಲ್ಲಿ ಮತ್ತೆ ಅವಕಾಶ ನೀಡಲಾಗಿದೆ. ಆದರೆ ಲಖನೌನಲ್ಲಿ ಅಫ್ಗಾನಿಸ್ತಾನ ವಿರುದ್ಧ ನಡೆದ ಎರಡನೇ ಪಂದ್ಯದಲ್ಲಿ ಅವರು ಕೇವಲ 4 ರನ್‌ಗಳಿಗೆ ಔಟಾಗಿದ್ದರು. ಆದರೆ ಲಖನೌನಲ್ಲಿ ಕಳೆದ ಪಂದ್ಯದಲ್ಲಿ ಶತಕ ಬಾರಿಸುವ ಮೂಲಕ ಇಶಾನ್ ಕಿಶನ್ ತಮ್ಮ ಸ್ಥಾನ ಗಟ್ಟಿಗೊಳಿಸಿಕೊಂಡಿದ್ದಾರೆ. ಇದರಿಂದಾಗಿ ಜೈಸ್ವಾಲ್ ಅವರಿಗೆ ಸ್ಥಾನ ಉಳಿಸಿಕೊಳ್ಳುವ ಒತ್ತಡ ಮತ್ತಷ್ಟು ಹೆಚ್ಚಿದಂತಾಗಿದೆ. ಆದ್ದರಿಂದ ಜೈಸ್ವಾಲ್ ಅವರು ತಮ್ಮ ಸ್ಥಾನ ಗಟ್ಟಿಗೊಳಿಸಿಕೊಳ್ಳಲು ಈಗ ಸಿಗುತ್ತಿರುವ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಳ್ಳಬೇಕಿದೆ.

ಅಯ್ಯರ್ ಭಾರತ ತಂಡಕ್ಕೆ ಮರಳಿರುವುದರಿಂದ, 34 ವರ್ಷದ ರಾಹುಲ್ ಈಗ ಹೆಚ್ಚಾಗಿ 6ನೇ ಕ್ರಮಾಂಕದಲ್ಲೇ ಬ್ಯಾಟ್ ಮಾಡುತ್ತಿದ್ದಾರೆ. ದೀರ್ಘಕಾಲದಿಂದಲೂ ಐದನೇ ಕ್ರಮಾಂಕವು ರಾಹುಲ್ ಅವರಿಗೆ ಅಚ್ಚುಮೆಚ್ಚಿನದ್ದಾಗಿತ್ತು. ಈ ಕ್ರಮಾಂಕದಲ್ಲಿ ಅವರು 38 ಪಂದ್ಯಗಳಲ್ಲಿ ಆಡಿ 63.2ರ ಸರಾಸರಿಯಲ್ಲಿ ಮೂರು ಶತಕ ಮತ್ತು 10 ಅರ್ಧಶತಕಗಳೊಂದಿಗೆ 1517 ರನ್‌ ಗಳಿಸಿದ್ದಾರೆ.

6ನೇ ಕ್ರಮಾಂಕದಲ್ಲಿ ರಾಹುಲ್ ಅವರ ಅಂಕಿ-ಅಂಶಗಳು (15 ಪಂದ್ಯಗಳಲ್ಲಿ 41.5 ಸರಾಸರಿಯಲ್ಲಿ ಒಂದೇ ಒಂದು ಅರ್ಧಶತಕದೊಂದಿಗೆ 332 ರನ್) ಅಷ್ಟೇನೂ ಅದ್ಭುತ ಎನ್ನುವಂತಿಲ್ಲ. ಇದಕ್ಕೆ ಮುಖ್ಯ ಕಾರಣ ಅವರಿಗೆ 6ನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಲು ಸಿಗುವ ಸೀಮಿತ ಓವರ್‌ಗಳು. ಭಾರತ ತಂಡವು ಚೆನ್ನೈ ಏಕದಿನ ಪಂದ್ಯಕ್ಕೆ ಮುನ್ನ ಹರ್ಷಿತ್ ರಾಣಾ ಅವರನ್ನು ತಂಡಕ್ಕೆ ಸೇರಿಸಿಕೊಂಡಿದೆ. ಗಾಯಾಳು ನಿತೀಶ್ ಕುಮಾರ್ ರೆಡ್ಡಿ ಅವರ ಅನುಪಸ್ಥಿತಿಯಲ್ಲಿ ಆಲ್‌ರೌಂಡರ್ ಸ್ಥಾನ ತುಂಬಲಿದ್ದಾರೆ. ಬೌಲಿಂಗ್ ವಿಭಾಗದಲ್ಲಿಯೂ ಕೆಲವು ಪ್ರಯೋಗಗಳು ನಡೆಯುವ ಸಾಧ್ಯತೆ ಇದೆ.

ಅಫ್ಗಾನಿಸ್ತಾನ ತಂಡವು ಕಳೆದೆರಡೂ ಪಂದ್ಯಗಳ ಕೆಲವು ಹಂತಗಳಲ್ಲಿ ಪ್ರತಿರೋಧ ತೋರಿತ್ತು. ಮೊದಲ ಹಣಾಹಣಿಯಲ್ಲಿ ರೆಹಮಾನುಲ್ಲಾ ಗುರ್ಬಾಜ್ ಅವರ ಶತಕ ಮತ್ತು ಎರಡನೇ ಪಂದ್ಯದಲ್ಲಿ ಬೌಲರ್‌ಗಳು ತೋರಿದ ದಿಟ್ಟತನವೇ ಈ ಮಾತಿಗೆ ನಿದರ್ಶನ. ಆದ್ದರಿಂದ ಕೊನೆಯ ಪಂದ್ಯದಲ್ಲಿ ಸಂಘಟಿತ ಹೋರಾಟದೊಂದಿಗೆ ಸಮಾಧಾನಕರ ಗೆಲುವಿನತ್ತ ಮುಖ ಮಾಡುವತ್ತ ತಂಡವು ಚಿತ್ತ ನೆಟ್ಟಿದೆ.

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊಹಾಟ್‌ಸ್ಟಾರ್ ಆ್ಯಪ್.

ಮಕಾವು ಓಪನ್: ಸೆಮಿಗೆ ಅಶ್ಮಿತಾ

ಮಕಾವು (ಚೀನಾ): ಭಾರತದ ಅಶ್ಮಿತಾ ಚಾಲಿಹಾ ಅವರು ಇಲ್ಲಿ ನಡೆಯುತ್ತಿರುವ ಮಕಾವು ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಶುಕ್ರವಾರ ಸೆಮಿಫೈನಲ್ ಪ್ರವೇಶಿಸಿದರು.

ಅಸ್ಸಾಂನ 26 ವರ್ಷ ವಯಸ್ಸಿನ ಆಟಗಾರ್ತಿ ಕ್ವಾರ್ಟರ್‌ಫೈನಲ್‌ನಲ್ಲಿ 21–16, 21–18ರಿಂದ ನೇರ ಗೇಮ್‌ಗಳಲ್ಲಿ ದಕ್ಷಿಣ ಕೊರಿಯಾದ ಕಿಮ್ ಮಿನ್ ಸುನ್ ಅವರನ್ನು ಸೋಲಿಸಿದರು.

ಅಶ್ಮಿತಾ ಅವರು ನಾಲ್ಕರ ಘಟ್ಟದಲ್ಲಿ ಕೊರಿಯಾದ ಇನ್ನೊಬ್ಬ ಆಟಗಾರ್ತಿ ಪಾರ್ಕ್ ಗಾ ಯೂನ್ ಅವರನ್ನು ಎದುರಿಸಲಿದ್ದಾರೆ. ಯೂನ್ ಅವರು, ಕ್ವಾರ್ಟರ್‌ಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಆಟಗಾರ್ತಿ ಬುಸಾನನ್ ಒಂಗ್‌ಬಮ್ರುಂಗ್‌ಫನ್ (ಥಾಯ್ಲೆಂಡ್) ಅವರಿಂದ ವಾಕ್‌ಓವರ್ ಪಡೆದರು.

ಆದರೆ, ಅನ್ಮೋಲ್ ಖರ್ಬ್ ಅವರ ಹೋರಾಟ ಅಂತ್ಯಗೊಂಡಿತು. ಅವರು ಎಂಟರ ಘಟ್ಟದಲ್ಲಿ ಆತಿಥೇಯ ರಾಷ್ಟ್ರದ ಹಾನ್ ಕ್ವಿಯಾನ್ ಷಿ ಎದುರು 21–14, 15–21, 13–21ರಿಂದ ಸೋತರು.

ಮಹಾರಾಜ ಟ್ರೋಫಿ ಇಂದಿನಿಂದ • ಬೆಂಗಳೂರು–ಗುಲ್ಬರ್ಗ ಮುಖಾಮುಖಿ

ಅರಮನೆ ನಗರಿಯಲ್ಲಿ ಕ್ರಿಕೆಟ್ ಹಬ್ಬ

• ಆರ್.ಜಿತೇಂದ್ರ

ಮೈಸೂರು ವಾರಿಯರ್ಸ್ ತಂಡದ ವೈಶಾಖ ವಿಜಯಕುಮಾರ್ ಹಾಗೂ ಸಹ ಆಟಗಾರರು ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಶುಕ್ರವಾರ ಅಭ್ಯಾಸ ನಡೆಸಿದರು ಚಿತ್ರ: ಅನೂಪ್ ರಾಘ.ಟಿ.

ಮೈಸೂರು: ವರ್ಷದ ಬಳಿಕ ಮತ್ತೊಮ್ಮೆ ಚುಟುಕು ಕ್ರಿಕೆಟ್ ಹಬ್ಬಕ್ಕೆ ಇಲ್ಲಿನ ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣ ಸಜ್ಜಾಗಿದೆ.

ಮಾನಸಗಂಗೋತ್ರಿ ಕ್ಯಾಂಪಸ್ ಒಳಗೆ ಹಸಿರು ಹುಲ್ಲುಹಾಸಿನಿಂದ ನಳನಳಿಸುತ್ತಿರುವ ಈ ಅಂಗಳದಲ್ಲಿ ಶನಿವಾರದಿಂದ (ಜೂನ್ 20) ‘ಮಹಾರಾಜ ಟ್ರೋಫಿ’ ಟಿ20 ಕ್ರಿಕೆಟ್ ಟೂರ್ನಿ ನಡೆಯಲಿದೆ. ಒಟ್ಟು ಆರು ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ.

ನಗರದಲ್ಲಿ ಕಳೆದೆರಡು ದಿನಗಳಿಂದ ಮೋಡ ಕವಿದ ವಾತಾವರಣವಿದ್ದು, ತುಂತುರು ಮಳೆಯಾಗುತ್ತಿದೆ. ಟೂರ್ನಿಗೆ ಮಳೆಯ ಆತಂಕ ಇದೆಯಾದರೂ 60ಕ್ಕೂ ಹೆಚ್ಚು ಸಿಬ್ಬಂದಿ ಪರಿಸ್ಥಿತಿ ನಿರ್ವಹಣೆಗೆ ಸಜ್ಜಾಗಿದ್ದಾರೆ. ಸೂಪರ್‌ಸಾಪರ್ ಯಂತ್ರಗಳು ಬೌಂಡರಿಯಾಚೆ ನಿಂತಿವೆ.

‘ಮಹಾರಾಜ ಟ್ರೋಫಿ’ ಈ ಬಾರಿ ಮೈಸೂರು, ಹುಬ್ಬಳ್ಳಿ ಹಾಗೂ ಬೆಂಗಳೂರಿನಲ್ಲಿ ನಡೆಯಲಿದೆ. ಮೈಸೂರಿನಲ್ಲಿ ಮೊದಲ ಲೀಗ್‌ನ ಪಂದ್ಯಗಳು ಜೂನ್ 20ರಿಂದ 25ರವರೆಗೆ ನಡೆಯಲಿವೆ. ದಿನಕ್ಕೆ ಎರಡರಂತೆ ಒಟ್ಟು 12 ಪಂದ್ಯ ಇರಲಿದ್ದು, ನಿತ್ಯ ಹೊನಲು ಬೆಳಕಿನಲ್ಲೂ ಮನೋರಂಜನೆ ಸಿಗಲಿದೆ.

ಕಳೆದ ಬಾರಿಯ ಚಾಂಪಿಯನ್ ‘ಮಂಗಳೂರು ಡ್ರ್ಯಾಗನ್ಸ್’ ಈ ಬಾರಿ ‘ಕೋಸ್ಟಲ್ ಕಿಂಗ್ಸ್ ಮಂಗಳೂರು’ ಎಂಬ ಹೊಸ ಹೆಸರಿನೊಂದಿಗೆ ಕಣಕ್ಕೆ ಇಳಿಯುತ್ತಿದೆ. ‘ಶಿವಮೊಗ್ಗ ಯೋಧಾಸ್’ ತಂಡವೂ ಹೊಸತು. ಉಳಿದಂತೆ ಮೈಸೂರು ವಾರಿಯರ್ಸ್, ಗುಲ್ಬರ್ಗ ಮಿಸ್ಟಿಕ್ಸ್, ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ಹಾಗೂ ಹುಬ್ಬಳ್ಳಿ ಟೈಗರ್ಸ್ ಕಣದಲ್ಲಿವೆ.

ಟೂರ್ನಿಯ ಐದನೇ ಆವೃತ್ತಿ ಇದಾಗಿದ್ದು ನಾಲ್ಕು ತಂಡಗಳು ತಲಾ ಒಮ್ಮೊಮ್ಮೆ ಚಾಂಪಿಯನ್ ಆಗಿವೆ. ಬೆಂಗಳೂರು ಹಾಗೂ ಶಿವಮೊಗ್ಗ ಇನ್ನಷ್ಟೇ ಟ್ರೋಫಿ ಗೆಲ್ಲಬೇಕಿದೆ.

ಟೂರ್ನಿಗೆಂದು ಎರಡು ತಿಂಗಳಿಂದ ಕ್ರೀಡಾಂಗಣ ಸಜ್ಜುಗೊಳಿಸಿದ್ದು ಎಲ್ಲೆಲ್ಲೂ ಹಸಿರು ಹುಲ್ಲುಹಾಸು ಕಂಗೊಳಿಸುತ್ತಿದೆ. 70 ಮೀ. ಸುತ್ತಳತೆಯ ಬೌಂಡರಿ ಇದ್ದು, ಒಟ್ಟು ಐದು ಪಿಚ್‌ಗಳ ಪೈಕಿ ಮೂರನ್ನು ಟೂರ್ನಿಗೆಂದು ಸಜ್ಜುಗೊಳಿಸಲಾಗಿದೆ. ಬ್ಯಾಟಿಂಗ್ ಸ್ನೇಹಿಯಾಗಿ ವರ್ತಿಸುವ ಈ ಅಂಕಣಗಳು ಒಮ್ಮೊಮ್ಮೆ ಬೌಲರ್‌ಗಳಿಗೂ ಸಹಕಾರ ನೀಡುವುದುಂಟು. ಹೀಗಾಗಿ ಪ್ರತಿ ಪಂದ್ಯವೂ ಕುತೂಹಲದಿಂದ ಕೂಡಿರಲಿದೆ.

ಬೆಂಗಳೂರು–ಗುಲ್ಬರ್ಗ ಮುಖಾಮುಖಿ: ಉದ್ಘಾಟನಾ ಪಂದ್ಯದಲ್ಲಿ ಶುಭಾಂಗ್ ಹೆಗ್ಡೆ ನಾಯಕತ್ವದ ಬೆಂಗಳೂರು ಬ್ಲಾಸ್ಟರ್ಸ್ ಹಾಗೂ ಮನೀಷ್ ಪಾಂಡೆ ನೇತೃತ್ವದ ಗುಲ್ಬರ್ಗ ಮಿಸ್ಟಿಕ್ಸ್ ಮುಖಾಮುಖಿ ಆಗಲಿವೆ. ಮತ್ತೊಂದು ಪಂದ್ಯದಲ್ಲಿ ಆತಿಥೇಯ ಮೈಸೂರು ವಾರಿಯರ್ಸ್ ಶಿವಮೊಗ್ಗ ಎದುರು ಆಡಲಿದೆ.

ಪ್ರೇಕ್ಷಕರಿಗೆ ಅವಕಾಶ: ಕ್ರಿಕೆಟ್ ಪ್ರಿಯರಿಗೆ ಆರು ಸಾವಿರ ಆಸನಗಳ ವ್ಯವಸ್ಥೆ ಮಾಡಲಾಗಿದೆ. ಪ್ರವೇಶಕ್ಕೆ ಟಿಕೆಟ್ ದರ ನಿಗದಿ ಪಡಿಸಲಾಗಿದೆ.

ಮಹಾರಾಜ ಟ್ರೋಫಿ ವಿಜೇತರು

ವರ್ಷ	ಚಾಂಪಿಯನ್	ರನ್ನರ್ಸ್ ಅಪ್
2022	ಗುಲ್ಬರ್ಗ ಮಿಸ್ಟಿಕ್ಸ್	ಬೆಂಗಳೂರು ಬ್ಲಾಸ್ಟರ್ಸ್
2023	ಹುಬ್ಬಳ್ಳಿ ಟೈಗರ್ಸ್	ಮೈಸೂರು ವಾರಿಯರ್ಸ್
2024	ಮೈಸೂರು ವಾರಿಯರ್ಸ್	ಬೆಂಗಳೂರು ಬ್ಲಾಸ್ಟರ್ಸ್
2025	ಮಂಗಳೂರು ಡ್ರ್ಯಾಗನ್ಸ್	ಹುಬ್ಬಳ್ಳಿ ಟೈಗರ್ಸ್

ಇಂದಿನ ಪಂದ್ಯ

ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್	V/s	ಗುಲ್ಬರ್ಗ ಮಿಸ್ಟಿಕ್ಸ್
ಆರಂಭ ಮಧ್ಯಾಹ್ನ 2		
ಶಿವಮೊಗ್ಗ ಯೋಧಾಸ್	V/s	ಮೈಸೂರು ವಾರಿಯರ್ಸ್
ಆರಂಭ ಸಂಜೆ 7.30		

ಗಾಯ: ವಿಶ್ವಕಪ್‌ನಿಂದ ಶ್ರೇಯಾಂಕಾ ಹೊರಕ್ಕೆ

ಲೀಡ್ಸ್ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ಆಫ್‌ಸ್ಪಿನ್ನರ್ ಶ್ರೇಯಾಂಕಾ ಪಾಟೀಲ ಅವರು ಪಾದದ ಗಾಯದಿಂದಾಗಿ ಟಿ20 ಮಹಿಳಾ ಕ್ರಿಕೆಟ್ ವಿಶ್ವಕಪ್ ಟೂರ್ನಿಯಿಂದ ಹೊರಬಿದ್ದಿದ್ದಾರೆ. ಅವರ ಬದಲಿಗೆ ಲೆಗ್‌ಸ್ಪಿನ್ನರ್ ಪ್ರೇಮಾ ರಾವತ್ ಅವರಿಗೆ ಸ್ಥಾನ ನೀಡಲಾಗಿದೆ.

ಕರ್ನಾಟಕದ ಶ್ರೇಯಾಂಕಾ ಅವರು ಬುಧವಾರ ನೆದರ್ಲೆಂಡ್ಸ್ ವಿರುದ್ಧ ನಡೆದಿದ್ದ ಪಂದ್ಯದಲ್ಲಿ ಗಾಯಗೊಂಡಿದ್ದರು. ಪಂದ್ಯದ ಪವರ್‌ಪ್ಲೇ ಹಂತದ ಕೊನೆಯ ಓವರ್‌ನಲ್ಲಿ ಗಾಯಗೊಂಡಿದ್ದರು. ಅವರು ಹಾಕಿದ ಆರನೇ ಓವರ್‌ನ ಮೊದಲ ಎಸೆತವನ್ನು ಬ್ಯಾಟರ್ ಫಿಬೆ ಮೊಕೆನ್‌ಬಾರ್ ಅವರು ಹೊಡೆದರು. ಅದನ್ನು ತಡೆಯುವ ಯತ್ನದಲ್ಲಿ ಶ್ರೇಯಾಂಕಾ ಅವರ ಬಲಗಾಲಿನ ಪಾದವು ಉಳುಕಿತು. ತಂಡದ ಫಿಸಿಯೊ ಧಾವಿಸಿ ಬಂದು ಪ್ರಥಮ ಚಿಕಿತ್ಸೆ ನೀಡಿದರು. ಅವರನ್ನು ಸ್ಟ್ರೆಚರ್‌ನಲ್ಲಿ ಹೆಚ್ಚಿನ ಚಿಕಿತ್ಸೆಗೆ ಮೈದಾನದಿಂದ ಹೊರಗೆ ಕರೆದೊಯ್ಯಲಾಯಿತು.

2024ರಲ್ಲಿ ಅವರು ಬೆರಳಿನ ಮೂಳೆ ಮುರಿತದಿಂದಾಗಿ ಆ ವರ್ಷದ ಟಿ20 ವಿಶ್ವಕಪ್ ಟೂರ್ನಿಯಿಂದ ಹೊರಗುಳಿದಿದ್ದರು. ನಂತರ ಕಾಲಿನ ಸ್ನಾಯುಸೆಳೆತದಿಂದ ಬಳಲಿದ್ದರು. ಇದರಿಂದಾಗಿ ಸುಮಾರು 14 ತಿಂಗಳು ಅವರು ಆಟದಿಂದ ದೂರವಿದ್ದರು. ಈಚೆಗೆ ಮಹಿಳಾ ಪ್ರೀಮಿಯರ್ ಲೀಗ್ ಟೂರ್ನಿಗೆ ಮರಳಿದ್ದರು. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಆಡಿದ್ದರು.

ಇಂದಿನ ಪಂದ್ಯ

ಆಸ್ಟ್ರೇಲಿಯಾ	V/s	ನೆದರ್ಲೆಂಡ್ಸ್
ತಾಣ: ಸೌತಾಂಪ್ಟನ್, ಆರಂಭ: ಮಧ್ಯಾಹ್ನ 3		
ಪಾಕಿಸ್ತಾನ	V/s	ಬಾಂಗ್ಲಾದೇಶ
ತಾಣ: ಸೌತಾಂಪ್ಟನ್, ಆರಂಭ: ಸಂಜೆ 7		
ಇಂಗ್ಲೆಂಡ್	V/s	ಸ್ಕಾಟ್ಲೆಂಡ್
ತಾಣ: ಹೆಡಿಂಗ್ಲೆ, ಆರಂಭ: ರಾತ್ರಿ 11		

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಪ್ರೊ ಲೀಗ್ ಹಾಕಿ: ಜರ್ಮನಿಗೆ ಮಣಿದ ಭಾರತ

ಮನ್‌ಪ್ರೀತ್ ಸಿಂಗ್

ರೋಟರ್‌ಡ್ಯಾಮ್ (ಪಿಟಿಐ): ಕೊನೆಯ ಹಂತದ ಆಟದಲ್ಲಿ ಎರಡು ಗೋಲುಗಳನ್ನು ಬಿಟ್ಟುಕೊಟ್ಟಿದ್ದರಿಂದ ಭಾರತ ತಂಡ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಪಂದ್ಯದಲ್ಲಿ ಹಾಲಿ ವಿಶ್ವ ಚಾಂಪಿಯನ್ ಜರ್ಮನಿ ತಂಡಕ್ಕೆ ಗುರುವಾರ 1–2 ರಿಂದ ಮಣಿಯಬೇಕಾಯಿತು.

ಭಾರತದ ಮಿಡ್‌ಫೀಲ್ಡ್ ದಿಗ್ಗಜ ಮನ್‌ಪ್ರೀತ್ ಸಿಂಗ್ ಅವರಿಗೆ ಇದು ದಾಖಲೆಯ 413ನೇ ಪಂದ್ಯವಾಗಿತ್ತು. ವಿರಾಮದ ಮೊದಲಿನ ಅವಧಿ ಗೋಲುರಹಿತವಾಗಿತ್ತು. 38ನೇ ನಿಮಿಷ ಜುಗರಾಜ್ ಸಿಂಗ್ ಭಾರತ ತಂಡಕ್ಕೆ ಮುನ್ನಡೆ ಒದಗಿಸಿದರು. ಭಾರತ ಸತತ ಎರಡು ಪಂದ್ಯಗಳಲ್ಲಿ ಜರ್ಮನಿ ಮೇಲೆ ಅಪರೂಪದ ಜಯ ಸಾಧಿಸುವ ಹಾದಿಯಲ್ಲಿದ್ದಂತೆ ಕಂಡಿತ್ತು. ಆದರೆ ಪಂದ್ಯ ಮುಕ್ತಾಯಕ್ಕೆ ನಾಲ್ಕು ನಿಮಿಷಗಳಿದ್ದಾಗ ಜರ್ಮನಿಯ ಜಸ್ಟಸ್ ವೀಗ್ಯಾಂಡ್ ಅವರು ಪೆನಾಲ್ಟಿ ಕಾರ್ನರ್‌ಅನ್ನು ಗೋಲನ್ನಾಗಿ ಪರಿವರ್ತಿಸಿದ್ದರಿಂದ ಸ್ಕೋರ್ (1–1) ಸಮನಾಯಿತು. ಕೊನೆಯ ನಿಮಿಷದಲ್ಲಿ ಜಾಕೊಬ್ ಬ್ರಿಲ್ಲಾ ಸಹ ಪೆನಾಲ್ಟಿ ಕಾರ್ನರ್ ಮೂಲಕ ನಿರ್ಣಾಯಕ ಗೋಲು ಗಳಿಸಿದ್ದರು.

ಮನ್‌ಪ್ರೀತ್ ಸಾಧನೆ: ಭಾರತದ ಮನ್‌ಪ್ರೀತ್ ಅವರು 413ನೇ ಅಂತರರಾಷ್ಟ್ರೀಯ ಪಂದ್ಯ ಆಡಿದರು. ಆ ಮೂಲಕ ದೇಶದ ಪರ ಅತಿ ಹೆಚ್ಚು ಪಂದ್ಯಗಳನ್ನಾಡಿದ ಮಾಜಿ ನಾಯಕ ಹಾಗೂ ಹಾಕಿ ಇಂಡಿಯಾ ಹಾಲಿ ಅಧ್ಯಕ್ಷ ದಿಲೀಪ್ ಟರ್ಕಿ ಅವರ ದಾಖಲೆ (412 ಪಂದ್ಯ) ಮುರಿದರು.

ವಿಶ್ವ ಸ್ನೂಕರ್: ಭಾರತ ತಂಡಕ್ಕೆ ಬೆಳ್ಳಿ

ಗಾಂಗ್‌ಡಾಂಗ್, ಚೀನಾ (ಪಿಟಿಐ): ವಿಶ್ವ ತಂಡ ಸ್ನೂಕರ್ ಚಾಂಪಿಯನ್‌ಷಿಪ್‌ನಲ್ಲಿ ಭಾರತ ತಂಡವು ಬೆಳ್ಳಿ ಪದಕ ಗಳಿಸಿತು.

ಶುಕ್ರವಾರ ನಡೆದ ಫೈನಲ್‌ನಲ್ಲಿ ಆತಿಥೇಯ ಚೀನಾ ‘ಎ’ ತಂಡವು 3–2 ರಿಂದ ಭಾರತ ತಂಡವನ್ನು ಸೋಲಿಸಿತು.

ಹಣಾಹಣಿಯು 2–2ರಿಂದ ಟೈ ಆಗಿತ್ತು. ಈ ಹಂತದಲ್ಲಿ ಭಾರತದ ಆದಿತ್ಯ ಮೆಹ್ತಾ ಅವರು ಚೀನಾದ ಲೀ ಚೆಂಗ್‌ಝೀ ವಿರುದ್ಧ ಲೋಪವೆಸಗಿದರು. ಇದರಿಂದಾಗಿ ಚಿನ್ನ ಕೈತಪ್ಪಿತು.

ಪಂಕಜ್ ಅಡ್ವಾನಿ ಅವರು ಮೊದಲ ಸುತ್ತಿನಲ್ಲಿ ಗೆದ್ದು ಉತ್ತಮ ಆರಂಭ ನೀಡಿದರು. ಚೆಂಗ್‌ಝೀ ಅವರ ಕಠಿಣ ಪೈಪೋಟಿಯನ್ನು ಮೀರಿ ನಿಂತರು. ನಂತರದಲ್ಲಿ ಮೆಹ್ತಾ ಅವರು 34–66ರಿಂದ ಸೂ ಜಿಯಾರಿ ವಿರುದ್ಧ ಪರಾಭವಗೊಂಡರು. ಮೆಹ್ತಾ ಮತ್ತು ಪಂಕಜ್ ಜೋಡಿ ಡಬಲ್ಸ್‌ನಲ್ಲಿ ಜಿಯಾರಿ ಮತ್ತು ಪಾನ್ ಈಮಿಂಗ್ ವಿರುದ್ಧ ನಿರಾಶೆ ಅನುಭವಿಸಿತು. ಚೀನಾ 2–1ರ ಮುನ್ನಡೆ ಸಾಧಿಸಿತು. ನಾಲ್ಕನೇ ಸುತ್ತಿನಲ್ಲಿ ಪಂಕಜ್ ಅವರು 82–4ರಿಂದ ಜಿಯಾರಿ ವಿರುದ್ಧ ಜಯಭೇರಿ ಬಾರಿಸಿದರು.

ವೆಸ್ಟ್ ಇಂಡೀಸ್‌ಗೆ ರೋಚಕ ಜಯ

ಸ್ಟಫಾನಿ ಟೇಲರ್

ಲೀಡ್ಸ್ (ಎಪಿ): ವೆಸ್ಟ್ ಇಂಡೀಸ್ ತಂಡ ಮಹಿಳೆಯರ ಟಿ20 ವಿಶ್ವಕಪ್ ಎರಡನೇ ಗುಂಪಿನ ಪಂದ್ಯದಲ್ಲಿ ಗುರುವಾರ ಸ್ಕಾಟ್ಲೆಂಡ್ ತಂಡವನ್ನು ಏಳು ರನ್‌ಗಳಿಂದ ಸೋಲಿಸಿತು. ಹೆಡಿಂಗ್ಲೆಯಲ್ಲಿ ನಡೆದ ಈ ಪಂದ್ಯದಲ್ಲಿ ಸ್ಕಾಟ್ಲೆಂಡ್ ತಂಡ 14 ರನ್‌ಗಳ ಅಂತರದಲ್ಲಿ ಕೊನೆಯ ಐದು ವಿಕೆಟ್‌ಗಳನ್ನು ಕಳೆದುಕೊಂಡಿತು.

154 ರನ್‌ಗಳ ಗುರಿ ಎದುರಿಸಿದ್ದ ಸ್ಕಾಟ್ಲೆಂಡ್ ಎರಡು ಓವರುಗಳಿದ್ದಾಗ 5 ವಿಕೆಟ್‌ಗೆ 132 ರನ್ ಗಳಿಸಿತ್ತು. ಆದರೆ ವೇಗದ ಬೌಲರ್ ಆಲಿಯಾ ಅಲೆಯ್ನ್ 19ನೇ ಓವರಿನಲ್ಲಿ ಎರಡು ವಿಕೆಟ್‌ಗಳನ್ನು ಪಡೆದು ಪಂದ್ಯವನ್ನು ವಿಂಡೀಸ್ ಕಡೆ ವಾಲಿಸಿದರು.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 20 ಓವರುಗಳಲ್ಲಿ 6 ವಿಕೆಟ್‌ಗೆ 153 (ಶೆರ್ಮೇನ್ ಕ್ಯಾಂಬೆಲ್ 36, ಸ್ಟಫಾನಿ ಟೇಲರ್ ಔಟಾಗದೇ 47; ಕ್ಯಾಥರಿನ್ ಫ್ರೇಸರ್ 34ಕ್ಕೆ2); ಸ್ಕಾಟ್ಲೆಂಡ್: 20 ಓವರುಗಳಲ್ಲಿ 146 (ಡಾರ್ಸಿ ಕಾರ್ಟರ್ 59, ಎಲ್ಸಾ ಲಿಸ್ಟರ್ 33; ಆಲಿಯಾ ಅಲೆಯ್ನ್ 11ಕ್ಕೆ3, ಹೇಯ್ಲಿ ಮ್ಯಾಥ್ಯೂಸ್ 19ಕ್ಕೆ3).
ಪಂದ್ಯದ ಆಟಗಾರ್ತಿ: ಸ್ಟಫಾನಿ ಟೇಲರ್.

ವಿಶ್ವ ಬಾಕ್ಸಿಂಗ್: ಆರು ಪದಕಗಳತ್ತ ಭಾರತದ ಚಿತ್ತ

ಜಿಯಾಂಗ್, ಚೀನಾ (ಪಿಟಿಐ): ಭಾರತದ ಬಾಕ್ಸಿಂಗ್ ಪಟುಗಳು ಇಲ್ಲಿ ನಡೆಯುತ್ತಿರುವ ವಿಶ್ವ ಬಾಕ್ಸಿಂಗ್ ಕಪ್ (ಸ್ಟೇಜ್ 2) ಚಾಂಪಿಯನ್‌ಷಿಪ್‌ನಲ್ಲಿ ಆರು ಪದಕಗಳ ಗೆಲುವನ್ನು ಖಚಿತಪಡಿಸಿಕೊಂಡಿದ್ದಾರೆ.

ಶುಕ್ರವಾರ ನಡೆದ ಎಂಟರ ಘಟ್ಟದ ಬೌಟ್‌ಗಳಲ್ಲಿ; ಭಾರತದ ಪ್ರಾಚಿ ಅವರು ಮಹಿಳೆಯರ 57 ಕೆ.ಜಿ. ವಿಭಾಗದಲ್ಲಿ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಜಯಿಸಿದ್ದ ಚೈನಿಸ್ ತೈಪೆಯ ಶಿಹ ಯೂ ವೂ ವಿರುದ್ಧ 4–1ರಿಂದ ಗೆದ್ದರು. ಅದರೊಂದಿಗೆ ಸೆಮಿಫೈನಲ್ ಪ್ರವೇಶಿಸಿದರು.

ವಿಶ್ವದ ಅಗ್ರಕ್ರಮಾಂಕದ ಆಟಗಾರ್ತಿ ಮೀನಾಕ್ಷಿ 51 ಕೆ.ಜಿ ವಿಭಾಗದಲ್ಲಿ 5–0ಯಿಂದ ಕಜಾಕಸ್ತಾನದ ಅಲುವಾ ಬಾಲ್ಕಿಬೆಕೊವಾ ವಿರುದ್ಧ ಗೆದ್ದರು.

ಪುರುಷರ ವಿಭಾಗದಲ್ಲಿ ದೀಪಕ್ (70ಕೆ.ಜಿ) ಅವರು 5–0ಯಿಂದ ಅಜರ್‌ಬೈಜಾನ್‌ನ ನಬಿ ಇಸಗಾಂದರೋವ್ ವಿರುದ್ಧ ಗೆದ್ದರು. ನಿಖಿಲ್ (55 ಕೆ.ಜಿ) ಅವರು 5–0ಯಿಂದ ಅಜರ್‌ಬೈಜಾನ್‌ನ ಅಮಿತ್ ಮಮ್ಮದ್‌ಝೂದಾ ವಿರುದ್ಧ ಜಯಿಸಿದರು.

ಜೋಯಾಲುಕ್ಕಾಸ್‌ನಿಂದ ದೇಶಾದ್ಯಂತ ರಕ್ತದಾನ ಶಿಬಿರ ಆಯೋಜನೆ

ಸಿಎಸ್‌ಆರ್ ಚಟುವಟಿಕೆ ಭಾಗವಾಗಿ ಜೋಯಾಲುಕ್ಕಾಸ್ ಫೌಂಡೇಶನ್‌ನಿಂದ ರಾಷ್ಟ್ರವ್ಯಾಪಿ ರಕ್ತದಾನ ಶಿಬಿರ ಆಯೋಜನೆ, ಸಂಸ್ಥೆಯ ನೂರಾರು ಸಿಬ್ಬಂದಿಯಿಂದ ರಕ್ತದಾನ

ಬೆಂಗಳೂರು: ವಿಶ್ವ ರಕ್ತದಾನಿಗಳ ದಿನಾಚರಣೆಯ ಅಂಗವಾಗಿ ದೇಶದ ಪ್ರಮುಖ ಚಿನ್ನದ ಆಭರಣಗಳ ಸಂಸ್ಥೆಯಾದ ಜೋಯಾಲುಕ್ಕಾಸ್ ಗ್ರೂಪ್ ತನ್ನ ಶೋರೂಮ್‌ಗಳಲ್ಲಿ ಬೃಹತ್ ರಕ್ತದಾನ ಶಿಬಿರಗಳನ್ನು ಯಶಸ್ವಿಯಾಗಿ ಆಯೋಜಿಸಿತು.

ಜೋಯಾಲುಕ್ಕಾಸ್ ಗ್ರೂಪ್‌ನ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ(ಸಿಎಸ್‌ಆರ್) ವಿಭಾಗವಾದ 'ಜೋಯಾಲುಕ್ಕಾಸ್ ಫೌಂಡೇಶನ್' ಈ ರಾಷ್ಟ್ರವ್ಯಾಪಿ ರಕ್ತದಾನ ಅಭಿಯಾನದ ನೇತೃತ್ವ ವಹಿಸಿತ್ತು. ಈ ಶಿಬಿರಗಳಲ್ಲಿ ಸಂಸ್ಥೆಯ ನೂರಾರು ಉದ್ಯೋಗಿಗಳು ಉತ್ಸಾಹದಿಂದ ಭಾಗವಹಿಸಿ ರಕ್ತದಾನ ಮಾಡಿದರು. ಆ ಮೂಲಕ ರಕ್ತದಾನದ ಮಹತ್ವ ಸಾರಿದರು. ತ್ರಿಶೂರ್‌ನಲ್ಲಿರುವ ಜೋಯಾಲುಕ್ಕಾಸ್ ಕಾರ್ಪೊರೇಟ್ ಕಚೇರಿಯಲ್ಲಿ ನಡೆದ ಶಿಬಿರದಲ್ಲಿ ಪಾಲ್ಗೊಂಡು ಮಾತನಾಡಿದ ಜೋಯಾಲುಕ್ಕಾಸ್ ಗ್ರೂಪ್‌ನ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಜೋಯ್ ಆಲುಕ್ಕಾಸ್, 'ರಕ್ತದಾನವು ಮಾನವೀಯ ಕಾರ್ಯಗಳಲ್ಲಿಯೇ ಅತ್ಯಂತ ಶ್ರೇಷ್ಠವಾದುದಾಗಿದೆ. ಇದು ಒಂದು ಅಮೂಲ್ಯ ಪ್ರಾಣವನ್ನು ಉಳಿಸುವ ಅದ್ಭುತ ಸಾಮರ್ಥ್ಯವನ್ನು ಹೊಂದಿದೆ' ಎಂದು ಅಭಿಪ್ರಾಯಪಟ್ಟರು. ಅಲ್ಲದೆ, ಸ್ವಯಂಪ್ರೇರಿತ ರಕ್ತದಾನ ಶಿಬಿರಗಳ ಮೂಲಕ ದೇಶಾದ್ಯಂತ ಸಾವಿರಾರು ಜನರಿಗೆ ನೆರವಾಗಲು ತಮ್ಮ ಸಂಸ್ಥೆಗೆ ಸಾಧ್ಯವಾಗಿರುವುದಕ್ಕೆ ಅವರು ಅಪಾರ ಸಂತೋಷ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ (ಐಎಂಎ) ಬ್ಲಡ್ ಬ್ಯಾಂಕ್ ನಿರ್ದೇಶಕರಾದ ಡಾ.ಗೋಪಿನಾಥ್, ಐಎಂಎ ಜಿಲ್ಲಾ ಸಂಚಾಲಕರಾದ ಡಾ.ಜೋಸೆಫ್ ಜೋರ್ಜ್, ಜೋಯಾಲುಕ್ಕಾಸ್ ಗ್ರೂಪ್ ನಿರ್ದೇಶಕರಾದ ಜೋಲಿ ಜೋಯ್ ಆಲುಕ್ಕಾಸ್ ಸೇರಿದಂತೆ ಗ್ರೂಪ್‌ನ ಹಲವು ಹಿರಿಯ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ತ್ರಿಶೂರ್‌ನ ಜೋಯಾಲುಕ್ಕಾಸ್ ಕಾರ್ಪೊರೇಟ್ ಕಚೇರಿಯಲ್ಲಿ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಲಾಯಿತು.

MARUTI SUZUKI
NEXA
THE FUTURE FEELS EFFORTLESS WITH THE GRAND VITARA.
Less fuel stress. More driving pleasure with the GRAND VITARA.
NOW AT ₹ 9 999
₹ 8 999 PER MONTH**
FUEL EFFICIENCY
27.97 km/l#
GRAND VITARA
EFFECTIVE PRICE OF
₹ 9.57 LAKH^
GRAND VITARA
PREMIUM INTERIORS
AUTO PURIFY WITH PM2.5 DISPLAY
8-WAY DRIVER POWERED SEAT
EV MODE
6 AIRBAGS AS STANDARD
NEXA SAFETY SHIELD
SCAN TO CONNECT TO A SHOWROOM NEAR YOU
T&C available at your nearest dealership. Creative visualization. Images used are for illustration purposes only. For details on safety features (including airbags), refer owner's manual. NEXA dealers exclusively provide all offers, which vary by model and variant. Offers are subject to availability of stock. ^Ex. showroom Price of ₹ 10.77 lakh, Consumer Offer (-) ₹ 60 000, Exchange Bouns (-) ₹ 30 000, Loyalty Upgrade Bonus (-) ₹ 20 000, Corporate Offer (-) ₹ 10 000 = ₹ 9.57 lakh. The actual effective price mentioned may vary based on the customer's eligibility, profile, and applicable offers at the time of purchase. Offer valid on Grand Vitara Sigma Variant. Maruti Suzuki may withdraw offers without notice. Offer valid till limited period. Features and accessories shown may not be a part of standard fitment. **'EMI @ ₹ 8 999' is a scheme illustration for upgrade from Brezza to Grand Vitara sigma variant. Balloon Finance EMI is calculated @ 9.5% rate of interest; Balloon EMI is 30% of the total loan amount and loan tenure of 5 years. Balloon Finance Scheme provided by select financiers. Finance is at the sole discretion of financier and subject to customer profile. #Fuel efficiency as certified by test agency under rule 115 of CMVR 1989 for Strong Hybrid variants.